ಭಾಗ ೩

ನಿಯೋಗಾತ್ಮಕ ಕನ್ನಡ ಪ್ರಕಾರಗಳು

ignou
THE PEOPLE'S
UNIVERSITY

ignou
THE PEOPLE'S
UNIVERSITY

ಭಾಗ ೩

ನಿಯೋಗಾತ್ಮಕ ಕನ್ನಡ ಪ್ರಕಾರಗಳು – ಪ್ರಸ್ತಾವನೆ

ಮೂರನೆಯ ಭಾಗವು ನಿಯೋಗಾತ್ಮಕ ಕನ್ನಡ ಪ್ರಕಾರಗಳನ್ನು ಕುರಿತಾಗಿದ್ದು ಘಟಕ ೧೦ರಿಂದ ೧೩ರ ವರೆಗೆ ನಾಲ್ಕು ಘಟಕಗಳನ್ನು ಹೊಂದಿದೆ. ಇವು ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ, ಪ್ರಬಂಧ ಸಾಹಿತ್ಯ; ಅನುವಾದ; ಅಂತರ್ಜಾಲ ಮತ್ತು ಸಾಮಾಜಿಕ ಜಾಲ ವ್ಯವಸ್ಥೆ; ಮತ್ತು ಸಂವಹನ ಕನ್ನಡಗಳ ಬಗ್ಗೆ ಬರಹಗಳನ್ನು ಹೊಂದಿದ ಭಾಗವಾಗಿದೆ. ಈ ಭಾಗವು ವಿದ್ಯಾರ್ಥಿಯ ಅರಿವು ಮತ್ತು ಬರಹದ ಇನ್ನೊಂದು ದಾರಿಯನ್ನು ತೋರಿಸುವ ಕಡೆಗೆ ಕರೆದೊಯ್ಯುವ ಕಾರಣ ಇದನ್ನು ಇಲ್ಲಿ ಕೊಡಲಾಗಿದೆ.

ಹತ್ತನೆಯ ಘಟಕದಲ್ಲಿ ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ, ಪ್ರಬಂಧ ಸಾಹಿತ್ಯ ಮುಂತಾದ ಬರವಣಿಗೆಗಳ ಸಣ್ಣ ತುಣುಕುಗಳನ್ನು ನಿಮ್ಮ ಓದಿಗೆ ಕೊಡಲಾಗಿದೆ. ಈ ಪ್ರಕಾರಗಳು ಇತ್ತೀಚಿನ ದಶಕಗಳಲ್ಲಿ ಸಾಹಿತ್ಯದ ಬೇರೊಂದು ಬಗೆಯ ಪ್ರಕಾರಗಳಾಗಿ ಗುರುತಿಸಲ್ಪಟ್ಟಿವೆ. ಆಧುನಿಕ ಕಥೆ ಕಾವ್ಯಗಳಿಗಿಂತ ಬೇರೆಯಾಗಿ, ಕಲ್ಪನೆಯನ್ನು ಕೊಂಚ ಬದಿಗೆ ಸರಿಸಿ, ಅನುಭವದ ಅಂಶಗಳನ್ನು ಹಿಡಿಯುತ್ತವೆ. ವೈಯಕ್ತಿಕವೂ ಹಾಗೂ ಲೋಕಗ್ರಹಿಕೆಯೂ ಸೇರಿ ಇಲ್ಲಿ ಬರಹದ ಶೈಲಿಯು ಹೇಗೆ ಭಿನ್ನವಾಗಿರುತ್ತವೆ ಎನ್ನುವುದನ್ನು ನೀವು ಗ್ರಹಿಸಬಹುದು. ಈ ಬರಹವು ಇನ್ನೊಂದು ಬಗೆಯ ಕೌಶಲ್ಯವನ್ನು ಬರಹಗಾರರಿಂದ ಬೇಡುತ್ತದೆ. ನೀವು ಓದುವಾಗ ಆಧುನಿಕ ಕಥೆಗಿಂತ ಇವುಗಳ ಬರವಣಿಗೆ ಹೇಗೆ ಭಿನ್ನ ಎನ್ನುವುದನ್ನು ಅರಿಯುತ್ತೀರಿ. ಹನ್ನೊಂದನೆಯ ಘಟಕವು ಅನುವಾದದ ವಿಭಿನ್ನ ಮಾದರಿಗಳನ್ನು ಪರಿಚಯಿಸುತ್ತದೆ. ಕಳೆದ ಎರಡು ದಶಕಗಳಲ್ಲಿ ಅನುವಾದವೆಂಬುದು ವಿಭಿನ್ನ ಆಯಾಮ ಮತ್ತು ಪರಿಕಲ್ಪನೆಗಳ ನೆಲೆಯಲ್ಲಿ ಬೆಳೆದು ಬಂದಿದೆ. ನಾವು ಲೋಕವನ್ನು ಅರಿಯುವ ಬಗೆಯೇ ಮೂಲತಃ ನಾವು ಮಾಡಿಕೊಳ್ಳುವ ಅನುವಾದ ಎಂಬ ನೆಲೆಯಿಂದ ಇದು ಪ್ರಾರಂಭ. ಇನ್ನೊಂದರಿಂದ ನಾವು ಗ್ರಹಿಸುವ ರೀತಿ ಎಂಥದ್ದು ಎನ್ನುವ ಮಾದರಿಯು ಅನೇಕ ಬಗೆಯದಾಗಿ ಇರುತ್ತದೆ. ಬೇರೆ ಭಾಷೆಯಿಂದ, ಬೇರೆ ಸಂಸ್ಕೃತಿಯಿಂದ, ನಾವು ನಮ್ಮದಾಗಿಸಿಕೊಳ್ಳುವಾಗ ಅವನ್ನು ನಾವು ಹೇಗೆ ವ್ಯಾಖ್ಯಾನಿಸಿಕೊಳ್ಳುತ್ತೇವೆ ಎನ್ನುವ ಗ್ರಹಿಕೆಯ ಹಿನ್ನೆಲೆಯಲ್ಲಿ ಅನುವಾದದ ಸ್ವರೂಪ ಇರುತ್ತದೆ. ಉದಾಹರಣೆಗೆ ಶೇಕ್ಸ್‌ಪಿಯರ್ ಕವಿಯನ್ನು ಅನುವಾದ ಮಾಡುವಾಗ ಜೀವನದಲ್ಲಿ ಇರುವ ಕ್ರೂರತೆ, ನಂಬಿಕೆದ್ರೋಹ ಮುಂತಾದ ವಿಷಯಗಳ ತಿಳಿವಳಿಕೆಗಳಿಗಾಗಿ ಅದನ್ನು ಓದುತ್ತೇವೆ ಎನ್ನುವುದಾದರೆ ಅವನನ್ನು ಭಾಷಾಂತರಿಸುತ್ತೇವೆ. ಇಲ್ಲವೇ ಅವನ ನಾಟಕಗಳು ರಾಜಾಧಿಪತ್ಯದ ಕ್ರೂರತೆಯನ್ನು ಹೇಳುತ್ತವೆ ಎಂದು ಗ್ರಹಿಸಿದರೆ ವಸಾಹತು ಸಂದರ್ಭದಲ್ಲಿ ನಾವು ಅದನ್ನು ಬ್ರಿಟಿಷರ

ವಿರುದ್ಧದ ಕಥೆಯಾಗಿ ರೂಪಾಂತರಿಸುತ್ತೇವೆ. ಹೀಗೆ ಅನುವಾದದಲ್ಲಿ ವಿವಿಧ ಬಗೆಗಳು ಇರುವುದನ್ನು ನಾವು ನೋಡಬಹುದು. ಅಂತಹ ಬಗೆಗಳನ್ನೇ ಇಲ್ಲಿ ಪರಿಚಯಿಸಲಾಗಿದೆ. ಹನ್ನೆರಡನೆಯ ಘಟಕ ಕನ್ನಡದ ತಂತ್ರಜ್ಞಾನ ಹಾಗೂ ಅದಕ್ಕೆ ಸಂಬಂಧಿಸಿದ ಪರಿಕಲ್ಪನೆಗಳಾದ ಅಂತರ್ಜಾಲ, ತಂತ್ರಾಂಶ, ಯುನಿಕೋಡ್, ಸಾಮಾಜಿಕ ಸಂವಹನ ಹಾಗೂ ಬ್ಲಾಗ್ ಮತ್ತು ಅಂಕಣ ಬರಹಗಳ ವಿವಿಧ ಸ್ವರೂಪವನ್ನು ಸಂಗ್ರಹವಾಗಿ ಹೇಳುತ್ತದೆ. ಕನ್ನಡದ ವಿವಿಧ ಫ಼ಾಂಟುಗಳ ಅರಿವಿನಿಂದ ಹಿಡಿದು, ಭಾಷೆಯ ಹಾಗೂ ಸಾಹಿತ್ಯದ ಜ್ಞಾನವು ಸಿಗುವ ಅನೇಕ ವೆಬ್ ಸ್ಥಳಗಳು, ಸಾಮಾಜಿಕ ಸಂವಹನದ ಬಗೆಗಳು ಮುಂತಾದವು ಈಗ ಕನ್ನಡ ಓದುವಾಗ ಅನಿವಾರ್ಯವಾಗಿ ಬೇಕೇ ಬೇಕು ಎನ್ನುವ ಮಟ್ಟಿಗೆ ಅವುಗಳ ವ್ಯಾಪ್ತಿ ಬೆಳೆದಿದೆ. ಅದರ ಸ್ಥೂಲ ಪರಿಚಯ ಇಲ್ಲಿ ಇದೆ. ಅಲ್ಲದೆ ವೈಜ್ಞಾನಿಕ ವಿಷಯಗಳನ್ನು ಕುರಿತಂತೆ ಕನ್ನಡದಲ್ಲಿ ಬರೆಯುವ ಶೈಲಿ ಹೇಗಿರಬೇಕು ಎಂಬುದನ್ನೂ ನೀವು ಅರಿಯುತ್ತೀರಿ. ಕೊನೆಯ ಘಟಕವಾದ ಸಂವಹನ ಕನ್ನಡ ಇನ್ನೊಬ್ಬರ ಜೊತೆ ನಾವು ಸಂಪರ್ಕಿಸುವ ಅನೇಕ ಬಗೆಯ ಕೌಶಲ್ಯಗಳನ್ನು ವಿವರಿಸುವ ಭಾಗ. ಬರಹದ ವಿವಿಧ ಬಗೆ ವಿವಿಧ ಸಂದರ್ಭಗಳಲ್ಲಿ ಹೇಗೆ ಇರುತ್ತದೆ ಎಂಬ ತಿಳುವಳಿಕೆಯನ್ನು ಕೊಡುತ್ತದೆ.

ಒಟ್ಟಾರೆ ಈ ಭಾಗ ನಿಮಗೆ ಅರಿವಿನ ಹಾಗೂ ಬರಹದ ವಿಭಿನ್ನ ಕೌಶಲ್ಯಗಳ ಗ್ರಹಿಕೆಗೆ ನೆರವಾಗುತ್ತದೆ.

ಬಸವರಾಜ ಕಲ್ಗುಡಿ
(ಸಂಪಾದಕ)

ಘಟಕ ೧೦

ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ, ಪ್ರಬಂಧ ಸಾಹಿತ್ಯ

ಹಿನ್ನೆಲೆ

ಅನುಭವ ಹಿನ್ನೆಲೆಯ ಬರಹಗಳು ಈ ಘಟಕದಲ್ಲಿವೆ. ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ ಮತ್ತು ಪ್ರಬಂಧ ಸಾಹಿತ್ಯ ಮುಂತಾದ ವಿಭಿನ್ನವಾದ ಪ್ರಕಾರದ ಬರಹಗಳು ಸೃಜನೇತರ ಎಂದು ಪರಿಗಣಿತವಾದರೂ ಲೇಖಕರ ದಟ್ಟವಾದ ಅನುಭವಗಳಿಂದ ರೂಪುಗೊಂಡ ಬರವಣಿಗೆಗಳು. ಲೇಖಕರು ತಾವು ಮಾಡಿದ ಪ್ರವಾಸದ ಅನುಭವಗಳು, ಕಂಡ ಅನೇಕ ಘಟನೆಗಳ ಕುರಿತ ಹಗುರತನದ ಹರಟೆ, ಕಾಡುವ ನೆನಪುಗಳ ಪರಿಣಾಮವಾಗಿ ಮೂಡಿಬಂದ ಜೀವನ ಚರಿತ್ರೆ ಹೀಗೆ ಅನೇಕ ಬಗೆಯ ಅನುಭವ ಆಧಾರಿತ ಬರಹವನ್ನು ಬರೆದಿದ್ದಾರೆ. ಅವುಗಳನ್ನು ಕಥೆ, ಕಾದಂಬರಿ, ಕಾವ್ಯ ಮುಂತಾದ ಕಾಲ್ಪನಿಕವಾದ ಸೃಜನಶೀಲ ಸಾಹಿತ್ಯ ಪ್ರಕಾರಗಳಂತೆ ಮುಖ್ಯವಾದ ಸೃಜನಶೀಲ ಬರವಣಿಗೆಗಳು ಎಂದು ೨೦ನೆಯ ಶತಮಾನದ ಪ್ರಾರಂಭದಲ್ಲಿ ಪರಿಗಣಿಸಿರಲಿಲ್ಲ. ಅವುಗಳನ್ನು ಎರಡನೆ ದರ್ಜೆಯ, ಕಾಲ ಹರಣದ ಓದಾಗಿ ವಿಶ್ಲೇಷಿಸಲಾಗುತ್ತಿತ್ತು. ಕಥೆ, ಕಾದಂಬರಿ, ಕಾವ್ಯ ಮುಂತಾದ ಕಾಲ್ಪನಿಕವಾದ ಸೃಜನಶೀಲ ಸಾಹಿತ್ಯ ಪ್ರಕಾರಗಳೇ ೨೦ನೆಯ ಶತಮಾನದಲ್ಲಿ ಪ್ರಧಾನವಾಗಿ ಸಾಹಿತ್ಯ ಅಧ್ಯಯನದ ಕೇಂದ್ರ ಭಾಗದಲ್ಲಿ ಇದ್ದವು. ಸಾಹಿತ್ಯ ವಿಮರ್ಶೆ ಕೂಡ ಈ ಸೃಜನೇತರ ಪ್ರಕಾರಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತಿರಲಿಲ್ಲ. ಕೇವಲ ಅನುಭವ ಜನ್ಯ ವಾಸ್ತವಿಕ ಬರಹಗಳು ಎಂದು ಭಾವಿಸಲಾಗುವ ಈ ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ, ಪ್ರಬಂಧ ಸಾಹಿತ್ಯ ಮುಂತಾದವುಗಳನ್ನು ಸೃಜನೇತರ ಎಂದು ಪರಿಗಣಿಸಿ ಪರಿಧಿಗೆ ತಳ್ಳಲಾಯಿತು. ಆದರೆ ಆಧುನಿಕೋತ್ತರ ಹಾಗೂ ವಸಾಹತೋತ್ತರ ಸಂಕಥನಗಳಲ್ಲಿ ಈ ಸಾಹಿತ್ಯ ರೂಪಗಳ ಬಗ್ಗೆ ಹೊಸ ಬಗೆಯ ಆಸಕ್ತಿ ಬೆಳೆದು ಅವುಗಳ ರಚನೆ ಹಾಗೂ ಅವು ಕೊಡುವ ಮಾಹಿತಿ ಹಾಗೂ ಸಾಮಾಜಿಕ ಜ್ಞಾನದ ಬಗ್ಗೆ ಅಧ್ಯಯನಗಳು ನಡೆಯಲು ಆರಂಭವಾಯಿತು.

ಕಳೆದ ೧೫೦ ವರ್ಷಗಳಲ್ಲಿ ಬಂದಿರುವ ಈ ಸಾಹಿತ್ಯರೂಪವನ್ನು ಸ್ಥೂಲವಾಗಿ ನಾಲ್ಕು ಸಾಹಿತ್ಯರೂಪಗಳಲ್ಲಿ ನೋಡಬಹುದು. ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ ಹಾಗೂ ಪ್ರಬಂಧ ಸಾಹಿತ್ಯ ಎಂಬ ನಾಲ್ಕು ಸೃಜನೇತರ ಸಾಹಿತ್ಯರೂಪಗಳನ್ನು ಇಲ್ಲಿ ಪರಿಚಯ ಮಾಡಿಕೊಡಲಾಗಿದೆ. ವಸಾಹತೋತ್ತರ ಸಂಕಥನದ ಅಧ್ಯಯನಗಳಲ್ಲಿ ಈ ಬಗೆಯ ಬರಹಗಳನ್ನು ದೇಶಿಯವಾದ ನೋಟಗಳು ಹಾಗೂ ವಸಾಹತುಶಾಹಿ ಯಜಮಾನಿಕೆಯ ಬರವಣಿಗೆಗೆ ಪ್ರತ್ಯುತ್ತರ ಎಂದು ಪರಿಭಾವಿಸಲಾಗುತ್ತದೆ.

೧೦.೦. ಉದ್ದೇಶ

ಈ ಘಟಕವನ್ನು ಅಭ್ಯಾಸ ಮಾಡುವ ಮೂಲಕ ನೀವು ಕೆಳಕಂಡ ವಿಷಯಗಳನ್ನು ತಿಳಿದುಕೊಳ್ಳುವಿರಿ.

೧. ಸೃಜನೇತರ ಸಾಹಿತ್ಯರೂಪಗಳ ಪರಿಚಯ.

೨. ಜೀವನ ಚರಿತ್ರೆಯ ಸ್ವರೂಪ ಹಾಗೂ ಟಾಲ್‌ಸ್ಟಾಯ್ ಅವರ ಜೀವನ ಚರಿತ್ರೆಯ ಭಾಗ.

೩. ಪ್ರವಾಸ ಸಾಹಿತ್ಯದ ಸ್ವರೂಪ ಹಾಗೂ ತೇಜಸ್ವಿಯವರ ಪ್ರವಾಸ ಸಾಹಿತ್ಯದ ಬರಹದ ಭಾಗ.

೪. ಆತ್ಮಕಥನದ ಸ್ವರೂಪ ಹಾಗೂ ನಾಗೇಗೌಡರ ಆತ್ಮಕಥನದ ಭಾಗ.

೫. ಪ್ರಬಂಧ ಸಾಹಿತ್ಯದ ಸ್ವರೂಪ ಹಾಗೂ ಮೂರ್ತಿರಾಯರ ಪ್ರಬಂಧ ಬರಹ.

ವಿಷಯಾನುಕ್ರಮಣಿಕೆ

೧೦.೦. ಉದ್ದೇಶ
೧೦.೧. ಜೀವನ ಚರಿತ್ರೆ
    ೧೦.೧.೧. ಪೀಠಿಕೆ
    ೧೦.೧.೨. ಪಠ್ಯ
ಕವಿಕೃತಿ ಪರಿಚಯ
ಅಭ್ಯಾಸ ೧
ಅಭ್ಯಾಸ ೨
೧೦.೨. ಪ್ರವಾಸ ಸಾಹಿತ್ಯ
    ೧೦.೨.೧. ಪೀಠಿಕೆ
    ೧೦.೨.೨ ಪಠ್ಯ
ಕವಿಕೃತಿ ಪರಿಚಯ
ಅಭ್ಯಾಸ ೧
ಅಭ್ಯಾಸ ೨
೧೦.೩. ಆತ್ಮಕಥನ
    ೧೦.೩.೧. ಪೀಠಿಕೆ
    ೧೦.೩.೨. ಪಠ್ಯ
ಕವಿಕೃತಿ ಪರಿಚಯ
ಅಭ್ಯಾಸ ೧
ಅಭ್ಯಾಸ ೨
೧೦.೪. ಪ್ರಬಂಧ ಸಾಹಿತ್ಯ
    ೧೦.೪.೧. ಪೀಠಿಕೆ
    ೧೦.೪.೨. ಪಠ್ಯ

ಕವಿಕೃತಿ ಪರಿಚಯ
ಅಭ್ಯಾಸ ೧
ಅಭ್ಯಾಸ ೨
೧೦.೫. ಸಾರಾಂಶ

೧೦.೧. ಜೀವನ ಚರಿತ್ರೆ

೧೦.೧.೧. ಪೀಠಿಕೆ

ಸಾಧಕರೊಬ್ಬರ ಬದುಕನ್ನು ಸಮೀಪದಿಂದ ನೋಡಿದವರು, ಚೆನ್ನಾಗಿ ಕೇಳಿ ಅಥವಾ ಓದಿ ತಿಳಿದವರು, ಅವರ ಆದರ್ಶಗಳು ಸಮಾಜದ ಕಣ್ಣಿಗೆ ಕಟ್ಟುವಂತೆ, ಅದರಿಂದ ಏನಾದರೂ ಕಲಿಯಲು ಇಲ್ಲವೇ ಪ್ರೇರಣೆಗೊಳ್ಳಲು ಸಾಧ್ಯವಾಗುವಂತೆ, ಬದುಕಿನ ಯಾವ ಮುಖ್ಯಘಟ್ಟಗಳೂ ಸಂಗತಿಗಳೂ ತಪ್ಪಿಹೋಗದಂತೆ ಬರವಣಿಗೆಯಲ್ಲಿ ತರುವುದು 'ಜೀವನ ಚರಿತ್ರೆ' ಎನಿಸಿಕೊಳ್ಳುತ್ತದೆ. ಇಲ್ಲಿ ಆರಾಧನೆಯ ಮನೋಭಾವಕ್ಕಿಂತ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಉದ್ದೇಶವೇ ಪ್ರಮುಖವಾದದ್ದು. ಜೀವನ ಚರಿತ್ರೆ ಬರೆಯುವವರಿಗೆ ಸ್ಫುಟವಾದ, ಮೂರ್ತವಾದ ಶೈಲಿ ಇರಬೇಕು. ಕೃತಿಯ ನಾಯಕನನ್ನು ಅರ್ಥಮಾಡಿಕೊಳ್ಳುವ ಕಲ್ಪನಾಶಕ್ತಿ ಬೇಕು. ನಿರೂಪಣೆಯಲ್ಲಿ ಪ್ರಾಮಾಣಿಕತೆ ಬೇಕು.

ಸ್ವಾತಂತ್ರ್ಯ ಪೂರ್ವದ ಸುಮಾರು ಐದು ದಶಕಗಳ ಅವಧಿಯಲ್ಲಿ ಕನ್ನಡದಲ್ಲಿ ಐನೂರಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಕನ್ನಡದಲ್ಲಿ ರಚಿತವಾದ ಜೀವನ ಚರಿತ್ರೆಗಳು ಮಹಾಪುರುಷರ ಜೀವಿತದ ಸಾಧನೆ ಸಿದ್ಧಿಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ, ಆ ಮೂಲಕ ದೇಶಾಭಿಮಾನವನ್ನು ಹಾಗೂ ಉನ್ನತ ಧ್ಯೇಯ, ಧೋರಣೆಗಳನ್ನು ಜನತೆಯ ಮನಸ್ಸಿನಲ್ಲಿ ಬಿತ್ತುವ ಉದ್ದೇಶದಿಂದ ಕೂಡಿವೆ. ಹಾಗಾಗಿ ಧಾರ್ಮಿಕ ಪುರುಷರ, ಮತಾಚಾರ್ಯರ, ಸಾಧುಸಂತರ, ಸಮಾಜ ಸುಧಾರಕರ, ಚರಿತ್ರೆಯ ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಗಳು ಪ್ರಕಟಗೊಂಡವು. ಇವುಗಳಲ್ಲಿ ಬಸವಣ್ಣನ ಚರಿತ್ರೆ, ಬುದ್ಧನ ಚರಿತ್ರೆ, ಮಧ್ವಾಚಾರ್ಯರ ಚರಿತ್ರೆ, ಅಲ್ಲಮನ ಚರಿತ್ರೆ ಮುಂತಾದವುಗಳು ಪ್ರಕಟಗೊಂಡವು. ನಂತರದ ದಿನಗಳಲ್ಲಿ ಜೀವನಚರಿತ್ರೆಗಳ ವಿಷಯ ವೈವಿಧ್ಯ ವಿಸ್ತಾರವಾಯಿತು. ಸಾಹಿತಿಗಳು, ದೇಶಭಕ್ತರು, ನಟರು, ವಿಜ್ಞಾನಿಗಳು ಹಾಗೂ ರಾಜಕಾರಣಿಗಳು ಇವರನ್ನು ಕುರಿತಂತೆ ಜೀವನ ಚರಿತ್ರೆಗಳು ರಚನೆಗೊಂಡವು. ಸಾಹಿತ್ಯದ ವಿವಿಧ ರಂಗಗಳಲ್ಲಿ ಕೆಲಸ ಮಾಡಿದ ಮಹನೀಯರು ಈ ಪ್ರಕಾರದಲ್ಲಿ ಬರೆಯ ತೊಡಗಿದ್ದರಿಂದ ಜೀವನ ಚರಿತ್ರೆ ಲಕ್ಷಣಬದ್ಧವಾದ ಒಂದು ಸಾಹಿತ್ಯ ಪ್ರಕಾರವಾಗಿ ಪರಿಣಮಿಸಿತು. ಈ ಘಟಕದಲ್ಲಿ ಸುಪ್ರಸಿದ್ಧ ರಷ್ಯಾದ ಲೇಖಕ ಲಿಯೋ ಟಾಲ್‌ಸ್ಟಾಯ್ ಅವರ ಜೀವನ ಚರಿತ್ರೆಯ ಬಾಲ್ಯ ಹಾಗೂ ತಾರುಣ್ಯದ ಭಾಗವನ್ನು ದೇ. ಜವರೇಗೌಡ ಅವರ 'ಟಾಲ್‌ಸ್ಟಾಯ್ ಜೀವನ ದರ್ಶನ ಎಂಬ ಕೃತಿಯಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಚಿತ್ರ ೧ರಲ್ಲಿ ಟಾಲ್‌ಸ್ಟಾಯ್ ಅವರ ಚಿತ್ರವನ್ನು ಕೊಡಲಾಗಿದೆ.



ಚಿತ್ರ ೧: ಲಿಯೋ ಟಾಲ್‌ಸ್ಟಾಯ್ (ಚಿತ್ರ ಕೃಪೆ: ವಿಕಿಪೀಡಿಯಾ)

೧೦.೨ ಪಠ್ಯ

ಟಾಲ್‌ಸ್ಟಾಯ್: ಬಾಲ್ಯ–ತಾರುಣ್ಯ

– ದೇ.ಜ.ಗೌ.

ಗಾಂಧೀಜಿ ಇಪ್ಪತ್ತನೆಯ ಶತಮಾನದ ಜಗತ್ತಿನ ನೈತಿಕ ಮೌಲ್ಯಗಳೇ, ಆಧ್ಯಾತ್ಮಿಕ ಸತ್ವವೇ ಸಾಕಾರಗೊಂಡಂತಿದ್ದರೆ, ಅವರಿಗೆ ಮಾರ್ಗದರ್ಶಕರಾಗಿದ್ದ, ಸ್ಫೂರ್ತಿಯ ಚಿಲುಮೆಯಾಗಿದ್ದ, ರಷ್ಯಾದ ಕೌಂಟ್ ಲಿಯೋ ಟಾಲ್‌ಸ್ಟಾಯ್, ಹತ್ತೊಂಬತ್ತನೆಯ ಶತಮಾನದ ಜಗತ್ತಿನ ನೈತಿಕ ಸತ್ವವೇ, ಆಧ್ಯಾತ್ಮಿಕ ಚೈತನ್ಯವೇ ಮೂರ್ತಿಗೊಂಡಂತಿದ್ದ, ಚಕ್ರವರ್ತಿಯ ಮತ್ತು ಚರ್ಚಿನ ಅಧಿಕಾರಿಗಳ ಕ್ರೌರ್ಯಕ್ಕೆ ಗುರಿಯಾದರೂ, ಲೋಕಗುರುವೆಂಬ ಆರಾಧನೆಗೆ ಪಾತ್ರರಾದ ಮಹಾಮಹಿಮರವರು, ವಿಶ್ವಮಾನವರು. ಯಾಸ್ನಯಾ ಪೋಲ್ಯಾನದಲ್ಲಿ ಸ್ಫೋಟಿಸಿದ ಆಧ್ಯಾತ್ಮಿಕ ಕಂಪನ ಜಗತ್ತಿನಲ್ಲೆಲ್ಲ ಪಸರಿಸಿ, ವಿರಾಣ್ಮನದಲ್ಲಿ ವಿಲೀನಗೊಂಡು, ಇಂದಿಗೂ ವಾಙ್ಮಯರೂಪದಲ್ಲಿ ಲೋಕವನ್ನು ದಿವ್ಯತೆಯ ಕಡೆಗೆ ಒಯ್ಯುತ್ತಿರುವುದು ಸದಾ ಸ್ಮರಣೀಯ ಸಂಗತಿಯಾಗಿದೆ. ಅಂಥ ಮಹಾಪುರುಷನ ಜೀವನಾಧ್ಯಯನ ಹಾಗೂ ಕೃತಿಯಾರಾಧನೆ ಮನುಕುಲಕ್ಕೆ ಸಂಜೀವಿನಿಯಾಗಲಿದೆ ಎಂಬುದರಲ್ಲಿ ಸಂದೇಹವಿಲ್ಲ.

ಯಾಸ್ನಯಾ ಪೋಲ್ಯಾನ ಹೆಸರು ಕವಿಯ ಮೇಲೆ ಬೀಳುತ್ತಿದ್ದಂತೆ ಇಡೀ ದೇಹವೇ ರೋಮಾಂಚನಗೊಂಡು, ಹೃನ್ಮನಗಳಲ್ಲಿ ವಿದ್ಯುತ್ಸಂಚರಿಸಿದಂತಾಗುತ್ತದೆ. ಲಿಯೋ ಟಾಲ್‌ಸ್ಟಾಯ್ ಎಂಬ ಮಹಾತಪಸ್ವಿಗೆ ಜನ್ಮ ನೀಡಿದ ತಂದೆ ತಾಯಿಯರು ಮಾತ್ರವಲ್ಲ, ಆ ಸ್ಥಳವೂ ಪವಿತ್ರವಾದದ್ದು. ಮಾಸ್ಕೋ ನಗರಕ್ಕೆ ೧೩೦ ಮೈಲಿ ದೂರದ ಆ ಹಳ್ಳಿಯಲ್ಲಿ ೨೮. ೮. ೧೮೨೮ರಂದು ಟಾಲ್‌ಸ್ಟಾಯ್ ಜನ್ಮ ತಾಳುತ್ತಾರೆ. ಅವರ ಪೂರ್ವಜರು ಚಕ್ರವರ್ತಿಗೆ ಆಪ್ತರಾಗಿದ್ದು, ಕೌಂಟ್ ಎಂಬ ಬಿರುದಿಗೆ ಪಾತ್ರರಾಗಿದ್ದರು. ಆ ವಂಶದಲ್ಲಿ ಹುಟ್ಟಿದ ನಿಕೋಲಾಸ್ ಟಾಲ್‌ಸ್ಟಾಯ್ ಮತ್ತು ಅವರಷ್ಟೇ ಪ್ರಖ್ಯಾತವಾದ ವಂಶದ ರಾಜಕುಮಾರಿ ಮಾರ್ಯ ವೊಲ್ಕೋನ್ಸ್ಕಿ ಲಿಯೋ ಟಾಲ್‌ಸ್ಟಾಯರ ತಂದೆ–ತಾಯಿಯರು. ತಾಯಿ ಸುಶಿಕ್ಷಿತೆ, ಐದಾರು ಭಾಷೆ ಬಲ್ಲವಳು, ಕಥೆ ಹೇಳುವುದರಲ್ಲಿ ನಿಸ್ಸೀಮೆ. ಲಿಯೋ ಒಂದೂವರೆ ವರ್ಷದವನಾಗಿದ್ದಾಗಲೇ ತಾಯಿ ತೀರಿಕೊಳ್ಳುತ್ತಾಳೆ. ಅವರಿವರಿಂದ ಕೇಳಿದ

ಸಂಗತಿಗಳು ಹಾಗೂ ಪತ್ರವ್ಯವಹಾರದ ಅವಲೋಕನದ ಪರಿಣಾಮವಾಗಿ ಅವಳೊಬ್ಬಳು ಪರಿಶುದ್ಧ ಹೃದಯದ, ಆಧ್ಯಾತ್ಮಿಕ ಪ್ರವೃತ್ತಿಯ, ಸಮಾಜದ ಗೌರವಕ್ಕೆ ಪಾತ್ರವಾಗಿದ್ದ ಸುಸಂಸ್ಕೃತೆಯೆಂದು ಮಗ ಲಿಯೋ ಟಾಲ್‌ಸ್ಟಾಯ್ ತಾಯಿಯ ಚಿತ್ರವನ್ನು ಕಲ್ಪಿಸಿ ಕೊಳ್ಳುತ್ತಾನೆ.

ಲಿಯೋ ಜತೆಯಲ್ಲಿ ಹುಟ್ಟಿದವರು ಮೂವರು ಅಣ್ಣಂದಿರು ಮತ್ತು ಒಬ್ಬಳು ತಂಗಿ. ನಿಕೋಲಾಸ್, ಸೆರ್ಗಿ ಮತ್ತು ಡಮೆಟ್ರಿ ಅಣ್ಣಂದಿರು, ಮಾರ್ಯ ಅವರ ತಂಗಿ. ತಾಯಿ ಸತ್ತ ನಂತರ ಈ ಮಕ್ಕಳ ಯೋಗಕ್ಷೇಮವನ್ನು ನೋಡಿಕೊಂಡು, ತನ್ನ ಮಕ್ಕಳೆಂದು ತಿಳಿದು ಸಾಕಿದವಳು, ವಾವೆಯಲ್ಲಿ ಚಿಕ್ಕಮ್ಮ ಆಗಬೇಕಾಗಿದ್ದ ದೂರದ ನೆಂಟತಿ ಟಾಟಿಯಾನ.

ಯಾತ್ರಿಕರು, ಸಾಧುಸನ್ಯಾಸಿ, ಸನ್ಯಾಸಿನಿಯರು ಮತ್ತು ಅರೆಮರುಳ ಭಕ್ತರು ಆಗಾಗ್ಗೆ ಅವರ ಮನೆಗೆ ಭೇಟಿ ನೀಡುತ್ತಿದ್ದರು. ಒಮ್ಮೊಮ್ಮೆ ಅವರು ಹೆಚ್ಚು ದಿನ ತಂಗುತ್ತಿದ್ದದೂ ಉಂಟು, ಅವರಲ್ಲೊಬ್ಬಳು ಮಾರ್ಯ ಗೆರಾಸಿಮೊವ್ನ ಎಂಬ ಸನ್ಯಾಸಿನಿ. ಅವಳು ಯೌವನದಲ್ಲಿ ಗಂಡುಡುಗೆ ತೊಟ್ಟು ಅನೇಕ ಪವಿತ್ರ ಕ್ಷೇತ್ರಗಳಿಗೆ ಭೇಟಿ ನೀಡಿದ್ದಳು. ನಾಲ್ಕು ಮಂದಿ ಗಂಡು ಮಕ್ಕಳಾದ ಮೇಲೆ ಒಂದು ಹೆಣ್ಣು ಮಗುವನ್ನು ಬಯಸಿದ ತಾಯಿ ಮಾರ್ಯಾ ವೊಲ್ಕೋನ್ಸ್ಕಿ ತನ್ನ ಬಸಿರಲ್ಲಿ ಹೆಣ್ಣು ಹುಟ್ಟಿದರೆ, ಆ ಸಂದರ್ಭದಲ್ಲಿ ಮೊದಲು ಆಗಮಿಸಬಹುದಾದ ಯಾತ್ರಿಕಳನ್ನು ಸಾಕು ತಾಯಿಯೆಂದು ಸ್ವೀಕರಿಸುವುದಾಗಿ ಹರಕೆ ಹೊರುತ್ತಾಳೆ. ಹಾಗೆ ಆ ಕಾಲಕ್ಕೆ ಆಗಮಿಸಿದವಳು ಮಾರ್ಯ ಗೆರಾಸಿಮೊವ್ನ. ಅನಂತರ ಗೆರಾಸಿಮೊವ್ನ ತೂಲ ಸನ್ಯಾಸಿನಿಯರ ಮಠದಲ್ಲಿ ಕೆಲವು ದಿನ ಕಳೆದರೆ, ಟಾಲ್‌ಸ್ಟಾಯ್‌ರ ಮನೆಯಲ್ಲಿ ಹೆಚ್ಚು ಕಳೆಯುತ್ತಾಳೆ.

ಬಾಲ್ಯದಲ್ಲಿ ಟಾಲ್‌ಸ್ಟಾಯವರ ಜೀವನೋತ್ಸಾಹ ಪ್ರಕಾಶಮಾನವಾಗಿತ್ತು. ಹೊಸ ಹೊಸ ಆಲೋಚನೆಗಳು ಚಿಮ್ಮಿದಾಗ ಅವನ ಮುಖದಲ್ಲಿ ಮಂದಹಾಸ ಹರಿದಾಡುತ್ತಿತ್ತು. ಅದನ್ನು ಕೂಡಲೇ ಮನೆಯವರಿಗೆಲ್ಲ ಹೇಳಿಬಿಡಬೇಕು. ತನ್ನ ಜೀವನೋತ್ಸಾಹದ ನಡುವೆಯೂ ಅವನು ಒಮ್ಮೊಮ್ಮೆ ತನ್ನ ಕುರೂಪದ ಬಗ್ಗೆ ಯೋಚಿಸುತ್ತಿದ್ದುದುಂಟು. ಅವನೆಂದೂ ಒರಟಾಗಿ ನಡೆದುಕೊಂಡವನಲ್ಲ. ಅವನ ಹೃದಯ ತುಂಬ ಮೃದು, ಸೂಕ್ಷ್ಮ. ಅವನ ಮಾತುಗಳಲ್ಲಿ ಆಗಾಗ್ಗೆ ಹಾಸ್ಯ ಮಡುಗಟ್ಟುತ್ತಿತ್ತು. ಅಣ್ಣಂದಿರಾಗಲಿ, ಬೇರೆ ಬಂಧುಗಳಾಗಲಿ ಅವನ ಮೇಲೆ ಸಿಡುಕಿದರೆ ಅತ್ತುಬಿಡುತ್ತಿದ್ದ. ತಾನು ಯಾರ ಮೇಲಾದರೂ ಕೋಪಿಸಿ ಕೊಂಡಿದ್ದಾದರೆ ಮನೆಗೆ ಹೋಗಿ ಕಣ್ಣೀರು ಸುರಿಸುತ್ತಿದ್ದ. ಅದರಿಂದ ಹಿರಿಯರು ಅವನನ್ನು ಅಳುಬುರುಕ ಲಿಯೋ ಎಂದು ಕರೆಯುತ್ತಿದ್ದರು.

ಟಾಲ್‌ಸ್ಟಾಯರ ಎಂಟನೆಯ ವರ್ಷದಲ್ಲಿ ದೊಡ್ಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅವರ ಕುಟುಂಬ ಮಾಸ್ಕೋ ನಗರಕ್ಕೆ ತೆರಳುತ್ತದೆ. ಮರು ವರ್ಷ ಬೇಸಗೆ ಸಮಯದಲ್ಲಿ ಯಾವುದೋ ವ್ಯವಹಾರಕ್ಕಾಗಿ ತೂಲಕ್ಕೆ ಹೋಗಿದ್ದಾಗ ತಂದೆ ಮೂರ್ಛೆರೋಗಕ್ಕೆ ತುತ್ತಾಗುತ್ತಾರೆ. ಕಾನೂನುಬದ್ಧವಾಗಿ ಪೋಷಕಿಯಾದ ಚಿಕ್ಕಮ್ಮಳೊಬ್ಬಳು ತೀರಿಕೊಂಡ ನಂತರ, ಕಾಜಾನ್‌ನಲ್ಲಿದ್ದ ಮೊತ್ತೊಬ್ಬ ನೆಂಟತಿ ಕಾನೂನುಬದ್ಧವಾಗಿ ಪೋಷಕಿಯಾಗುತ್ತಾಳೆ. ಆದ್ದರಿಂದ ಕುಟುಂಬ ಕಾಜಾನ್ಗೆ ತೆರಳಬೇಕಾಗುತ್ತದೆ. ೧೮೪೧ರಿಂದ ೧೮೪೭ರ ವರೆಗೆ ಸೋದರ–ಸೋದರಿಯರು ಅಲ್ಲಿಯೇ ತಂಗಿದ್ದು ತಮ್ಮ ವಿದ್ಯಾಭ್ಯಾಸ ಮುಂದುವರೆಸುತ್ತಾರೆ. ಬೇಸಗೆಯ ರಜಾದಿನಗಳಲ್ಲಿ ಮಾಸ್ಕೋದಲ್ಲಿ ತಂಗುತ್ತಾರೆ.

ಕಾಜಾನ್ ವಿಶ್ವವಿದ್ಯಾನಿಲಯದಲ್ಲಿ ಟಾಲ್‌ಸ್ಟಾಯ್ ಪ್ರಾಚ್ಯಭಾಷ್ಯಾ ವಿಭಾಗವನ್ನು ಪ್ರವೇಶಿಸಿ, ಮೊದಲ ವರ್ಷದ ಪರೀಕ್ಷೆಯಲ್ಲಿ ಫೇಲಾಗುತ್ತಾರೆ. ಅನಂತರ ಅವರು ನ್ಯಾಯಶಾಸ್ತ್ರ ಅಧ್ಯಯನದ ಕಡೆಗೆ ವಾಲುತ್ತಾರೆ. ಮೊದಲನೆಯ ವರ್ಷ ಉತ್ತೀರ್ಣರಾದರೂ ಎರಡನೆಯ ವರ್ಷದಲ್ಲಿ ಅವರ ಆಸಕ್ತಿ ಕುಗ್ಗುತ್ತದೆ. ಆದರೆ ಅವರ ಜ್ಞಾನದಾಹ ಮಾತ್ರ ದಿನದಿಂದ ದಿನಕ್ಕೆ ಹೆಚ್ಚುತ್ತದೆ. ಆ ಹೊತ್ತಿಗವರು ಬೈಬಲ್ಲಿನ ಜೋಸೆಫ್ ಕಥೆ, ಅರೇಬಿಯನ್ ನೈಟ್ಸ್, ಪುಷ್ಕಿನ್ ಸಾಹಿತ್ಯ ಮತ್ತು ರಷ್ಯಾದ ಜಾನಪದ ಪುರಾಣಗಳನ್ನು ಓದಿ ಮುಗಿಸುತ್ತಾರೆ. ಜೋಸೆಫ್ ಕತೆಯ ಕಲಾತ್ಮಕತೆ ಅವರ ಮೇಲೆ ಬಾರಿ ಪ್ರಭಾವ ಬೀರುತ್ತದೆ. ಯೌವನಕ್ಕೆ ಅವರು ಕಾಲಿಡುವ ಮುನ್ನವೇ ಅವರು ಕಾಣುತ್ತಿದ್ದ ಕನಸುಗಳಿವು: ಒಂದು: ಕನಸಿನಲ್ಲಿ ಕಂಡ ಹೆಣ್ಣಿನ ಪ್ರಭಾವದಿಂದ ಪ್ರೇಮದಲ್ಲಿ ಮುಳುಗಿದ್ದು. ಎರಡು: ಸುತ್ತಮುತ್ತಣ ಜನರೆಲ್ಲರು ತಮ್ಮನ್ನು ಪ್ರೀತಿಸಬೇಕು, ತಾವು ಎಲ್ಲರ ಮನದಲ್ಲಿ ನೆಲಸಬೇಕು. ಮೂರು: ಅಸಾಧಾರಣವಾದ ಅದೃಷ್ಟ ತಮ್ಮ ಜೀವನದಲ್ಲೊದಗುತ್ತದೆ. ನಾಲ್ಕು: ತಮ್ಮನ್ನೇ ಕುರಿತ ಜಿಗುಪ್ಸೆ ಮತ್ತು ಪಶ್ಚಾತ್ತಾಪ. ಆದರೆ ಅವುಗಳಿಂದ ಅವರಿಗೇನು ನಷ್ಟವಾಗಲಿಲ್ಲ. ಕಾರಣ, ಅವರಲ್ಲಿ ಆತ್ಮಪ್ರತ್ಯಯ ಪ್ರಬಲವಾಗಿತ್ತು.

ಸೋದರ ಸೆರ್ಜಿಯ ವ್ಯಾಸಂಗ ಮುಗಿಯುತ್ತಿದ್ದಂತೆ ಸೋದರ ಸೋದರಿಯರ ನಡುವೆ ಕುಟುಂಬದ ಆಸ್ತಿಪಾಸ್ತಿಗಳ ವಿಭಜನೆ ನಡೆಯುತ್ತದೆ. ಲಿಯೋ ಪಾಲಿಗೆ ಯಾಸ್ನಯಾ ಪೋಲ್ಯಾನದ ಜತೆಗೆ ಬೇರೆ ಬೇರೆ ನಾಲ್ಕು ಆಸ್ತಿಗಳು ಸೇರಿ ೫,೪೦೦ ಎಕರೆ ಜಮೀನು ಲಭಿಸುತ್ತದೆ. ೩೩೦ ರೈತ ಕುಟುಂಬಗಳ ಜವಾಬ್ದಾರಿಯನ್ನು ಅವರು ಹೊರಬೇಕಾಗುತ್ತದೆ. ಆಸ್ತಿಪಾಸ್ತಿಗಳ ಮೇಲ್ವಿಚಾರಣೆಯ ಕಡೆಗೆ ಅವರ ಗಮನ ಹರಿಯಲಾಗಿ, ಮುಂದೆ ಬರಲಿರುವ ಪರೀಕ್ಷೆಗೆ ನಮಸ್ಕಾರ ಹಾಕಿ, ಯಾಸ್ನಯಾ ಪೋಲ್ಯಾನಕ್ಕೆ ಹಿಂದಿರುಗುತ್ತಾರೆ.

ಪದವೀಧರರಾಗದಿದ್ದುದರಿಂದ ಅವರನ್ನು ಬೇಸರ ನಿರಾಶೆಗಳು ಕಾಡುತ್ತವೆ. ತಾವು ಓದಬೇಕಾದ ವಿಷಯಗಳ ಪಟ್ಟಿಯನ್ನು ಗ್ರಂಥಗಳ ಹೆಸರನ್ನು ತಮ್ಮ ದಿನಚರಿಯಲ್ಲಿ ದಾಖಲಿಸುತ್ತಾರೆ. ತಮ್ಮ ಸುತ್ತಮುತ್ತಣ ಜನರ ನಡುವಣ ನಡೆನುಡಿಗಳ ಅಂತರವನ್ನು ಗಮನಿಸಿ, ಒಂದು ನೀತಿಸೂತ್ರವನ್ನು ಕಾರ್ಯಗತಗೊಳಿಸುವುದಕ್ಕಿಂತ ಹತ್ತು ಸಂಪುಟಗಳ ತತ್ತ್ವಶಾಸ್ತ್ರವನ್ನು ಬರೆಯುವುದು ಸುಲಭ ಎಂದವರು ಹೇಳುತ್ತಾರೆ. ತಾವು ಬಯಸಿದಂತೆ ನಡೆಯಲಾರದ್ದಕ್ಕೆ ಹೆಚ್ಚು ಹೆಚ್ಚು ಜನರ ಸಂಪರ್ಕವೇ ಕಾರಣವೆನ್ನುತ್ತಾರೆ. ಮನುಷ್ಯ ಜೀವನದ ಗುರಿ ಏನೆಂದು ಅವರು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುತ್ತಾರೆ. ತಮ್ಮ ಸುತ್ತಮುತ್ತಣ ಎಲ್ಲ ಜೀವಗಳ ಸಂಪೂರ್ಣ ಬೆಳವಣಿಗೆಗೆ ಗರಿಷ್ಠ ಸಹಾಯ ನೀಡುವುದೇ ಮಾನವ ಜೀವನದ ಉದ್ದೇಶವೆಂದವರು ನಿರ್ಣಯಿಸುತ್ತಾರೆ.

ಎರಡು ವರ್ಷ ಯಾಸ್ನಯಾ ಪೋಲ್ಯಾನದಲ್ಲಿರಲು ನಿರ್ಧರಿಸಿ, ಆ ಅವಧಿಯಲ್ಲಿ ಪೂರೈಸಬೇಕಾದ ಕಾರ್ಯಕ್ರಮವನ್ನು ಪಟ್ಟಿ ಮಾಡಿಕೊಳ್ಳುತ್ತಾರೆ. ನ್ಯಾಯಶಾಸ್ತ್ರವನ್ನೋದಿ ಪದವಿ ಪಡೆಯತಕ್ಕದ್ದು, ಪ್ರಾಯೋಗಿಕ ವೈದ್ಯವನ್ನು ಅಲ್ಪಸ್ವಲ್ಪ ಶಾಸ್ತ್ರವನ್ನು ಓದಿಕೊಳ್ಳತಕ್ಕದ್ದು. ಫ್ರೆಂಚ್, ರಷ್ಯನ್, ಜರ್ಮನ್, ಇಂಗ್ಲಿಷ್, ಇಟಾಲಿಯನ್ ಮತ್ತು ಲ್ಯಾಟಿನ್ ಭಾಷೆಗಳ ಗ್ರಂಥಗಳನ್ನು ವ್ಯಾಸಂಗಿಸತಕ್ಕದ್ದು. ವ್ಯವಸಾಯ, ವಿಜ್ಞಾನ, ಇತಿಹಾಸ, ಭೂಗೋಳ ಮತ್ತು ಸಂಖ್ಯಾಶಾಸ್ತ್ರಗಳ ಅಧ್ಯಯನ, ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಪೂರ್ಣತೆಯನ್ನು ಗಳಿಸುವುದು. ಜೀವವಿಜ್ಞಾನದ ಪಾಠಗಳನ್ನು ಕಲಿಯತಕ್ಕದ್ದು ಇಂಥ ನಿರ್ಣಯಗಳು ಅವರ ದಿನಚರಿಯಲ್ಲಿ ತುಂಬಿಕೊಂಡಿವೆ. ಅವುಗಳನ್ನು ಕಾರ್ಯಗತಗೊಳಿಸದಿದ್ದಾಗ ಅವರು ತುಂಬಾ ವ್ಯಥೆಗೊಳಗಾಗುತ್ತಾರೆ.

ಬಾಲ್ಯದಲ್ಲಿ ಕಲಿತಿದ್ದ ಧಾರ್ಮಿಕ ನಂಬಿಕೆಗಳು ಕಾಲಕ್ರಮೇಣ ಮರೆತುಹೋಗುತ್ತವೆ. ಹದಿನೈದನೆಯ ವಯಸ್ಸಿನಿಂದಲೇ ಅವರು ವಿವಿಧ ತತ್ತ್ವಶಾಸ್ತ್ರಗಳನ್ನು ಅಧ್ಯಯನ ಮಾಡುತ್ತಾರೆ. ಅವುಗಳ ಹಿನ್ನೆಲೆಯಲ್ಲವರು ಭಗವಂತನ ಅಸ್ತಿತ್ವವನ್ನು ನಂಬುತ್ತಾರೆ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಹರಸುವಂತೆ ದೇವರನ್ನವರು ಪ್ರಾರ್ಥಿಸಿದ್ದೂ ಉಂಟು. ಧ್ಯಾನ ಚಿಂತನೆಗಳ ಮೂಲಕ ಮಾನಸಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾರೆ. ದೇಹದಾರ್ಢ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ವ್ಯಾಯಾಮಶಾಲೆಗೆ ಹೋಗುತ್ತಾರೆ. ಆ ಕಾಲದಲ್ಲಿ ಅವರೋದಿದ ಪರ್ವತ ಪ್ರಸಂಗ, ರೂಸೋವಿನ ಕನ್ಫೆಷನ್ಸ್ ಮತ್ತು ಎಮಿಲಿ ಡಿಕನ್ಸನ ‘ಡೇವಿಡ್ ಕಾಪರ್‌ಫೀಲ್ಡ್’, ಪುಷ್ಕಿನ್, ಒಓಲ್, ಟರ್ಗಿನೆವ್ ಅವರ ಕೆಲವು ಗ್ರಂಥಗಳು ಅವರ ಮೇಲೆ ಅಪ್ರತಿಹತ ಪ್ರಭಾವವನ್ನು ಬೀರುತ್ತವೆ. ಡಿಕನ್ಸನ ‘ಪಿಕ್ವಿಕ್ ಪೇಪರ್ಸ್’ಅನ್ನು ಓದಿದಾಗ ಸರ್ಕಾರದ ಬಗೆಗಿನ ಅವರ ಜಿಗುಪ್ಸೆ ದೃಢವಾಗುತ್ತದೆ. ರೂಸೋನನ್ನಂತು ಅವರು ಆರಾಧಿಸುತ್ತಾರೆ. ವಾಲ್ಟೇರನೂ ಅವರನ್ನು ಆಕರ್ಷಿಸುತ್ತಾನೆ. ಅವರೇನು ಓದಲಿ, ಏನು ಕೆಲಸ ಮಾಡಲಿ, ಅವರಲ್ಲಿ ಅತಿಶಯ ತೀವ್ರತೆಯನ್ನು ಗಮನಿಸಬಹುದಾಗಿದೆ.

ಯಾಸ್ನಯಾ ಪೋಲ್ಯಾನಕ್ಕೆ ಅವರು ಹೋದದ್ದು, ಆಸ್ತಿಯ ವ್ಯವಹಾರಗಳನ್ನು ನೋಡಿಕೊಳ್ಳಲು ಮತ್ತು ಜೀತದಾಳುಗಳ ಸ್ಥಿತಿಗತಿಗಳನ್ನು ಸುಧಾರಿಸುವ ಸಲುವಾಗಿ. ಅವರು ತಮ್ಮಷ್ಟಕ್ಕೆ ತಾವೇ ಪ್ರಶ್ನೆ ಹಾಕಿಕೊಳ್ಳುತ್ತಾರೆ. ಏಳುನೂರು ಜೀವಿಗಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾದ್ದು ನನ್ನ ಪವಿತ್ರ ಕರ್ತವ್ಯವಲ್ಲವೇ? ನೋಡಿಕೊಳ್ಳಲಿಲ್ಲ, ದೇವರ ಮುಂದೆ ನನ್ನನ್ನು ನಾನು ಸಮರ್ಥಿಸಿಕೊಳ್ಳುವುದೆಂತು? ನಾನು ಭೋಗಲೋಲನಾಗಿ ಅವರನ್ನು ಕಠಿಣ ಹೃದಯದ ಮೇಲ್ವಿಚಾರಕರ ವಶಕ್ಕೊಪ್ಪಿಸುವುದು ಪಾಪವಲ್ಲವೇ? ಆದರವರು ಎಷ್ಟು ಪ್ರೀತಿ ದಯೆಗಳನ್ನು ಹರಿಸಿದರೂ, ಜೀತಗಾರರು ಅವರನ್ನು ನಂಬುವುದಿಲ್ಲ. ಆ ಪ್ರೀತಿ, ದಯೆಗಳ ಹಿಂದೆ ಏನೋ ಮೋಸವಿದೆಯೆಂದವರು ಶಂಕಿಸುತ್ತಾರೆ. ಅದರಿಂದ ಟಾಲ್‌ಸ್ಟಾಯರಿಗೆ ಬೇಸರ ನಿರಾಶೆಗಳುಂಟಾಗುತ್ತವೆ.

೧೮೪೯ರ ಪ್ರಾರಂಭದಲ್ಲವರು ಪೀಟರ್ಸಬರ್ಗ್‌ಗೆ ಹೋಗಿ, ನ್ಯಾಯಶಾಸ್ತ್ರವನ್ನು ಅಭ್ಯಸಿಸಿ, ಎರಡು ಪರೀಕ್ಷೆಗಳಲ್ಲಿ ಉತ್ತೀರ್ಣರಾಗುತ್ತಾರೆ. ವಸಂತಋತು ಸನ್ನಿಹಿತವಾಗುತ್ತಿದ್ದಂತೆ ಹಳ್ಳಿಯ ಜೀವನದಿಂದ ಆಕರ್ಷಿತರಾಗಿ ಊರಿಗೆ ಹಿಂದಿರುಗುತ್ತಾರೆ. ಮುಂದಿನ ಮೂರು ವರ್ಷಗಳನ್ನು ಯಾಸ್ನಯಾ ಮತ್ತು ಮಾಸ್ಕೋಗಳಲ್ಲಿ ಕಳೆಯುತ್ತಾರೆ. ವಿಷಯಾಸಕ್ತಿ, ಬೇಟೆ, ಜಿಪ್ಸಿ ಹುಡುಗಿಯರು, ಇಸ್ಪೀಟುಗಳಲ್ಲವರು ತಲ್ಲೀನರಾಗಿ, ಸಾಲ ಮಾಡಿಕೊಳ್ಳುತ್ತಾರೆ. ಕೊನೆಗೊಂದು ದಿನ ಅವರಲ್ಲಿ ವಿವೇಕ ಮೊಳೆಯುತ್ತದೆ. ಆತ್ಮನಿಂದೆ ಪಶ್ಚಾತ್ತಾಪಗಳು ಅವರನ್ನು ಜಗ್ಗಿಸುತ್ತವೆ. ಸಂಗೀತ, ಓದು, ಆಸ್ತಿವ್ಯವಹಾರಗಳಲ್ಲಿ ತೊಡಗಿಕೊಳ್ಳುತ್ತಾರೆ. ಜೀತಗಾರರ ಮಕ್ಕಳಿಗಾಗಿ ಶಾಲೆ ತೆರೆದು, ಎರಡು ವರ್ಷಗಳ ನಂತರ ಹಣಕಾಸಿನ ಮುಗ್ಗಟ್ಟಿನಿಂದಾಗಿ ಮುಚ್ಚುತ್ತಾರೆ.

೧೮೫೧ರಲ್ಲವರು ಮಾಸ್ಕೋಗೆ ಹೋಗುತ್ತಾರೆ. ಧಾರ್ಮಿಕ ವಿಚಾರಗಳಲ್ಲಿ ತೊಡಗಿ ಉಪವಾಸ ಮಾಡುತ್ತಾರೆ. ಪ್ರವಚನವೊಂದನ್ನು ರಚಿಸುತ್ತಾರೆ. ‘ಬಾಲ್ಯ’ ಎಂಬ ಕೃತಿ ರಚನೆಯನ್ನು ಪ್ರಾರಂಭಿಸುತ್ತಾರೆ. ಕಾಕಸ್‌ನಲ್ಲಿ ಸೈನಾಧಿಕಾರಿಯಾಗಿದ್ದ ಅಣ್ಣ ನಿಕೊಲಾಸ್ ರಜೆಯಲ್ಲಿ ಊರಿಗೆ ಬಂದಾಗ ಸಾಲ ತೀರಿಸುವ ಹಾಗೂ ವಿಷಯಾಸಕ್ತಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ತಮ್ಮ ಅಣ್ಣನೊಡನೆ ಕಾಕಸ್‌ಗೆ ಹೋಗಲು ನಿರ್ಧರಿಸುತ್ತಾರೆ.

ಕವಿ ಕೃತಿ ಪರಿಚಯ

'ನಹಿ ಜ್ಞಾನೇನ ಸದೃಶಂ' ಎಂಬ ಮೈಸೂರು ವಿಶ್ವವಿದ್ಯಾನಿಲಯದ ಆದರ್ಶದ ಕಾರ್ಯಾಚರಣೆಗಳಲ್ಲಿ ಪ್ರಚಾರೋಪನ್ಯಾಸ ಮಾಲೆಯೂ ಒಂದು. ೧೯೩೩ರಲ್ಲಿ ಸ್ಥಾಪನೆಯಾದ ಪ್ರಸಾರಾಂಗದ ಜ್ಞಾನಪ್ರಸಾರದ ಕಾರ್ಯದಲ್ಲಿ ನೀಡಿದ ಕೊಡುಗೆ ಮಹತ್ವದ್ದು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ 'ಈ ಮೂಲಕ ವಿಶ್ವವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು ಸಮಷ್ಟಿ ಪ್ರಜ್ಞೆ ವಿಕಾಸಗೊಳ್ಳಲು ಅನುಕೂಲವಾಗುತ್ತದೆ'. ಕಿರುಹೊತ್ತಿಗೆಗಳ ಮೂಲಕ ಒಂದು ವಿಷಯವನ್ನು ಹಿತಮಿತವಾಗಿ ಪರಿಚಯಿಸುವ ಕೆಲಸವನ್ನು ಅನೇಕರು ಕೈಗೊಂಡಿದ್ದಾರೆ. ಅವರಲ್ಲಿ ದೇ.ಜ.ಗೌ. (ದೇ. ಜವರೇಗೌಡ, ೧೯೧೫–೨೦೧೬) ಅವರು ಒಬ್ಬರು. 'ಟಾಲ್‌ಸ್ಟಾಯ್ ಜೀವನ ದರ್ಶನ' ಈ ಪುಸ್ತಕದಲ್ಲಿ ಟಾಲ್‌ಸ್ಟಾಯ್ ಅವರ ಬಗೆಗಿನ ಜೀವನ ಚಿತ್ರಣವನ್ನು ದೇ.ಜ.ಗೌ. ಅವರು ಚಿತ್ರಿಸಿದ್ದಾರೆ. ಪುಸ್ತಕದ ಕೃತಜ್ಞತಾ ಸಮರ್ಪಣೆಯಲ್ಲಿ ಲೇಖಕರು ಈ ಪುಸ್ತಕ ರಚನೆಯ ಹಿನ್ನೆಲೆಯನ್ನು ಹೀಗೆ ವಿವರಿಸಿದ್ದಾರೆ: 'ಟಾಲ್‌ಸ್ಟಾಯ್ ಕಾಲದೇಶಾತೀತರಾದ ಮಹಾಪುರುಷರು. ಗಾಂಧೀಜಿ ಯಂಥ ಅನೇಕರಿಗೆ ಅವರು ಮಾರ್ಗದರ್ಶಕರಾಗಿದ್ದಾರೆ, ಸ್ಫೂರ್ತಿಶಕ್ತಿಯಾಗಿದ್ದಾರೆ. ಸುಮಾರು ೪೦–೪೫ ವರ್ಷಗಳ ಹಿಂದೆಯೇ ಅವರ ಮೂರು ಮಹಾಕಾದಂಬರಿಗಳನ್ನೂ ಎರಡು ನಾಟಕಗಳನ್ನೂ ನಾನು ಕನ್ನಡಿಸಿದೆ. ಆ ಮಹರ್ಷಿಯ ಜೀವನ ಕಥೆಯನ್ನು ಬರೆಯುವ ಹಂಬಲ ಅಂದಿನಿಂದ ನನ್ನ ಮನಸ್ಸಿನ ಮೂಲೆಯಲ್ಲಿ ಕಾವು ಕುಳಿತಿತ್ತು'. ಚಿತ್ರ ೨ರಲ್ಲಿ ದೇ.ಜ.ಗೌ. ಅವರ ಭಾವಚಿತ್ರವನ್ನು ಕೊಡಲಾಗಿದೆ.



ಚಿತ್ರ ೨: ದೇ.ಜ.ಗೌ. (ಚಿತ್ರ ಕೃಪೆ: ಹಂಪಿ ಯಾಜಿ)

ಅಭ್ಯಾಸ ೧

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಟಾಲ್‌ಸ್ಟಾಯ್ ಎಲ್ಲಿ ಜನ್ಮ ತಾಳಿದರು?

೨. ಲಿಯೋ ಟಾಲ್‌ಸ್ಟಾಯ್ ಅವರ ತಂದೆ ತಾಯಿ ಯಾರು?

೩. ಟಾಲ್‌ಸ್ಟಾಯ್ ತನ್ನ ತಾಯಿಯ ಚಿತ್ರವನ್ನು ಹೇಗೆ ಕಲ್ಪಿಸಿಕೊಳ್ಳುತ್ತಾರೆ?

೪. ಟಾಲ್‌ಸ್ಟಾಯ್ ಅವರ ಬಾಲ್ಯದ ಜೀವನೋತ್ಸಾಹದ ಬಗೆಗೆ ಬರೆಯಿರಿ.
೫. ಟಾಲ್‌ಸ್ಟಾಯ್ ಯೌವ್ವನಕ್ಕೆ ಕಾಲಿಡುವ ಮುನ್ನ ಕಾಣುತ್ತಿದ್ದ ಕನಸುಗಳಾವುವು?
೬. ಯಾಸ್ನಯಾ ಪೋಲ್ಯಾನದಲ್ಲಿರಲು ಅವರು ಹಾಕಿಕೊಂಡ ಕಾರ್ಯಕ್ರಮದ ಪಟ್ಟಿಯೇನು?
೭. ಟಾಲ್‌ಸ್ಟಾಯ್ ಅವರ ಮೇಲೆ ಹೆಚ್ಚು ಪ್ರಭಾವ ಬೀರಿದ ಗ್ರಂಥಗಳಾವುವು?
೮. ಯಾಸ್ನಯಾ ಪೋಲ್ಯಾನಕ್ಕೆ ಟಾಲ್‌ಸ್ಟಾಯ್ ಹಿಂದಿರುಗಿ ಹೋದುದರ ಮುಖ್ಯ ಉದ್ದೇಶವೇನು? ಅದರ ಪರಿಣಾಮವೇನಾಯಿತು?
೯. ಸಾಲ ಹಾಗೂ ವಿಷಯಾಸಕ್ತಿಯಿಂದ ತಪ್ಪಿಸಿಕೊಳ್ಳಲು ಟಾಲ್‌ಸ್ಟಾಯ್ ತೆಗೆದುಕೊಂಡ ನಿರ್ಣಯವೇನು?

ಅಭ್ಯಾಸ ೨

ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದಗಳನ್ನು ತುಂಬಿಸಿ.

೧. ಟಾಲ್‌ಸ್ಟಾಯ್ ಅವರ ಪೂರ್ವಜರು ಚಕ್ರವರ್ತಿಗೆ ಆಪ್ತರಾಗಿದ್ದು, ———— ಎಂಬ ಬಿರುದಿಗೆ ಪಾತ್ರರಾಗಿದ್ದರು.
೨. ಟಾಲ್‌ಸ್ಟಾಯ್ ಅವರ ತಂಗಿಯ ಹೆಸರು ————.
೩. ಟಾಲ್‌ಸ್ಟಾಯ್ ಅವರ ತಂದೆ ———— ರೋಗಕ್ಕೆ ತುತ್ತಾಗುತ್ತಾರೆ.
೪. ಟಾಲ್‌ಸ್ಟಾಯ್ ———— ವಿಶ್ವವಿದ್ಯಾಲಯದಲ್ಲಿ ಪ್ರಾಚ್ಯಭಾಷಾ ವಿಭಾಗವನ್ನು ಪ್ರವೇಶಿಸಿ ಫೇಲಾದರು.
೫. ಆಸ್ತಿ ಪಾಲಾದಾಗ ಟಾಲ್‌ಸ್ಟಾಯ್ ಅವರಿಗೆ ———— ಎಕರೆ ಜಮೀನು ಲಭ್ಯವಾಗುತ್ತದೆ.
೬. ನೀತಿ ಸೂತ್ರಗಳನ್ನು ಕಾರ್ಯಗತಗೊಳಿಸುವುದಕ್ಕಿಂತ ಹತ್ತು ಸಂಪುಟಗಳ ———— ಬರೆಯುವುದು ಸುಲಭ ಎಂದು ಟಾಲ್‌ಸ್ಟಾಯ್ ಹೇಳುತ್ತಾರೆ.
೭. ಟಾಲ್‌ಸ್ಟಾಯ್ ———— ಮಕ್ಕಳಿಗಾಗಿ ಶಾಲೆಯನ್ನು ತೆರೆಯುತ್ತಾರೆ.
೮. ಬಾಲ್ಯ ಕೃತಿಯನ್ನು ರಚಿಸಿದವರು ————.

ಅಭ್ಯಾಸ ೨ರ ಉತ್ತರಗಳು

೧. ಕೌಂಟ್
೨. ಮಾರ್ಯ
೩. ಮೂರ್ಛೆರೋಗ
೪. ಕಾಜಾನ್
೫. ೫೪೦೦
೬. ತತ್ತ್ವಶಾಸ್ತ್ರ
೭. ಜೀತದಾಳುಗಳ
೮. ಟಾಲ್‌ಸ್ಟಾಯ್

೧೦.೨. ಪ್ರವಾಸ ಸಾಹಿತ್ಯ

೧೦.೨.೧. ಪೀಠಿಕೆ

ಪ್ರವಾಸಕ್ಕೂ ಮನುಷ್ಯನಿಗೂ ಬೆಸೆದುಕೊಂಡಿರುವ ನಂಟು ಗಾಢವಾದುದು. ನಾಗರಿಕತೆಯ ಆರಂಭದಿಂದಲೂ ಫಲವತ್ತಾದ ನದಿತೀರಗಳನ್ನು ಅರಸುತ್ತಾ ಹೊರಟ ಮಾನವನಿಗೆ ಪ್ರವಾಸವೆನ್ನುವುದು ಅನಿವಾರ್ಯವಾದ ಬದುಕು ಕಟ್ಟಿಕೊಳ್ಳುವ ಮಾರ್ಗವೂ ಆಗಿತ್ತು. ಕಾಲಾಂತರದಲ್ಲಿ ಅವನ ಸಾಹಸ ಪ್ರವೃತ್ತಿಯಿಂದ ಪ್ರವಾಸವೆನ್ನುವುದೇ ಹೊಸ ಹೊಸ ಭೂಖಂಡಗಳ ಅನ್ವೇಷಣೆಗೆ ಕಾರಣವಾಗಿ ಹೊಸ ನಾಗರಿಕತೆಗಳ ಉಗಮಕ್ಕೂ ಇದು ನಾಂದಿ ಹಾಡಿದೆ. ಕೊಲಂಬಸ್, ವಾಸ್ಕೋಡಗಾಮ ಮುಂತಾದವರು ಜಲಯಾನದ ಮೂಲಕ ಅಮೇರಿಕ, ಭಾರತಗಳಿಗೆ ಜಲಮಾರ್ಗಗಳನ್ನು ಶೋಧಿಸಿ, ಪ್ರಪಂಚಕ್ಕೆ ಪರಿಚಯಿಸಿದರು. ಇತಿಹಾಸ ಪ್ರಸಿದ್ಧ ಪ್ರವಾಸಕಾರರಾದ ಹುಯೆನತ್ಸಾಂಗ್, ಮಾರ್ಕೊಪೊಲೊ, ರಾಬರ್ಟ್ ಸಿವೆಲ್, ಅಬ್ದುಲ್ ರಜ಼ಾಕ್ ಇವರುಗಳು ತಮ್ಮ ಪ್ರವಾಸಾನುಭವಗಳ ಮೂಲಕವೇ ಇತಿಹಾಸ ಸೃಷ್ಟಿಯಲ್ಲಿ ಮಾನ್ಯತೆ ಗಳಿಸಿರುವುದು ಸರ್ವವಿದಿತ ಸಂಗತಿಯಾಗಿದೆ.

ವಸಾಹತುಶಾಹಿ ಕಾಲಘಟ್ಟದಲ್ಲಿ ಫ್ರಾನ್ಸಿಸ್ ಬುಖಿನನ್ ಬರೆದ ಕೃತಿ ವಸಾಹತುಶಾಹಿ ಆಳ್ವಿಕೆಯ ಭಾಗವಾಗಿದ್ದರೂ ೧೮೦೦ರ ಸುಮಾರಿನಲ್ಲಿ ಮಾಡಿದ ಅದ್ಭುತ ಕ್ಷೇತ್ರಕಾರ್ಯದ ಪ್ರವಾಸವಾಗಿ ಈಗಲೂ ಅಧ್ಯಯನಾರ್ಹವೆನಿಸಿದೆ. ಇದೇ ನಿಟ್ಟಿನಲ್ಲಿ ಎಚ್.ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಸಹ ಪ್ರವಾಸ ಸಾಹಿತ್ಯ ಕುರಿತು ಅಧ್ಯಯನ ಮಾಡುವವರಿಗೆ ಉಪಯುಕ್ತವಾದ ಆಕರವಾಗಿದೆ.

'ದೇಶ ಸುತ್ತು ಕೋಶ ಓದು' ಎಂಬ ಗಾದೆಯು ಪ್ರವಾಸಕ್ಕೆ ಮೊದಲ ಆದ್ಯತೆಯನ್ನು ನೀಡಿ, ನಂತರ ಓದಿಗೆ ಕೊಟ್ಟಿದೆ. ಇದಕ್ಕೆ ಕಾರಣ ಪ್ರವಾಸವು ಮನುಷ್ಯನಿಗೆ ತಂದುಕೊಡುವ ಅಪಾರವಾದ ಜೀವನಾನುಭವ, ಲೋಕಾನುಭವಗಳ ಜೊತೆಗೆ ಲೋಕಜ್ಞಾನವೂ ಆಗಿದೆ. ಇದರೊಂದಿಗೆ ವೈವಿಧ್ಯಮಯ ಬದುಕಿನ ಸಂಸ್ಕೃತಿಗಳನ್ನು ಆಸಕ್ತಿಯಿಂದ ಓದಲು, ಕೇಳಲು, ಪರಿಚಯ ಮಾಡಿಕೊಳ್ಳಲು ಸಹಾಯಕವಾಗುತ್ತದೆ. ಇವೆಲ್ಲವೂ ಕೇವಲ ನಾಲ್ಕು ಗೋಡೆಗಳ ಮಧ್ಯೆ ಕುಳಿತು ಓದುವುದರಿಂದ ಲಭ್ಯವಾಗುವುದಲ್ಲ. ಹೀಗಾಗಿ ಪ್ರವಾಸವೆನ್ನುವುದು ಕೇವಲ ಕಾಲಹರಣದ ಮನರಂಜನೆಯ ಸರಕಲ್ಲ. ದೇಶದ ಬಗ್ಗೆ ತಿಳಿದುಕೊಳ್ಳುವುದಕ್ಕಾಗಿ ಗಾಂಧೀಜಿ, ಆಚಾರ್ಯ ವಿನೋಬ ಭಾವೆ ಮುಂತಾದವರು ನಡೆಸಿದ ನೂರಾರು ಮೈಲಿಗಳ ಕಾಲ್ನಡಿಗೆ ಪ್ರವಾಸ ಇದಕ್ಕೆ ಉತ್ತಮ ಉದಾಹರಣೆಯಾಗಬಲ್ಲುದು.

ಆಧುನಿಕ ಸಂದರ್ಭದಲ್ಲಂತೂ ಪ್ರವಾಸವೆನ್ನುವುದು ಎಲ್ಲಾ ರಾಷ್ಟ್ರ–ರಾಜ್ಯಗಳ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವೇ ಆಗಿದೆ. ಪ್ರವಾಸೋದ್ಯಮವೆಂಬ ಪರಿಕಲ್ಪನೆ ಇದರ ವ್ಯಾಪಾರಿ ಆಯಾಮವನ್ನು ಬಿಂಬಿಸುತ್ತದೆ. ಈ ದಿನಗಳಲ್ಲಿ ಪ್ರವಾಸದ ಉದ್ದೇಶಗಳು ಬಹಳ ವ್ಯಾಪಕವಾಗಿದೆ. ಮೋಜು–ಮನರಂಜನೆ, ಆರೋಗ್ಯ ಪ್ರವಾಸ, ಶೈಕ್ಷಣಿಕ ಪ್ರವಾಸ, ವ್ಯಾಪಾರದ ಕಾರಣಗಳಿಗಾಗಿ ಮಾಡುವ ಪ್ರವಾಸ, ತೀರ್ಥಕ್ಷೇತ್ರಗಳಿಗೆ ಮಾಡುವ ಯಾತ್ರೆ ಹೀಗೆ ಹಲವಾರು ನೆಲೆಗಳು ಪ್ರವಾಸಕ್ಕೆ ಇದೆ.

ಪ್ರವಾಸದಲ್ಲಿ ಹಲವು ಬಗೆ. ಕಾಲ್ನಡಿಗೆ, ಚಾರಣ, ಭೂಮಾರ್ಗ, ಜಲಯಾನ, ವಿಮಾನ ಯಾನದಿಂದ ತೊಡಗಿ ಇಂದು ಅಂತರಿಕ್ಷ ಪ್ರವಾಸವನ್ನು ಕೂಡ ತಂತ್ರಜ್ಞಾನವು ನನಸಾಗಿಸಿದೆ.

ಗಿರಿಕಂದರಗಳಲ್ಲಿ ಹಿಮಶಿಖರಗಳಲ್ಲಿ ಹಿಂದೆ ಸಾಧಕರು ಸಂಚರಿಸಿ, ಆಧ್ಯಾತ್ಮದ ಹಾದಿಯನ್ನು ಹುಡುಕುತ್ತಿದ್ದರು. ಈ ನೆಲೆಯಲ್ಲಿ ಶ್ರಮಣ ಪರಂಪರೆಯ ಕೊಡುಗೆ ಅಪಾರವಾದುದು.

ಪ್ರವಾಸ ಕಥನವೆಂಬ ಪ್ರಕಾರವು ಜಗತ್ತಿನ ಎಲ್ಲಾ ಭಾಷೆಗಳಲ್ಲೂ ಪ್ರಖ್ಯಾತವಾದ ಸಾಹಿತ್ಯ ಪ್ರಕಾರವಾಗಿ ಬೆಳೆದು ಬಂದಿದೆ. ಇಂಗ್ಲಿಷಿನಲ್ಲಿ ಈ ಪ್ರಕಾರವನ್ನು travalogue ಎನ್ನುತ್ತಾರೆ. ಕನ್ನಡದಲ್ಲಿ ಶಿವರಾಮ ಕಾರಂತರು ಹೆಚ್ಚು ಪ್ರವಾಸವನ್ನು ಮಾಡಿದ್ದಲ್ಲದೆ ಹಲವು ಪ್ರವಾಸ ಕಥನಗಳನ್ನು ಬರೆದಿದ್ದಾರೆ. 'ಅಪೂರ್ವ ಪಶ್ಚಿಮ', 'ಅರಸಿಕರಲ್ಲ', 'ಪೂರ್ವದಿಂದ ಅತ್ಯಪೂರ್ವಕ್ಕೆ' ಮುಂತಾದವು ಅವರ ವಿದೇಶ ಪ್ರವಾಸ ಕಥನಗಳು. 'ಅಬುವಿನಿಂದ ಬರಾಮಕ್ಕೆ' ಭಾರತದೊಳಗಿನ ಪ್ರವಾಸ ಕಥನವಾಗಿದೆ. ವಿ. ಸೀತಾರಾಮಯ್ಯ ಅವರ 'ಪಂಪಾಯಾತ್ರೆ, ಎ.ಎನ್. ಮೂರ್ತಿರಾಯರ 'ಅಪರ ವಯಸ್ಕನ ಅಮೇರಿಕಾ ಯಾತ್ರೆ', ಜಿ.ಎಸ್. ಶಿವರುದ್ರಪ್ಪ ಅವರ 'ಮಾಸ್ಕೋದಲ್ಲಿ ೨೨ ದಿನ' ಹಾಗೂ 'ಗಂಗೆಯ ಶಿಖರಗಳಲ್ಲಿ', ಎಚ್.ಎಸ್. ರಾಘವೇಂದ್ರ ರಾವ್ ಅವರ 'ಜನಗಣಮನ', ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿಯ ಅಂಡಮಾನ್', ನೇಮಿಚಂದ್ರರ 'ಪೆರುವಿನ ಮಹಾಕಣಿವೆಯಲ್ಲಿ', ಜಿ.ಪಿ. ಬಸವರಾಜು ಅವರ 'ನೀಲಾಚಲಗಳ ನಾಡಿನಲ್ಲಿ', ಚಂದ್ರಶೇಖರ ಆಲೂರರ 'ಅಮೇರಿಕಾದಲ್ಲಿ ಆಲೂರು', ಮುಂತಾದ ಪ್ರವಾಸ ಕಥನಗಳಲ್ಲದೆ ಕನ್ನಡದಲ್ಲಿ ಇನ್ನೂ ಹಲವಾರು ಒಳ್ಳೆಯ ಪ್ರವಾಸ ಕಥನಗಳಿವೆ. ಇಂದಿನ ತಂತ್ರಜ್ಞಾನ ಯುಗದಲ್ಲಿ ಬೆರಳ ಮೀಟುವಿಕೆಯಿಂದಲೇ ಅಂತರ್ಜಾಲದಲ್ಲಿ ಯಾವುದೇ ದೇಶ–ಸ್ಥಳಗಳ ಮಾಹಿತಿಯನ್ನು ಪಡೆಯಬಹುದು. ಹೀಗಿರುವಾಗ ಪ್ರವಾಸ ಕಥನವನ್ನು ಏಕೆ ಓದಬೇಕು ಎಂಬ ಪ್ರಶ್ನೆ ಮೂಡುವುದು ಸಹಜವೇ ಆಗಿದೆ. ಆದರೆ ಪ್ರವಾಸ ಕಥನ ಹೆಸರೇ ಸೂಚಿಸುವಂತೆ ಕಥನದ ಅಂಶಗಳನ್ನು ಒಳಗೊಂಡ ಸೃಜನಶೀಲ ಸಾಹಿತ್ಯ ಪ್ರಕಾರದಂತೆ ಇರುತ್ತದೆ. ಸಂವೇದನಾಶೀಲ ಬರಹಗಾರರು ಸಾಮಾನ್ಯನ ಕಣ್ಣುಗಳು ನೋಡಲಾಗದ ಸಂಗತಿಗಳನ್ನು ತಮ್ಮ ಪ್ರವಾಸ ಕೃತಿಗಳಲ್ಲಿ ಕಾಣಿಸುತ್ತಾರೆ. ಇವು ತಮ್ಮದೇ ದೃಷ್ಟಿಕೋನಗಳಿಂದ ಕೂಡಿದವುಗಳಾಗಿ 'ಹೀಗೂ ನೋಡಲು ಸಾಧ್ಯವಿದೆ' ಎಂಬ ದಾರಿಯನ್ನು ಓದುಗನ ಮುಂದೆ ತೆರೆಯುತ್ತವೆ. ಅಷ್ಟೇ ಅಲ್ಲದೆ ಇವು ಓದುಗನ ಅನುಭವದ ಆಳಕ್ಕೂ ಇಳಿದು ನಾನಾ ಬಗೆಯ ಸಂವೇದನೆಗಳನ್ನು ಹುಟ್ಟಿಸುತ್ತದೆ. ಹೀಗಾಗಿ ಪ್ರವಾಸ ಕಥನಗಳನ್ನು ಓದುವುದು ಒಂದು ಬಗೆಯಲ್ಲಿ ಆಯಾ ಸ್ಥಳಗಳಿಗೆ ಓದುಗ ನಡೆಸಿದ ಮನೋಸಂಚಾರವೇ ಆಗಿರುತ್ತದೆ. ಅಷ್ಟೇ ಅಲ್ಲದೆ ಉತ್ತಮ ಪ್ರವಾಸ ಕಥನಗಳು ಓದುಗನಿಗೆ ಅಲೆದಾಟ ಹಾಗೂ ಅಧ್ಯಯನಗಳಿಗೆ ಪ್ರೇರಣೆ ಒದಗಿಸುತ್ತವೆ. ಹೊರದೇಶಗಳಿಗೆ ಹೋಗಿ ನೋಡಲಾರದವರಿಗೂ ದೇಶ ಸುತ್ತಿದ ಅನುಭವವನ್ನು ಕಟ್ಟಿಕೊಡುತ್ತವೆ. ಹೀಗಾಗಿ ಪ್ರವಾಸ ಕಥನಗಳ ಓದು ಒಂದು ಅನುಭವವನ್ನು ಕಟ್ಟಿಕೊಡುತ್ತವೆ. ಹೀಗಾಗಿ ಇದು ಒಂದು ವಿಶಿಷ್ಟವಾದ ಅನುಭವ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳು ಈ ಪಠ್ಯವನ್ನು ಓದುವಾಗ ತಮ್ಮ ಅನುಭವಗಳನ್ನೂ ಮೆಲುಕು ಹಾಕುತ್ತಲೇ, ಅವರ ತಳಮಳ, ಉತ್ಸಾಹಗಳನ್ನು ಅರಿಯುಂತೆ ಮಾಡುವುದೇ ಆಗಿರುವುದರಿಂದ ಪೂರ್ಣಚಂದ್ರ ತೇಜಸ್ವಿಯವರ 'ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್' (೨೦೧೨) ಪ್ರವಾಸ ಕಥನದ ಒಂದು ಕಿರುಭಾಗವನ್ನು ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ.

ಅಲೆಮಾರಿಯ ಅಂಡಮಾನ್ ಕನ್ನಡ ಸಾಹಿತ್ಯದಲ್ಲಿ ಈ ವರೆಗೂ ಬಂದಿಲ್ಲದ ಹೊಸರೀತಿಯ ಅಸಾಧಾರಣ ಪ್ರವಾಸ ಕಥನ. ಕಾಲ ಮತ್ತು ದೇಶಗಳಲ್ಲಿ ಅಥವಾ ಚರಿತ್ರೆ

ಚಿತ್ರ ೩: ಅಂಡಮಾನಿನ ಬುಡಕಟ್ಟು ಜನರು ಮೀನು ಹಿಡಿಯುತ್ತಿರುವ ಚಿತ್ರ
(ಸು. ೧೮೫೦; ಚಿತ್ರ ಕೃಪೆ: ವಿಕಿಪೀಡಿಯಾ)

ಮತ್ತು ವರ್ತಮಾನಗಳಲ್ಲಿ ಒಮ್ಮೆಲೇ ಚಲಿಸುವ ಬರಹಗಾರರ ಪ್ರಜ್ಞೆ ಅನುಭವಗಳ ಅನೇಕ ಆಯಾಮಗಳನ್ನು ಸಂಕೀರ್ಣವಾಗಿ ಒಟ್ಟೊಟ್ಟಿಗೇ ಸೃಷ್ಟಿಸಿರುವುದನ್ನು ಈ ಕೃತಿಯಲ್ಲಿ ಎಲ್ಲೆಂದರಲ್ಲಿ ಕಾಣಬಹುದು. ಈ ಪ್ರಯತ್ನದಲ್ಲಿ ಲೇಖಕರು ಹೊಚ್ಚ ಹೊಸ ಕಥನ ತಂತ್ರವನ್ನೇ ಕನ್ನಡ ಸಾಹಿತ್ಯದಲ್ಲಿ ರೂಪಿಸಿದ್ದಾರೆ. 'ಪ್ರವಾಸ ಸಾಹಿತ್ಯದ ಏಕಮುಖ ಏಕತಾನವಿಲ್ಲದ ಈ ಕೃತಿಯಲ್ಲಿ ಅನುಭವಗಳು ಒಂದು ದಿಕ್ಕಿಗೆ ಹರಿಯದೆ ಎಲ್ಲದಿಕ್ಕುಗಳಿಗೂ ವಿಸ್ತರಿಸುತ್ತದೆ' (ಪ್ರಕಾಶಕರ ಮಾತು). ತೇಜಸ್ವಿಯವರು 'ಮೂಡಿಗೆರೆಯಿಂದ ಮದ್ರಾಸಿಗೆ' ಎಂಬ ಭಾಗದಲ್ಲಿ ತಮ್ಮ ಸ್ನೇಹಿತರೊಂದಿಗೆ ಅಂಡಮಾನಿಗೆ ಪ್ರವಾಸ ಕೈಗೊಳ್ಳಲು ನಡೆಸಿದ ಪೂರ್ವ ಸಿದ್ಧತೆಗಳನ್ನು, ಪ್ರವಾಸ ಹೊರಡುವುದು ಕನಸು ಎಂದು ಕೈಚೆಲ್ಲಿ ಕುಳಿತ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಎಲ್ಲರನ್ನೂ ತರಾತುರಿಯಲ್ಲಿ ಹೊರಡಿಸುವ ಸನ್ನಿವೇಶಗಳನ್ನು, ಮದ್ರಾಸಿಗೆ ತಲುಪಿದಾಗ ತಾವು ಪ್ರಯಾಣಿಸುವ ಹಡಗನ್ನು ಕಂಡು ಭ್ರಮನಿರಸನಗೊಂಡುದು ಮುಂತಾದ ವಿಚಾರಗಳು ಓದುಗರಲ್ಲಿ ಕುತೂಹಲವನ್ನು ಉಂಟುಮಾಡುತ್ತದೆ. ಅಂಡಮಾನಿನ ಬುಡಕಟ್ಟು ಜನರು ಸುಮಾರು ೧೮೫೦ರ ಸುಮಾರಿನಲ್ಲಿ ಮೀನು ಹಿಡಿಯುತ್ತಿರುವದನ್ನು ಚಿತ್ರ ೩ರಲ್ಲಿ ನೋಡಬಹುದು.

೧೦.೨.೨. ಪಠ್ಯ

ಮೂಡಿಗೆರೆಯಿಂದ ಮದ್ರಾಸಿಗೆ

– ಕೆ.ಪಿ. ಪೂರ್ಣಚಂದ್ರ ತೇಜಸ್ವಿ

ಒಂದು ದಿನ ಸಂಜೆ, ಲೈಟು ಬೆಳಕಿನಲ್ಲಿ ಗೆಳೆಯರ ಗುಂಪು ಬ್ಯಾಡ್ಮಿಂಟನ್ ಆಟದಲ್ಲಿ ಮುಳುಗಿತ್ತು. ಯಾರೋ ಓಡಿಬಂದು ಮನೆಯೊಳಗೆ ಫೋನ್ ರಿಂಗ್ ಆಗ್ತಾ ಇದೆ ಎಂದರು. ಓಡಿಹೋಗಿ ಫೋನ್ ಎತ್ತಿದೆ.

'ಹಲೋ'

'ಹಲೋ ಯಾರು? ಮೂಡಿಗೆರೆ ೩೫೩೩ನಾ?'

'ಹೌದು'

'ನಾನು ಮಲ್ಲಿಕ್ ತಮ್ಮ, ಬೆಂಗಳೂರಿನಿಂದ ಮಾತಾಡ್ತಿದ್ದೀನಿ.'

'ಏನು ಸಮಾಚಾರ?'

'ಅಂಡಮಾನಿನಿಂದ ಟೆಲಿಗ್ರಾಂ ಬಂದಿದೆ. ---ನೇ ತಾರೀಖು ಹಡಗು ಹೊರಡುತ್ತಂತೆ. ಮಲ್ಲಿಕ್ ಇವತ್ತೇ ಬೆಂಗಳೂರಿಗೆ ಬಂದು ನಾಳೆ ಮದ್ರಾಸಿಗೆ ಹೋಗಿ ಟಿಕೆಟ್ ತೊಗೋಬೇಕು.'

ಫೋನ್ ಕಿರಿಕಿರಿಯಲ್ಲಿ ಅವರು ಹೇಳಿದ ತಾರೀಖು ಗೊತ್ತಾಗಲಿಲ್ಲ.

'ಹಡಗು ಹೊರಡೋದು ಯಾವತ್ತು?'

'---ನೇ ತಾರೀಖು'

'ಯಾವ ತಾರೀಖು?'

'---ನೇ ತಾರೀಖು?'

ಪ್ರತಿಸಾರಿಯೂ ಫೋನು ತಾರೀಖು ಹೇಳುವಾಗ ಗಲಾಟೆ ಮಾಡುತ್ತಿತ್ತು. ಮತ್ತೆ ಕೇಳೋಣ ಎನ್ನುವುದರ ಒಳಗೆ ಲೈನ್ ಔಟ್! ಮಲ್ಲಿಕ್ ಬೆಂಗಳೂರ ಮನೆಗೆ ಫೋನ್ ಇರಲಿಲ್ಲ. ಅವರು ಯಾವ ನಂಬರಿನಿಂದ ಮಾತಾಡಿದರೆಂದು ಗೊತ್ತಿಲ್ಲ! ಅವರು ಇವತ್ತೇ ಮಲ್ಲಿಕ್ ಬರಲೆಂದು ಹೇಳಿದ್ದರಿಂದ ನಾಳಿದ್ದು ಎಂದರೆ ೫ನೇ ತಾರೀಖು ಹಡಗು ಹೋಗುತ್ತದೆ! ಎಂದರೆ ಒಂದೇ ಒಂದು ದಿನ ನಮಗೆ ಸಮಯ. ದುಡ್ಡು ಎಲ್ಲಿ ಕೂಡಿಸಿಕೊಳ್ಳೋಣ! ಅರೆಬರೆ ಮಾಡಿರುವ ಕೆಲಸಗಳನ್ನೆಲ್ಲಾ ಯಾರಿಗೆ ವಹಿಸೋಣ? ರಜೆ ಹಾಕಲು ಏರ್ಪಾಡು ಮಾಡಬೇಕು! ಮದ್ರಾಸಿಗೆ ಹೋಗುವಷ್ಟಾದರೂ ಸಮಯ ವಿದೆಯೇ? ಮೈಸೂರು ಮಂಗಳೂರಿನ ಮಿತ್ರರಿಗೆ ಇಷ್ಟು ಕಡಿಮೆ ಕಾಲಾವಕಾಶದಲ್ಲಿ ಬರಲಾಗುತ್ತದೆಯೇ? ತಲೆಯ ಮೇಲೆ ಆಕಾಶ ಬಿದ್ದಂತಾಯ್ತು.

ಹೊರಗಿನ್ನೂ ಆಟ ಭರದಿಂದ ಸಾಗಿತ್ತು. ನಾನು ಹೊರಬಂದು ಫೋನಿನ ಸಮಾಚಾರ ತಿಳಿಸಿದೆ. ಮೊದಲು ಜೋಕ್ ಮಾಡುತ್ತಿದ್ದೇನೆಂದು ಅವರಾರೂ ನಂಬಲಿಲ್ಲ. ಅನಂತರ ನಿಜವೆಂದು ತಿಳಿದ ಮೇಲೆ ತಲೆ ಮೇಲೆ ಕೈ ಹೊತ್ತು ಕುಳಿತರು. ಕಿಂಕರ್ತವ್ಯಮೂಢರಾಗಿ ಯೋಚಿಸುತ್ತಾ ಕುಳಿತ ನಮಗೆ ಆಗಲೇ ಒಂಭತ್ತು ಗಂಟೆಯಾದುದು ಗೊತ್ತಾಗಲಿಲ್ಲ. ಇನ್ನು ಎರಡು ಗಂಟೆಗಳಲ್ಲಿ ಮಲ್ಲಿಕ್ ಬಸ್ಸು ಹತ್ತಬೇಕಿತ್ತು. ಎಲ್ಲರ ಟಿಕೇಟ್ ಹಣ ಐದು ಸಾವಿರ ರೂಪಾಯಿಯನ್ನು ಕೂಡಲೇ ನಾವು ಅವರಿಗೆ ಒದಗಿಸಬೇಕಿತ್ತು. ಇದರೊಡನೆ ನಾವು ಹೊರಡುವುದಿದ್ದರೆ ಕೂಡಲೇ ರಾಮದಾಸ್ಗೂ, ಬಸವರಾಜ್ಗೂ ಫೋನಿನಲ್ಲಿ ತಿಳಿಸಬೇಕಿತ್ತು. ಇಬ್ಬರಿಗೂ ಟ್ರಂಕಾಲ್ ಬುಕ್ ಮಾಡಿದೆ.

ಇನ್ನೂ ನಾವು ಹೊರಡಬೇಕೋ ಬೇಡವೋ ಎಂಬ ಯೋಚನೆಯಲ್ಲಿ ಮುಳುಗಿದ್ದೆವು. ಅಷ್ಟರಲ್ಲಿ ಮತ್ತೆ ಫೋನ್ ರಿಂಗಾಯ್ತು. 'ಹಲೋ' ಎಂದೆ ಆಚೆ ತುದಿಯಲ್ಲಿ ಬಸವರಾಜ್ 'ಹಲೋ' ಎನ್ನುತ್ತಿದ್ದರು! ಅಂತಿಮ ತೀರ್ಮಾನದ ಗಳಿಗೆ ಇದ್ದಕ್ಕಿದ್ದಂತೆ ನನ್ನ ತಲೆಯ ಮೇಲೆ ಬಿದ್ದಿತ್ತು!

ಒಂದು ಸೆಕೆಂಡಿನಲ್ಲಿ ಯೋಚಿಸಿದೆ. ಅಂಡಮಾನಿಗೆ ಹೊರಟಾಗಿದೆ! ಮದ್ರಾಸಿನಲ್ಲಿ ಹಡಗು ಸಿಕ್ಕದಿದ್ದರೆ ಕೂಡ ಪರ್ವಾಗಿಲ್ಲ. ಇನ್ನೆತ್ತಲಾದರೂ ಹೋಗಿ ಅಲೆದಾಡಿಕೊಂಡು ಬರುವುದು. ಈಗ ಹಿಂಜರಿಯುವುದು ಬೇಡ ಎಂದು.

'ಇವತ್ತು ರಾತ್ರಿ ಬೆಂಗಳೂರಿನ ಬಸ್ ಹತ್ತಿ ಹೊರಟು ನಾಳೆ ಹನ್ನೆರಡು ಗಂಟೆಗೆ ಬೆಂಗಳೂರು ರೈಲು ನಿಲ್ದಾಣದಲ್ಲಿ ನೀವು ನಮ್ಮನ್ನು ಕೂಡಿಕೊಳ್ಳಬೇಕು. ನಾಡಿದ್ದು ಅಂಡಮಾನಿನ ಹಡಗು ಹೊರಡುತ್ತದೆ.' ಇದನ್ನು ಆಚೆ ತುದಿಯಲ್ಲಿ ಆಲಿಸಿದ ಬಸವರಾಜರ ದಿಗ್ಭ್ರಾಂತಿಯನ್ನು ಊಹೆಗೆ ಬಿಟ್ಟಿದ್ದು. 'ನಮಗೆ ತುಂಬಾ ತೊಂದರೆಯಾಗುತ್ತದಲ್ಲಾ! ಈ ರಾತ್ರಿಯಲ್ಲಿ ಹಣ ಹೊಂದಿಸುವುದೆಲ್ಲಿಂದ, ಹೋಗಲಿ ಬಿಡಿ, ಇದೊಂದು ಸಾರಿ ನಮ್ಮನ್ನು ಬಿಟ್ಟೇ ಹೋಗಿಬನ್ನಿ' ಎಂದು ತೊದಲುತ್ತಾ ಹೇಳಿದರು. ನಾನು ನಿರ್ಧರಿಸಿದ್ದೆ, ಹೋದರೆ ನಾವೆಲ್ಲಾ ಹೋಗಬೇಕೆಂದು. ಅದಕ್ಕೇ ಹೇಳಿದೆ 'ನಿಮ್ಮ ಟಿಕೇಟ್ ಹಣ ಒಂದು ಸಾವಿರ ರೂಪಾಯಿ ಕೊಟ್ಟಾಗಿದೆ. ನೀವು ಬರದಿದ್ದರೆ ನೀವು ಅದನ್ನು ಕೊಡಬೇಕಾಗುತ್ತೆ.' ಬಸವರಾಜು ಮಾತು ಇನ್ನಷ್ಟು ತೊದಲಿತು. 'ಒಳ್ಳೇ ಗೋಳಾಯ್ತಲ್ಲ! ಇರ್ಲಿ ಬಿಡಿ. ಪ್ರಯತ್ನ ಮಾಡ್ತೀವಿ. ಹಾಗೂ ಆಗದಿದ್ದರೆ ಏನು ಮಾಡೋದು?' ಎಂದರು.

ಮಾರನೆಯ ದಿನ ಈ ಗೆಳೆಯರನ್ನೆಲ್ಲಾ ಇದಿರುಗೊಂಡಾಗ ಅವರ ಮುಖದಲ್ಲಿನ ಕೋಪಾಭಿವ್ಯಕ್ತಿ ಅವರಿಗೆ ನಾವು ಕೊಟ್ಟ ತೊಂದರೆಯನ್ನು ವಿವರಿಸುತ್ತಿತ್ತು.

'ನಿಮ್ಮ ಮೂಡಿಗೆರೆಯವರಂಥ ಬೇಜವಾಬ್ದಾರಿ ಜನರನ್ನು ನಾನು ಕಂಡೇ ಇಲ್ಲ! ನಿಮಗೇನಾದರೂ ಬುದ್ಧಿಗಿದ್ದಿ ಇದೆಯೇನ್ರಿ. ರಾತ್ರೋರಾತ್ರಿ ನಾವು ಹಣ ಹೊಂದಿಸಿಕೊಂಡು ರಜ ಹಾಕಿ ಬರಬೇಕೆಂದು ಹೇಳಿದ್ದೀರಲ್ಲ ನಾವೂ ನಿಮ್ಮಂತೆ ಅನ್ನಾ ತಿನ್ನೋ ಮನುಷ್ಯರಲ್ಲವೆ? ರಾತ್ರಿ ಕಂಡಕಂಡೋರ ಮನೆ ಬಾಗಿಲು ಬಡಿದು, ಎಷ್ಟಿದೆಯೋ ಅಷ್ಟು ಕೊಡಿ ಅಂತ ಭಿಕ್ಷಾ ಬೇಡಿ ನಿಮ್ಮ ಜೊತೆ ಯಾತ್ರೆ ಬರಬೇಕಾಯ್ತು. ಥತ್ತೇರಿ! ನಮ್ಮ ವೈರಿಗೂ ಬ್ಯಾಡ ನಿಮ್ಮ ಸಾವಾಸ' ಎಂದು ರಾಮದಾಸ್ ಕೂಗಿದರು.

ಆದರೆ ಅವರಿಗೆ ನಮ್ಮ ಕಷ್ಟ, ಗಡಿಬಿಡಿ, ನಾವು ರಾತ್ರೋರಾತ್ರಿ ದುಡ್ಡು ಹೊಂಚಲು ಪಟ್ಟಪಾಡು ಎಲ್ಲವನ್ನೂ ಸವಿಸ್ತಾರವಾಗಿ ಹೇಳಿದ ಮೇಲೆ ಕೊಂಚ ಸಮಾಧಾನವಾಯ್ತು. ಶಾಂತ ಮತ್ತು ಬಸವರಾಜುರವರನ್ನು ಮಲ್ಲಿಕ್ ನೋಡೇ ಇರಲಿಲ್ಲ. ಮೊದಲು ಬೆಂಗಳೂರಿಗೆ ಹೋದ ಮಲ್ಲಿಕ್ ಅವರನ್ನು ಸಂಧಿಸಿ ನಮ್ಮ ಮುಂದಿನ ಕಾರ್ಯಕ್ರಮಗಳನ್ನು ತಿಳಿಸಬೇಕಾದ ಜವಾಬ್ದಾರಿ ಬಿದ್ದಿತ್ತು. ಪಾಸ್ಪೋರ್ಟಿಗೆಂದು ಕಳಿಸಿದ್ದ ಅವರ ಫೋಟೋಗಳ ಕಾಪಿ ಹಿಡಿದುಕೊಂಡು ಮಲ್ಲಿಕ್ ರೈಲ್ವೇ ಸ್ಟೇಷನ್ನಿನಲ್ಲಿ ಹೋಗಿಬರುವವರ ಮುಖಗಳನ್ನೆಲ್ಲಾ ಪೊಲೀಸರ ತರ ತಾಳೆ ನೋಡುತ್ತಾ ಪತ್ತೆ ಮಾಡಿದ್ದನ್ನು ವಿವರಿಸಿದರು. ಅಂತೂ ಗೊಂದಲ ಗಡಿಬಿಡಿ ರೇಗಾಟಗಳ ನಡುವೆಯೇ ನಮ್ಮ ಅಂಡಮಾನ್ ಸಿನೆಮಾ ವಿನೋದಪೂರ್ಣವಾಗಿ ಆರಂಭವಾಗಿತ್ತು.

ಮಲ್ಲಿಕ್ ಅವರು ಮದ್ರಾಸಿನ ಬಂದರಿನಲ್ಲಿ ಹೋಗಿ ಟಿಕೆಟ್ಟಿಗಾಗಿ ವಿಚಾರಿಸಿದಾಗ ನಮಗೆ ಟಿಕೆಟ್ಟಿಗೆ ಪರವಾನಗಿ ಕೊಟ್ಟಿದ್ದ 'ಹರ್ಷವರ್ಧನ' ಹಡಗು ಹಿಂದಿನ ದಿನವೇ ಬಂದರು ಬಿಟ್ಟು ಅಂಡಮಾನಿಗೆ ಪ್ರಯಾಣ ಬೆಳೆಸಿತ್ತು!

ಅವರು ಕಂಗಾಲಾಗಿ ಕುಳಿತಿರಬೇಕಾದರೆ 'ನಾನ್ಕೌರಿ' ಎನ್ನುವ ಇನ್ನೊಂದು ಹಡಗು ಆ ದಿನವೇ ಅಂಡಮಾನಿಗೆ ಮದ್ರಾಸು ಬಿಡುವುದರಲ್ಲಿದೆ ಎಂದು ತಿಳಿದುಬಂತು. ನಾವು ಅಂಡಮಾನಿಗೆ ಹೋಗಲು ಪರವಾನಗಿ ಸಿಕ್ಕವರೆಂದು ಬಂದರಿನ ಅಧಿಕಾರಿಗಳಿಗೆ ತಿಳಿಸಿ ಹರ್ಷವರ್ಧನ ಹಡಗಿನ ಪ್ರಯಾಣಿಕರ ಪಟ್ಟಿಯಲ್ಲಿ ನಮ್ಮ ಹೆಸರುಗಳನ್ನು ತೋರಿಸಿಯಾದ ಮೇಲೆ ನಾನ್ಕೌರಿ ಹಡಗಿನಲ್ಲಿ ಅಂಡಮಾನಿಗೆ ಹೋಗಲು ಟಿಕೆಟ್ ಸಿಕ್ಕಿತು. ಅಲ್ಲಿಗೆ ಅಂಡಮಾನಿಗೆ ನಾವು ನಿಜವಾಗಿಯೂ ಹೋಗುತ್ತೇವೆಂದೂ ಎಲ್ಲರಿಗೂ ನಂಬಿಕೆ ಬರತೊಡಗಿತು.

ನಾವೆಲ್ಲಾ ನಮ್ಮ ಸೂಟ್ಕೇಸ್‌ಗಳನ್ನು ಹೊತ್ತುಕೊಂಡು ಬಂದರು ಕಟ್ಟೆಯಲ್ಲಿ ನಮ್ಮ ಹಡಗು ಯಾವುದೆಂದು ಹುಡುಕುತ್ತಾ ಹೊರಟೆವು. ದೂರದಲ್ಲಿ ಒಂದು ಹಡಗಿನ ಮೇಲೆ ನಾನ್ಕೌರಿ ಎಂದು ಬರೆದುದು ಕಾಣಿಸಿತು. ಅದರ ಪಕ್ಕ ತುಂಬ ಜನ ಸಾಮಾನು ಸರಂಜಾಮುಗಳೊಂದಿಗೆ ಕಾಯುತ್ತ ಕುಳಿತಿದ್ದರು.

ಆ ಹಡಗನ್ನು ನೋಡಿ ನಮಗೆ ಕೊಂಚ ಆಶಾಭಂಗವಾಯ್ತು. ಬಣ್ಣ ಬಣ್ಣಗಳಲ್ಲಿ ಮಿರುಗುವ ಪುಟ್ಟ ಪಟ್ಟಣಗಳಂತೆ ಕಾಣುವ ಹಡಗುಗಳನ್ನು ನಾವು ಚಿತ್ರಗಳಲ್ಲಿ ನೋಡಿದ್ದೆವು. ತುಕ್ಕು ಹಿಡಿದು ಗಲೀಜಾಗಿ ಕಾಣುತ್ತಿದ್ದ ಈ ಮುದಿ ಹಡಗನ್ನು ನೋಡಿ ನಾವು ಗಾಬರಿ ಯಾದೆವು.

'ರೀ! ಜಂಕಾಗಿ ಹೋಗಿದೆಯಲ್ರೀ ಈ ಹಡಗು, ಇದಕ್ಕೆ ಧೈರ್ಯವಾಗಿ ಹತ್ತ ಬಹುದೇನಪ್ಪಾ?' ಎಂದರು ರಾಮದಾಸ್.

ನಾನಂತೂ 'ಇದು ಸಪ್ತಸಾಗರಗಳ ನಡುವೆ ಕಳಚಿಕೊಂಡು ಒಂದು ದಿನ ಮುಳುಗೇ ಹೋಗುತ್ತದೆ' ಎಂದು ತೀರ್ಮಾನ ಘೋಷಿಸಿದೆ. ಒಟ್ಟಿನಲ್ಲಿ ಇದು ನಮಗೆ ಬಹಳ ಅಪಾಯಕಾರಿ ಹಡಗಿನಂತೆ ಕಂಡಿತು. ಏನು ಮಾಡುವುದು ಐದುಸಾವಿರ ರೂಪಾಯಿ ಕೊಟ್ಟು ಟಿಕೆಟ್ ತೊಗೊಂಡು ಆಗಿದೆ. ಅದೂ ಅಲ್ಲದೆ ರಾಜೇಶ್ವರಿ ಮುಂತಾದ ಮಹಿಳಾ ಸದಸ್ಯರಂತೂ ಬೇಕಾದ್ದಾಗಲಿ ನಮ್ಮ ಜೀವಮಾನದಲ್ಲಿ ಒಮ್ಮೆ ಹಡಗಿನ ಪ್ರಯಾಣ ಮಾಡಲೇಬೇಕೆಂದು ನಿರ್ಧರಿಸಿದ್ದರು.

ನಾನು ಅಲ್ಲಿಯೇ ಹಡಗು ಹತ್ತಲು ನಿಂತಿದ್ದ ಯಾರೋ ಓರ್ವ ಸರ್ಕಾರಿ ಅಧಿಕಾರಿಯ ಬಳಿ ಈ ಹಡಗಿನ ಇತ್ಯೋಪರಿಗಳನ್ನು ಕೇಳಲು ಹೋದೆ. ಆತ ಕಾರ್ನಿಕೋಬಾರ್ ದ್ವೀಪಗಳಲ್ಲಿ ಕೆಲಸ ಮಾಡುತ್ತಿರುವವನಂತೆ. ಅವರ ಮಾತಿನ ಪ್ರಕಾರ ಈ ಹಡಗು ಗುಜರಿ ಮಾಲು ಆಗಿದೆ ಎನ್ನುವುದು ನಿಜವಾಗಿತ್ತು. ಇನ್ನು ಕೆಲವು ದಿನ ಓಡಿಸಿ ಈ ಹಡಗನ್ನು 'ಕಂಡೆಮ್' ಮಾಡಲಾಗುತ್ತದೆ ಎಂದು ತಿಳಿಸಿದರು. ಇಪ್ಪತ್ತು ವರ್ಷಗಳ ಹಿಂದೆ ಬ್ರಿಟನ್ನಿನಲ್ಲಿ ಕಂಡೆಮ್ ಮಾಡಲಾದ ಈ ಹಡಗನ್ನು ಕೇವಲ ಎರಡೇ ವರ್ಷಗಳವರೆಗೆ ಓಡಿಸಲು ಭಾರತ ಕೊಂಡು ತಂದು ದುರಸ್ತಿ ಮಾಡಿತಂತೆ. ಇದನ್ನು ಓಡಿಸಲು ಉದ್ದೇಶಿಸಿದ್ದ ಎರಡು ವರ್ಷ ಇಪ್ಪತ್ತು ವರ್ಷಗಳಿಗೆ ವಿಸ್ತರಿಸಿತ್ತು. ಇದು ಈಗ ಇನ್ನು ಓಡಿಸಬಾರದ ಪರಿಸ್ಥಿತಿಗೆ ಬಂದಿದೆ. ಉಗಿಯಂತ್ರದಿಂದ ಚಲಿಸುವ ಹಡಗು ಭಾರತದಲ್ಲಿ ಇದೊಂದೇ ಇರುವುದು. ಇದರ ಇಂಧನ ವೆಚ್ಚ ತುಂಬ ಹೆಚ್ಚು. ವಾಸ್ತವವಾಗಿ ಸರ್ಕಾರ ಮೂರು ಲಕ್ಷ ರೂಪಾಯಿಗಳ ನಷ್ಟವನ್ನು ಪ್ರತಿ ಟ್ರಿಪ್ಪಿಗೂ ಭರಿಸುತ್ತಿದೆ ಎಂದು ಅವರು ಹೇಳಿದರು. ಅವರು ಹೇಳಿದ ನಾನ್ಕೌರಿ ಹಡಗಿನ ಸ್ಥಿತಿಗಳು ನನಗೆ ಇನ್ನಷ್ಟು ದಿಗಿಲಿಕ್ಕಿಸಿತು.

'ನೋಡಿ, ಈ ಹಡಗಿನ ವಿಷಯ ತಿಳಿಯದೆ ನಾವು ಇದರಲ್ಲಿ ಪ್ರಯಾಣ ಮಾಡಲು ಟಿಕೆಟ್ ತೊಗೊಂಡುಬಿಟ್ಟೆವು' ಎಂದು ನಮ್ಮ ಅಜಾಗರೂಕತೆಯನ್ನು ಹೇಳಿಕೊಂಡು ವಿಷಾದ ಸೂಚಿಸಿದೆ. ಆತ ನಸುನಕ್ಕು 'ಹಾಗೇನೂ ಹೆದರುವ ಅಗತ್ಯವಿಲ್ಲ. ಅಂಡಮಾನಿಗೆ ಹೋಗುವ ಹಡಗುಗಳಲ್ಲಿ ನಾನ್ಕೌರಿಯೇ ಅತ್ಯುತ್ತಮವಾದ ಹಡಗು, ಪ್ರಯಾಣಿಕರ ಸೌಲಭ್ಯಗಳ ದೃಷ್ಟಿಯಿಂದ ಇದು ಅತಿದೊಡ್ಡ ಹಡಗಾದುದರಿಂದ ಇದು ಸಮುದ್ರದ ಏರಿಳಿತಕ್ಕೆ ಹೆಚ್ಚು ಕುಲುಕಾಡುವುದಿಲ್ಲ. ಮತ್ತು ಇಲ್ಲಿಯ ಊಟ ತಿಂಡಿ ವ್ಯವಸ್ಥೆ ಬೇರೆಲ್ಲಾ ಹಡಗುಗಳಿಗಿಂತ ಉತ್ತಮ ಮಟ್ಟದಲ್ಲಿದೆ. ಆದ್ದರಿಂದ ನಾನಂತೂ ಈ ಹಡಗು ಎಷ್ಟೇ ತುಕ್ಕು ಹಿಡಿದಿರಲಿ ಅದು ಕಂಡೆಮ್ ಆಗುವವರೆಗೂ ಇದರಲ್ಲೇ ಓಡಾಡುವವ' ಎಂದು ಆ ಹಡಗನ್ನು

ಹೊಗಳತೊಡಗಿದ. ಆತ ಊಟ ತಿಂಡಿ ವ್ಯವಸ್ಥೆಯನ್ನು ಹೊಗಳಿದ ಕೂಡಲೇ ನಮಗೆ ಆ ಹಡಗು ಸಾಕಷ್ಟು ಸುಂದರವಾಗಿ ಕಾಣತೊಡಗಿತು.

'ಸಮುದ್ರದ ಹವ ನೋಡಿ! ಎಲ್ಲಾ ಹಡಗುಗಳೂ ಬಹುಶಃ ಹೀಗೇ ಕಾಣ್ತವೆ' ಎಂದು ಒಬ್ಬರು ಹೇಳಿದರು.

'ಫೋಟೋಗಳಲ್ಲಿ ನೋಡಿದರೆ ಇದನ್ನೂ ಫೋಟೋ ತೆಗೆದು ಅಚ್ಚು ಮಾಡಿದರೆ ಚೆನ್ನಾಗೇ ಕಾಣುತ್ತೆ!' ಎಂದರು ಇನ್ನೊಬ್ಬರು.

ಸಾಮಾನು ಸರಂಜಾಮುಗಳನ್ನು ಹಿಡಿದುಕೊಂಡ ನೂರಾರು ಪ್ರಯಾಣಿಕರೊಡನೆ ಕಾಯುತ್ತಾ ನಿಂತಿದ್ದ ನನಗೆ ಈ ಹಡಗನ್ನು ಎಲ್ಲಿಂದ ಹತ್ತುವುದು ಎಂಬ ಆಲೋಚನೆ ಬಂತು ಎಲ್ಲೋ ಅಂತರಿಕ್ಷದಲ್ಲಿ ಹಡಗಿನ ಡೆಕ್ ಕಾಣಿಸುತ್ತಿತ್ತು. ಕ್ರೇನ್ ಮುಖಾಂತರ ಹಡಗಿಗೆ ಸಾಮಾನುಗಳನ್ನು ಹೊರಗಿನಿಂದ ಎತ್ತಿ ಎತ್ತಿ ಇಳಿಸುತ್ತಿದ್ದರು. ಪ್ರಯಾಣಿಕರನ್ನೂ ಕ್ರೇನಿನಲ್ಲಿಯೇ ಎತ್ತಿ ಒಳಗೆ ಇಳಿಸುತ್ತಾರೆಯೆ? ಅಥವಾ ತೂಕ ಹಾಕಿದನಂತರ ಭಾರಕ್ಕೆ ಹಡಗಿನ ಕೆಳಭಾಗ ಮುಳುಗುತ್ತಾ ಡೆಕ್ ನಮ್ಮ ಮಟ್ಟಕ್ಕೆ ಬರುತ್ತದೆಯೆ? ಅಥವಾ ಈ ಕೆಳಭಾಗದಲ್ಲಿ ಕಾಣುತ್ತಿರುವ ಕಿಂಡಿಗಳಿಂದ ನಾವು ಒಳಕ್ಕೆ ತೂರಿಕೊಳ್ಳಬೇಕೆ? ಈ ಹಡಗಿನ ಪ್ರವೇಶ ಯಾಕೋ ಕೌರವರ ಚಕ್ರವ್ಯೂಹದಂತೆ ಕಾಣತೊಡಗಿತು. ಏನಾದರಾಗಲಿ ಹತ್ತುವ ಸಮಯ ಬಂದಾಗ ತಾನಾಗಿಯೇ ಗೊತ್ತಾಗುತ್ತಲ್ಲಾ ಎಂದುಕೊಂಡು ಸುಮ್ಮನಾದೆ.

ಮದ್ರಾಸಿನ ಬಿಸಿಲಿನಲ್ಲಿ ನೆರಳೇ ಇಲ್ಲದ ಬಂದರು ಕಟ್ಟೆಯಲ್ಲಿ ತುಂಬ ಸಮಯ ಕುಳಿತಿದ್ದೆವು. ಚಂದ್ರು ರಾಮದಾಸ್ ಇಬ್ಬರೂ ನಮ್ಮನ್ನು ಅಲ್ಲೇ ಬಿಟ್ಟು ಕಲ್ಲಂಗಡಿ ಹಣ್ಣು ಕೊಂಡು ತರುತ್ತೇವೆಂದು ಮದ್ರಾಸಿನ ಸಿಟಿ ಮಾರ್ಕೆಟ್ ಕಡೆಗೆ ಹೋದರು. ನಾವು ಬಂದರಿನ ನಲ್ಲಿಗಳಲ್ಲಿ ಬರುತ್ತಿದ್ದ ಐಸ್ ಕೋಲ್ಡ್ ನೀರು ಕುಡಿಯುತ್ತಾ ಸೆಖೆಯ ವಿರುದ್ಧ ಹೋರಾಡುತ್ತಿದ್ದೆವು. ಹಡಗಂತೂ ಅಚಲವಾಗಿ ಎಂದೂ ಚಲಿಸದ ಬೆಟ್ಟದಂತೆ ನನಗೆ ಕಾಣತೊಡಗಿತು.

'ಹಡಗಿನ ಕ್ಯಾಪ್ಟನ್‌ನಿಗೂ ಬಂದರಿನ ಮುಖ್ಯಾಧಿಕಾರಿ ಹಾರ್ಬರ್ ಮಾಸ್ಟರಿಗೂ ಏನೋ ಬಿಸಿಬಿಸಿ ವಾಗ್ವಾದ ನಡೆಯುತ್ತಿದೆ. ಅದಕ್ಕೇ ಹಡಗು ಹೊರಡುವುದು ಇನ್ನೂ ತಡವಾಗಬಹುದು' ಎಂದು ಯಾರೋ ಇಬ್ಬರು ನನ್ನ ಪಕ್ಕ ಪರಸ್ಪರ ಮಾತಾಡಿದರು.

'ಈ ಹೊಸಬ ಹಾರ್ಬರ್ ಮಾಸ್ಟರ್ ತುಂಬ ಜಗಳಗಂಟನೆಂದು ಕಾಣುತ್ತೆ. ಈತನ ಜಗಳದ ದೆಸೆಯಿಂದ ಪ್ರತಿ ಹಡಗೂ ಈಗೀಗ ನಿಧಾನವಾಗಿ ಹೊರಡುತ್ತದೆ'. ಒಳ್ಳೆಯ ದೆಂದೆನ್ನಿಸಿತು.

ಹಡಗಿಗೆ ಬರುವ ಪ್ರಯಾಣಿಕರು ಘೇರಾಯಿಸುತ್ತಲೇ ಇದ್ದರು. ತರತರದ ಗಂಟು ಮೂಟೆಗಳು, ಮಕ್ಕಳುಮರಿಗಳು, ಕೋಳಿಪಿಳ್ಳೆಗಳು, ಗಲೀಜು ಜೋಳಿಗೆಗಳು ರಾಶಿರಾಶಿ. ಇಡೀ ಇಂಡಿಯಾದ ಸಂಕ್ಷಿಪ್ತ ಸ್ವರೂಪವನ್ನೇ ಅಲ್ಲಿ ನೋಡಬಹುದಿತ್ತು.

ಕವಿ ಕೃತಿ ಪರಿಚಯ

'ಮೂಡಿಗೆರೆಯಿಂದ ಮದ್ರಾಸಿಗೆ' ಈ ಭಾಗವನ್ನು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರು (೧೯೩೮–೨೦೦೭) ಬರೆದಿರುವ 'ಅಲೆಮಾರಿ ಅಂಡಮಾನ್ ಮತ್ತು ಮಹಾನದಿ ನೈಲ್' ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ. ಅನೇಕ ಜ್ಞಾನಶಾಖೆಗಳಲ್ಲಿ ಪ್ರಾವೀಣ್ಯ ಪಡೆದು, ಗಂಭೀರವಾಗಿ ಬರೆಯುವ ಪೂರ್ಣಚಂದ್ರ ತೇಜಸ್ವಿ ಕನ್ನಡದ ಅತ್ಯುತ್ತಮ



ಚಿತ್ರ ೪: ಕೆ.ಪಿ. ಪೂರ್ಣಚಂದ್ರ ತೇಜಸ್ವಿ (ಚಿತ್ರ ಕೃಪೆ: ಹಂಪಿ ಯಾಜಿ)

ಬರಹಗಾರರಲ್ಲಿ ಒಬ್ಬರಾಗಿದ್ದಾರೆ. ತೇಜಸ್ವಿ ಬರೆದ ಕಥೆ, ಕಾದಂಬರಿ, ಕಾವ್ಯ, ನಾಟಕ, ಪ್ರವಾಸ ಕಥನ, ವೈಜ್ಞಾನಿಕ ಬರಹ, ಅನುವಾದ ಹಾಗೂ ಪ್ರಾಣಿ ಪಕ್ಷಿಗಳನ್ನು ಕುರಿತು ಬರೆದ ನುಡಿಚಿತ್ರಗಳಲ್ಲಿ ತನ್ನದೇ ವೈಶಿಷ್ಟ್ಯ ಇದೆ. ಅವರ 'ಚಿದಂಬರ ರಹಸ್ಯ', 'ಕರ್ವಾಲೋ' ದಂತಹ ಕಾದಂಬರಿಗಳು, 'ಕುಬಿ ಮತ್ತು ಇಯಾಲ', 'ತಬರ'ನಂತಹ ಕಥೆಗಳು ಕನ್ನಡ ಸಾಹಿತ್ಯದ ವಿಶಿಷ್ಟ ಮಾದರಿಗಳಾಗಿವೆ. ಇವರಂತೆ ವಿಜ್ಞಾನವನ್ನು ಕನ್ನಡದಲ್ಲಿ ಆಪ್ಯಾಯ ಮಾನವಾಗಿ ಬರೆಯಬಲ್ಲ ಲೇಖಕರು ವಿರಳವೆಂದೇ ಹೇಳಬೇಕು. ನೀವು ಚಿತ್ರ ೪ರಲ್ಲಿ ಪೂರ್ಣಚಂದ್ರ ತೇಜಸ್ವಿಯವರನ್ನು ನೋಡಬಹುದು.

ವಿಶೇಷ ವಿವರಣೆ

ದೇಶ ಸುತ್ತು ಕೋಶ ಓದು: ಪ್ರವಾಸದ ಮೂಲಕ ಮನುಷ್ಯ ತನ್ನ ಅನುಭವಗಳನ್ನು ಹೆಚ್ಚು ಹೆಚ್ಚು ವಿಸ್ತರಿಸಿಕೊಳ್ಳುವುದಾಗಿದೆ.

ಅಭ್ಯಾಸ ೧

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಬೆಂಗಳೂರಿನಿಂದ ಕರೆ ಬಂದ ನಂತರ ಲೇಖಕರು ಗಲಿಬಿಲಿಗೊಳ್ಳಲು ಕಾರಣವೇನು?
೨. ಲೇಖಕರು ತಮ್ಮ ಗೆಳೆಯರ ಕೋಪಾಭಿವ್ಯಕ್ತಿಗೆ ಏಕೆ ಗುರಿಯಾಗಬೇಕಾಯಿತು?
೩. ಲೇಖಕರು ಮತ್ತು ಅವರ ಮಿತ್ರರು ಹಣವನ್ನು ಹೊಂದಿಸಿದ ಬಗೆಯನ್ನು ವಿವರಿಸಿ.
೪. ತೇಜಸ್ವಿಯವರು ಮತ್ತು ಅವರ ಸ್ನೇಹಿತರು ಅಂಡಮಾನಿಗೆ ಯಾವ ಹಡಗಿನಲ್ಲಿ ಹೊರಟರು?
೫. ನಾನ್ಕೌರಿ ಹಡಗನ್ನು ಕಂಡು ಎಲ್ಲರ ಅಭಿಪ್ರಾಯ ಏನು?
೬. ನಾನ್ಕೌರಿ ಹಡಗಿನ ಬಗೆಗೆ ಸರ್ಕಾರಿ ಅಧಿಕಾರಿ ನೀಡಿದ ಮಾಹಿತಿಯೇನು?
೭. 'ದೇಶ ಸುತ್ತು ಕೋಶ ಓದು' ಗಾದೆಯನ್ನು ವಿವರಿಸಿ.

ಅಭ್ಯಾಸ ೨

ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದವನ್ನು ತುಂಬಿಸಿ.

೧. ಲೇಖಕರಿಗೆ ---------- ನಿಂದ ಕರೆ ಬಂತು.

೨. ಲೇಖಕರು ಮತ್ತು ಅವರ ಸ್ನೇಹಿತರು ಪ್ರವಾಸ ಹೊರಟಿದ್ದು ----------.
೩. ಎಲ್ಲರೂ ಟಿಕೇಟ್ಗೆ ನೀಡಬೇಕಾದ ಒಟ್ಟು ಹಣ ----------.
೪. ಮಲ್ಲಿಕ್ ಟಿಕೇಟ್ ಖರೀದಿಗಾಗಿ ---------- ಬಂದರಿಗೆ ಬಂದರು.
೫. ಲೇಖಕರು ಮತ್ತು ಅವರ ಮಿತ್ರರಿಗೆ ಪರವಾನಗಿ ಕೊಟ್ಟಿದ್ದ ----------
ಹಡಗು ಹಿಂದಿನ ದಿನವೇ ಬಂದರು ಬಿಟ್ಟು ಅಂಡಮಾನಿಗೆ ಪ್ರಯಾಣ ಬೆಳೆಸಿತ್ತು.

ಅಭ್ಯಾಸ ೨ಕ್ಕೆ ಉತ್ತರಗಳು

೧. ಬೆಂಗಳೂರು ೨. ಅಂಡಮಾನ್, ೩. ಐದು ಸಾವಿರ, ೪ ಮದ್ರಾಸ್, ೫. ಹರ್ಷವರ್ಧನ.

೧೦.೩. ಆತ್ಮಕಥನ

೧೦.೩.೧. ಪೀಠಿಕೆ

ಜೀವನ ಚರಿತ್ರೆ ಮತ್ತು ವ್ಯಕ್ತಿಚಿತ್ರಣಗಳ ಮುಂದುವರಿದ ರೂಪ ಆತ್ಮಕತೆ ಅಥವಾ ಆತ್ಮಕಥನ. ಸಾಧಕರೊಬ್ಬರ ಬದುಕನ್ನು ಸಮೀಪದಿಂದ ನೋಡಿದವರು, ಚೆನ್ನಾಗಿ ಕೇಳಿ ಅಥವಾ ಓದಿ ತಿಳಿದವರು ಅವರ ಆದರ್ಶಗಳು ಸಮಾಜದ ಕಣ್ಣಿಗೆ ಕಟ್ಟುವಂತೆ, ಅದರಿಂದ ಏನಾದರೂ ಕಲಿಯಲು ಇಲ್ಲವೇ ಪ್ರೇರಣೆಗೊಳ್ಳಲು ಸಾಧ್ಯವಾಗುವಂತೆ, ಬದುಕಿನ ಯಾವ ಮುಖ್ಯಘಟ್ಟಗಳೂ ಸಂಗತಿಗಳೂ ತಪ್ಪಿಹೋಗದಂತೆ ಬರವಣಿಗೆಯಲ್ಲಿ ತರುವುದು 'ಜೀವನ ಚರಿತ್ರೆ' ಎನಿಸಿಕೊಳ್ಳುತ್ತದೆ. ಇಲ್ಲಿ ಆರಾಧನೆಯ ಮನೋಭಾವಕ್ಕಿಂತ ವ್ಯಕ್ತಿತ್ವವನ್ನು ಕಡೆದು ನಿಲ್ಲಿಸುವ ಉದ್ದೇಶವೇ ಪ್ರಮುಖವಾದದ್ದು. ಜೀವನ ಚರಿತ್ರೆ ಬರೆಯುವವರಿಗೆ ಸ್ಫುಟವಾದ, ಮೂರ್ತವಾದ ಶೈಲಿ ಇರಬೇಕು. ಕೃತಿಯ ನಾಯಕನನ್ನು ಅರ್ಥಮಾಡಿಕೊಳ್ಳುವ ಕಲ್ಪನಾಶಕ್ತಿ ಬೇಕು. ನಿರೂಪಣೆಯಲ್ಲಿ ಪ್ರಾಮಾಣಿಕತೆ ಬೇಕು. ಇಂಗ್ಲಿಷಿನಲ್ಲಿ ಲಿಟ್ಟನ್ ಸ್ಟ್ರಾಚೆ ಬರೆದ 'ಎಮಿನೆಂಟ್ ವಿಕ್ಟೋರಿಯನ್ಸ್' ಮತ್ತು ವಿನ್‌ಸ್ಟನ್ ಚರ್ಚಿಲ್ ಬರೆದ 'ಲೆನಿನ್' ಬಹುವಿಶಿಷ್ಟ ಕೃತಿಗಳೆಂದು ಎಲ್.ಎಸ್. ಶೇಷಗಿರಿರಾವ್ ಅಭಿಪ್ರಾಯ ಪಡುತ್ತಾರೆ. ಕೃತಿಯ ನಾಯಕನ ಇಡೀ ಜೀವನವನ್ನು ಸಮೀಕ್ಷಿಸದೆ ಅವನ ವ್ಯಕ್ತಿತ್ವದ ಸೊಗಸು, ಸತ್ವವನ್ನು ಸ್ಪಷ್ಟಗೊಳಿಸುವುದಕ್ಕೆ ಸೀಮಿತಗೊಳ್ಳುವ 'ವ್ಯಕ್ತಿಚಿತ್ರಣ' ಎನ್ನುವುದು ಜೀವನ ಚರಿತ್ರೆಯ ಒಂದು ಒಳಪ್ರಕಾರ.

'ಜೀವನಚರಿತ್ರೆ' ಹಾಗೂ 'ವ್ಯಕ್ತಿಚಿತ್ರಣ'ಗಳಂತೆ 'ಆತ್ಮಕಥನ' ಕೂಡ ಕನ್ನಡಕ್ಕೆ ಬಂದುದು ಪಶ್ಚಿಮದಿಂದಲೇ. 'ಆತ್ಮಕಥನ' ಹೆಸರೇ ಸ್ಪಷ್ಟಪಡಿಸುವಂತೆ ಕೃತಿಕಾರ ತನ್ನ ಕಥೆಯನ್ನು ತಾನೇ ನಿರೂಪಿಸುವುದಾಗಿದೆ. ಇಂಥ ಕಥನಗಳಲ್ಲಿ ಓದುಗರು ಕಂಡ, ಕೇಳಿದ ಸಂಗತಿಗಳೂ ಇರಬಹುದು ಅಥವಾ ಅವರ ಗಮನಕ್ಕೆ ಬರಲು ಸಾಧ್ಯವೇ ಇಲ್ಲದ ಬಹಳ ಅಪರೂಪದ, ಅಚ್ಚರಿಯ ಅನುಭವ ಆಲೋಚನೆಗಳೂ ದಾಖಲಾಗಿರಬಹುದು. ಆತ್ಮಕಥೆಯನ್ನು ಬರೆಯಲು ಅನೇಕ ಉದ್ದೇಶಗಳಿರುತ್ತವೆ. ಇಲ್ಲಿ ಜೀವನದಲ್ಲಿ ಮಾಡಿದ ಸಾಧನೆಗಳು, ಕೆಲಸ ಕಾರ್ಯಗಳು, ತೆಗೆದುಕೊಂಡ ನಿರ್ಧಾರಗಳು, ಮಾಡಿದ ತಪ್ಪುಗಳು ಹೀಗೆ ತಮ್ಮ ಬದುಕಿನ ಬಗೆಗಿನ ಸಿಹಿ ಇಲ್ಲವೆ ಕಹಿ ಅನುಭವಗಳನ್ನು ನಿರೂಪಿಸುವುದೇ ಆಗಿರುತ್ತದೆ.

ಆತ್ಮಕಥೆಯನ್ನು ಸಾಹಿತಿಯಾದವರಷ್ಟೇ ರಚಿಸಬೇಕೆಂಬ ನಿಯಮವಿಲ್ಲ. ರಾಜಕಾರಣಿ, ವಿಜ್ಞಾನಿ, ಸಂಗೀತಗಾರ, ಆಟಗಾರ ಯಾರಾದರೂ ರಚಿಸಬಹುದು. ಈ ಪ್ರಕಾರದಲ್ಲಿ

ಬರೆಯುವವರು ಸಾಮಾನ್ಯವಾಗಿ ತಾನೇಕೆ ಇದನ್ನು ಬರೆಯುತ್ತಿದ್ದೇನೆ ಎಂಬುದನ್ನು ಸೂಚಿಸುತ್ತಾರೆ. ಉದಾಹರಣೆಗೆ, ಶಿವರಾಮ ಕಾರಂತರು ಹೇಳುವಂತೆ 'ಇದೊಂದು ಪರಿಪೂರ್ಣವಾದ ಆತ್ಮವೃತ್ತವಲ್ಲ. ನಾನು ಪರಿಪೂರ್ಣನೂ ಆಗಿಲ್ಲ. ಈ ವಿಶ್ವವೇ ಪರಿಪೂರ್ಣತೆಗಾಗಿ ಹೆಣಗುತ್ತಿದೆಯೆಂದು ತಿಳಿದ ನಾನು, ಸರ್ವಜ್ಞಪಟ್ಟವನ್ನು ವಹಿಸಿ ಕೊಳ್ಳಲಾರೆ'... 'ನಾನು ಈಗ ಇಳಿವಯಸ್ಸಿಗೆ ಕಾಲಿರಿಸಿದ್ದೇನೆ. ಆದುದರಿಂದ ಈ ಬರವಣಿಗೆಯ ದಿನದ ತನಕ ಸಾಗಿದ ಚಿತ್ರವನ್ನು ಅದು ಕೊಡಬಲ್ಲುದೇ ಹೊರತು, ಪೂರ್ಣಜೀವನದ ಚಿತ್ರವನ್ನು ಅದು ಕೊಡಲಾರದು' ('ಹುಚ್ಚು ಮನಸ್ಸಿನ ಹತ್ತು ಮುಖಗಳು', ಎರಡನೆಯ ಮುದ್ರಣ ೧೯೬೫, ಪುಟ ೩).

ನಾವು ಆತ್ಮಕಥೆಯನ್ನು ಓದುವುದು, ಅವರ ಜೀವಿತದ ಕಾಲದಲ್ಲಿ ಅವರು ಪಕ್ವತೆಯನ್ನು ಹೇಗೆ ಹೊಂದಿದರು, ಅವರ ಗೆಳೆಯರು ಯಾರು, ಅವರ ಒಳಮನಸ್ಸು ಎಂಥದು, ಅವರ ಖಾಸಗೀ ಬದುಕಿನ ವಿವರಗಳನ್ನು ಅರಿಯಲು.

ಕನ್ನಡದಲ್ಲಿ ಸಮೃದ್ಧತೆ ಮತ್ತು ವೈವಿಧ್ಯತೆಯ ದೃಷ್ಟಿಯಿಂದ ಅತ್ಯುತ್ತಮ, ಮಹತ್ವಪೂರ್ಣ ಎನ್ನಬಹುದಾದ ಬಹಳಷ್ಟು ಆತ್ಮಕಥನಗಳು ಪ್ರಕಟವಾಗಿವೆ, ಅವುಗಳಲ್ಲಿ ಮುಖ್ಯವಾದವು ಗಳೆಂದರೆ, ಕುವೆಂಪು 'ಅವರ ನೆನಪಿನ ದೋಣಿಯಲ್ಲಿ', ಶಿವರಾಮ ಕಾರಂತರ 'ಹುಚ್ಚು ಮನಸಿನ ಹತ್ತು ಮುಖಗಳು', ಮಾಸ್ತಿ ಅವರ 'ಭಾವ', ಲಂಕೇಶರ 'ಹುಳಿಮಾವಿನ ಮರ', ಬೀಚಿಯವರ 'ಭಯಾಗ್ರಫಿ', ಸಿದ್ಧಲಿಂಗಯ್ಯ ಅವರ 'ಊರುಕೇರಿ', ಅನುಪಮಾ ನಿರಂಜನ ಅವರ 'ನೆನಪು ಸಿಹಿ–ಕಹಿ' ಹಾಗೂ ಎಚ್.ಎಲ್. ನಾಗೇಗೌಡರ 'ನಾಗಸಿರಿ' ಮುಂತಾದವು.

೧೦.೨.೩. ಪಠ್ಯ

ನಾಗಸಿರಿ

– ಎಚ್.ಎಲ್. ನಾಗೇಗೌಡ

ಮದುವೆ

೧೯೪೦ನೆಯ ಏಪ್ರಿಲ್ ತಿಂಗಳಿನಲ್ಲಿ ಒಂದು ದಿನ ಲಗ್ನ ನಿಷ್ಕರ್ಷೆಯಾಯಿತು. ಮದುವೆ ನಮ್ಮೂರಿನಲ್ಲೇ ನಡೆಯಬೇಕೆಂದಾಯಿತು. ಸಾಮಾನ್ಯವಾಗಿ ಒಕ್ಕಲಿಗರಲ್ಲಿ ಹೆಣ್ಣಿನ ಮನೆಯ ಮುಂದೆಯೇ ಧಾರೆ ಆಗಬೇಕು. ಆದರೆ ಈಗ ಹೆಣ್ಣೇ ಗಂಡಿನ ಊರಿಗೆ ಬರಬೇಕೆಂದಾಯಿತು. ನಮ್ಮ ಹೊಸ ಮನೆಯ ಮುಂದೆ ಗಂಡಿನ ಚಪ್ಪರ. ನನಗೆ ಸೋದರಮಾವ ಆಗಬೇಕಾದ ತಿಮ್ಮಶೆಟ್ಟಿಗೌಡರ ಮನೆಯ ಮುಂದೆ ಹೆಣ್ಣಿನ ಚಪ್ಪರಗಳನ್ನು ಹಾಕಬೇಕೆಂದಾಯಿತು. ಹೆಣ್ಣಿನ ಮನೆಯ ಮುಂದೆ ಇದ್ದ ದೊಡ್ಡ ಜಾಗದಲ್ಲಿ ಭಾರಿ ಚಪ್ಪರ ಸಿದ್ಧವಾಯಿತು. ಇದೇ ಮೊದಲು ನಮ್ಮೂರಿನಲ್ಲಿ ಮತ್ತು ನಮ್ಮ ಊರಿನ ಸುತ್ತಮುತ್ತ ಅಷ್ಟು ದೊಡ್ಡ ಮದುವೆ ಚಪ್ಪರ ಹಾಕಿದ್ದು. ಮೂರು ದಿನದ ಮದುವೆ. ಚಪ್ಪರದ ದಿನ ನಾನು ಸ್ನಾನ ಮಾಡಿ ಮಾವಿನಕೆರೆ ಲಕ್ಷ್ಮೀದೇವಿ ದೇವಸ್ಥಾನಕ್ಕೆ ಅಡ್ಲುದಮ್ಮಂದಿರ ಜೊತೆ ಹೋಗಿಬಂದೆ. ನನಗೆ ಅಡ್ಲುದಮ್ಮ ಆಗುವವರು ಯಾರೂ ಊರಲ್ಲಿರಲಿಲ್ಲ. ಆದರೂ ಜೊತೆಗೆ ಒಬ್ಬನಾದರೂ ಇರಬೇಕಲ್ಲ? ಯಾರೋ ಒಬ್ಬನನ್ನು ನಮ್ಮ ತಂದೆ ನನ್ನೊಡನೆ ಕಳುಹಿಸಿದರು. ಗಾಡಿಯಲ್ಲಿ

ಹೋಗಿ ಹಣ್ಣು ಕಾಯಿ ಮಾಡಿಸಿಕೊಂಡು ಬಂದೆ. ಆ ಊರಿನ ಏಳಡಿ ಎತ್ತರದ ಗಿಡ್ಡೇಗೌಡರು ನಮ್ಮ ತಂದೆಯ ಆಪ್ತಸ್ನೇಹಿತರು. ಆಪ್ತ ಎಂದರೆ ಆಪ್ತ. ಅವರು ನಾನು ಊರಿಗೆ ಹೋದಾಗ ಗುಡಿಯ ಬಾಗಿಲು ತೆಗೆಸಿ ಪೂಜೆಗೆ ಏರ್ಪಾಡು ಮಾಡಿ ಕಳುಹಿಸಿಕೊಟ್ಟರು. ಮದುವೆಗೆ ಮಾಡಿಸಿದ ಲಗ್ನಪತ್ರಿಕೆಯಲ್ಲಿ ಹಿಂದೆ ಬರೆಸುತ್ತಿದ್ದ 'ಮೂರು ದಿನ ಮುಂಚಿತವಾಗಿ ಬರಬೇಕು' ಎಂಬ ಮಾತು ಇರಲಿಲ್ಲ. ಆಗಲೇ ಆ ಪದ್ಧತಿ ನನ್ನ ಮದುವೆ ಕಾಲಕ್ಕೆ ನಿಂತಿತ್ತು. ಹೆಣ್ಣು ವಳಗೆರೆಹಳ್ಳಿಯಿಂದ ಚಪ್ಪರದ ದಿವಸ ಸಂಜೆ ಬಂತು. ಊರಿನವರಿಗೆ ಆತುರ, ಗೌಡರು ಇಷ್ಟು ಹುಡುಕಿ ತಡಕ ತಂದ ಹೆಣ್ಣು ಹೇಗಿದ್ದಾಳೆ ನೋಡಬೇಕೆಂದು, ಅವಳು ಹಗಲು ಹೊತ್ತು ಬರದೆ ಸಂಜೆಯಲ್ಲಿ ಬರಬೇಕೆ! ಆದರೇನು ರಾತ್ರಿ ಶಾಸ್ತ್ರಗಳಾಗುವಾಗ ಅವಳು ಎಲ್ಲಿಗೆ ಹೋದಾಳು ಎಂದು ರಾತ್ರಿ ನಡೆಯುವ ಎಣ್ಣೆ ಅರಿಶಿಣ ಶಾಸ್ತ್ರಕ್ಕೆ ಕಾಯುತ್ತಿದ್ದರು. ಅತ್ತ ಅಡುಗೆ ಸಿದ್ಧವಾಗುತ್ತಿತ್ತು. ಚಪ್ಪರದ ದಿನ ದೇವರೂಟ, ನಾಳೆ ಧಾರೆ ಊಟ. ಆಗಿನ ಕಾಲದಲ್ಲಿ ಉಡುಪಿಯವರು ಬೆಂಗಳೂರಿನಲ್ಲಿಯೂ ಇರಲಿಲ್ಲ. ಎಂದರೆ ಹಳ್ಳಿಯಲ್ಲಿ ಹೇಗೆ ಇರಬೇಕು? ಊರಿನ ಸುತ್ತಮುತ್ತ ಕೆಲವು ಹಳ್ಳಿಯವರು ಅಡುಗೆ ಮಾಡುವುದರಲ್ಲಿ ಹೆಸರು ಪಡೆದಿದ್ದರು. ಅವರನ್ನು ಕರೆಸಿದರು ನಮ್ಮ ತಂದೆ. ಹಳ್ಳಿಹಳ್ಳಿಗಳಿಂದ ಅಡುಗೆ ಪಾತ್ರೆಗಳು ಬಂದುವು. ಊರೆಲ್ಲ ಸೇರಿ ಸೌದೆ ಒಡೆದಿದ್ದರು. ಇದಕ್ಕೆ ಮುನ್ನ ಶಾಸ್ತ್ರದ ಕೊನೆ ಕಡಿಯಲಾಗಿತ್ತು. ಅಕ್ಕಿ ಹಪ್ಪಳ, ಸಂಡಿಗೆ, ಉಪ್ಪಿನಕಾಯಿ ಇವೆಲ್ಲ ತಯಾರಾಗಿದ್ದವು. ಇವನ್ನೆಲ್ಲ ಊರಿನವರೇ ಮನೆಗೊಂದಾಳಿನಂತೆ ಬಂದು ಮಾಡಿದ್ದರು. ಸಂಜೆ ನನಗೆ ಮದನಿಂಗನ ಶಾಸ್ತ್ರ. ನನ್ನ ಮದುವೆ ಹೊತ್ತಿಗೆ ಹಜಾಮರ ಕುಂಡರಂಗಣ್ಣ ಸತ್ತುಹೋಗಿದ್ದ. ಅವನ ಮಗ ಬಾಳಾರಿ ಯಾವಳನ್ನೋ ಓಡಿಸಿಕೊಂಡು ಹೋಗಿ ಊರು ಬಿಟ್ಟಿದ್ದ. ಈಗ ಮದನಿಂಗನ ಶಾಸ್ತ್ರಕ್ಕೆ ಅಳೀಸಂದ್ರದ ಹಜಾಮರ ರಂಗಯ್ಯ ಬಂದಿದ್ದ. ಅತ್ತ ಹೆಣ್ಣಿಗೆ ಬಳೆ ಶಾಸ್ತ್ರ ನಡೆಯುತ್ತಿತ್ತು. ನಮ್ಮ ಊರಿನ ಸೋಬಾನೆ ಚಿಕ್ಕಮ್ಮ ಸೋಬಾನೆಪದ ಹಾಡಲು ಸಿದ್ಧವಾಗಿ ಕುಳಿತಿದ್ದಳು. ಆಗ ಅವಳಿಗೆ ಮುಮ್ಮೇಳದಲ್ಲಿ ದನಿ ಕೊಡುವವಳೂ ಹಿಮ್ಮೇಳದಲ್ಲಿ ಹಾಡುವವರೂ ಇದ್ದರು. ಅವಳು ಕೊಳದ ಬಳಿ ಗಂಗೆಪೂಜೆಯಿಂದ ತನ್ನ ಸೋಬಾನ ಶುರು ಮಾಡಿದಳು. ಹಳ್ಳಿಯ ಸೋಬಾನೆಪದ ಅಷ್ಟೇ ಸಾಲದು ಎಂದು ಡಬ್ಬಲ್ ಗ್ರಾಜ್ಯುಯೇಟ್ ಆದ ಗಂಡಿನ ಮದುವೆಗೆ ನಮ್ಮ ತಂದೆ ಬೆಳ್ಳೂರಿನಿಂದ ಬ್ಯಾಂಡ್ ವಾದ್ಯ ತರಿಸಿದ್ದರು.

ಎಲ್ಲಾ ಶಾಸ್ತ್ರಗಳು ಸಾಂಗವಾಗಿ ಚಾಚು ತಪ್ಪದೆ ನಡೆದುವು. ರಾತ್ರಿ ಅರಿಶಿಣದ ಶಾಸ್ತ್ರ. ಬೆಳಗ್ಗೆ ಗಂಡು ನೆರೆ ಹೊರಡಬೇಕು. ಸಾಮಾನ್ಯವಾದ ಹಳ್ಳಿಯ ಗಂಡನ್ನೇ ಕುದುರೆಯ ಮೇಲೆ ಕರೆದುಕೊಂಡು ಹೋಗುತ್ತಾರೆಂದರೆ ನನಗೆ ಸಾಮಾನ್ಯ ಕುದುರೆ ಸಾಲದೆಂದು ಕುಣಿಗಲ್ಲಿನಿಂದ ದೊಡ್ಡ ಕುದುರೆಯನ್ನೇ ತರಿಸಿದ್ದರು ದೊಡ್ಡಮನೆ ಗೌಡರು. ಅದರ ಮೇಲೆ ಡಿಕಾವಾಗಿ ಕುಳಿತು ಹೊರಟ ಈ ಗಂಡನ್ನು ನೋಡಲು ಊರಿಗೆ ಊರೇ ನೆರೆಯಿತು. ಸುತ್ತಮುತ್ತಲ ಹಳ್ಳಿಯ ನೆಂಟರಿಷ್ಟರೆಲ್ಲ ಬಂದಿದ್ದರು. 'ಹಟ್ಟಿ ಬಿಟ್ಟೋಗುವಾಗ ಕಿತ್ತಲೆ ಪಲ್ಲೈಸಿದೊ! ಹಟ್ಟಿಯ ಗವಳಿ ನಡುದಾವೆ' ಈ ಮನೆ ಪುತ್ರಗನ್ನೆರಡು ಫಲವುಂಟು ಎಂದು ಸೋಬಾನೆ ಚಿಕ್ಕಮ್ಮ ಭವಿಷ್ಯ ನುಡಿದಳು. 'ಸಾಲಿನ ಸೀರೆ ತೋಳ ಮ್ಯಾಗಲ ರವಕೆ! ಸಾದೀನ ಬಟ್ಟು ಹಣೆಯಾಗೆ' ಇಟ್ಟ ನನ್ನ ತಂಗಿ ಪೆಟ್ಟಿಗೆ ಹೊತ್ತಳು. ನಾನು ಬಿಳೀ ಕೋಟು, ಪಂಚೆ, ತಲೆಗೆ ಪಾಗು, ಬಾಳೆ ಹೂವಿನಂತಹ ದಡದ ಅಡ್ಡಹೊದಿಕೆ, ಕೈಯಲ್ಲಿ ನಿಂಬೆಹಣ್ಣು ಸಿಕ್ಕಿಸಿದ ಕಠಾರಿ, ಪಾಗಿಗೆ ಇಳಿಯಬಿಟ್ಟ ಹೂವಿನ ಕುಚ್ಚು, ಹಣೆಗೆ ಹಚ್ಚಿದ

ಮೂರು ಬೆಟ್ಟು ವಿಭೂತಿ, ಮಧ್ಯೆ ಸಾದಿನ ಬಟ್ಟು – ಈ ಅಲಂಕಾರದಲ್ಲಿ ಹೇಗೆ ಕಂಡೆನೋ ಕಾಣೆ! ನೆನ್ನೆ ರಾತ್ರಿ ಮೂರು ಸಲ ಅರಿಶಿಣ ಎಣ್ಣೆ ಹಚ್ಚಿ, ಮೂರು ಸಲ ಸೀಗೇಕಾಯಿ ತಿಕ್ಕಿ ಸ್ನಾನ ಮಾಡಿಸಿದ್ದರಿಂದ ಮುಖದಲ್ಲಿ ಒಂದು ತರಹ ಕಳೆಯೇನೋ ಬಂದಿತ್ತು. ನನ್ನ ಕುದುರೆ ಹಿಂದೆಯೇ ಪದ ಹಾಡುತ್ತಿದ್ದ ಸೋಬಾನೆ ಚಿಕ್ಕಮ್ಮ 'ಬಾಳೆಹಣ್ಣಿನಂಗೆ ಬಾಲಣ್ಣಾಕಿದ ಕಾಸೆ ಈ ಊರು ಅರಸು ಇವರೇಯ' ಎಂದು ಹಾಡಿದ್ದು ಕೇಳಿಸಿತು. ನಾನು ಓದುತ್ತಿದ್ದಾಗ ಹೊಸ ಊರಿಗೂ ಹಳೇ ಊರಿಗೂ ಮಾಡಿಸಿದ ರಸ್ತೆಯಲ್ಲಿ ಗಂಡು ನೆರೆ ಹೊರಟಿತು. ಮೂಡು ಮುಂದಾಗಿ ಬೆಳಗಿನ ಸೂರ್ಯನ ಬೆಳಕಿನ ಎದುರಿಗೆ ಹೊರಟ ನನ್ನನ್ನು ಚಿಕ್ಕಮ್ಮ 'ನೋಡಿರೆ ನಿಮ್ಮ ಸಿರಿಯ! ನೋಡಿರೆ ನಿಮ್ಮ ಸಂಪತ್ತ! ನೋಡೀರೆ ನಿಮ್ಮ ಅಳಿಯಾನ! ಮೂಡಿಬರುವೋ ಸೂರ್ಯನಿಗಿಂತ ಚಲುವಾನ!' ಎಂದು ವರ್ಣಿಸಿದಾಗ ನನಗೆ ನಾಚಿಕೆಯಾಯಿತು. ನೆರೆ ಹೊರಟು ಹಳೇ ಊರಿನ ತಲೆಕೆಳಗಿನ ಅರಳೀಮರದ ಬಳಿಗೆ ಹೋಯಿತು. ಅಲ್ಲಿ ಹೆಣ್ಣಿನವರು ಗಂಡಿನವರನ್ನು ಎದುರುಗೊಂಡು ಅಕ್ಕಿ ಇಟ್ಟಾಡಿದರು. ನಮ್ಮ ಸೋದರಮಾವ ತಿಮ್ಮಶೆಟ್ಟಿಗೌಡರು ನಮ್ಮೂರಿನ ತೆನಾಲಿ ರಾಮಕೃಷ್ಣ. ಏನಾದರೊಂದು ತಮಾಷೆ ಮಾಡಿ ನಗಿಸದಿದ್ದರೆ ತಿಂದ ಹಿಟ್ಟು ಅರಗುತ್ತಿರಲಿಲ್ಲ. ಈಗ ಅವರ ತಮಾಷೆಗೆ ಮಿತಿಯೇ ಇಲ್ಲ. ಹಾಲುಗಳ್ಳಿಕಾಯಿ ಸರಮಾಡಿ ಅವರ ಮಾವನಾದ ನಮ್ಮ ತಂದೆಗೆ ಹಾಕಿದರು. ಹಣೆಗೆ ವಿಭೂತಿಯನ್ನು ಹೇಗೇಗೊ ಬರೆದರು. ಕಣ್ಣುಗಳಿಗೆ ಅದೇ ಹಾಲುಗಳ್ಳಿಕಾಯಿಗಳಿಗೆ ಆ ಕಡೆ ಈ ಕಡೆ ಹಂಚಿನ ಕಡ್ಡಿ ಸಿಕ್ಕಿಸಿ ಮಾಡಿದ ಕನ್ನಡಕ ತೊಡಿಸಿದರು. ಅವನ್ನು ನೋಡಿಕೊಳ್ಳಲು ಕನ್ನಡಿ ಎಂಬಂತೆ ಅಂಗೈ ಅಗಲದ ಮೂರು ತೂತಿನ ಹಪ್ಪಳ ಕೈಗೆ ಕೊಟ್ಟರು. ಬೆಲ್ಲದ ಹಾಲು ಕೊಟ್ಟರು ಹತ್ತಾರು ಮೈಲಿ ದೂರ ನಡೆದು ಬಂದ ಆಯಾಸ ಪರಿಹಾರ ಮಾಡಿಕೊಳ್ಳುವುದಕ್ಕೆ.

ಅತ್ತ ಧಾರೆಗೆ ಹೊತ್ತಾಗುತ್ತಾ ಬಂದಿತ್ತು. ನಮ್ಮ ತಂದೆ ಯಾವಾಗಲೂ ಲಗ್ನಕ್ಕೆ ಸರಿಯಾಗಿ ಧಾರೆ ಹೊಯ್ಯಿಸುತ್ತಿದ್ದವರು, ಈಗ ಮಗನ ಮದುವೆಯೇ ಆಗುವಾಗ ಅದನ್ನು ತಪ್ಪಿಯಾರೆ? ಆತುರ ಮಾಡಿ ಅಕ್ಕಿ ಇಟ್ಟಾಡಿಸಿ ಗಂಡನ್ನು ಹೆಣ್ಣಿನ ಮನೆಯ ಮುಂದಕ್ಕೆ ಕರೆತಂದರು. ಕರಡಹಳ್ಳಿ ಕೃಷ್ಣಪ್ಪಗೌಡರು ಅಲ್ಲಿದ್ದರು. ನಮ್ಮ ತಂದೆಯವರ ಹೊಟ್ಟೆಯೇ ಭಾರಿ ಗಾತ್ರ ಎಂದರೆ ಅದರ ಎರಡರಷ್ಟು ಗಾತ್ರ ಕೃಷ್ಣಪ್ಪಗೌಡರದು. ಕಳ್ಳನಕೆರೆ ಟಿ. ಮರಿಯಪ್ಪನವರೂ ಬಂದಿದ್ದರು. ಕಾಂತರಾಜಪುರದಿಂದ ಕೆ. ಲಕ್ಕಪ್ಪ, ಎಸ್. ಶಿವಪ್ಪ ಮುಂತಾದವರು ಬಂದಿದ್ದರು. ಇನ್ನು ನಮ್ಮೂರು, ನಾಗತಿಹಳ್ಳಿ ಮತ್ತು ಅಳೀಸಂದ್ರಗಳಿಂದ ನನ್ನ ಬಾಲಸ್ನೇಹಿತರು ಬಂದಿದ್ದರು. ಅತ್ತ ಅಯ್ಯಾ ಮೇಷ್ಟ್ರು ಜಗಲಿಯ ಮೇಲೆ ಕುಳಿತು ಮಾಂಗಲ್ಯದ ತಟ್ಟೆಯನ್ನು ಸಿದ್ಧ ಮಾಡುತ್ತಾ 'ಧಾರೆಗೆ ಹೊತ್ತಾಯ್ತು!' ಎನ್ನುತ್ತಿದ್ದರು. ಗಂಡು ಚಪ್ಪರದ ಹಟ್ಟಿಯಲ್ಲಿ ಹಸೆಮಣೆ ಮೇಲೆ ನಿಂತಿತು. ಒಳಗಿನಿಂದ ಸರ್ವಾಲಂಕೃತೆಯಾದ, ಸಾಲಿಯ ಸೀರೆಯ ಜೋಲುತ ವಾಲುತ, ಕಡಗಣ್ಣಲಿ ಪುರುಷರ ನೋಡುತ ಹೆಣ್ಣು ಎದುರುಗಡೆ ನಿಂತಿತು. ಎಲ್ಲೋ ಒಂದು ಸಲ ನೋಡಿದ್ದು. ಈಗ ಸರಿಯಾಗಿ ನೋಡಲು ಅಡ್ಡಲಾಗಿ ಪರದೆ ಹಿಡಿದಿದ್ದಾನೆ ನಮ್ಮೂರ ಅಗಸರ ತೋಪ. ಅಯ್ಯಾಮೇಷ್ಟ್ರು 'ಸುಮುಹೂರ್ತ ಸಾವಧಾನ, ಸುಲಗ್ನ ಸಾವಧಾನ' ಎಂದು ಹೇಳಿ ಪರದೆ ತೆಗೆಸಿದಾಗ ನಮ್ಮಪ್ಪ ಅಷ್ಟಿಲ್ದೆ ಈ ಹಳ್ಳಿ ಹೆಣ್ಣು ತಂದನೇ ಎಂದು ಅನಿಸಿತು ನನಗೆ ಮೊಟ್ಟಮೊದಲಿಗೆ 'ಮುಂದಿಂಗಳ ಬೆಳಕಲ್ಲಿ ಸೂರ್ಯನ ರವಿಯಲ್ಲಿ ಗಂಧ ಕಸ್ತೂರಿ ಪುನುಗಿನ ಲಕ್ಷ್ಮೀದೇವಿ' ಯನ್ನು ಕಂಡಾಗ ಎಳ್ಳು ಜೀರಿಗೆ ಕೈತುಂಬ ತುಂಬಿಕೊಂಡು ಹೆಣ್ಣಮ್ಮ ನನ್ನ ಮಂಡೆಯ

ಮೇಲಿಟ್ಟಳು ಅಷ್ಟೊಂದು ಭಾಗ್ಯ ಬರಲೆಂದು. ಸೋಬಾನೆ ಚಿಕ್ಕಮ್ಮ 'ಕಲ್ಯಾಣವೇ ಶಿವನ ಕಲ್ಯಾಣವೇ! ರಾಮರ ಕಲ್ಯಾಣವೇ' ಎಂದು ಬಹು ಸೊಗಸಾಗಿ ಹಾಡುತ್ತಿದ್ದಳು. ಧಾರೆ ಆಯಿತು. ಒಬ್ಬರ ಮೇಲೊಬ್ಬರು ಬಿದ್ದು ಧಾರೆ ಹೂದು, ಅಕ್ಕಿ ಹಾಕಿ ಆಶೀರ್ವಾದ ಮಾಡಿದರು. ಅಯ್ಯಾಮೇಷ್ಟ್ರು ಕೈತೊಳೆಸಿದರು. ನಾನು ಕೈ ಹಿಡಿದೆ. ಆಗ ಚಿಕ್ಕಮ್ಮ 'ಆ ಕೈಯಿಂದಲೇ ಈ ಕೈಯ ಹಿಡದಾನೆ ರೇಕುಮಾಣಿಕದ ಹರಳೊತ್ತಿ ಬೆರಳೊತ್ತಿ ಬೆರಳು ನೊಂದಾವು ಬಿಡಿ ಕಯ್ಯ' ಎಂದು ಹೆಂಡತಿಯ ಚುಳ್ಳಿಸಿದ ಮುಖ ನೋಡಿ ಹಾಡಿಬಿಟ್ಟಳು. 'ಬಾಳೆಹಣ್ಣು ಗೆದ್ದ, ಬಾಳೆಯಕಾಯಿ ಗೆದ್ದ, ಬಾಳೇವು ಏಳು ಗೊನೆ ಗೆದ್ದ, ನಾಗಣ್ಣ–ಬಾಲೆಯ ಗೆದ್ದ ಗಳಿಗೇಲಿ' ಎಂದು ನನ್ನ ಅದೃಷ್ಟ ಕುರಿತು ಹಾಡಿದಳು.

ಒಳಗೆ ಹೋಗಿ ಬೂವ ಉಣ್ಣುವ ಶಾಸ್ತ್ರ ಮತ್ತು ಎಂಜಲು ತೆಗೆಯುವ ಶಾಸ್ತ್ರಗಳು. ಎಂಜಲು ತೆಗೆಯುವ ಶಾಸ್ತ್ರಕ್ಕೂ ಹಾಡುಗಳು ಇವೆಯೆಂದರೆ ನಮ್ಮ ಹಳ್ಳಿಯ ಜನ ಎಂತಹ ಕವನ ಕಟ್ಟುವ ಹುಟ್ಟು ಕವಿಗಳು!

ಬಂದಿದ್ದ ನೆಂಟರಿಷ್ಟರೆಲ್ಲಾ ಊಟ ಮಾಡಿ ನನಗೆ ಶುಭಾಶಯ ಕೋರಿ ಹೊರಟು ಹೋದರು. ನನಗೇನು ವರದಕ್ಷಿಣೆ ಇಲ್ಲ, ಸೂಟಿಲ್ಲ, ವಾಚು ಮೊದಲೇ ಇಲ್ಲ. ಅದರ ಬದಲು ನಮ್ಮ ತಂದೆಯವರೇ ಇಪ್ಪತ್ತೈದು ರಾಜಾ ರೂಪಾಯಿಗಳನ್ನು ಚಪ್ಪರದ ಹಟ್ಟಿಯಲ್ಲಿ ಬೀದಿ ದನ ಬೆದರುವಂತೆ ತೇವಟಿಗೆ ಮೇಲೆ ಇಟ್ಟಿದ್ದ ಗಂಗಳಕ್ಕೆ ಧಣ ಧಣ ಅಂತ ಸುರಿದರು–ತೆರವಾಗಿ. ಸಂಜೆ ಊರಿನ ಲಕ್ಕಮ್ಮನ ಗುಡಿ ಮುಂದೆ ಗಂಧದ ಹುಡಿ ಎಸೆದಾಡುವ ಶಾಸ್ತ್ರ. ಕಣ್ಣು ಕೆಂಪಾಗುವಂತೆ ಗಂಧದ ಹುಡಿ ಹಾಕಿದೆ. ಸೋಬಾನೆ ಚಿಕ್ಕಮ್ಮ ತನ್ನ ಸೋಬಾನೆ ಬಳಗದವರೊಡಗೂಡಿ ಗಂಡ–ಹೆಂಡತಿಯರ ಮೇಲೆ ಸೇಸೆ ಹಾಕುತ್ತ 'ಸಕನ ಸಕನ ಶತಕೋಟಿ ಪುಣ್ಯ' ಎಂದು ಶುರು ಮಾಡಿ 'ಎಂಟಕ್ಕಿನಿಟ್ಟೇವೆ ಗಂಟಿ ಚೌಕಾಣಿ ಮಗನಾಗಲೆಂದು' ನನಗೂ, 'ಹತ್ತಕ್ಕಿನಿಟ್ಟೇವೆ ಮುಪ್ಪಿನ ಮುತ್ತೈದೆ ಸ್ಥಿರವಾಗಲೆಂದು' ಅವಳಿಗೂ ಹರಸಿದರು.

ಬಾಗಿಲು ತಡೆಯುವ ಶಾಸ್ತ್ರವೂ ನಡೆಯಿತು. ರಾತ್ರಿ ಇರುಳು ಮೆರವಣಿಗೆ, ದೊಡ್ಡಮನೆಯ ಗಾಡಿಯ ಮೇಲೆ ಅಡ್ಡಲಾಗಿ ಹಾಕಿದ ಒರಗುಬೆಂಚು. ಅದರ ಹಿಂಬದಿಗೆ ಕೆಂಪು ಶಾಲು ಕಟ್ಟಿ ಅತ್ತಿತ್ತ ಬಿಗಿದ ಬಾಳೆಯ ಕಂಬಗಳು, ಸುತ್ತ ಹೂವಿನ ಅಲಂಕಾರ. ನಮ್ಮ ಮನೆಯ ಡಾಗಿನ ಹೋರಿಗಳನ್ನೇ ಹೂಡಿದರು. ಆನೆಯ ಮೇಲೆ ಹಾಕಿದ ಅಂಬಾರಿಯ ಮೇಲೆ ಕುಳಿತಂತೆ ನಾವು ಕುಳಿತೆವು. ಬೆಳ್ಳೂರಿನ ವಾಲಗಕ್ಕೆ ಈಗ ಒಳ್ಳೆಯ ಅವಕಾಶ. ಗೌಡರ ಸೇಂದಿ ಅಂಗಡಿಯಿಂದ ಗಡಿಗೆಗಟ್ಟಲೆ ಹೆಂಡ ಬಂದಿತ್ತು. ಅದರ ಗಮ್ಮತ್ತಿನಲ್ಲಿ ಬೆಳ್ಳೂರಿನ ಆ ವಾಲಗದ ಪಾಪ ಏನು ನುಡಿಸಿದನೋ! ಐವತ್ತು ಮನೆಯ ಸಣ್ಣ ಊರಿನ ಒಂದೇ ರಾಜಬೀದಿಯಲ್ಲಿ ಮಧ್ಯರಾತ್ರಿಯವರೆಗೂ ಮೆರವಣಿಗೆ ನಡೆಯಿತು. ಬೆಳ್ಳೂರಿನಿಂದ ಗ್ಯಾಸ್ಲೈಟುಗಳು ಬಂದಿದ್ದವು. ಈ ಗ್ಯಾಸ್ಲೈಟು, ವಾದ್ಯ ಮತ್ತು ಅಪರೂಪದ ಗಂಡು ಹೆಣ್ಣುಗಳನ್ನು ನೋಡಿ ಜನ ಸಂತಸಪಟ್ಟರು. ಈಗ ಗಂಡಿನ ಮನೆಗೆ ಹೆಣ್ಣಿನ ಮೊದಲ ಪ್ರವೇಶ. ಬಲಗಾಲಿಟ್ಟು ಹೊಸಲು ದಾಟಿದಳು. ಆಮೇಲೆ ಕಂದಲ ಮಡಕೆ ಶಾಸ್ತ್ರ. ನಮ್ಮ ಮನೆಯ ಹಿಂದಲ ಅಕ್ಕವಕ್ಕ ಈ ಶಾಸ್ತ್ರ ಮಾಡಿಸುವುದರಲ್ಲಿ ಹೆಸರಾದವಳು. ಒಂದು ಹೊಸ ಮಡಕೆ. ಅದರಲ್ಲಿ ಓಕುಳಿ ನೀರು ತುಂಬಿ ಕರಿಮಣಿ ಸರ, ಚಿನ್ನದ ಉಂಗುರ, ಸಗಣಿಯ ಬೆರಣಿ, ರಾಗಿ ಹುಲ್ಲುಕಡ್ಡಿ ಇವನ್ನು ಹಾಕುತ್ತಾರೆ. ಅಕ್ಕವಕ್ಕ ಬಿಳೀಪೇಟ ಕಟ್ಟಿಕೊಂಡೂ ಬಂದು ಅಂಪೈರ್ ಆಗಿ ನಮ್ಮಿಬ್ಬರನ್ನು ಎದುರುಬದುರು ಕುಳ್ಳಿರಿಸಿದಳು.

'ನಾನು ಹೂಂ ಅಂದಾಗ ನೀವು ಕೈ ಹಾಕಿ ನಿಮಗೆ ಏನು ಸಿಕ್ತದೋ ಅದ ತಂದು ಈ ಗಂಗಳದಲ್ಲಿ ಹಾಕಿ' ಎಂದು ರೂಲ್ಸ್ ಹೇಳಿಕೊಟ್ಟಳು. ಇಬ್ಬರೂ ಕಂದ್ಲ ಮಡಕೆ ಕಂಟದ ಮೇಲೆ ಕೈಯಿಟ್ಟು ಕೊಂಡು ಹೂಂ ಅನ್ನೋದನ್ನೇ ಕಾಯುತ್ತಿದ್ದೆವು. ಆಗಿನ್ನೂ ಒನ್, ಟು, ತ್ರೀ ಬಂದಿರಲಿಲ್ಲ. ಸರಿ, ಅಕ್ಕವಕ್ಕ ಹೂಂ ಅಂದಳೋ ಇಲ್ಲವೋ ನಮ್ಮಿಬ್ಬರ ಕೈಗಳು ನೀರಿನೊಳಗೆ ತಡಕಿ ಕಿತ್ತಾಡಿ ಮೇಲೆ ಬಂದವು ಸಿಕ್ಕಿದ್ದನ್ನು ಗಂಗಳದಲ್ಲಿ ಹಾಕಿದುವು. ನಾನು ಏನೇ ಮಾಡಿದರೂ ನೀರಿನೊಳಗೆ ಅವಳ ಕೈಯಿಂದ ಕರೀಮಣಿ ಸರ ಕಿತ್ತುಕೊಳ್ಳಲಾಗಲಿಲ್ಲ. ನನ್ನ ಕೈಯಿಂದ ಅವಳು ಚಿನ್ನದ ಉಂಗುರ ಕಿತ್ತುಕೊಳ್ಳಾಕಾಗಲಿಲ್ಲ. ಅಂಪೈರು ತೀರ್ಮಾನ ಹೇಳಿದಳು. 'ನಿನ್ನ ಮುತ್ತೈದೆತನ ಶಾಶ್ವತ ಕಾಣವ್ವ' ಎಂದು ಅವಳಿಗೆ, 'ನಿನ್ನ ಬಾಳು ಅದ್ದೂರಿ ಕಾಣಪ್ಪ' ಎಂದು ನನಗೆ ಹೇಳಿಬಿಟ್ಟಳು. ಕೆಲವು ಹೆಣ್ಣುಗಳು ಸಗಣಿ ಬೆರಣಿ ತರುವುದುಂಟು. ಅವರಿಗೆ 'ನಿಂಗೆ ಕಸ ಹೊರೋದು ತಪ್ಪೋದಿಲ್ಲ ಕಣವ್ವಾ' ಎಂದು ಭವಿಷ್ಯ ಹೇಳಿಬಿಡುತ್ತಾಳೆ ಅಂಪೈರ್.

ಇದಾದ ಮೇಲೆ ಅಂಪೈರ್ (ಇವಳು ಹೆಣ್ಣಿಗೆ ಅತ್ತೆಯಾಗಬೇಕು. ಅಂಥವಳೇ ಅಂಪೈರ್ ಆಗಲು ಕ್ವಾಲಿಫಿಕೇಷನ್ ಪಡೆದವಳು) ಅಡುಗೆ ಕ್ವಾಣೆಗೆ ಹೋಗಿ ಅಲ್ಲಿರುವ ಕೋಣೆ ಗುಡಿಸೋ ಇಡ್ಲು, ಹಿಟ್ಟಿನ ಮಡಕೆ ಕವೆಗೋಲು, ಹಿಟ್ಟು ತಿರುವೋ ಕೋಲು – ಇವುಗಳನ್ನೆಲ್ಲಾ ತಂದು ನನ್ನೋಳನ್ನು ಕಂದಲ ಮಡಕೆ ಸುತ್ತ ಮೂರು ಸುತ್ತು ಸುತ್ತಿಸುತ್ತಾ ಪ್ರತಿ ಸುತ್ತಿಗೂ 'ನನ್ನ ನಿನ್ನ ಮಾತು ಬೆಲ್ಲದಂಗಿರಲಿ' ಎಂದು ಬಾಯಿಗೆ ಬೆಲ್ಲ ಗಿಡಿದಳು. ನೋಡುತ್ತಿರುವ ಆ ಹೆಂಗಸರು ಗಂಡಸರ ಗಡಣ ನಕ್ಕಿದ್ದೂ ನಕ್ಕಿದ್ದೆ. ಆಮೇಲೆ ಒಂದೊಂದಾಗಿ ಆ ಕವೆಗೋಲು, ತಿರುವೋ ಕೋಲು ಇವುಗಳನ್ನೆಲ್ಲಾ ಅವಳ ಕೈಗೆ ಕೊಡುತ್ತಾ 'ನಾನು ಅಟ್ಟುಂಡಂಗೆ ನೀನು ಅಟ್ಟುಣ್ಣು' ಎಂದು ಹೇಳಿ ಅತ್ತೆ ಸೊಸೆಗೆ ಚಾರ್ಜು ವಹಿಸಿಕೊಟ್ಟಳು. ಚಾರ್ಜು ತೆಗೆದುಕೊಂಡ ಸೊಸೆ ಅವಳ ಛೇಂಬರ್ ಆದ ಅಡುಗೆ ಕೋಣೆಗೆ ಹೋಗಿ ಅವನ್ನೆಲ್ಲಾ ಅಲ್ಲಿಟ್ಟು ಹೊರಗೆ ಬಂದಳು.

ಮಾರನೆಯ ದಿನ ಓಕಳಿ ಇಟ್ಟಾಡುವುದು. ಚಪ್ಪರದ ಹಟ್ಟಿಯಲ್ಲಿ ಎರಡು ಹಸೆಮಣೆ. ಒಂದರ ಮೇಲೆ ನಾನು, ಇನ್ನೊಂದರ ಮೇಲೆ ಅವಳು, ಪಕ್ಕದಲ್ಲಿ ಹಂಡೆ ತುಂಬ ಓಕುಳಿ. ಅದರಲ್ಲಿ ತೇಲುತ್ತಿದ್ದ ಹೂವಿನ ಚೆಂಡುಗಳು. ಮೂರು ಸಲ ಇಬ್ಬರೂ ಓಕುಳಿ ಎರಚಾಡಿದ ಮೇಲೆ ಚಂಡಾಟ ಮತ್ತು ಚಂಡಿಟ್ಟಾಟ! ನಾನು ಬಾರಿಸಿದ್ದೂ ಬಾರಿಸಿದ್ದೆ. ಹೆಣ್ಣಿಗೆ ಸಿಟ್ಟು ಬಂದರೆ ಚಂಡಿಯಾಗುತ್ತಾಳೆ. ಅವಳೂ ಬಾರಿಸಿದಳು ತಿಮ್ಮಶೆಟ್ಟಿಗೌಡರ ಚಿತಾವಣೆಯಿಂದ. ಸ್ನಾನ ಮಾಡಿ ಬಿಳೀ ಸೀರೆ ಉಟ್ಟು ಸಸಿ ಮರಕ್ಕೆ (ಅರಳೀಮರಕ್ಕೆ) ನೀರುಹುಯ್ದು ಬಂದು, 'ಏಟಾಗಿದ್ದರೆ ಮರೆತುಬಿಡಿ' ಎಂದು ವಿಭೂತಿ ಹಚ್ಚಿ, ಪಾದಕ್ಕೆ ತುಂಬೆ ಹೂವಿಟ್ಟು ಪೂಜೆ ಮಾಡಿದಳು. ಇಲ್ಲಿಗೆ ಕಿರಿಗಂಚಿ ಮುಗಿಯಿತು.

ಮರಿಗಂಚಿಗೆ ಹೆಣ್ಣಿನ ಊರಿಗೆ ಹೋದೆ. ಅಲ್ಲಿ ಹುಳಿ ಮುಟ್ಟಿಸುವ ಶಾಸ್ತ್ರ. ಅಂದರೆ ಹತ್ತಿಪ್ಪತ್ತು ದಿವಸದಿಂದ ಬಾಡಿಲ್ಲದೆ ಸಪ್ಪೆಯಾಗಿದ್ದ ಬಾಯಿಗೆ ಕನ್ನೆಗೋಳಿ ಸಾರು ಮಾಡಿ, ಅದಕ್ಕೆ ಪರಿಕಾರದ ತುಪ್ಪ ಹಾಕಿ ಕುಡಿಸುವ ಶಾಸ್ತ್ರ, ಆರತಿ ಬೆಳಗುವುದು ಇತ್ಯಾದಿ.

ಕವಿ ಕೃತಿ ಪರಿಚಯ

ಎಚ್.ಎಲ್. ನಾಗೇಗೌಡರು (೧೯೧೫–೨೦೦೫) ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಹೆರಗನಹಳ್ಳಿಯ ರೈತಾಪಿ ಕುಟುಂಬದಿಂದ ಬಂದವರು. ಸರ್ಕಾರಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಇವರು ಜನಪದ ಸಾಹಿತ್ಯ ಸಂಗ್ರಹಣೆಯಲ್ಲಿ

ಅಪಾರ ಆಸಕ್ತಿಯನ್ನು ತೋರಿದವರು. ೧೯೭೯ರಲ್ಲಿ ನಾಗೇಗೌಡರು ಕರ್ನಾಟಕದ ಸಾಂಪ್ರದಾಯಿಕ ಜಾನಪದ ಕಲೆಗಳ ಅಧ್ಯಯನ ಮತ್ತು ಪ್ರಸರಣಕ್ಕೆ ಮೀಸಲಾದ ಕರ್ನಾಟಕ ಜಾನಪದ ಪರಿಷತ್ತನ್ನು ಸ್ಥಾಪಿಸಿದರು. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕೆಂಗಲ ಬಳಿ ಸುಮಾರು ೧೫ ಎಕರೆಯಷ್ಟು ವಿಸ್ತೀರ್ಣವಾದ ಜಾಗದಲ್ಲಿ ೧೯೯೪ರಲ್ಲಿ ಆರಂಭವಾದ 'ಜನಪದ ಲೋಕ' ನಾಗೇಗೌಡರ ಕಲ್ಪನೆಯ ಕೂಸು. ಇವರಿಗೆ ರಾಜ್ಯೋತ್ಸವ ಪ್ರಶಸ್ತಿ (೧೯೯೮), ಪಂಪ ಪ್ರಶಸ್ತಿ (೨೦೦೫), ನಾಡೋಜ ಪ್ರಶಸ್ತಿ (೨೦೦೨) ಮತ್ತು ಮುಂತಾದ ಹಲವಾರು ಪ್ರತಿಷ್ಟಿತ ಪ್ರಶಸ್ತಿಗಳು ದೊರೆತಿವೆ. ಬಹುಮುಖ ಪ್ರತಿಭೆಯ ನಾಗೇಗೌಡರು ಮೈಸೂರು ಸಿವಿಲ್ ಸರ್ವಿಸ್ ಅಧಿಕಾರಿ ಹುದ್ದೆಯಲ್ಲಿ ಇದ್ದುಕೊಂಡೇ ಕವಿಯಾಗಿ, ಕಥೆಗಾರರಾಗಿ, ಕಾದಂಬರಿಕಾರರಾಗಿ, ಜಾನಪದ ಸಂಗ್ರಾಹಕ ಮತ್ತು ಸಂಶೋಧಕರಾಗಿ ಬಹುದೊಡ್ಡ ಸಾಮಾಜಿಕ ಸೇವೆಯನ್ನು ಸಲ್ಲಿಸಿದವರು. ಚಿತ್ರ ೫ರಲ್ಲಿ ನಾಗೇಗೌಡರ ಭಾವಚಿತ್ರವನ್ನು ನೀಡಲಾಗಿದೆ.

ಚಿತ್ರ ೫: ಎಚ್.ಎಲ್. ನಾಗೇಗೌಡ

ಹನ್ನೊಂದು ಸೃಜನಶೀಲ ಕೃತಿಗಳು, ನಾಲ್ಕು ಅನುವಾದಗಳು, ಏಳು ಜಾನಪದ ಸಂಕಲನಗಳು ಹಾಗೂ ತಮ್ಮ ಆತ್ಮಕಥನ 'ನಾಗಸಿರಿ' ಇವರ ಸಾಹಿತ್ಯ ಕಾಣಿಕೆ. ಆತ್ಮಕಥನವು ಜೀವನಯಾತ್ರೆ, ವಿದೇಶಯಾತ್ರೆ, ಚುನಾವಣಾ ಯಾತ್ರೆ, ಜಾನಪದ ಯಾತ್ರೆ ಎಂಬ ನಾಲ್ಕು ಭಾಗಗಳನ್ನು ಒಳಗೊಂಡಿದೆ. ೨೫೦೦ ಪುಟಗಳಿರುವ ಇವರ ಆತ್ಮಕಥೆಯನ್ನು ಜಿ.ಎಸ್. ಶಿವರುದ್ರಪ್ಪ ಅವರು 'ಯಾವ ಭಾಷೆಯಲ್ಲೂ ಇಲ್ಲದ ಬೃಹತ್ ಆತ್ಮಕಥೆ' ಎಂದು ಹೊಗಳಿದ್ದಾರೆ. ಈ ಭಾಗದಲ್ಲಿ ಲೇಖಕರ ವಿವಾಹದ ಸನ್ನಿವೇಶವಿದ್ದು, ಹಳ್ಳಿಗಳಲ್ಲಿ ಜರುಗುತ್ತಿದ್ದ ವಿವಾಹ ಸಮಾರಂಭದ ವಿಧಿ ವಿಧಾನಗಳ ಬಗೆಗೆ, ಶಾಸ್ತ್ರಗಳ ಬಗೆಗೆ ತಿಳಿಸಿದ್ದಾರೆ. ಈ ಪಠ್ಯದಲ್ಲಿ ಬರುವ ಸೋಬಾನೆ ಚಿಕ್ಕಮ್ಮ ಹಾಡಿರುವ ಹಾಡುಗಳ ಸಂಕಲನವನ್ನು ನಾಗೇಗೌಡರು ನಂತರದಲ್ಲಿ ಸಂಗ್ರಹಿಸಿ ೧೯೭೨ರಲ್ಲಿ ಪ್ರಕಟಿಸಿದರು.

ಅಭ್ಯಾಸ ೧

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಹಿಂದೆ ಲಗ್ನಪತ್ರಿಕೆಯಲ್ಲಿ ಏನೆಂದು ಬರೆಸುತ್ತಿದ್ದರು?

೨. ನಿರೂಪಕರ ಮದುವೆಯು ಎಲ್ಲಿ ಜರುಗಬೇಕೆಂದು ತೀರ್ಮಾನವಾಯಿತು?

೩. ನಿರೂಪಕರ ಮದುವೆಯಲ್ಲಿ ಅಡುಗೆಯ ಸಿದ್ಧತೆಗಳು ಹೇಗೆ ಜರುಗಿದವು?

೪. ಸೋಬಾನೆ ಚಿಕ್ಕಮ್ಮ ಏನೆಂದು ಭವಿಷ್ಯ ನುಡಿದಳು?
೫. ಮದುವೆ ಗಂಡನ್ನು ಹೇಗೆ ಅಲಂಕರಿಸಿದ್ದರು?
೬. ಕಂದಲ ಮಡಿಕೆ ಶಾಸ್ತ್ರದ ನಿಯಮವೇನು? ಅದನ್ನು ಮಾಡುವ ಉದ್ದೇಶವನ್ನು ತಿಳಿಸಿ.
೭. ಅತ್ತೆ ಸೊಸೆಗೆ ಚಾರ್ಜು ಹೇಗೆ ವಹಿಸಿಕೊಟ್ಟಳು?

ಅಭ್ಯಾಸ ೨

ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದವನ್ನು ತುಂಬಿಸಿ.

೧. ನಿರೂಪಕರ ಸೋದರ ಮಾವ ----------.
೨. 'ಕಲ್ಯಾಣವೇ ಶಿವನ ಕಲ್ಯಾಣವೇ?' ಎಂದು ಹಾಡುತ್ತಿದ್ದವರು ----------.
೩. ಚಪ್ಪರದ ದಿನ ನಿರೂಪಕರು ಅಡ್ಲದಮ್ಮಂದಿರ ಜೊತೆ ---------- ದೇವಾಲಯಕ್ಕೆ ಹೋಗಿ ಬಂದರು.
೪. ಮಾಂಗಲ್ಯದ ತಟ್ಟೆಯನ್ನು ಸಿದ್ಧ ಮಾಡುತ್ತಾ 'ಧಾರೆಗೆ ಹೊತ್ತಾಯ್ತು' ಎಂದವರು---
----------.
೫. ಗಂಡು ನೆರೆ ಹೊರಟುದುದು ---------- ಮೇಲೆ.

ಅಭ್ಯಾಸ ೨ಕ್ಕೆ ಉತ್ತರಗಳು

೧. ತಿಮ್ಮ ಶೆಟ್ಟಿ ಗೌಡ
೨. ಸೋಬಾನೆ ಚಿಕ್ಕಮ್ಮ
೩. ಮಾವಿನಕೆರೆ ಲಕ್ಷ್ಮೀದೇವಿ
೪. ಅಯ್ಯಾ ಮೇಷ್ಟ್ರು
೫. ದೊಡ್ಡ ಕುದುರೆಯ ಮೇಲೆ

೧೦.೪. ಪ್ರಬಂಧ ಸಾಹಿತ್ಯ

೧೦.೪.೧. ಪೀಠಿಕೆ

ಲಲಿತ ಪ್ರಬಂಧವೂ ಸಾಹಿತ್ಯದ ಪ್ರಕಾರಗಳಲ್ಲಿ ಒಂದು. ಪ್ರಬಂಧ ಸಾಹಿತ್ಯವನ್ನು ಲಲಿತ ಪ್ರಬಂಧ ಹಾಗೂ ಗಂಭೀರ ಪ್ರಬಂಧ ಎಂದು ಎರಡು ಭಾಗವನ್ನಾಗಿ ವಿಭಾಗಿಸ ಬಹುದು. ಸಂಸ್ಕೃತಿ, ಭಾಷೆ ಸಾಹಿತ್ಯವನ್ನು ಕುರಿತು ಗಂಭೀರ ಪ್ರಬಂಧವನ್ನು ಹಲವರು ಬರೆದಿದ್ದಾರೆ. ಆದರೆ ಲಲಿತ ಪ್ರಬಂಧಗಳು ಲಘುವಾಗಿ ಇದ್ದು ಓದಲು ಹಗುರವಾಗಿರುತ್ತದೆ. ಹಾಸ್ಯದಿಂದಲೋ, ವ್ಯಂಗ್ಯೋಕ್ತಿಗಳಿಂದಲೋ, ಲೇವಡಿಗಳ ಮೂಲಕವೋ ಸಮಾಜಕ್ಕೆ ಪಾಠ ಕಲಿಸುವುದು ಮುಖ್ಯ ಉದ್ದೇಶವಾಗಿರುತ್ತದೆ. ಕೆಲವೊಮ್ಮೆ ಹಾಸ್ಯವೇ ಪ್ರಧಾನವಾಗಿರುತ್ತದೆ.

ಲಲಿತ ಪ್ರಬಂಧಕಾರರಲ್ಲಿ ಎ.ಎನ್. ಮೂರ್ತಿರಾಯರು, ಕುವೆಂಪು, ಬೇಂದ್ರೆ, ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮೊದಲಾದವರ ಹೆಸರುಗಳು ಪ್ರಖ್ಯಾತವಾಗಿವೆ. ಇತ್ತೀಚಿನ ಲಲಿತ ಪ್ರಬಂಧಗಳಲ್ಲಿ ವ್ಯಂಗ್ಯೋಕ್ತಿ, ಕಟಕಿ, ಲೇವಡಿ ಮೊದಲಾದವು ಹೆಚ್ಚು ಪ್ರಚಲಿತವಾಗಿವೆ.

ಕನ್ನಡದ ಅತ್ಯುತ್ತಮ ಲಲಿತ ಪ್ರಬಂಧಗಳ ಮಾದರಿಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಮತ್ತು ಈ ಪ್ರಕಾರದ ಬಗ್ಗೆ ಓದಿನ ಅಭಿರುಚಿ ಮೂಡಿಸುವ ಪ್ರಶ್ನೆ ಬಂದಾಗ, ಎ.ಎನ್. ಮೂರ್ತಿರಾಯರ ಲಲಿತ ಪ್ರಬಂಧಗಳನ್ನು ಓದದೆ ಮುಂದುವರಿಯುವಂತೆಯೇ ಇಲ್ಲ. ಈ ದೃಷ್ಟಿಯಿಂದ ಮೂರ್ತಿರಾಯರ 'ಗೊಣಗುವ ಚಟ' ಎಂಬ ಈ ಪ್ರಬಂಧವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮನುಷ್ಯನಿಗೆ ನೈಸರ್ಗಿಕವಾಗಿ ಬಂದ ಚಟಗಳಲ್ಲಿ ಗೊಣಗುವುದೂ ಒಂದು. ಇದು ಒಂದು ಸ್ವಭಾವದಂತೆಯೇ ತೋರುತ್ತದೆಯಾದ್ದರಿಂದ ಗೊಣಗುವಿಕೆ ರೇಗುವುದಕ್ಕಿಂತ ಅಪಾಯಕಾರಿಯಾದುದಲ್ಲ ಎಂಬುದು ಲೇಖಕರ ಅಭಿಪ್ರಾಯ. ಹಾಗಾಗಿಯೇ ಪ್ರಬಂಧಕಾರರು ಇಲ್ಲಿ ಗೊಣಗಾಟದೊಂದಿಗೆ ಮನುಷ್ಯನ ಇನ್ನಿತರ ಸ್ವಭಾವ ಚಟಗಳನ್ನೂ ಹೋಲಿಸುವ, ವಿಶ್ಲೇಷಿಸುವ ರೀತಿಯಲ್ಲಿ ಅತ್ಯಂತ ಸ್ವಾರಸ್ಯ ಕಂಡುಬರುತ್ತದೆ. ಓದುಗರನ್ನು ನಗಿಸಿ, ಮನಸ್ಸನ್ನು ಹಗುರವಾಗಿಸುವ ಅವರ ಶೈಲಿ ಹಾಗೂ ಅವರ ಧೋರಣೆಗಳನ್ನು ಈ ಪ್ರಬಂಧದಲ್ಲಿ ಗಮನಿಸಬಹುದು.

೧೦.೨.೪. ಪಠ್ಯ

ಗೊಣಗುವ ಚಟ

– ಎ.ಎನ್. ಮೂರ್ತಿರಾವ್

'ಅಬ್ಬ, ಇದೇನಿದು, ಈ ಸೆಕೆಯ ಉಬ್ಬರ! ಕಳೆದ ಬೇಸಿಗೆಯಲ್ಲಿ ಇಷ್ಟೊಂದು ಸೆಕೆ ಕಾಣಲಿಲ್ಲ. ಇಷ್ಟು ಹೊತ್ತಿಗೆ ಒಂದೆರಡು ಹದ ಮಳೆ ಬರಬೇಕಾಗಿತ್ತು. ಹಾಳು ಕಲಿಗಾಲ, ಋತುಧರ್ಮವೇ ಬದಲಾಗಿ ಹೋಯಿತು. ದೈವಶ್ರದ್ಧೆಯಿಲ್ಲ. ಧರ್ಮ ಶ್ರದ್ಧೆಯಿಲ್ಲ, ಇನ್ನೇನಾಗುತ್ತೆ! ಈ ಹಾಳು ಅಣುಬಾಂಬುಗಳ ಪ್ರಯೋಗ ಬೇರೆ. ಅದರಿಂದಲೇ ಹೀಗಾಗುತ್ತೋ ಏನೋ. ನೋಡಿ, ಚಳಿಮಳೆಗಳನ್ನು ಹೇಗಾದರೂ ತಡೆಯಬಹುದು; ಈ ಸೆಕೆ ಮಾತ್ರ ತಡೆಯುವುದಕ್ಕಾಗುವುದಿಲ್ಲ' – ಕಳೆದ ಮೇ ತಿಂಗಳಿನಲ್ಲಿ ಯಾರೊಬ್ಬರು ಮತ್ತೊಬ್ಬರನ್ನು ಕಂಡಾಗಲೂ ಬಹುಶಃ ಈ ಬಗೆಯ ಮಾತು ಕೇಳಿಬರುತ್ತಿತ್ತು. ಈ ಮಾತಿನಲ್ಲಿ ಏನೂ ಹುರುಳಿಲ್ಲ. ಕಳೆದ ವರ್ಷದ ಬೇಸಗೆ ಹೆಚ್ಚು ಕಡಿಮೆ ಈ ವರ್ಷದ ಬೇಸಗೆಯಂತೆಯೇ ಇದ್ದಿರಬಹುದು; ಒಂದು ವರ್ಷದ ಅವಧಿಯಲ್ಲಿ ಆಗಬಹುದಾದ ಋತುಧರ್ಮದ ಬದಲಾವಣೆ ಅಷ್ಟೇನೂ ಗಮನಾರ್ಹವಾದದ್ದಲ್ಲ; ಧರ್ಮಶ್ರದ್ಧೆಗೂ ಹವಾಗುಣಕ್ಕೂ ಏನೂ ಸಂಬಂಧವಿಲ್ಲ; ಅಣುಬಾಂಬುಗಳ ಸಿಡಿತದಿಂದ ಸೆಕೆ ಹೆಚ್ಚುತ್ತದೋ ಇಳಿಯುತ್ತದೋ, ಅದು ಪ್ರಕೃತಕಾಲದಲ್ಲಿ ವಿಜ್ಞಾನಿಗಳಿಗೂ ಸರಿಯಾಗಿ ತಿಳಿಯದ ವಿಷಯ. ಇದೆಲ್ಲಾ ಗೊಣಗುವವನೂ ಬಲ್ಲ; ಆದರೆ ಅವನ ಗೊಣಗಾಟಕ್ಕೆ ಈ ತಿಳಿವಳಿಕೆ ಪ್ರತಿಬಂಧಕವಾಗ ಲಾರದು. ಈಗ ಬೇಸಗೆ ಕಳೆದಿದೆ, ಸೋನೆ ಮಳೆ ಹಿಡಿದಿದೆ, ಮೂರು ದಿನಗಳಿಂದ ಸೂರ್ಯರಶ್ಮಿಯೇ ಕಾಣುತ್ತಿಲ್ಲ. ಆದರೆ ಬೇಸಗೆಯನ್ನು ಬಯ್ಯುತ್ತಿದ್ದವರಿಗೆ ಇದರಿಂದೇನೂ ಆನಂದವಾಗಿಲ್ಲ. 'ಏನು ಹಾಳು ಮಳೆಯೋ! ಹಿಡಿದಿದ್ದು ಬಿಡಲೇ ಒಲ್ಲದು. ಎಲ್ಲಿ ನೋಡಿದರೂ ಕೊಚ್ಚೆ. ಬೇಸಗೆಯ ಸೆಕೆಯನ್ನು ಹೇಗಾದರೂ ತಡೆಯಬಹುದು, ಒಂದು ಫ್ಯಾನ್ ಹಾಕಿಕೊಳ್ಳಬಹುದು. ಈ ಮಳೆ ಹಿಡಿದರೆ ಮಾತ್ರ ಏನೋ ರೇಜಿಗೆ, ಮಂಕುಕವಿದ ಹಾಗಾಗಿ ಬಿಡುತ್ತೆ. ಅಷ್ಟು ಕಾಣದೆ ನಮ್ಮವರು ಇದನ್ನು ದುರ್ದಿನ ಎಂದು ಕರೆದರೆ!' ಎಂದು ಮಳೆಗಾಲವನ್ನು ಬಯ್ಯುತ್ತಾರೆ.

ಇದು ಶುದ್ಧ ಹುಚ್ಚುತನ ಎನ್ನಬೇಡಿ. ಹೀಗೆ ಗೊಣಗುವವರನ್ನು ನೋಡಿ ನಾವು ನಗುವಂತಿಲ್ಲ. ಏಕೆಂದರೆ, ಪ್ರಾಮಾಣಿಕವಾಗಿ ಆತ್ಮಪರೀಕ್ಷೆ ಮಾಡಿಕೊಂಡರೆ ನಾವೂ ಅದೇ ವರ್ಗಕ್ಕೆ ಸೇರಿದವರೆಂದು ಒಪ್ಪಲೇಬೇಕಾಗುತ್ತದೆ. ಇದರ ತಪ್ಪು ನಮ್ಮದಲ್ಲ, ಭಗವಂತ ಗೊಣಗಾಟಕ್ಕೆ ಅವಕಾಶ ಕೊಡುವಂಥ ವಿಶ್ವವನ್ನು ಸೃಷ್ಟಿಸಿದ್ದಾನೆ, ನಾವೇನು ಮಾಡೋಣ, ಎನ್ನುವಂತೆಯೂ ಇಲ್ಲ. ನಮ್ಮ ಗೊಣಗಾಟ ಸಮರ್ಪಕವಾದ, ಅಸಮರ್ಪಕವಾದ, ಎಲ್ಲ ವಿಷಯಗಳಿಗೂ ನಿಷ್ಪಕ್ಷಪಾತವಾಗಿ ಸಲ್ಲುತ್ತದೆ. ಎವರೆಸ್ಟ್ ಶಿಖರವನ್ನು ಗೆದ್ದದ್ದು ಮಾನವನಿಗೆ ಅದ್ಭುತವಾದ ವಿಜಯ. ವೃತ್ತಪತ್ರಿಕೆಗಳಲ್ಲಿ ಅದರ ವರ್ತಮಾನ ಬಂದಾಗ ನನ್ನ ಸ್ನೇಹಿತರೊಬ್ಬರು ಕೇಳಿದರು. 'ಆಯಿತು, ಶಿಖರ ಹತ್ತಿದರು; ಅದರಿಂದ ನಮಗೆ ಬಂದ ಕಿರೀಟವೇನು' ನಮ್ಮ ಹೊಟ್ಟೆ ತುಂಬಿದ ಹಾಗಾಯಿತೆ? ಅಕ್ಕಿ ಬೇಳೆಯ ಬೆಲೆ ವಿಷದ ಹಾಗೆ ಏರುತ್ತಾ ಇದೆ, ನೋಡಿ? ಎಂದು! ನಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗಿಬಿಟ್ಟರೆ, 'ಈ ಸ್ವರ್ಗದಲ್ಲಿ ಹಸಿವೇ ಆಗುವುದಿಲ್ಲ. ಆ ಹಾಳು ಅಮೃತ ಕುಡಿದಿದ್ದರ ಫಲ!' ಎನ್ನುತ್ತೇವೆ. ಒಂದು ವೇಳೆ ನಮ್ಮ ಸುತ್ತಮುತ್ತ ಎಲ್ಲ ವಿಷಯಗಳಲ್ಲೂ ಅನುಕೂಲವಾದ ವ್ಯವಸ್ಥೆಯಿದ್ದರೆ, ಅದನ್ನು ಪ್ರಯತ್ನಪೂರ್ವಕವಾಗಿ ಬದಲಾಯಿಸಿಕೊಂಡಾದರೂ ನಾವು ಗೊಣಗುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳುತ್ತೇವೆ. ಕೆಲವು ವರ್ಷಗಳ ಹಿಂದೆ ನಾನಿದ್ದ ಸಂಸ್ಥೆಯೊಂದರಲ್ಲಿ ಒಂದು ಕ್ಲಬ್ ಸ್ಥಾಪಿಸಿದ್ದೆವು. ಆ ಕ್ಲಬ್ಬಿನ ಮುಖ್ಯ ಕೆಲಸವೆಂದರೆ, ಕಿತ್ತಲೆ ಹಣ್ಣಿನ ಕಾಲದಲ್ಲಿ ಆ ಹಣ್ಣಿನ ದಾಸ್ತಾನು ಇಟ್ಟು ಸದಸ್ಯರಿಗೆ ದಿನಕ್ಕೆ ಎರಡರಂತೆ ಹಂಚುವುದು. ಇದಕ್ಕೆ ಬೇಕಾದ ಹಣವನ್ನು ನಮ್ಮಿಂದ ವಸೂಲು ಮಾಡುವುದಕ್ಕೆ ಒಬ್ಬನನ್ನು ನಾವೇ ಚುನಾಯಿಸಿದೆವು. ನಾವು ಪ್ರತಿದಿನ ಹಣ ಕೊಡುತ್ತಿದ್ದುದು ನಮ್ಮ ಸ್ವಂತ ಒಪ್ಪಿಗೆಯ ಮೇಲೆ; ದಿನಕ್ಕೆ ಎರಡೇ ಹಣ್ಣು ತೆಗೆದುಕೊಳ್ಳಬೇಕೆಂಬ ನಿಯಮ ನಾವೇ ಖುದ್ದು ರಾಜಿಯಿಂದ ಮಾಡಿಕೊಂಡದ್ದು. ಆದರೆ ಒಂದು ದಿನವಾದರೂ ನಾವು ಗೊಣಗಾಟವಿಲ್ಲದೆ ಹಣ ಕೊಡಲಿಲ್ಲ. ಹಣ ವಸೂಲು ಮಾಡುವವನು ಕೇಳಿದಾಗ 'ದಿನಾ ಇವನದ್ದೊಂದು ವಲಡಿ. ಬೆಳಗ್ಗೆ ಎದ್ದರೆ ಸಾಕು, ಕಾದಿರುತ್ತಾನೆ ಈ ನಕ್ಷತ್ರಿಕ! ನಾವೇನು ಮನೆ ಮಠ ಮಾರಿಕೊಂಡು ಓಡಿಹೋಗುತ್ತೇವೆಯೆ? ಕೊಟ್ಟೇ ಕೊಡುತ್ತೇವೆ, ಇವತ್ತಿಲ್ಲದಿದ್ದರೆ ನಾಳೆ', ಎಂದು ಗೊಣಗಿದೆವು. 'ನಮ್ಮ ದುಡ್ಡು, ನಮ್ಮ ಹಣ್ಣು. ಅದರ ಮೇಲೆ ಇವನದ್ದೇನು ಅಧಿಕಾರ? ನಮಗೇನು ಬಿಟ್ಟಿ ಕೊಡುತ್ತಾನೆಯೆ? ಚೇಳಿಗೆ ಪಾರುಪತ್ಯ ಕೊಟ್ಟ ಹಾಗಾಯಿತು!' ಎಂದು ಆಕ್ಷೇಪಿಸಿದೆವು. ಕೊನೆಗೆ ಆತ 'ನೀವು ಕೊಡುವುದು ಎರಡಾಣೆ, ಅದನ್ನು ಕೊಟ್ಟೂ ಕೊಡುತ್ತೀರಿ, ಇಷ್ಟೆಲ್ಲಾ ವಾಗ್ವಾದವಿಲ್ಲದೆ ಕೊಡಬಾರದೆ?' ಎಂದು ಆಕ್ಷೇಪಿಸಿದ. ಆಗ ಮನಶ್ಶಾಸ್ತ್ರಜ್ಞನೊಬ್ಬ 'ತಿಂಗಳ ಹಣವನ್ನೆಲ್ಲಾ ಮುಂಗಡವಾಗಿ ಕೊಡುವ ವ್ಯವಸ್ಥೆ ಮಾಡಿಕೊಳ್ಳೋಣ. ನಾಲ್ಕು ರೂಪಾಯಿ ಒಟ್ಟಿಗೆ ಕೊಡಬೇಕಾದಾಗ ಗೊಣಗಿದರೆ ಅದೇನೂ ಅನ್ಯಾಯವಲ್ಲ' ಎಂದು ಸಲಹೆ ಮಾಡಿದ. ಹಾಗೆಯೇ ಮಾಡಿ ಮನಸ್ಸಿಗೆ ತೃಪ್ತಿಯಾಗುವಷ್ಟೂ ಗೊಣಗಿದೆವು. ಒಟ್ಟಿಗೆ ನಾಲ್ಕು ರೂಪಾಯಿ ಕೊಡುವುದು ಕಷ್ಟ. ಆ ಕಷ್ಟವನ್ನು ಎದುರಿಸಿ ಯಾದರೂ ಸರಿಯೆ, ಗೊಣಗುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳುವುದು ನಮಗೆ ಅವಶ್ಯಕವಾಗಿ ಕಂಡಿತು.

ಅಂದ ಮೇಲೆ, ಗೊಣಗಾಟ ಮನುಷ್ಯನಿಗೆ ಸ್ವಾಭಾವಿಕವಾಗಿ, ನೈಸರ್ಗಿಕವಾಗಿ ಬಂದ ಗುಣ, ಅದರ ಹೊಣೆ ನಮ್ಮದಲ್ಲ, ಎಂದಂತಾಯಿತು, ನಮ್ಮ ರಕ್ತದಲ್ಲಿರುವ ಕೆಂಪು ಮತ್ತು ಬಿಳಿಯ ಕಣಗಳಿಗಾಗಿ ನಮ್ಮನ್ನು ದೂರುವುದು ಎಷ್ಟು ಅನ್ಯಾಯವೋ ಗೊಣಗಾಟಕ್ಕಾಗಿ ದೂರುವುದೂ ಅಷ್ಟೇ ಅನ್ಯಾಯ. ಆ ಗುಣ ಕೆಲವರಲ್ಲಿ ಸ್ವಲ್ಪ ಉಲ್ಬಣವಾಗಿ

ಕಾಣಬಹುದು; ಆದರೆ ನಮಗೂ ಅವರಿಗೂ ಇರುವ ವ್ಯತ್ಯಾಸ ಕೇವಲ ಪ್ರಮಾಣದ ಹೆಚ್ಚು ಕಡಿಮೆಯ ಮಾತು. ಸ್ವಭಾವವೇನೋ ಎಲ್ಲರಲ್ಲೂ ಒಂದೇ. ಅದನ್ನು ಮನಸ್ಸಿನಲ್ಲಿಟ್ಟು ಕೊಂಡೇ ನಾನು ಗೊಣಗಾಡುವವರನ್ನು ವಿಡಂಬನೆ ಮಾಡಲು ಹೊರಟಿಲ್ಲ, ಆ ಮನೋವೃತ್ತಿಯನ್ನು ಸಹಾನುಭೂತಿಯಿಂದ ಪರಿಶೀಲಿಸಲು ಹೊರಟಿದ್ದೇನೆ.

ದೇವರು ನಮಗೇಕೆ ಈ ಮನೋವೃತ್ತಿಯನ್ನು ಕೊಟ್ಟ! ಇದರಲ್ಲಿ ಏನೋ ಒಂದು ಉದ್ದೇಶವಿರಬೇಕು. ಅದನ್ನು ತಿಳಿಯಬೇಕಾದರೆ ನಾವು ಗೊಣಗಾಟಕ್ಕೂ ರೇಗಾಟಕ್ಕೂ ಇರುವ ವ್ಯತ್ಯಾಸವನ್ನು ಅರ್ಥ ಮಾಡಿಕೊಳ್ಳಬೇಕು. ಇವೆರಡರಲ್ಲಿ ಒಂದಾದರೂ ಎಲ್ಲ ಮನುಷ್ಯರಲ್ಲೂ ಇದ್ದೇ ಇರಬೇಕಾಗುತ್ತದೆ. ಗೊಣಗಾಟವೇ ಮೂಲದೇವರು; ರೇಗಾಟ ಉತ್ಸವವಿಗ್ರಹ. ಗೊಣಗಾಟ ನಮ್ಮಲ್ಲಿ ಸ್ಥಿರವಾಗಿ ನೆಲಸಿ ಸರ್ವದಾ ತನ್ನ ಪ್ರಭಾವವನ್ನು ಬೀರುತ್ತಿರುತ್ತದೆ. ರೇಗಾಟ ಹಠಾತ್ತಾಗಿ ಹೊರಟು ಒಂದು ಸುತ್ತ ತಿರುಗಿಕೊಂಡು ಮರಳಿ ಸ್ವಸ್ಥಾನಕ್ಕೆ ಬರುತ್ತದೆ; ಬಂದು ತನ್ನ ಸತ್ವವನ್ನೆಲ್ಲಾ ಮೂಲ ವಿಗ್ರಹಕ್ಕೆ ಕೊಟ್ಟು ತೆಪ್ಪಗಾಗುತ್ತದೆ. ಉತ್ಸವಮೂರ್ತಿಯನ್ನು ಬಿಜಯಮಾಡಿಸದೆ, ಅದು ಮೂಲ ದೇವರ ಸತ್ವವನ್ನು ವ್ಯಯ ಮಾಡದಂತೆ ನೋಡಿಕೊಳ್ಳುವುದೇ ಬುದ್ಧಿವಂತಿಕೆಯ ಲಕ್ಷಣ. ರೂಪಕವನ್ನು ಬದಲಾಯಿಸ ಬಹುದಾದರೆ, ರೇಗಾಟವನ್ನು ಬಾಂಬಿಗೆ ಹೋಲಿಸಬಹುದು; ಗೊಣಗಾಟವನ್ನು ನಮ್ಮ ದೇಹದಲ್ಲಿ ಸದಾ ನೆಲಸಿ ಮಿತಿಮೀರದೆ ದೇಹವನ್ನು ಕಾಪಾಡುವ ಉಷ್ಣಕ್ಕೆ ಹೋಲಿಸಬಹುದು. ಬಾಂಬಿನ ಕೆಲಸವೇನಿದ್ದರೂ ಅತ್ಯಲ್ಪ ಕಾಲದಲ್ಲಿ, ಒಂದೇ ಒಂದು ಸೆಕೆಂಡಿನಲ್ಲಿ ನಡೆದು ಮುಗಿಯುವಂಥಾದ್ದು. ಅದು ಸಿಡಿದಾಗ ಸುತ್ತಮುತ್ತ ಇರುವ ಜನರನ್ನೂ ವಸ್ತುಗಳನ್ನೂ ನಾಶ ಮಾಡುತ್ತದೆ, ತಾನೂ ನಾಶವಾಗುತ್ತದೆ. ಕೆಲವರು ರೇಗಾಟವನ್ನು 'Safety Valve' ಎಂದು ಕರೆದು ಸಮರ್ಥಿಸುವುದುಂಟು. ಇದು ತಪ್ಪು ತಿಳಿವಳಿಕೆ. ಅದು ರಕ್ಷಣಾವಸ್ಥೆಯೇನಲ್ಲ, ಸರ್ವನಾಶದ ವ್ಯವಸ್ಥೆ. ಅದು ಇತರರನ್ನು ನಾಶಮಾಡಿ ತನ್ನನ್ನಾದರೂ ರಕ್ಷಿಸಿಕೊಳ್ಳುವುದಾದರೆ ಅದನ್ನು ಸಮರ್ಥಿಸಬಹುದು. ಆದರೆ ಕೋಪ ಮಿತಿಮೀರಿ ರೇಗುವವನು ಇತರರನ್ನು ಉರಿಸುವಂತೆ ತನ್ನನ್ನೂ ಉರಿಸಿಕೊಳ್ಳುತ್ತಾನೆ. ಕೋಪವು ಭುಗ್ಗನೆ ಜ್ವಲಿಸಿ ತಾನೂ ಕ್ರಿಯಾಶಕ್ತಿಯನ್ನು ಕಳೆದುಕೊಂಡು ದುರ್ಬಲವಾಗಿ ಬೀಳುತ್ತದೆ. ನಿಜವಾಗಿ ನೋಡಿದರೆ, ನಮ್ಮ ಸ್ವಭಾವದಲ್ಲಿ ದೈವ ನೆಟ್ಟಿರುವ ರಕ್ಷಣಾ ವ್ಯವಸ್ಥೆಯೆಂದರೆ ಗೊಣಗಾಟ. ಅದನ್ನು ಬೆಳೆಸಿಕೊಂಡರೆ ನಾವು ರೇಗುವ ಸಂಭವ ಕಡಿಮೆ; ಇಲ್ಲವೇ ಇಲ್ಲ ಎಂದೂ ಎನ್ನಬಹುದು. ಕ್ಷಣಕಾಲ ಉರಿದೆದ್ದು ಅನಂತರ ತಣ್ಣಗಾಗುವುದಲ್ಲ, ಗೊಣಗಾಟದ ಸ್ವಭಾವ. ವಿದ್ಯುತ್ತಿನ ತಂತಿಯಲ್ಲಿ ಸರ್ವದಾ ಅವಶ್ಯಕವಿದ್ದಷ್ಟು ಮಾತ್ರ ಶಕ್ತಿ ಹರಿದು ನಮಗೆ ಬೆಳಕನ್ನೂ ಶಾಖವನ್ನೂ ಕೊಡುವಂತೆ ಈ ಗೊಣಗಾಟವೂ ಒಂದು ಮಿತಿಯಲ್ಲಿ ಸತತವಾಗಿ ಚೈತನ್ಯವನ್ನು ಕಾಪಾಡುತ್ತದೆ. ರೇಗಾಟವೂ ನಮ್ಮ ದೇಹದಲ್ಲೂ ಮನಸ್ಸಿನಲ್ಲೂ ಸಂಚಿತವಾದ ಚೈತನ್ಯವನ್ನು ಕ್ಷಣಮಾತ್ರದಲ್ಲಿ ದುಂದುವೆಚ್ಚ ಮಾಡಿ ಮುಗಿಸುತ್ತದೆ. ಗೊಣಗಾಟವಾದರೋ ಅದನ್ನು ಸತತವಾಗಿ ಅಲ್ಪ ಪ್ರಮಾಣದಲ್ಲಿ ಒದಗಿಸಿಕೊಡುತ್ತದೆ.

ಉದಾಹರಣೆಗೆ ಆಕಾಶವಾಣಿಗಾಗಿ ಈ ಲೇಖನ ಬರೆಯುವ ಉದ್ಯಮನ್ನೇ ತೆಗೆದು ಕೊಳ್ಳೋಣ. ಇದನ್ನು ಪ್ರಸಾರ ಮಾಡುವ ತಾರೀಖಿಗಿಂತ ಹತ್ತು ದಿನ ಮುಂಚಿತವಾಗಿ ಕಳಿಸಬೇಕೆಂಬ ನಿಯಮವಿದೆ. ನಿಯಮವಿದ್ದ ಕಡೆ ಗೊಣಗಾಟ ಹೆಚ್ಚು. ನೀವು ಹಸ್ತಪ್ರತಿಯನ್ನು ಬರೆಯುವ ಮುನ್ನ 'ಸಾಕಪ್ಪಾ ಈ ಆಕಾಶವಾಣಿಯವರ ಕಾಟ! ಹಸ್ತಪ್ರತಿಯನ್ನು ಹತ್ತು ದಿನ ಮುಂಚೆಯೇ ಕಳಿಸಬೇಕಂತೆ. ಯಾಕೋ ಕಾಣೆ! ಮುಂಚೆ ತರಿಸಿಕೊಂಡು ಇದಕ್ಕೇನು

ಉಪ್ಪು ಹುಳಿ ಕಾರ ಹಾಕಿ ಪಳಗಿಸುತ್ತಾರೇನು? ಅಥವಾ ನಾನು ಬರೆದದ್ದನ್ನು ತಿದ್ದುವ ಧಾಷ್ಟ್ರ್ಯಕ್ಕೆ ಕೈ ಹಾಕುತ್ತಾರೊ' (ಬರಹಗಾರರೆಲ್ಲರಿಗೂ ಇದೊಂದು ಜಂಬವಿದೆ; ತಾನು ಬರೆದದ್ದು ಸರ್ವಾಂಗ ಪರಿಪೂರ್ಣವಾದದ್ದು, ಅದರಲ್ಲಿ ಒಂದೇ ಒಂದು ಅಕ್ಷರವನ್ನು ಬದಲಾಯಿಸಿದರೂ ಏನೋ ಒಂದು ಭಾರಿ ಅನಾಹುತವಾಗುತ್ತದೆ, ಯಥೇಂದ್ರಶತ್ರುಃ ಸ್ವರತ್ಯೋಪರಾಧಾತ್, ಎಂಬ ಜಂಬ) ಎಂದು ಗೊಣಗಾಡುತ್ತೀರಿ; ಇದು ಬರವಣಿಗೆಗೆ ಪೂರ್ವಸಿದ್ಧತೆ. ಗೊಣಗುವುದಕ್ಕೆ ಬದಲು ರೇಗಿದರೆ ಕೆಲಸ ಅಲ್ಲಿಗೇ ನಿಂತು ಹೋಗುತ್ತದೆ; 'ನನ್ನಿಂದ ಈ ಕೆಲಸ ಸಾಧ್ಯವಿಲ್ಲ' ಎಂದು ಆಗಲೆ ಬರೆದುಹಾಕಿ ಕೈತೊಳೆದುಕೊಳ್ಳುತ್ತೀರಿ. ಗೊಣಗಾಟ ಮಾತ್ರ ಇರುವುದರಿಂದ ಭಾಷಣ ಬರೆಯಬೇಕೆಂಬ ವಿಷಯ ಮನಸ್ಸಿನಲ್ಲಿ ಜೀವಂತವಾಗಿ ನಿಲ್ಲುತ್ತದೆ. ನಾಲ್ಕಾರು ದಿನ ಹೀಗೆಯೇ ಕಳೆದ ಮೇಲೆ ಕಾಗದ ಕಡ್ಡಿಗಳನ್ನು ಹುಡುಕುವ ಕೆಲಸ. 'ನನ್ನ ಫ್ಲೌಂಟನ್ ಪೆನ್ ಎಲ್ಲಿ ಹೋಯಿತು? ಇಲ್ಲೇ ಮೇಜಿನ ಮೇಲೆ ಇದ್ದದ್ದು ಮಾಯವಾಗಿ ದೆಯಲ್ಲ? ಈ ಫ್ಲೌಂಟನ್ ಪೆನ್?' ಕೂಗಿದರೆ ಯಾರಾದರೂ ಉತ್ತರ ಕೊಟ್ಟರೆ ಸರಿ! – ಇತ್ಯಾದಿ ರೇಗುವ ಸ್ವಭಾವದವರಾದರೆ ಆಗಿನ ವರ್ತನೆಯೇ ಬೇರೆ. ಮನೆಯ ಹುಡುಗರನ್ನೆಲ್ಲಾ ಮನಸ್ಸಿ ಬಯ್ದು, ಬಹುಶಃ ಒಂದೆರಡು ಪೆಟ್ಟು ಕೊಟ್ಟು, ಹೆಂಡತಿಯ ಬಾಯಿಂದ 'ನಿಮ್ಮ ಪದಾರ್ಥ ನೀವು ನೋಡಿಕೊಳ್ಳದೆ ಹುಡುಗರ ಮೇಲೆ ಯಾಕೆ ರೇಗುತ್ತೀರಿ!' ಎಂಬ ಕಠಿಣವಾದ – ಆದರೆ ನ್ಯಾಯವಾದ – ಮಾತನ್ನು ಕೇಳಿ ಮತ್ತಷ್ಟು ರೇಗಿ, ಆ ವೇಳೆಗೆ ಕಣ್ಣೆದುರಿಗೆ ಕಂಡುಬರುವ ಪೆನ್ನನ್ನು ಮೇಜಿನ ಮೇಲೆ ಕುಕ್ಕಿ 'ಹಾಳಾಯಿತು' ಎಂದು ಕಿರಿಚಿ ಹೊರಟು ಹೋಗುತ್ತೀರಿ. ನಿಮ್ಮ ಮನಸ್ಸು ಆಗ ಇರುವ ಸ್ಥಿತಿಯಲ್ಲಿ ಬರವಣಿಗೆ ಸಾಧ್ಯವಲ್ಲ.

ಪ್ರಪಂಚದಲ್ಲಿ ಈಗ ಇರುವ, ಅಥವಾ ಮುಂದೆ ಅಸ್ತಿತ್ವಕ್ಕೆ ಬರಬಹುದಾದ, ಯಾವುದಾದರೂ ಗೊಣಗಾಟಕ್ಕೆ ವಿಷಯವಾಗಬಹುದು. ಆದರೆ ಅದಕ್ಕೆ ಮುಖ್ಯವಾಗಿ ಸಾಮಗ್ರಿಯನ್ನು ಒದಗಿಸುವ ಕ್ಷೇತ್ರಗಳು ಎರಡಿವೆ. ಒಂದು, ರಾಷ್ಟ್ರದ ಆಡಳಿತ ವ್ಯವಸ್ಥೆ; ಇನ್ನೊಂದು; ನಮ್ಮ ಸ್ವಂತ ಮನೆಯಲ್ಲಿರುವ ಅವ್ಯವಸ್ಥೆ. ಎಲ್ಲ ಕಾಲದಲ್ಲೂ, ಎಲ್ಲ ರಾಷ್ಟ್ರಗಳಲ್ಲೂ ಅವ್ಯವಸ್ಥೆ ಹೆಚ್ಚು ಕಡಿಮೆ ಇದ್ದೇ ಇತ್ತು; ಪೌರಜಾನಪದರು ಅದನ್ನು ಟೀಕಿಸುತ್ತಲೇ ಇದ್ದರು. 'ರಾಮೇ ರಾಜ್ಯಂ ಪ್ರಶಾಸತಿ' ಎನ್ನಬಹುದಾಗಿದ್ದ ಕಾಲದಲ್ಲೂ ಎಲ್ಲರೂ ಸರ್ವಲಕ್ಷಣ ಸಂಪನ್ನರಾಗಿರಲಿಲ್ಲ. ಧರ್ಮಪರಾಯಣರಾಗಿರಲಿಲ್ಲ –ಇದ್ದರೆಂದು ವಾಲ್ಮೀಕಿ ಹೇಳಿದರೆ ಅದು ಕ್ಷಮಾರ್ಹವಾದ ಉತ್ಪ್ರೇಕ್ಷೆ. ಇನ್ನು ಈ ಕಲಿಗಾಲದ ಮಾತನ್ನಂತೂ ಹೇಳಬೇಕಾಗಿಯೇ ಇಲ್ಲ. ಸರ್ಕಾರದವರು ಯದ್ವಾತದ್ವಾ ತೆರಿಗೆಗಳನ್ನು ಹೇರುತ್ತಿದ್ದಾರೆ, ಪದಾರ್ಥಗಳ ಬೆಲೆ ಏರುತ್ತಿದೆ, ಬಂಡವಾಳಗಾರರು ನಮ್ಮನ್ನು ಸುಲಿದು ತಾವು ಕೋಟ್ಯಾಧೀಶ್ವರರಾಗುತ್ತಿದ್ದಾರೆ, ಎಲ್ಲೆಲ್ಲೂ ಲಂಚಕೋರತನ ಹೆಚ್ಚುತ್ತಿದೆ, ಕೂಲಿಗಾರರು ಸಂಪು ಮಾಡಿ ಅಶಾಂತಿಯನ್ನು ಹರಡುತ್ತಿದ್ದಾರೆ – ಅಂತೂ ಯಾರೊಬ್ಬರಿಗೂ ಬುದ್ಧಿಯಿಲ್ಲ! ರೈಲುಗಳನ್ನು ನೋಡಿ, ಎಷ್ಟು ತಡವಾಗಿ ಬರುತ್ತಿವೆ! ಬಸ್ಸುಗಳನ್ನು ನೋಡಿ, ನಡುದಾರಿಯಲ್ಲಿ ನಿಂತುಹೋಗುತ್ತೆ! ಬೆಳಿಗ್ಗೆ ವೃತ್ತಪತ್ರಿಕೆಯನ್ನು ತೆಗೆದರೆ ಮೊದಲು ಕಣ್ಣಿಗೆ ಬೀಳುವುದೆಂದರೆ ವಿಮಾನದ, ರೈಲಿನ, ಮೋಟಾರಿನ, ಅಪಘಾತ! ದೇವರು ಕೊಟ್ಟ ಗಾಳಿ ನೀರುಗಳಿಗೂ ಅಭಾವದ ಕಾಲ ಬಂದಿದೆ. ಮೋಟಾರುಗಳ ಹೊಗೆಯಿಂದ ಗಾಳಿ ಕೆಟ್ಟಿದೆ, ನೀರಿಗಾಗಿ ಕಣ್ಣೀರು ಕರೆಯಬೇಕು! – ಇಂಥ ಗೊಣಗಾಟವಿರುವ ಕಡೆ ಕ್ರಾಂತಿಯಾಗುವುದಿಲ್ಲ. ಆದರೆ ಪ್ರಗತಿಗೆ ಕಾರಣವಾದ ಅಸಂತೃಪ್ತಿ ಮಾತ್ರ ಇರುತ್ತದೆ. ಗೊಣಗಾಟಕ್ಕೆ ಬದಲಾಗಿ ರೇಗಾಟ

ಮೊದಲಾದರೆ ಹಠಾತ್ತಾಗಿ ಜನ ರೊಚ್ಚಿಗೆದ್ದು ಕ್ರಾಂತಿಯನ್ನೆಬ್ಬಿಸುತ್ತಾರೆ; ರಕ್ತಪಾತವಾಗುತ್ತದೆ. ಇದ್ದ ಬದ್ದ ವ್ಯವಸ್ಥೆಯೂ ನಾಶವಾಗುತ್ತದೆ. ಗೊಣಗುವವರು ಇದ್ದ ಕಡೆ ಜೀವನ ಪಠ ಹಠಾತ್ತಾದ ಬದಲಾವಣೆಗಳಿಲ್ಲದೆ ಸಾವಧಾನವಾಗಿ ಸಾಗುತ್ತದೆ. ಜೀವನದ ನದಿಯಲ್ಲಿ ಮಹಾಪೂರ ಬಂದು ಎಲ್ಲವನ್ನೂ, ಕೊಚ್ಚಿಕೊಂಡು ಹೋಗುವುದಿಲ್ಲ. ಗೊಣಗಾಟ ಸಂಯಮದಲ್ಲಿರುವ ಅಸಂತೃಪ್ತಿ, ರೇಗಾಟ ಆಸ್ಫೋಟಿಸುವ ಅಸಂತೃಪ್ತಿ.

'ನಾವು ಗೊಣಗಾಡುವುದೇನೋ ಸರಿಯೇ, ಆದರೆ ಮನೆಯಲ್ಲಿ ನಮ್ಮ ಮಾತನ್ನು ಸದಾ ಕೇಳುತ್ತಿರಬೇಕಾದವರ ಗತಿಯೇನು? ಎನ್ನುವಿರೇನೊ. ಅವರಿಗೆ ಏನೂ ಅನ್ಯಾಯ ಮಾಡಿದಂತಾಗುವುದಿಲ್ಲ. ಅನುಗಾಲವೂ ಗೊಣಗುವವರು ಇರುವ ಮನೆಯಲ್ಲಿ ಹೆಚ್ಚಿನ ಜಗಳಕ್ಕೆ ಅವಕಾಶವಿರುವುದಿಲ್ಲ. ನೀವು ರೇಗಿದರೆ ತಾನೆ ಮನೆಯವರು ನಿಮ್ಮ ಮೇಲೆ ರೇಗುವುದು? ನಿಮ್ಮ ಗೊಣಗಾಟ ಕ್ರಮೇಣ ಮನೆಯವರಿಗೆಲ್ಲಾ ಅಭ್ಯಾಸವಾಗುತ್ತದೆ; ನಿಮ್ಮ ಬೇಸರದ ದನಿ ಅವರಿಗೆ ಚಿರಪರಿಚಿತನಾದ ಸ್ನೇಹಿತನಂತಾಗುತ್ತದೆ; ಮುಗುಳುನಗೆ ನಕ್ಕು ಅದಕ್ಕೆ ಸಹನೆ ತೋರಿಸುತ್ತಾರೆ. 'ಅವರ ಪೆನ್ ಕಣ್ಣಿಗೆ ಕಾಣುವಂತೆ ಇಡಪ್ಪ' ಎಂದು ತಾಯಿ ಮಕ್ಕಳಿಗೆ ಹೇಳುತ್ತಾಳೆ. ಮಕ್ಕಳು 'ಅವರಿಟ್ಟ ಕಡೆಯಲ್ಲೇ ಇರಲಮ್ಮ, ತಮಾಷೆ ನೋಡೋಣ' ಎಂದು ನಗುತ್ತಾರೆ. ಸಂಸಾರ ಸುಮುಖವಾಗಿ ಸಾಗುತ್ತದೆ.

ಗೊಣಗಾಟವನ್ನು ಪ್ರಯತ್ನ ಪೂರ್ವಕವಾಗಿ ಬೆಳೆಸಿಕೊಳ್ಳಿ ಎಂದೇನೂ ನಾನು ಸಲಹೆ ಕೊಡುತ್ತಿಲ್ಲ. ನಾನು ಮೊದಲೇ ಹೇಳಿದಂತೆ ಅದು ನೈಸರ್ಗಿಕವಾದ ಗುಣವಾದ್ದರಿಂದ ಅದನ್ನು ಬೆಳೆಸಲು ಪ್ರಯತ್ನವೇ ಬೇಕಿಲ್ಲ. ಅದು ಆಸ್ಫೋಟಕ ವಸ್ತುವಾಗಿ ಮಾರ್ಪಡದಂತೆ ಹದದಲ್ಲಿಟ್ಟುಕೊಂಡರೆ ಸಾಕು.

ಕವಿ ಕೃತಿ ಪರಿಚಯ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಬೋಧನೆ ಮಾಡಿದ ಹಾಗೂ ಹಲವಾರು ಪ್ರಶಸ್ತಿ ವಿಜೇತರಾದ ಮೂರ್ತಿರಾಯರು (ಚಿತ್ರ ೬ ನೋಡಿ) ಸುಮಾರು ೧೯ ಕೃತಿಗಳನ್ನು, ಅನುವಾದ, ಸೃಜನೇತರ ಸಾಹಿತ್ಯ ಹಾಗೂ ವಿಮರ್ಶಾ ಗ್ರಂಥಗಳು ಸೇರಿದಂತೆ ರಚಿಸಿದ್ದಾರೆ. ಆದರೆ ಪ್ರಬಂಧ ಸಾಹಿತ್ಯ ಅವರ ವಿಶಿಷ್ಟವಾದ ಸಾಧನೆ. ಕನ್ನಡದಲ್ಲಿ ಲಲಿತ ಪ್ರಬಂಧ ಪ್ರಕಾರಕ್ಕೆ ಒಂದು ವಿಶಿಷ್ಟವಾದ ಸ್ಥಾನವನ್ನು ಗಳಿಸಿಕೊಟ್ಟವರು ಎ.ಎನ್. ಮೂರ್ತಿರಾವ್



ಚಿತ್ರ ೬: ಎ.ಎನ್. ಮೂರ್ತಿರಾವ್

(೧೯೦೦ –೨೦೦೩) ಅವರು. ಲಲಿತ ಪ್ರಬಂಧವನ್ನು ವಿಭಿನ್ನ ವಸ್ತು ಹಾಗೂ ಅದರ ಲವಲವಿಕೆಯಿಂದ ಕೂಡಿದ ನವಿರು, ಲಾಲಿತ್ಯ ಹಾಗೂ ಲಘು ಹಾಸ್ಯಗಳ ಮೂಲಕ ವಿಶೇಷತೆಯನ್ನು ಸಾಧಿಸಿದ್ದಾರೆ. 'ಹಗಲು ಗನಸುಗಳು', 'ಅಲೆಯುವ ಮನ', 'ಮಿನುಗುಮಿಂಚು' ಅವರ ಲಲಿತ ಪ್ರಬಂಧ ಸಂಕಲನಗಳಾಗಿವೆ. ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಕೃತಿರಚನೆ ಮಾಡಿರುವ ಇವರ 'ದೇವರು' (೧೯೯೩) ಕೃತಿಗೆ ಪಂಪ ಪ್ರಶಸ್ತಿ ದೊರೆತಿದ್ದು ಅದು ತನ್ನ ನಿರೀಶ್ವರವಾದಿ ಚಿಂತನೆಯಿಂದಾಗಿ ಸಾಕಷ್ಟು ಚರ್ಚಿತವಾದ ಕೃತಿಯಾಗಿದೆ. 'ಚಿತ್ರಗಳು ಪತ್ರಗಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ಇದಲ್ಲದೆ ಇವರು ಮೂರು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಪ್ರತಿಭಾನ್ವಿತ ಸಾಹಿತಿ.

'ಗೊಣಗುವ ಚಟ' ಎಂಬುದು ಮನುಷ್ಯನ ನೈಸರ್ಗಿಕವಾದ ಒಂದು ಸ್ವಭಾವವೇ ಆಗಿರುವುದರಿಂದ ಅದು 'ರೇಗುವಿಕೆಯಷ್ಟು ಅಪಾಯಕಾರಿಯಲ್ಲ' ಎಂದು ಗೊಣಗುವವರ ಪರ ವಹಿಸುವ ಪ್ರಬಂಧಕಾರರು ಗೊಣಗಾಟದೊಂದಿಗೆ ಮನುಷ್ಯನ ಇನ್ನಿತರ ಸ್ವಭಾವ ಚಟಗಳನ್ನೂ ಹೋಲಿಸುವ ವಿಶ್ಲೇಷಿಸುವ ರೀತಿಯೇ ಅತ್ಯಂತ ಸ್ವಾರಸ್ಯಕರವಾಗಿದ್ದು ಓದುಗರನ್ನು ನಗಿಸಿ, ಹೃದಯ, ಮನಸ್ಸುಗಳನ್ನು ಹಗುರವಾಗಿಸುವ ಅವರ ಶೈಲಿಯನ್ನು ಈ ಪ್ರಬಂಧದಲ್ಲಿ ಗಮನಿಸಬಹುದು.

ಅಭ್ಯಾಸ ೧

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಮನುಷ್ಯನ ಗೊಣಗುವಿಕೆಯ ಹಿಂದಿರುವ ಅತೃಪ್ತಿಯನ್ನು ತಿಳಿಸಿ.

೨. ಲೇಖಕರಿದ್ದ ಸಂಸ್ಥೆಯಲ್ಲಿ ಸ್ಥಾಪನೆಯಾದ ಕ್ಲಬ್ಬಿನ ಉದ್ದೇಶವೇನು?

೩. ಲೇಖಕರ ಪ್ರಕಾರ ಗೊಣಗಾಟಕ್ಕೂ ರೇಗಾಟಕ್ಕೂ ಇರುವ ವ್ಯತ್ಯಾಸವೇನು?

೪. ಗೊಣಗಾಟ ಮತ್ತು ರೇಗಾಟ ಇವೆರಡರಲ್ಲಿ ಯಾವುದು ಹೆಚ್ಚು ಅಪಾಯಕಾರಿ? ವಿವರಿಸಿ.

೫. ಮನುಷ್ಯನ ಗೊಣಗುವ ಚಟದ ವಿಷಯಗಳಾವುವು?

ಅಭ್ಯಾಸ ೨

ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದವನ್ನು ತುಂಬಿಸಿ.

೧. ಚಳಿಮಳೆಯನ್ನು ಹೇಗಾದರೂ ತಡೆಯಬಹುದು ---------- ಮಾತ್ರ ತಡೆಯುವುದಕ್ಕಾಗುವುದಿಲ್ಲ.

೨. ಗೊಣಗಾಟ ಮೂಲದೇವರಾದರೆ, ರೇಗಾಟ ----------.

೩. ಗೊಣಗಾಟ ಸಂಯಮದಲ್ಲಿರುವ ಅತೃಪ್ತಿಯಾದರೆ, ರೇಗಾಟ ---------- ಅಸಂತೃಪ್ತಿ.

೪. ಲೇಖಕರು ತಾವಿದ್ದ ಸಂಸ್ಥೆಯಲ್ಲಿ ---------- ಸ್ಥಾಪಿಸಿದರು.

೫. ಸ್ವಾಭಾವಿಕ ಹಾಗೂ ನೈಸರ್ಗಿವಾದ ಚಟ ----------.

ಅಭ್ಯಾಸ ೨ಕ್ಕೆ ಉತ್ತರಗಳು

೧. ಈ ಸೆಖೆಯನ್ನು
೨. ಉತ್ಸವಮೂರ್ತಿ
೩. ಆಸ್ಫೋಟಿಸುವ
೪. ಕ್ಲಬ್
೫. ಗೊಣಗುವ ಚಟ

೧೦.೫. ಸಾರಾಂಶ

ವಾಸ್ತವಿಕತೆ ಹಾಗೂ ಕಾಲ್ಪನಿಕತೆಯ ಸಾಹಿತ್ಯ ಮತ್ತು ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯಗಳು ಆಧುನಿಕ ವಿಮರ್ಶೆಯ ಸಂದರ್ಭದಲ್ಲಿ ತೀವ್ರ ವಾಗ್ವಾದಕ್ಕೊಳಗಾದ ಸಾಹಿತ್ಯಿಕ ಪರಿಕಲ್ಪನೆಗಳು. ಸೃಜನಶೀಲ ಸಾಹಿತ್ಯ ರೂಪನಿಷ್ಠ ವಿಮರ್ಶೆಯ ಸಂಕಥನದಲ್ಲಿ ಅಧ್ಯಯನಗಳ ಕೇಂದ್ರ ಸ್ಥಾನವನ್ನು ಪಡೆದುಕೊಂಡಿತು. ಆದರೆ ಇತ್ತೀಚಿನ ವಿಮರ್ಶಾ ಸಂಕಥನಗಳಾದ ಆಧುನಿಕೋತ್ತರ ಹಾಗೂ ವಸಾಹತೋತ್ತರ ಸಂಕಥನಗಳಲ್ಲಿ ಸೃಜನಶೀಲ ಹಾಗೂ ಸೃಜನೇತರ ಸಾಹಿತ್ಯರೂಪಗಳನ್ನು ವಿಭಜಿಸಿ ನೋಡುವ ಬಗ್ಗೆ ಹಾಗೂ ಅವುಗಳನ್ನು ತಾರ್ಕಿಕ ವೈರುಧ್ಯ ಗಳನ್ನಾಗಿ ಪರಿಗಣಿಸುವ ಬಗ್ಗೆ ಆಕ್ಷೇಪಣೆಗಳು ಎದ್ದಿವೆ. ಎಲ್ಲಕ್ಕಿಂತ ಮಿಗಿಲಾಗಿ ಕೃತಿಗಳಲ್ಲಿ ಸಾಮಾಜಿಕ ಆಯಾಮಗಳನ್ನು ಓದುವ ಕ್ರಮದ ಬೆಳವಣಿಗೆಯಿಂದಾಗಿ ಸೃಜನೇತರ ಕೃತಿಗಳನ್ನು ಮೌಲಿಕ ಸಾಮಾಜಿಕ ದಾಖಲಾತಿಗಳಾಗಿ ನೋಡುವ ಅಧ್ಯಯನಗಳು ಬರುತ್ತವೆ. ಆದ್ದರಿಂದ ಇಂತಹ ಓದುಗಳಿಗೆ ಹಿನ್ನೆಲೆಯಾಗಿರುವ ಕೃತಿಗಳು ಪಠ್ಯಕ್ರಮದ ಅಂಗವಾಗುವ ಅಗತ್ಯವಿದೆ. ಈ ದೃಷ್ಟಿಯಿಂದ ಜೀವನ ಚರಿತ್ರೆ, ಪ್ರವಾಸ ಸಾಹಿತ್ಯ, ಆತ್ಮಕಥನ ಹಾಗೂ ಪ್ರಬಂಧ ಸಾಹಿತ್ಯಗಳ ಬಗ್ಗೆ ಪರಿಚಯಾತ್ಮಕ ಲೇಖನ ಹಾಗೂ ಪ್ರಾತಿನಿಧಿಕ ಪಠ್ಯ ಮತ್ತು ಲೇಖಕರ ಕಿರು ಪರಿಚಯವನ್ನು ಅಭ್ಯಾಸಕ್ಕೆಂದು ಇಲ್ಲಿ ನೀಡಲಾಗಿದೆ.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಆರ್. ತಾರಾಮಣಿ**

ಘಟಕ ೧೧

ಅನುವಾದ: ಲೇಖನ ಮತ್ತು ಉದಾಹರಣೆಗಳು

ಹಿನ್ನೆಲೆ

ಅನುವಾದ ಮೂಲಭೂತವಾಗಿ ಯೂರೋಪಿನ ಸಂಪರ್ಕದ ಪರಿಣಾಮವಾಗಿ ಬಂದ ಪರಿಕಲ್ಪನೆ. ಹೀಗಾಗಿ ಅದರ ತಾತ್ವಿಕ ಹಾಗೂ ಅಧ್ಯಯನಕ್ರಮಗಳು ಯೂರೋಪಿನ ಪರಿಕಲ್ಪನೆಗಳ ಚರ್ಚೆಯೇ ಆಗಿದೆ. ಹಾಗೆಂದರೆ ಭಾರತೀಯ ಅನುವಾದ ಪರಂಪರೆ ಇರಲಿಲ್ಲವೆಂದಲ್ಲ. ಸಂಸ್ಕೃತ, ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಹೇರಳವಾಗಿ ಅನುವಾದ ಕನ್ನಡ ಸಾಹಿತ್ಯದ ಉಗಮ ಕಾಲದಿಂದ ಆಗುತ್ತಲೇ ಬಂದಿದೆ. ಕ್ವಚಿತ್ತಾಗಿ ಕನ್ನಡದಿಂದ ಸಂಸ್ಕೃತಕ್ಕೆ ಅನುವಾದಗಳು ಆಗಿರುವುದನ್ನೂ ನಾವು ಕಾಣಬಹುದು. ವಡ್ಡಾರಾಧನೆಯಿಂದ ಆರಂಭವಾದ ಈ ಅನುವಾದ ಪ್ರಕ್ರಿಯೆ ಮುಂದುವರೆಯುತ್ತಲೇ ಬಂದಿದೆ. ಇಂತಹ ಅನುವಾದ ಪ್ರಕ್ರಿಯೆಯನ್ನು ಎ.ಕೆ. ರಾಮಾನುಜನ್ 'ಟೆಲ್ಲಿಂಗ್ಸ್' ಅಂದರೆ 'ಹೇಳುವಿಕೆಗಳು' ಎಂದು ನಿರ್ದೇಶಿಸಿದ್ದಾರೆ. ಇಂತಹ ಹೇಳುವಿಕೆಯ ಅನುವಾದಗಳಲ್ಲಿ ಮೂಲ ಕೃತಿ ಹಾಗೂ ಅನುವಾದಿತ ಕೃತಿಗಳ ನಡುವೆ ಒಂದು 'ಇಂಡೆಕ್ಸಿಕಲ್' ಆದ ಸಂಬಂಧವಿದ್ದು ಅನುವಾದಕ ಸಂಸ್ಕೃತಿಯ ರೂಢಿಗಳಿಗೆ ಅನುಗುಣವಾಗಿ ಹೊಸ ಕೃತಿಯೊಂದನ್ನು ಕಟ್ಟಿಕೊಡುತ್ತಾನೆ. ನಂತರ ಪಾರಸೀ ಭಾಷೆಯ ಸಂಪರ್ಕ ಆರಂಭವಾದ ನಂತರದಲ್ಲಿ ಸಂಸ್ಕೃತ ಮತ್ತು ಪಾರಸಿ ಭಾಷೆಗಳ ನಡುವೆ ಹೇರಳವಾಗಿ ಸಾಹಿತ್ಯಿಕ ಹಾಗೂ ಶಾಸ್ತ್ರಗಳ ಕೊಡುಕೊಳೆ ನಡೆದಿದೆ. ಆದರೆ ಈ ಮಧ್ಯಕಾಲೀನ ಅನುವಾದಗಳ ಬಗ್ಗೆ ಚರ್ಚೆ ನಡೆದಿರುವುದು ತೀರಾ ಕಡಿಮೆ. ಆಧುನಿಕ ಅನುವಾದಕ್ಕೆ ಸಂಬಂಧಿಸಿದಂತೆ ಸುಮಾರು ೧೯೭೦ರ ಸುಮಾರಿಗೆ ಸಾಹಿತ್ಯ ಹಾಗೂ ಮಾನವಿಕ ಶಿಸ್ತುಗಳಲ್ಲಿ ತಲೆದೋರಿದ 'ಭಾಷಿಕ ತಿರುವು' (ಲಿಂಗ್ವಿಸ್ಟಿಕ್ ಟರ್ನ್) ಹಾಗೂ ೧೯೯೦ರ ಸುಮಾರಿಗೆ ಆರಂಭವಾದ 'ಸಾಂಸ್ಕೃತಿಕ ತಿರುವು' (ಕಲ್ಚರಲ್ ಟರ್ನ್)ಗಳು ಅನುವಾದದ ತಾತ್ವಿಕ ಹಾಗೂ ಅಧ್ಯಯನಕ್ರಮಗಳನ್ನು ಗಮನಾರ್ಹವಾಗಿ ಬದಲಿಸಿದೆ. ಈ ಬೆಳವಣಿಗೆಗಳಿಂದಾಗಿ ಅನುವಾದ ಅಧ್ಯಯನಗಳು ಎಂಬ ಹೊಸ ಶಿಸ್ತು ರೂಪುಗೊಂಡಿದೆ. ಈ ಹಿನ್ನೆಲೆಯಲ್ಲಿ ಈ ಘಟಕವು ಕೆಳಕಂಡ ವಿಷಯಗಳ ಬಗ್ಗೆ ವಿವರಣೆಯನ್ನು ನೀಡುತ್ತದೆ: ೧. ಅನುವಾದ ಪ್ರಕ್ರಿಯೆಯ ಮೂಲಭೂತ ಅಂಶಗಳು; ೨. ಅನುವಾದದ ಅರ್ಥ, ವ್ಯಾಖ್ಯೆಗಳು, ಪ್ರಕಾರಗಳು, ಸಂಕ್ಷಿಪ್ತ ಇತಿಹಾಸ; ೩. ವಿವಿಧ ಬಗೆಯ ಪಠ್ಯಗಳನ್ನು, ವಿಭಿನ್ನ ಓದುಗರಿಗೆ ಸೂಕ್ತ ರೀತಿಯಲ್ಲಿ ಅನುವಾದಿಸುವ ತಂತ್ರಗಳ ಪರಿಚಯ; ೪. ಅನುವಾದಕರು ನಿಭಾಯಿಸಬೇಕಾದ ಜವಾಬ್ದಾರಿಗಳು ಹಾಗೂ ೫. ಅನುವಾದದ ವಿವಿಧ ಆಯಾಮಗಳಿಗೆ ಸೂಕ್ತ ಪ್ರಾತಿನಿಧಿಕ ನಿದರ್ಶನಗಳನ್ನು ಕೊಡುವ ಮೂಲಕ ವಿವರಣೆ.

೧೧.೦. ಉದ್ದೇಶ

೧. ಈ ಅಭ್ಯಾಸ ಘಟಕದ ಮೂಲಕ ಅನುವಾದ ಪ್ರಕ್ರಿಯೆಯ ಮೂಲಭೂತ ಅಂಶಗಳನ್ನು ತಿಳಿದುಕೊಳ್ಳಬಹುದು.

೨. ಅನುವಾದದ ಅರ್ಥ, ವ್ಯಾಖ್ಯೆಗಳು, ಪ್ರಕಾರಗಳು, ಸಂಕ್ಷಿಪ್ತ ಇತಿಹಾಸಗಳನ್ನು ತಿಳಿದು ಕೊಳ್ಳಬಹುದು.

೩. ವಿವಿಧ ಬಗೆಯ ಪಠ್ಯಗಳನ್ನು, ವಿಭಿನ್ನ ಓದುಗರಿಗೆ ಸೂಕ್ತ ರೀತಿಯಲ್ಲಿ ಅನುವಾದಿಸುವ ತಂತ್ರಗಳನ್ನು ತಿಳಿದುಕೊಳ್ಳಬಹುದು.

೪. ಅನುವಾದಕರು ನಿಭಾಯಿಸಬೇಕಾದ ಜವಾಬ್ದಾರಿಗಳ ಬಗ್ಗೆ ತಿಳಿದುಕೊಳ್ಳಬಹುದು.

೫. ಅನುವಾದದ ವಿವಿಧ ಆಯಾಮಗಳಿಗೆ ಸೂಕ್ತ ಪ್ರಾತಿನಿಧಿಕ ನಿದರ್ಶನಗಳನ್ನು ಕೊಡಲಾಗಿದೆ.

ವಿಷಯಾನುಕ್ರಮಣಿಕೆ

೧೧.೦. ಉದ್ದೇಶ
೧೧.೧. ಪೀಠಿಕೆ
೧೧.೧.೨. ಇತಿಹಾಸ–ಭಾರತೀಯ ಮತ್ತು ಐರೋಪ್ಯ
೧೧.೧.೩. ಅನುವಾದ ಕ್ಷೇತ್ರದಲ್ಲಿ ಉದ್ಯೋಗಾವಕಾಶ
೧೧.೨. ಅನುವಾದದ ಅರ್ಥ ಮತ್ತು ವ್ಯಾಖ್ಯೆಗಳು
೧೧.೨.೧. ಅನುವಾದ ಅರ್ಥ
೧೧.೨.೨. ಅನುವಾದದ ಕೆಲವು ವ್ಯಾಖ್ಯೆಗಳು
೧೧.೨.೩ ಅನುವಾದ ಪ್ರಕ್ರಿಯೆ
೧೧.೨.೪. ಅನುವಾದದ ಪ್ರಮುಖ ಸಿದ್ಧಾಂತಗಳು
೧೧.೩. ಅನುವಾದದ ಪ್ರಕಾರ ಮತ್ತು ಪ್ರಭೇದಗಳು
೧೧.೩.೧. ಪ್ರಕಾರಗಳು
೧೧.೩.೨. ಅನುವಾದದ ಪ್ರಭೇದಗಳು
೧೧.೪. ಪ್ರಮುಖ ಪರಿಕಲ್ಪನೆಗಳು ಮತ್ತು ತಂತ್ರಗಳು
೧೧.೪.೧. ಪ್ರಮುಖ ಪರಿಕಲ್ಪನೆಗಳು
೧೧.೪.೨. ಅನುವಾದದ ತಂತ್ರಗಳು
೧೧.೪.೩. ಅನುವಾದಕನ ಜವಾಬ್ದಾರಿಗಳು
೧೧.೫. ಅನುವಾದದ ವಿಧಾನಗಳು ಮತ್ತು ಸವಾಲುಗಳು
೧೧.೫.೧. ಸಾಹಿತ್ಯಿಕ ಪಠ್ಯಗಳನ್ನು ಅನುವಾದಿಸುವ ವಿಧಾನಗಳು
೧೧.೫.೨. ತಾರ್ಕಿಕ ಪಠ್ಯಗಳನ್ನು ಅನುವಾದಿಸುವ ವಿಧಾನಗಳು
೧೧.೫.೩. ವ್ಯಾವಹಾರಿಕ ಮತ್ತು ಶಾಸಕೀಯ ಪಠ್ಯಗಳನ್ನು ಅನುವಾದಿಸುವ ವಿಧಾನಗಳು
೧೧.೫.೪. ಅನುವಾದಿಸುವಾಗ ಎದುರಾಗುವ ಸವಾಲುಗಳು
೧೧.೬. ಸಾರಾಂಶ

೧೧.೧. ಪೀಠಿಕೆ

೧೧.೧.೧. ಮಹತ್ವ

ಅನುವಾದವೆನ್ನುವುದು ಅಂತರಭಾಷಿಕ ಸಂವಹನವನ್ನು ಸಾಧ್ಯಗೊಳಿಸುವ ಪ್ರಕ್ರಿಯೆ. ಈ ನಿಟ್ಟಿನಲ್ಲಿ ನಾವು ಭಾಷೆಯೆಂಬ ಪದವನ್ನು ಅದರ ವಿಶಾಲಾರ್ಥದಲ್ಲಿ ಗ್ರಹಿಸಬೇಕು. ಅಂದರೆ, ಕನ್ನಡ ಭಾಷೆಯಿಂದ ಹಿಂದಿ ಭಾಷೆಗೆ ಹೇಗೋ, ಹಾಗೆಯೇ ಕನ್ನಡ ಭಾಷೆಯೊಳಗೂ ಇರುವ ಉಪಭಾಷೆ / ಆಡುನುಡಿಗಳ ನಡುವೆಯೂ ಅನುವಾದ ಆಗುತ್ತಿರುತ್ತದೆ. ಎರಡು ಭಾಷೆಗಳ ನಡುವಿನ ರೂಪ–ಅರ್ಥಗಳ ವ್ಯವಹಾರವನ್ನು ಸೂಚಿಸಲು ಕನ್ನಡದಲ್ಲಿ ಅನುವಾದ, ಭಾಷಾಂತರ, ತರ್ಜುಮೆ, ಇತ್ಯಾದಿ ಶಬ್ದಗಳ ಬಳಕೆಯಾಗುತ್ತದೆ. ಅನುವಾದಕ್ಕೆ ಆಂಗ್ಲ ಭಾಷೆಯಲ್ಲಿರುವ 'ಟ್ರಾನ್ಸಲೇಶನ್' ಪದಕ್ಕೆ ಸಮಾನಾರ್ಥದಲ್ಲಿಯೂ ಅನುವಾದ ಪದದ ಬಳಕೆ ಇದೆ. ಒಂದು ಸ್ತರದಲ್ಲಿ ಈ ಪದಗಳೆಲ್ಲ ಸೂಚಿಸುತ್ತಿರುವ ವಿದ್ಯಮಾನ ಒಂದೇ ಆಗಿದ್ದರೂ ಕೂಡ, ಈ ಪದಗಳಿಗಿರುವ ಇತಿಹಾಸ ಮತ್ತು ಅವು ಸೂಚಿಸುವ ಪರಿಕಲ್ಪನೆಗಳಲ್ಲಿ ಅಷ್ಟಿಷ್ಟು ವ್ಯತ್ಯಾಸವಿರುವುದನ್ನು ವಿದ್ವಾಂಸರು ಚರ್ಚಿಸಿದ್ದಾರೆ.

ಅನುವಾದವೆಂದರೆ ಮೂಲಭಾಷೆಯಲ್ಲಿರುವುದನ್ನು (ಸೋರ್ಸ್ ಲಾಂಗ್ವೇಜ್) ಲಕ್ಷ್ಯಭಾಷೆಗೆ (ಟಾರ್ಗೆಟ್ ಲಾಂಗ್ವೇಜ್) ಒಯ್ಯುವ ವ್ಯವಹಾರ. ಈ ಪ್ರಕ್ರಿಯೆಯಲ್ಲಿ ಮೂಲಪಠ್ಯದ (ಸೋರ್ಸ್ ಟೆಕ್ಸ್ಟ್) ಅರ್ಥಸ್ವರೂಪಗಳಿಗೆ ಒಂದು ಸ್ತರದ ನಿಷ್ಠೆ ಅವಶ್ಯ. ಈ ನಿಷ್ಠೆಯನ್ನು ನಿಭಾಯಿಸುವಾಗ, ಲಕ್ಷ್ಯಭಾಷೆಯ ಸ್ವರೂಪಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಲಕ್ಷ್ಯಭಾಷೆಯ ಲಿಪಿ, ನುಡಿ, ಪದಗುಚ್ಛ, ಧ್ವನಿ, ಲಯ, ಸಂಸ್ಕೃತಿ ಮುಂತಾದವುಗಳ ನೆಲೆಯಲ್ಲಿ ಅಪಚಾರವಾಗದಂತೆ ಜಾಗೃತೆ ವಹಿಸುವುದು ಅವಶ್ಯ. ಮೂಲಭೂತವಾಗಿ, ಒಂದು ಭಾಷೆಯಲ್ಲಿರುವ ಅರ್ಥ, ಆಶಯ, ಮಾಹಿತಿಗಳು, ಇನ್ನೊಂದು ಭಾಷೆಯ ಓದುಗರಿಗೆ ಅನಾಯಾಸ ಓದಿಗೆ ಲಭ್ಯವಾಗುವುದು ಮುಖ್ಯ.

ಅನುವಾದಕರು ಒಂದು ಭಾಷೆಯಲ್ಲಿರುವ ಸಂಗತಿಯನ್ನು ಇನ್ನೊಂದು ಭಾಷೆಯಲ್ಲಿ ಪುನರ್ರೂಪಿಸಬೇಕಾಗುತ್ತದೆ. ಸಂದರ್ಭಕ್ಕನುಗುಣವಾಗಿ ಈ ವರ್ಗಾವಣೆಯು ಅರ್ಥ, ವಿನ್ಯಾಸ, ಆಶಯ, ನಂಬಿಕೆ, ಮುಂತಾದ ಸ್ತರಗಳಲ್ಲಿ ಆಗಬೇಕಾಗಿರುತ್ತದೆ. ಮೂಲಭಾಷೆ ಮತ್ತು ಲಕ್ಷ್ಯಭಾಷೆಗಳ ಪಠ್ಯ ಸಮಾನವಾದಷ್ಟೂ ಅನುವಾದದ ಯಶಸ್ಸು ಅಧಿಕವಾಗುತ್ತದೆ. ಅದೇ ವೇಳೆ, ಲಕ್ಷ್ಯಭಾಷೆಯ ಜಾಯಮಾನವನ್ನು ಗಮನದಲ್ಲಿರಿಸಿಕೊಂಡು, ಅಂತಿಮ ಪಠ್ಯವು ಅರ್ಥ ಮತ್ತು ವಿನ್ಯಾಸಗಳೆರಡರಲ್ಲಿಯೂ ಸುಸಾಂಗತ್ಯ ಇರುವಂತೆ ಅನುವಾದಕ ಪ್ರಯತ್ನಿಸಬೇಕಾಗುತ್ತದೆ. ಆದುದರಿಂದ, ಅನುವಾದ ಪ್ರಕ್ರಿಯೆಯಲ್ಲಿ ಮೂಲ ಪಠ್ಯಕ್ಕೆ ತೋರಬೇಕಾದ ನಿಷ್ಠೆ ಮತ್ತು ಲಕ್ಷ್ಯಭಾಷೆಯಲ್ಲಿ ಸಾಧಿಸಬೇಕಾದ ಸುಲಲಿತತೆಗಳೆರಡೂ ಮುಖ್ಯವೇ.

ಯಾವುದೇ ಅನುವಾದ ಎರಡು ಪಠ್ಯಗಳ ಪ್ರಶ್ನೆಯಾಗಿರುವುದಿಲ್ಲ, ಬದಲಿಗೆ ಪ್ರತಿ ಅನುವಾದವೂ ಕೂಡ ಎರಡು ಸಮುದಾಯ, ಸಂಸ್ಕೃತಿಗಳನ್ನು ಒಳಗೊಂಡಿರುತ್ತದೆ. ಹಾಗಾಗಿಯೇ, ಒಟ್ಟಾರೆ ಸಾಂಸ್ಕೃತಿಕ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡೇ ಪಠ್ಯದ ಆಯ್ಕೆಯ ಜೊತೆಜೊತೆಗೆ ಅನುವಾದಿಸುವಾಗ ಎದುರಿಸುವ ಭಾಷೆ, ನುಡಿ, ಪದಗುಚ್ಛ, ಧ್ವನಿ, ಆಶಯ ಮುಂತಾದ ಆಯ್ಕೆಗಳನ್ನು ಮಾಡಬೇಕಾಗುತ್ತದೆ.

ಅನುವಾದಕ್ಕೆ ಸುದೀರ್ಘ ಇತಿಹಾಸವಿದೆ. ಭಾರತದಲ್ಲಿ ಅತ್ಯಂತ ಪುರಾತನ ಕಾಲದಲ್ಲಿಯೂ ಅನುವಾದದ ಅಭ್ಯಾಸ ಜಾರಿಯಲಿತ್ತು ಎನ್ನುವುದಕ್ಕೆ ಅನೇಕ ಪುರಾವೆಗಳಿವೆ. ಆದರೆ, ಅನುವಾದದ ಅರ್ಥದಲ್ಲಿ ಬದಲಾವಣೆ ಆಗಿರಬಹುದು. ವ್ಯಾವಹಾರಿಕ ಕಾರಣಗಳಿಗಾಗಿ ಅನುವಾದ ಮಾಡುವ ಅಭ್ಯಾಸ ಹಿಂದಿನಿಂದಲೇ ಇದ್ದುದರಿಂದ, ಅನುವಾದವೆನ್ನುವುದೊಂದು ಉದ್ಯೋಗವಾಗಿಯೂ ಜಾರಿಯಲ್ಲಿತ್ತು. ಅಲ್ಲದೇ, ಜ್ಞಾನ, ಸಾಹಿತ್ಯ, ಶಾಸ್ತ್ರಗಳ ಕ್ಷೇತ್ರಗಳಲ್ಲಿಯೂ ಅನುವಾದಗಳ ಮೂಲಕ ಅಂತರಭಾಷಿಕ ವ್ಯವಹಾರಗಳಿದ್ದವು. ನಮ್ಮದೇ ಕಾಲಮಾನದ ವಿಶೇಷವೆಂದರೆ, ಬಹುಶಃ ಅನುವಾದಕ್ಕೆ ದೊರೆತಿರುವ ಸಾಂಸ್ಥಿಕ ಸ್ವರೂಪ. ಅನುವಾದವೆನ್ನುವುದು ಈಗ ವಿಶಾಲವಾದ ವೃತ್ತಿಪರ ಕ್ಷೇತ್ರವಾಗಿದ್ದು, ಅನುವಾದ ಪ್ರಕ್ರಿಯೆಗೆ ಪೂರಕವಾಗಿ ಆರ್ಥಿಕ, ಮಾನವಿಕ ಮತ್ತು ಇತರ ಸಂಪನ್ಮೂಲಗಳನ್ನು ಒದಗಿಸುವ, ಅನುವಾದಪೂರ್ವ ಮತ್ತು ನಂತರದಲ್ಲಿ ನೆರವು ಒದಗಿಸುವ ಪ್ರಕಾಶನ, ಪತ್ರಿಕೆ, ಗ್ರಂಥಾಲಯ, ಸಂಶೋಧನಾ ಸಂಸ್ಥೆಗಳು ಕೂಡ ಇವೆ. ಅಲ್ಲದೆ ಅನುವಾದದ ಅಧ್ಯಯನಕ್ಕಾಗಿಯೇ ಮುಡಿಪಾದ ಜ್ಞಾನಶಿಸ್ತಿನ ಆವಿಷ್ಕಾರವಾಗಿದೆ. ಜಾಗತೀಕರಣದ ಕೊಡೆಯಡಿಯಲ್ಲಿ ಅನುವಾದಕ್ಕೆ ವಿಸ್ತೃತವಾದ ಮನ್ನಣೆ ದೊರಕಿದೆ ಎನ್ನಬಹುದು.

ಆದುದರಿಂದ ಅನುವಾದಕರಿಗೆ ತಕ್ಕಮಟ್ಟದ ವ್ಯಾವಹಾರಿಕ ಅವಕಾಶಗಳಿವೆ ಮತ್ತು ಅನುವಾದವೆನ್ನುವುದನ್ನು ಒಂದು ಸ್ವತಂತ್ರ ವೃತ್ತಿಯನ್ನಾಗಿಯೂ ಅನುಸರಿಸಲು ಹೇರಳ ಅವಕಾಶಗಳಿವೆ. ಈ ಹಿನ್ನೆಲೆಯಲ್ಲಿ, ವೃತ್ತಿಪರವಾಗಿ ಅನುವಾದವನ್ನು ಕೈಗೆತ್ತಿಕೊಳ್ಳುವುದೆಂದರೆ ಹೇಗೆ, ಅದಕ್ಕೆ ಬೇಕಾದ ತಯಾರಿಗಳೇನು, ಕಲಿಯಬೇಕಾದ ತಂತ್ರಗಳೇನು ಎಂಬ ವಿವರಗಳನ್ನು ಅರಿತುಕೊಳ್ಳುವುದು ಅನುವಾದದಲ್ಲಿ ತೊಡಗುವ ಯಾರಿಗೇ ಆದರೂ ಉಪಯುಕ್ತ. ಈ ಘಟಕದಲ್ಲಿ ಮೂಲತಃ ವೃತ್ತಿಪರ ಅನುವಾದಕ್ಕೆ ತೊಡಗಬಯಸುವವರಿಗೆ ಅವಶ್ಯವಿರುವ ಮಾಹಿತಿಗಳನ್ನು ಕೊಡಲಾಗಿದೆ.

೧೧.೧.೨. ಇತಿಹಾಸ – ಭಾರತೀಯ ಮತ್ತು ಐರೋಪ್ಯ

ಅನುವಾದ ಪ್ರಕ್ರಿಯೆಯ ಮಹತ್ವವನ್ನು ಗ್ರಹಿಸಲು, ಈ ವಿದ್ಯಮಾನದ ಇತಿಹಾಸವನ್ನು ಸಂಕ್ಷಿಪ್ತವಾಗಿ ಅರಿತುಕೊಳ್ಳುವುದು ಸಹಾಯಕವಾಗುತ್ತದೆ. ಭಾರತೀಯ ಭಾಷೆಗಳಲ್ಲಿ ಪುರಾತನ ಕಾಲದಿಂದಲೂ ಅನುವಾದ ಪ್ರಕ್ರಿಯೆ ಜಾರಿಯಲ್ಲಿತ್ತು ಎನ್ನುವುದಕ್ಕೆ ಭಾರತದ ಪ್ರತಿಯೊಂದು ಭಾಷೆಗಳಲ್ಲಿ ಕಾಣಸಿಗುವ ರಾಮಾಯಣ ಮತ್ತು ಮಹಾಭಾರತ ಮಹಾಕಾವ್ಯಗಳ ಆವೃತ್ತಿಗಳೇ ಸಾಕ್ಷಿ. ಈ ಪರಂಪರೆಯನ್ನು ಗಮನಿಸಿದರೆ ನಮಗೆ ಕಾಣಸಿಗುವ ಅನುವಾದದ ಪರಿಕಲ್ಪನೆ ವಿಶಿಷ್ಟವಾದುದು. ರಾಮಾಯಣ ಮಹಾಭಾರತಗಳನ್ನು ಭಾರತೀಯ ಭಾಷಾ ಲೇಖಕರು ತಂತಮ್ಮ ಭಾಷೆಗಳಲ್ಲಿ ಮರುನಿರೂಪಿಸಿದ್ದಾರೆ. ಸಂದರ್ಭಕ್ಕೆ ತಕ್ಕ ಮಾರ್ಪಾಟುಗಳನ್ನೂ ಮಾಡಿಕೊಂಡಿದ್ದಾರೆ. ಈ ಮಾರ್ಪಾಟುಗಳು, ಅರ್ಥ, ಆಶಯ, ವಿನ್ಯಾಸ ಹೀಗೆ ಎಲ್ಲ ಸ್ತರಗಳಲ್ಲಿಯೂ ಆಗಿದ್ದು, ನಿಷ್ಠೆಯ ಪ್ರಶ್ನೆಯೇ ಇಲ್ಲದೆ ಸಾಕಷ್ಟು ಸ್ವತಂತ್ರ ರೀತಿಯಲ್ಲಿ ಈ ಮರುನಿರೂಪಣೆಗಳು ನಡೆಯುತ್ತಿದ್ದುದನ್ನು ಕಾಣಬಹುದು. ಸುಮಾರು ೧೯ನೆಯ ಶತಮಾನದವರೆಗೂ ಭಾರತದ ಅನೇಕ ಭಾಷೆಗಳಲ್ಲಿ ನಡೆದ ಸಾಹಿತ್ಯ ಸೃಷ್ಟಿಯಲ್ಲಿ ಇಂತಹ ಮರುನಿರೂಪಣೆಗಳ ಸಿಂಹಪಾಲಿದೆ – ಅದು ಭಾಷಾಂತರ, ಅಳವಡಿಕೆ, ಪುನರ್‌ನಿರೂಪಣೆ, ವ್ಯಾಖ್ಯೆಗಳು ಹೀಗೆ ವಿವಿಧ ರೂಪಗಳನ್ನು ಪಡೆದಿರಬಹುದು. ವೈದ್ಯಶಾಸ್ತ್ರ, ಖಗೋಳಶಾಸ್ತ್ರ, ಲೋಹವಿದ್ಯೆ, ಪ್ರವಾಸ, ಹಡಗು–ನಿರ್ಮಾಣ, ವಾಸ್ತುಶಾಸ್ತ್ರ, ತತ್ವಜ್ಞಾನ, ಧರ್ಮ, ಸಾಹಿತ್ಯ

ಮುಂತಾದ ವಿಷಯಗಳ ಬಗ್ಗೆ ಸಂಸ್ಕೃತ, ಪಾಲಿ, ಪ್ರಾಕೃತ, ಪರ್ಶಿಯನ್, ಮತ್ತು ಅರೇಬಿಕ್ ಭಾಷೆಗಳಿಂದ ಭಾರತೀಯ ಭಾಷೆಗಳಿಗೆ ಗಣನೀಯ ಪ್ರಮಾಣದ ಅನುವಾದಗಳಾಗುತ್ತಿದ್ದವು.

ಭಾರತೀಯ ಸಂದರ್ಭದಲ್ಲಿ ಅನುವಾದಕ್ಕೆ ವಿಶೇಷ ಸ್ಥಾನವಿದೆ ಯಾಕೆಂದರೆ ಇದು ಬಹುಭಾಷೆಗಳ ತಾಣ. ಭಾರತದ ಸಂವಿಧಾನದ ಎಂಟನೇ ಅನುಸೂಚನೆಯಲ್ಲಿ ಅಧಿಕೃತವಾಗಿ ಗುರುತಿಸಲಾಗಿರುವ ಭಾಷೆಗಳ ಸಂಖ್ಯೆ ೨೨ ಆಗಿದ್ದರೂ, ೨೦೧೧ರ ಜನಗಣತಿಯ ಪ್ರಕಾರ ೧೨೨ ತಾಯ್ನುಡಿಗಳು ಮತ್ತು ೧,೬೦೦ಕ್ಕೂ ಹೆಚ್ಚು ಆಡುನುಡಿಗಳು ಭಾರತದಲ್ಲಿ ಇಂದಿಗೂ ಚಾಲ್ತಿಯಲ್ಲಿವೆ. ಈ ಎಲ್ಲ ಭಾಷೆಗಳ ನಡುವೆ ಮೌಖಿಕ ಸ್ತರದಲ್ಲಿಯಂತೂ ಅನುವಾದ ಸದಾಕಾಲ ನಿರಂತರವಾಗಿ ಸಾಗುತ್ತಲಿರುತ್ತದೆ. ಅಲ್ಲದೇ ವ್ಯವಹಾರ, ಜ್ಞಾನ ವಿನಿಮಯ, ಸಮೂಹ ಮಾಧ್ಯಮ, ಆಡಳಿತ, ನ್ಯಾಯಾಲಯ ಇತ್ಯಾದಿ ಕ್ಷೇತ್ರಗಳಲ್ಲಿ, ಅಂತರರಾಷ್ಟ್ರೀಯ ಮತ್ತು ರಾಜ್ಯಗಳ ಆಡಳಿತ ಭಾಷೆಗಳ ನಡುವೆ ಪರಸ್ಪರ ಅನುವಾದ ಸಾಗುತ್ತಿರುತ್ತದೆ. ಬಹುಪಾಲು ಭಾರತೀಯರು ಬಹುಭಾಷಿಕರು ಅಥವಾ ಕಡಿಮೆಯೆಂದರೆ ದ್ವಿಭಾಷಿಗಳಾಗಿರುವುದು ಸಾಮಾನ್ಯ. ನಮ್ಮ ದೇಶದ ಈ ಭಾಷಾ ಶ್ರೀಮಂತಿಕೆಯ ಹಿನ್ನೆಲೆಯಲ್ಲಿ ರಾಷ್ಟ್ರನಿರ್ಮಾಣದ ಮತ್ತು ನಿರ್ವಹಣೆಯ ದೃಷ್ಟಿಯಿಂದ ಅನುವಾದ ಅತ್ಯಂತ ಗುರುತರ ಜವಾಬ್ದಾರಿ ನಿರ್ವಹಿಸುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ.

ಅನುವಾದಕ್ಕೆ ಆಂಗ್ಲ ಭಾಷೆಯಲ್ಲಿ ಬಳಸುವ 'ಟ್ರಾನ್ಸ್‌ಲೇಶನ್' ಎಂಬ ಪದದ ಮೂಲ ಲ್ಯಾಟಿನ್ ಭಾಷೆಯ 'ಟ್ರಾನ್ಸ್‌ಲೇಶಿಯೋ'. ಲ್ಯಾಟಿನ್ನಿನ ಈ ಶಬ್ದದ ಅರ್ಥ 'ಒಯ್ಯುವುದು' ಅಥವಾ 'ವರ್ಗಾವಣೆ' ಎಂದಿದೆ. ಅನುವಾದಕ್ಕೆ ಪುರಾತನ ಗ್ರೀಕರು ಬಳಸುತ್ತಿದ್ದ ಶಬ್ದ 'ಮೆಟಫ್ರಾಸಿಸ್', ಅಂದರೆ, ನುಡಿಯ ವರ್ಗಾವಣೆ. ಪಾಶ್ಚಾತ್ಯ ಜಗತ್ತಿನ ಅತ್ಯಂತ ಹಳೆಯ ಅನುವಾದದ ದಾಖಲೆಗಳು 'ಗಿಲ್ಗಮೇಶ್' ಮಹಾಕಾವ್ಯ (ಕ್ರಿ.ಪೂ. ೨೦೦೦) ಮತ್ತು ಅವಳಿ ಭಾಷೆಯಲ್ಲಿರುವ 'ಕಡೇಶ' ಪ್ರಾಂತದ ಒಪ್ಪಂದದ ದಾಖಲೆ (ಕ್ರಿ.ಪೂ. ೧೨೭೪). ಕ್ರಿ.ಶ. ೨ನೆಯ ಶತಮಾನದಲ್ಲಿ ರೋಮನ್ ನಾಟಕಕಾರ ಟೆರೆನ್ಸ್‌ನು ಗ್ರೀಕ್ ನಾಟಕಗಳನ್ನು ಲ್ಯಾಟಿನ್ ಭಾಷೆಗೆ ಅಳವಡಿಸಿಕೊಂಡು ಬರೆಯುವ ಮೂಲಕ ಅನುವಾದವು ಒಂದು ಸಂಸ್ಕೃತಿಯ ಮೌಲ್ಯಗಳನ್ನು ಇನ್ನೊಂದಕ್ಕೆ ವರ್ಗಾಯಿಸುವ ಸೇತುವೆ ಎನ್ನುವ ಚರ್ಚೆಯನ್ನು ಹುಟ್ಟುಹಾಕಿದ್ದಾನೆ. ಕ್ರಿ.ಶ. ೩ನೆಯ ಶತಮಾನದಲ್ಲಿ ನಡೆದ ಬೈಬಲ್ಲಿನ ಅನುವಾದವನ್ನು ಐತಿಹಾಸಿಕ ಮಹತ್ವದ್ದೆಂದು ಪಾಶ್ಚಾತ್ಯ ಟಿಪ್ಪಣಿಕಾರರು ಗುರುತಿಸುತ್ತಾರೆ. ಲ್ಯಾಟಿನ್ ಭಾಷೆಗೆ ಬೈಬಲ್ಲನ್ನು ಅನುವಾದಿಸಿದ ಸೇಂಟ್ ಜೆರೋಮ್, 'ಪದಕ್ಕೆ ಪದ' ಬಳಸುವ ಬದಲು 'ಅರ್ಥಕ್ಕೆ ಅರ್ಥ' ಹುಡುಕುವುದಕ್ಕೆ ಅನುವಾದಕರು ಒತ್ತುಕೊಡಬೇಕೆಂದು ಹೇಳುತ್ತಾನೆ. ಅಂತೆಯೇ, ಗ್ರೀಕ್ ಭಾಷೆಯಿಂದ ಲ್ಯಾಟಿನ್‌ಗೆ ಅನುವಾದ ಮಾಡಿದ ರೋಮನ್ ತತ್ವಜ್ಞಾನಿ ಮತ್ತು ಲೇಖಕ ಸಿಸೆರೋ ಕೂಡ ಕ್ರಿ.ಪೂ. ೫೫ರಲ್ಲಿ ಬರೆದ 'ಡಿ ಒರೆಟೋರ್' ಕೃತಿಯಲ್ಲಿ ಅಕ್ಷರಶಃ ಅನುವಾದಿಸುವುದಕ್ಕಿಂತಲೂ ಅರ್ಥಕ್ಕೆ ಹೆಚ್ಚು ಮಹತ್ವ ಕೊಡಬೇಕೆಂದು ವಾದಿಸುತ್ತಾನೆ.

ಕ್ರಿ.ಶ. ನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಕುಮಾರಜೀವ ಕೈಗೊಂಡ ಅನುವಾದ ಗಳಿಂದಾಗಿ ಬೌದ್ಧಧರ್ಮವು ಚೀನಾದಲ್ಲಿ ಜನಪ್ರಿಯವಾಯಿತು ಎನ್ನಲಾಗುತ್ತದೆ. ಮೊದಲನೇ ಸಹಸ್ರಮಾನದ ಮಧ್ಯದಿಂದ ಮಧ್ಯಯುಗದ ಅಂತ್ಯದವರೆಗಿನ ಅವಧಿಯಲ್ಲಿ ಧಾರ್ಮಿಕ ಸಿದ್ಧಾಂತಗಳ ಪ್ರಸಾರಕ್ಕಾಗಿ ಅನುವಾದ ಮಾಧ್ಯಮವನ್ನು ವ್ಯಾಪಕವಾಗಿ ಬಳಸಿದ್ದನ್ನು ನಾವು ಕಾಣಬಹುದು. ಅನುವಾದ ಕಲೆಯನ್ನು ಕುರಿತ ಜಿಜ್ಞಾಸೆಯೂ ವಿಫುಲವಾಗಿ

ನಡೆದು, ಹಲವಾರು ತಾತ್ವಿಕ ಪ್ರಮೇಯಗಳನ್ನು ಪ್ರತಿಪಾದಿಸಲಾಯಿತು. ಆ ನಂತರದ ಅವಧಿಯಲ್ಲಿ ವಿಕಸಿತಗೊಂಡ ಮುದ್ರಣ ತಂತ್ರಜ್ಞಾನವು ಅನುವಾದ ಪ್ರಕ್ರಿಯೆಯಲ್ಲಿ ಹೆಚ್ಚಳವನ್ನು ತಂದು ವಿಭಿನ್ನ ಭಾಷೆ–ಸಂಸ್ಕೃತಿಗಳ ನಡುವೆ, ವಿಭಿನ್ನ ಧಾರ್ಮಿಕ ಪರಂಪರೆಗಳ ನಡುವೆ ಅನುಸಂಧಾನ ವೃದ್ಧಿಸಲು ಕಾರಣವಾಯಿತು. ಮೂಲತಃ ಚೀನಾದಲ್ಲಿ ವಿಕಸಿತವಾದ ಮುದ್ರಣ ತಂತ್ರಜ್ಞಾನ, ಕ್ರಿ.ಶ. ೧೫ನೆಯ ಶತಮಾನದಲ್ಲಿ ಯುರೋಪಿನಲ್ಲಿ ಬೆಳವಣಿಗೆಯನ್ನು ಪಡೆಯುವುದರ ಮೂಲಕ ಮುದ್ರಣ ಯುಗಕ್ಕೆ ನಾಂದಿಯಾಯಿತು. ಇದೂ ಕೂಡ ಅನುವಾದ ಪ್ರಕ್ರಿಯೆಯ ಜನಪ್ರಿಯತೆಗೆ ಮತ್ತು ಅಭಿವೃದ್ಧಿಗೆ ಸಹಾಯಕವಾಯಿತು. ಬಂಡವಾಳಶಾಹಿ ಅಭಿವೃದ್ಧಿ ಹೊಂದಿದಂತೆ ಮಾರುಕಟ್ಟೆಗಳು ವಿಸ್ತರಿಸುತ್ತ ಹೋದುದರ ಪರಿಣಾಮವಾಗಿ ವ್ಯಾವಹಾರಿಕ ಸ್ತರದಲ್ಲಿ ಅನುವಾದದ ಅವಶ್ಯಕತೆ ಬೆಳೆಯಿತು. ಗಣಕ ತಂತ್ರಜ್ಞಾನದಲ್ಲಿ ಆಗುತ್ತಿರುವ ಕ್ರಾಂತಿಕಾರಿ ಬೆಳವಣಿಗೆಗಳು ಮಾನವನ ಸೀಮಿತ ಪಾಲುದಾರಿಕೆ ಇರುವ, ಅಥವಾ ಮಾನವ ಮಧ್ಯಸ್ಥಿಕೆಯೇ ಇರದ 'ಯಂತ್ರ–ಅನುವಾದ'ಗಳನ್ನು ಸಾಧ್ಯವಾಗಿಸಿದೆ.

೧೧.೧.೩. ಅನುವಾದ ಕ್ಷೇತ್ರದಲ್ಲಿ ಉದ್ಯೋಗಾವಕಾಶ

ಆರ್ಥಿಕ ಕ್ಷೇತ್ರದಲ್ಲಿನ ಜಾಗತೀಕರಣದಿಂದಾಗಿ ಹಲವಾರು ಬಹುರಾಷ್ಟ್ರೀಯ ಕಂಪನಿಗಳು ಭಾರತದಲ್ಲಿ ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿವೆ. ಇದರ ಪರಿಣಾಮವಾಗಿಯೇ ಶಿಕ್ಷಣ, ಪ್ರಕಾಶನ, ಸಂಶೋಧನೆ, ವೈದ್ಯಶಾಸ್ತ್ರ, ಸಮೂಹ ಮಾಧ್ಯಮ, ಅಂತರರಾಷ್ಟ್ರೀಯ ಸಂಬಂಧ, ಪ್ರವಾಸೋದ್ಯಮ, ಮನರಂಜನೆ, ವ್ಯಾಪಾರ ಮುಂತಾದ ಕ್ಷೇತ್ರಗಳಲ್ಲಿ ಅನುವಾದಕರ ಮತ್ತು ದುಭಾಷಿಗಳ ಅಗತ್ಯ ಅಪಾರ ಪ್ರಮಾಣದಲ್ಲಿ ವೃದ್ಧಿಯನ್ನು ಕಂಡಿದೆ. ಈ ಅಗತ್ಯವನ್ನು ಪೂರೈಸಲು ಅನುವಾದಕರಿಗೆ ತರಬೇತು ಕೊಟ್ಟು ಉದ್ಯೋಗಾವಕಾಶ ಕಲ್ಪಿಸುವ ಸಂಸ್ಥೆಗಳೂ ತಲೆ ಎತ್ತಿವೆ. ಸರಕಾರೀ ಇಲಾಖೆಗಳು ಮತ್ತು ಖಾಸಗೀ ಉದ್ಯಮಗಳಲ್ಲಿ ಅನುವಾದಕರಿಗೆ ಉದ್ಯೋಗಾವಕಾಶ ಮುಂದೆಯೂ ಹೆಚ್ಚುತ್ತ ಹೋಗುವ ಸೂಚನೆಗಳು ಕಂಡುಬರುತ್ತಿವೆ. ಮುಂದಿನ ದಶಕಗಳಲ್ಲಿ ಅನುವಾದವೊಂದು ಲಕ್ಷಾಂತರ ಕೋಟಿ ಬೆಲೆಯ ಉದ್ಯಮವಾಗಲಿದೆ ಯೆಂದು ಹೇಳಲಾಗುತ್ತದೆ. ಸಾಮಾನ್ಯವಾಗಿ ವಿಜ್ಞಾನ–ತಂತ್ರಜ್ಞಾನ, ಉದ್ಯಮ–ವ್ಯವಹಾರ ಮತ್ತು ಆರ್ಥಿಕ–ರಾಜಕೀಯ ಕ್ಷೇತ್ರಗಳಲ್ಲಿ ಅನುವಾದಕರಿಗೆ ಒಳ್ಳೆಯ ವೇತನ ಸಿಗಬಹುದು; ಹಾಗೆಯೇ, ಸಾಹಿತ್ಯ–ತತ್ವಜ್ಞಾನ–ಶೈಕ್ಷಣಿಕ ಮಾಹಿತಿಗಳ ಅನುವಾದದಲ್ಲಿ ಸ್ವತಂತ್ರ ಆಸಕ್ತಿಯಿಂದ ತೊಡಗಿಕೊಳ್ಳಬಹುದು.

ಅನುವಾದವೆನ್ನುವುದು ಎರಡು ಭಾಷೆಗಳ ನಡುವೆ ಸುಲಭವಾಗಿ ಆಗಿ ಬಿಡುವ ವರ್ಗಾವಣೆಯಲ್ಲ. ಅನುವಾದಕ್ಕೂ ಪೂರ್ವತಯಾರಿಯ ಅವಶ್ಯಕತೆಯಿರುತ್ತದೆ. ಭಾಷಾಜ್ಞಾನ ಮತ್ತು ಪ್ರಾವೀಣ್ಯತೆಯ ಜೊತೆಜೊತೆಗೆ ಮೂಲಭಾಷೆ ಮತ್ತು ಲಕ್ಷ್ಯಭಾಷೆಗಳ ಸಮಾಜ–ಸಂಸ್ಕೃತಿಯ ಹಿನ್ನೆಲೆಯ ಪರಿಚಯವೂ ಅಗತ್ಯವಾಗುತ್ತದೆ. ಪಠ್ಯವೊಂದರ ಅಂತರಾಳವನ್ನು ಲಕ್ಷ್ಯಭಾಷೆಯ ದೇಹದಲ್ಲಿ ಪುನರ್ನಿರ್ಮಿಸಬೇಕಾಗುತ್ತದೆ. ಆದ್ದರಿಂದ, ಪಠ್ಯ ಯಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದರೂ ಕೂಡ, ಅನುವಾದದಲ್ಲಿ ಸೃಜನಶೀಲತೆಯೂ ಅಗತ್ಯವಾಗುತ್ತದೆ.

ಅನುವಾದಕ್ಕೆ ತೊಡಗುವ ಮೊದಲು ಕೆಲವು ಕೌಶಲ್ಯ ಮತ್ತು ತಂತ್ರಗಳನ್ನು ಪರಿಷ್ಕರಿಸಿ ಕೊಳ್ಳುವುದು ಒಳಿತು. ಮೊದಮೊದಲು ಸರಳ ಪಠ್ಯಗಳ ಅನುವಾದಗಳನ್ನು ಮಾಡುವ ಮೂಲಕ ಅನುಭವ ಪ್ರಾಪ್ತಿ ಮಾಡಿಕೊಂಡು ಕ್ರಮೇಣ ಹೆಚ್ಚು ಮಹತ್ವಾಕಾಂಕ್ಷಿ ಅನುವಾದ

ಕಾರ್ಯಗಳಲ್ಲಿ ತೊಡಗುವುದು ಉತ್ತಮ. ಈ ಅಭ್ಯಾಸಘಟಕದಲ್ಲಿ ಒಳ್ಳೆಯ ಅನುವಾದಕ ರಾಗಲು ಗಮನದಲ್ಲಿಡಬೇಕಾದ ಅಂಶಗಳನ್ನು, ತಂತ್ರಗಳನ್ನು, ಕೌಶಲ್ಯಗಳನ್ನು ಪರಿಚಯಿಸ ಲಾಗುವುದು. ಈ ಅಭ್ಯಾಸಕ್ರಮದ ಅಂತ್ಯದಲ್ಲಿ, ವಿದ್ಯಾರ್ಥಿಗಳು ಅನುವಾದ ಕಾರ್ಯಗಳಲ್ಲಿ ತೊಡಗಿಕೊಳ್ಳಲು ಬೇಕಾದ ತಯಾರಿಯನ್ನು ಕೊಡುವುದು ಇಲ್ಲಿರುವ ಘಟಕಗಳ ಉದ್ದೇಶ ವಾಗಿದೆ.

೧೧.೨. ಅನುವಾದದ ಅರ್ಥ ಮತ್ತು ವ್ಯಾಖ್ಯೆಗಳು

೧೧.೨.೧. ಅನುವಾದ ಅರ್ಥ

ಅನುವಾದದಲ್ಲಿ ತೊಡಗುವ ಮುನ್ನ ಅನುವಾದವೆಂದರೇನು ಎಂದು ಸ್ಪಷ್ಟವಾಗಿ ಅರಿತುಕೊಳ್ಳುವುದು ಒಳ್ಳೆಯದು. ಅನುವಾದದ ಅರ್ಥವನ್ನು ಗ್ರಹಿಸುವುದೆಂದರೆ, ಅನುವಾದ ಪ್ರಕ್ರಿಯೆಯಲ್ಲಿ ಎದುರಾಗುವ ಸಮಸ್ಯೆ–ಸವಾಲುಗಳ ನಿಷ್ಕರ್ಷೆ ನಡೆಸಿದಂತೆ. ತನ್ಮೂಲಕ ಅನುವಾದ ಮಾಡುವಾಗ ಗಮನದಲ್ಲಿಡಬೇಕಾದ ಅಂಶಗಳನ್ನು ಮನವರಿಕೆ ಮಾಡಿಕೊಳ್ಳ ಬಹುದು.

ಭಿನ್ನ ಭಾಷೆಗಳನ್ನಾಡುವವರ ನಡುವೆ ಸಂವಹನವನ್ನು ಸಾಧ್ಯವಾಗಿಸಿ, ಪರಸ್ಪರರ ಗ್ರಹಿಕೆ, ಅರಿವು ಮತ್ತು ಸಹಾನುಭೂತಿ ವೃದ್ಧಿಸುವಂತೆ ಮಾಡಲು ಅನುವಾದ ಅವಶ್ಯಕವಾಗುತ್ತದೆ. ಮಾಹಿತಿ, ವಿಚಾರ, ಮತ್ತು ಜ್ಞಾನದ ಪ್ರಸಾರಕ್ಕೆ ಅನುವಾದ ಅತ್ಯವಶ್ಯ. ಜಗತ್ತಿನ ವ್ಯವಹಾರಗಳು ದೇಶ–ಭಾಷೆಗಳ ಸೀಮೆಯನ್ನು ಮೀರಿ ಬೆಳೆದಿರುವ ಸಮಕಾಲೀನ ಸಂದರ್ಭದಲ್ಲಂತೂ ಅನುವಾದ ಅಪರಿಹಾರ್ಯ. ಅತ್ಯಂತ ಸರಳ ಸ್ತರದಲ್ಲಿ, 'ನನಗೆ ಸ್ವಲ್ಪ ನೀರು ಬೇಕು' ಎನ್ನುವುದನ್ನು ಕನ್ನಡವನ್ನರಿಯದ ವ್ಯಕ್ತಿಗೆ ಅರಿವಾಗುವಂತೆ ಹೇಳಲು, 'I want some water' ಎಂದು ಇಂಗ್ಲಿಷಿನಲ್ಲಿ ಹೇಳುವಾಗ ಅನುವಾದ ಆಗಿರುತ್ತದೆ. ಇದು ನಾವೆಲ್ಲ ತಿಳಿದೇ ಇರುವ ಅರ್ಥ. ಆದರೆ, ಅನುವಾದ ಅಷ್ಟು ಮಾತ್ರವಲ್ಲ. ಪಠ್ಯ ಹೆಚ್ಚು ಹೆಚ್ಚು ಸಂಕೀರ್ಣವೂ, ತಾಂತ್ರಿಕವೂ, ಅನನ್ಯ ಶೈಲಿಯದೂ, ಸಾಂಸ್ಕೃತಿಕವಾಗಿ ನಿರ್ದಿಷ್ಟವೂ ಆದ ಹಾಗೆಲ್ಲಾ ಅನುವಾದವೂ ಸಮಸ್ಯಾತ್ಮಕವಾಗುತ್ತದೆ. ಎರಡು ಭಾಷಾ ಸಮುದಾಯಗಳ ನಡುವಿನ ಸಾಮಾಜಿಕ, ಸಾಂಸ್ಕೃತಿಕ, ಐತಿಹಾಸಿಕ ಮತ್ತು ನಂಬಿಕೆಗಳ ಸ್ತರಗಳಲ್ಲಿ ಇರುವ ಭಿನ್ನತೆಯಿಂದಾಗಿ ನೂರಕ್ಕೆ ನೂರು ಪ್ರತಿಶತ ಕರಾರುವಾಕ್ಕಾದ ಅನುವಾದ ಪ್ರಾಯಶಃ ಯಾರಿಂದಲೂ, ಎಂದಿಗೂ ಸಾಧ್ಯವಿಲ್ಲದಿರಬಹುದು. ಈ ಭಿನ್ನತೆಗಳು ಹುಟ್ಟು ಹಾಕುವ ಕಂದರಗಳನ್ನು ದಾಟಿ, ಅಪಾರ್ಥಗಳ ಅಪಾಯಗಳನ್ನು ಕನಿಷ್ಠವಾಗಿಸಿ, ಆಶಯಗಳ ಪರಸ್ಪರ ಗ್ರಹಿಕೆಯನ್ನು ಸಾಧ್ಯವಾದಷ್ಟು ಗರಿಷ್ಠಗೊಳಿಸುವುದು ಪ್ರತಿ ಅನುವಾದದ ಧ್ಯೇಯವಾಗಿರುತ್ತದೆ.

ಸಾವಿರಾರು ವರ್ಷಗಳಿಂದ ಹಲವಾರು ಚಿಂತಕರು / ಅನುವಾದಕರು ಅನುವಾದಕ್ಕೆ ಸಂಬಂಧಿಸಿದಂತೆ ಅನೇಕ ವ್ಯಾಖ್ಯೆಗಳನ್ನು ಪ್ರತಿಪಾದಿಸಿದ್ದಾರೆ. ಹಿಂದೆಯೇ ಹೇಳಿದಂತೆ, ಅನುವಾದ ಪ್ರಕ್ರಿಯೆ ಪುರಾತನವಾಗಿದ್ದರೂ ಕೂಡ, ಅದೊಂದು ಜ್ಞಾನಶಿಸ್ತಾಗಿ, ವಿಶಿಷ್ಟ ಅಧ್ಯಯನ ಕ್ಷೇತ್ರವಾಗಿ ಬೆಳೆದಿದ್ದು ೨೦ನೆಯ ಶತಮಾನದ ದ್ವಿತೀಯಾರ್ಧದಲ್ಲಿ. ಭಾರತದಲ್ಲಿ ೧೯೮೦ರ ನಂತರದಲ್ಲಿ ಅನುವಾದದ ಕುರಿತಾಗಿ ಅಧ್ಯಯನ, ಸಂಶೋಧನೆ, ಪಾಂಡಿತ್ಯಪೂರ್ಣ ಚರ್ಚೆಗಳು, ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸಕ್ರಮಗಳು ಅಭಿವೃದ್ಧಿಯಾದವು. ಸುಮಾರು

೧೯೧೧ರಿಂದ ಆರಂಭವಾದ ಜಾಗತೀಕರಣದ ಪ್ರಕ್ರಿಯೆಗಳು ಈ ಬೆಳವಣಿಗೆಗಳಿಗೆ ಒತ್ತಾಸೆ ಕೊಟ್ಟು, ಅನುವಾದ ಕ್ಷೇತ್ರವನ್ನು ವಿಪುಲ ವೃದ್ಧಿಯ ಕ್ಷೇತ್ರವನ್ನಾಗಿಸಿವೆ.

೧೧.೨.೨. ಅನುವಾದದ ಕೆಲವು ವ್ಯಾಖ್ಯೆಗಳು

ವ್ಯಾಖ್ಯೆಗಳು ಅನುವಾದದ ಪ್ರಮುಖ ಗುಣಲಕ್ಷಣಗಳ ಮೇಲೆ ಬೆಳಕು ಚೆಲ್ಲುತ್ತವೆ. ಪುರಾತನ ಕಾಲದಿಂದ ಅನುವಾದ ಕಾರ್ಯದಲ್ಲಿ ತೊಡಗಿರುವವರು ಅಥವಾ ಈ ಕ್ಷೇತ್ರದಲ್ಲಿ ವಿಶೇಷ ಅಧ್ಯಯನ ನಡೆಸಿರುವ ತಜ್ಞರು ಅನುವಾದ ಪ್ರಕ್ರಿಯೆಯನ್ನು ವಿವರಿಸಲು ಸಂಕ್ಷಿಪ್ತ ವ್ಯಾಖ್ಯೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವು ಪ್ರಮುಖ ವ್ಯಾಖ್ಯೆಗಳನ್ನು ಪರಿಗಣಿಸೋಣ. ಜೆ.ಸಿ. ಕ್ಯಾಟ್‌ಫೋರ್ಡ್ (J.C. Catford (1965). A Linguistic Theory of Translation: An Essay in Applied Linguistics. London: Oxford University Press) ಅವರ ಪ್ರಕಾರ ಒಂದು ಭಾಷೆಯಲ್ಲಿರುವ ಪಠ್ಯದ ಅಂಶಗಳನ್ನು ಇನ್ನೊಂದು ಭಾಷೆಯಲ್ಲಿ ಸರಿಸಮಾನ ಪಠ್ಯ ಅಂಶಗಳನ್ನಾಗಿ ಪ್ರಸ್ತುತಪಡಿಸುವುದೇ ಅನುವಾದ. ನೀದಾ ಮತ್ತು ಟೇಬರ್ ಅವರು ಹೇಳುವುದೇನೆಂದರೆ, ಸ್ವೀಕರಿಸುವ ಭಾಷೆಯಲ್ಲಿ ಆಕರ ಭಾಷೆಯ ಅರ್ಥ ಮತ್ತು ಶೈಲಿಯ ಹತ್ತಿರದ ಪ್ರತಿರೂಪವನ್ನು ಸೃಜಿಸುವುದು ಅನುವಾದ (Eugene A. Nida and Charles R. Taber (1982). The Theory and Practice of Translation. Leiden: E.J Brill). ಮಿಲ್ಡ್ರೆಡ್ ಲಾರ್ಸನ್ ಕೊಡುವ ವಿಸ್ತಾರವಾದ ವ್ಯಾಖ್ಯೆ ಹೀಗಿದೆ: ಮೂಲಭಾಷೆಯ ಶಬ್ದಗಳು, ವಾಕ್ಯರಚನೆಯ ವ್ಯಾಕರಣ, ಸಂವಹನದ ಸಂದರ್ಭ, ಮತ್ತು ಸಾಂಸ್ಕೃತಿಕ ಮಹತ್ವವನ್ನು ಅಧ್ಯಯನ ಮಾಡಿ ಲಕ್ಷ್ಯಭಾಷೆಯ ಶಬ್ದಗಳು, ವ್ಯಾಕರಣ, ಸಾಂಸ್ಕೃತಿಕ ಸಂದರ್ಭಗಳಿಗೆ ಸೂಕ್ತವಾದ ರೀತಿಯಲ್ಲಿ ಅರ್ಥವನ್ನು ಪುನರ್ನಿರೂಪಿಸುವುದು ಅನುವಾದದ ಜವಾಬ್ದಾರಿ (M. L. Larson (1984). Meaning-Based Translation: A Guide to Cross-Language Equivalence. Lanham, MD: University Press of America). ಲಾರ್ಸನ್ನನ ಪ್ರಕಾರ ಅನುವಾದದ ಪ್ರಕ್ರಿಯೆಯಲ್ಲಿ ಮೂಲ ಪಠ್ಯದ ಅಧ್ಯಯನ, ಅದರ ವಿಶ್ಲೇಷಣೆ ಮತ್ತು ಪುನರ್‌ನಿರ್ಮಾಣ ಹೀಗೆ ಮೂರು ಮೆಟ್ಟಿಲುಗಳಿರುತ್ತವೆ. ಪೀಟರ್ ನ್ಯೂಮಾರ್ಕ್‌ನ ದೃಷ್ಟಿಯಲ್ಲಿ ಅನುವಾದ ಒಂದು ಭಾಷೆಯಲ್ಲಿ ಮೂಲ ಲೇಖಕ ಹೇಳಲಿಚ್ಛಿಸಿರುವ ಅರ್ಥವನ್ನು ಇನ್ನೊಂದು ಭಾಷೆಗೆ ಕೊಂಡೊಯ್ಯುವುದು. (Peter Newmark (1988). A Textbook of Translation. New York: Prentice-Hall International).

ಈ ವ್ಯಾಖ್ಯೆಗಳನ್ನು ಗಮನಿಸಿದಾಗ ನಮಗೆ ಹೊಳೆಯುವ ಅಂಶವೆಂದರೆ ಅನುವಾದವೆನ್ನುವ ಸಂವಹನದಲ್ಲಿ ಮೂಲ ಮತ್ತು ಲಕ್ಷ್ಯಭಾಷೆಯ ಹಲವಾರು ಅಂಶಗಳು ಅಡಕವಾಗಿರುತ್ತವೆ. ಬಾಹ್ಯಸ್ತರದಲ್ಲಿ ವಾಕ್ಯರೂಪದ ಶಬ್ದಗಳು ಮಾತ್ರ ತೋರಿದರೂ, ಅನುವಾದ ಪ್ರಕ್ರಿಯೆಯಲ್ಲಿ ಅರ್ಥದ ಅಂತರಾಳವೂ ಮುಖ್ಯ. ಆದುದರಿಂದ, ಅನುವಾದ ಮಾಡುವಾಗ ಭಾಷೆಯ ವ್ಯಾಕರಣ, ಶಬ್ದಾರ್ಥ ಮತ್ತು ಸಾಂಸ್ಕೃತಿಕ ಸ್ತರಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಅವಶ್ಯವಾಗುತ್ತದೆ. ಎರಡು ಭಾಷೆಗಳ ನಡುವಿನ ಭಿನ್ನತೆಗಳನ್ನು ನಿಭಾಯಿಸಿಕೊಂಡು ಮೂಲಪಠ್ಯ ಸೃಜಿಸಿದ ಪರಿಣಾಮವನ್ನು ಲಕ್ಷ್ಯಭಾಷೆಯಲ್ಲಿ ರೂಪುಗೊಳ್ಳುವಂತೆ ಮಾಡುವುದು ಅನುವಾದಕರ ಕರ್ತವ್ಯ. ಹಾಗಾಗಿ, ಅನುವಾದಕರು ಮೂಲ ಮತ್ತು ಲಕ್ಷ್ಯಭಾಷೆಯನ್ನು ಅರಿತಿದ್ದರೆ

ಸಾಲದು. ಅವರಿಗೆ ಪಠ್ಯದ ವಿಷಯದ ಆಳ ಅರಿವು, ಮೂಲಪಠ್ಯದ ಸಾಮಾಜಿಕ, ಐತಿಹಾಸಿಕ, ಸಾಂಸ್ಕೃತಿಕ ಸಂದರ್ಭಗಳು, ಭಾವವಿಶ್ವದ ಒಳನೋಟಗಳ ಗ್ರಹಿಕೆಯೂ ಅಗತ್ಯ. ಈ ಗ್ರಹಿಕೆಯ ಆಧಾರದ ಮೇಲೆ ಅನುವಾದಕರು ಲಕ್ಷ್ಯಭಾಷೆಯಲ್ಲಿ ಯಾವ ತಂತ್ರಗಳ ಮೂಲಕ ಮೂಲಪಠ್ಯ ಹೊಂದಿರುವ ಬಾಹ್ಯಾರ್ಥ, ಒಳಾರ್ಥಗಳನ್ನು ಮತ್ತದರ ಒಟ್ಟಾರೆ ಪರಿಣಾಮವನ್ನು ಮರುರೂಪಿಸಬಹುದೆಂದು ನಿರ್ಧರಿಸಬೇಕಾಗುತ್ತದೆ.

೧೧.೨.೩. ಅನುವಾದ ಪ್ರಕ್ರಿಯೆ

ಅನುವಾದವೆಂದರೆ ಥಟ್ಟಂತ ಆಗುವ ಕೆಲಸವಲ್ಲ. ಅನುವಾದ ಪ್ರಕ್ರಿಯೆಯ ವಿವಿಧ ಮಜಲುಗಳನ್ನು ಅರ್ಥ ಮಾಡಿಕೊಂಡರೆ, ವ್ಯವಸ್ಥಿತ ರೀತಿಯಲ್ಲಿ ಅನುವಾದಕ್ಕೆ ತೊಡಗ ಬಹುದು. ಅನುವಾದ ಪ್ರಕ್ರಿಯೆಯ ನಾಲ್ಕು ಹಂತಗಳು ಈ ಕೆಳಕಂಡಂತೆ ಇವೆ.

೧೧.೨.೩.೧. ವಿಶ್ಲೇಷಣೆ ಮತ್ತು ಸಂಶೋಧನೆ

ಮೂಲಪಠ್ಯವನ್ನು ಕೂಲಂಕಷವಾಗಿ ಓದಿ, ಅದರ ಧ್ವನಿ, ನಿಲುವು, ಒಳಾರ್ಥಗಳು, ಶೈಲಿಯ ಅಂಶಗಳನ್ನು ಗ್ರಹಿಸುವುದು. ಇದು ಅನುವಾದಕರಿಗೆ ತಾನು ಎದುರಿಸಬಹುದಾದ ಸಮಸ್ಯೆಗಳನ್ನು ಸೂಚಿಸುವುದಲ್ಲದೆ ಅನುವಾದಿಸುವಾಗ ಯಾವ ತಂತ್ರಗಳನ್ನು ಬಳಸಬೇಕೆಂಬ ಸೂಕ್ಷ್ಮ ನಿರ್ಧಾರಗಳನ್ನು ಮಾಡಲು ಕೂಡ ಸಹಾಯವಾಗುತ್ತದೆ. ಅನುವಾದದ ಪೂರ್ವದಲ್ಲಿ ಬೇಕಾದ ತಯಾರಿಗಾಗಿ ಸಂಶೋಧನೆಗಳನ್ನು ಕೈಗೊಳ್ಳುವುದು ಇವುಗಳಲ್ಲಿ ಒಂದು. ಈ ಬಗೆಯ ಸಂಶೋಧನೆಯ ಮೂಲಕ ಲೇಖಕರ ಹಿನ್ನೆಲೆ, ಪಠ್ಯಪ್ರಕಾರದ ಹಿನ್ನೆಲೆ, ವಿಷಯದ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಸನ್ನಿವೇಶಗಳ ಕುರಿತು ವಿಸ್ತೃತ ಮಾಹಿತಿ ಪಡೆಯುವುದು, ವಿಭಿನ್ನ ಮೂಲಗಳಿಂದ ಮಾಹಿತಿ ಕಲೆಹಾಕುವುದು – ಶಬ್ದಕೋಶ, ಗ್ರಂಥಾಲಯ, ಅಂತರ್ಜಾಲ, ವಿಷಯತಜ್ಞರು, ಮೂಲ ಅಥವಾ ಲಕ್ಷ್ಯಭಾಷೆಯ ತಜ್ಞರು ಇತ್ಯಾದಿಗಳನ್ನು ತಿಳಿದುಕೊಳ್ಳಬಹುದು. ಮೂಲಪಠ್ಯದಲ್ಲಿ ಬಳಕೆಯಾಗಿರುವ ಶಬ್ದಗಳನ್ನು ಲಕ್ಷ್ಯಪಠ್ಯದ (ಟಾರ್ಗೆಟ್ ಟೆಕ್ಸ್ಟ್) ಉದ್ದಕ್ಕೂ ಸುಸಂಗತವಾಗಿ ಅನುವಾದಿಸುವುದು ಅವಶ್ಯ. ಹಾಗಾಗಿ, ವಿಶೇಷ ಶಬ್ದ, ಪರಿಕಲ್ಪನೆಗಳ ಕೈಪಿಡಿಯೊಂದನ್ನು ಮಾಡಿಕೊಳ್ಳುವುದು. ಇಂತಹ ಸಂಶೋಧನೆ ಶೀಘ್ರವಾಗಿ ಮುಗಿಯಬಹುದು ಅಥವಾ ದೀರ್ಘಕಾಲ ನಡೆಯಬಹುದು. ಅಂತೂ ಮೂಲ ಪಠ್ಯದ ಮಹತ್ವ, ಅರ್ಥಸೂಚನೆಗಳನ್ನು ಅರಿತುಕೊಳ್ಳಲು ಈ ಹೆಜ್ಜೆಗಳು ಅನಿವಾರ್ಯ.

೧೧.೨.೩.೨. ಕರಡುಪ್ರತಿ

ಮೊದಲ ಕರಡು ಪ್ರತಿ ತಯಾರಿಸುವಲ್ಲಿ, ತೀರಾ ಸೂಕ್ಷ್ಮತೆಗಳಿಗೆ ಇಳಿಯದೇ ಸಹಜ ಸ್ಫೂರ್ತಿಯ ಅನುವಾದವನ್ನು ಮಾಡಿಕೊಳ್ಳಬೇಕು. ಈ ಹೆಜ್ಜೆಯಲ್ಲಿ ಪಠ್ಯದ ಸಂಪೂರ್ಣ ಅನುವಾದವನ್ನು ಮಾಡಿ ಮುಗಿಸುವುದು ತುಂಬಾ ಮುಖ್ಯ. ನಡುನಡುವೆ ಕೆಲವು ವಿವರಗಳು ತಪ್ಪಿಹೋದರೂ ಕೂಡ, ಅವುಗಳ ಟಿಪ್ಪಣಿ ಮಾಡಿಟ್ಟುಕೊಂಡು ಮುಂದುವರಿಯ ಬೇಕು. ಈ ಹಂತದಲ್ಲಿ, ವಿಶ್ಲೇಷಣೆ ಮತ್ತು ಸಂಶೋಧನೆಯ ಸಂದರ್ಭದಲ್ಲಿ ಉಳಿದು ಹೋಗಿರಬಹುದಾದ ಕೆಲವು ಅಂಶಗಳು ಅನುವಾದಕರಿಗೆ ಗೋಚರಿಸುತ್ತವೆ.

೧೧.೨.೩.೩. ತದನಂತರದ ಪ್ರತಿಗಳು

ಅನುವಾದವನ್ನು ಪೂರ್ಣಗೊಳಿಸುವ ಮುನ್ನ ಒಟ್ಟಾರೆ ಲಕ್ಷ್ಯಪಠ್ಯದಲ್ಲಿ ಮಾಡಬೇಕಾದ ಎಲ್ಲ ಬಗೆಯ ತಿದ್ದುಪಡಿ ಮತ್ತು ಪರಿಷ್ಕರಣಗಳನ್ನು ಸಾಧಿಸುವ ಹಂತ ಇದು. ಕರಡುಪ್ರತಿ ತಯಾರಿಸಿದ ಮೇಲೆ ಸ್ವಲ್ಪ ಅಂತರದ ತರುವಾಯ ಪ್ರತಿಗಳ ತಿದ್ದುಪಡಿಗೆ ತೊಡಗಿದರೆ ಒಳಿತು. ಲಕ್ಷ್ಯಪಠ್ಯದ ಕರಡುಪ್ರತಿ ಓದುಗರಿಗೆ ಹೇಗೆ ಗೋಚರಿಸುತ್ತಿದೆ ಎಂಬ ದೃಷ್ಟಿಯಿಂದ ಮತ್ತೆ ಮತ್ತೆ ಓದಿ, ಸೂಕ್ಷ್ಮಸ್ತರದ ಸುಧಾರಣೆಗಳುಳ್ಳ ಪ್ರತಿಗಳನ್ನು ತಯಾರಿಸಬೇಕು. ಒಂದು ಕರಡುಪ್ರತಿಯ ನಂತರ ಅಂತಿಮಪ್ರತಿ ತಯಾರಾಗಿಬಿಡುವುದಿಲ್ಲ. ಸಾಮಾನ್ಯವಾಗಿ ಹಲವು ಹಂತಗಳಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಮೂಲಪಠ್ಯದ ಆಶಯ ಸಂವಹನವಾಗಿದೆಯೇ, ಲಕ್ಷ್ಯಪಠ್ಯದಲ್ಲಿ ತೊಡಕುಗಳಿಲ್ಲದೇ ಸರಾಗವಾಗಿ ಓದಿಸಿಕೊಳ್ಳುವ ಶೈಲಿ ಪ್ರಾಪ್ತವಾಗಿದೆಯೇ, ಪಠ್ಯದ ಉದ್ದೇಶ ಸಾಕಾರವಾಗಿದೆಯೇ, ಇಂತಹ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅನುವಾದವನ್ನು ಪರಿಷ್ಕರಿಸುತ್ತ ಹೋಗಬೇಕು. ಪ್ರತಿ ಅನುವಾದ ದಲ್ಲಿಯೂ ಕೆಲವು ಅಂಶಗಳು ಸೋರಿಹೋಗುವ ಸಾಧ್ಯತೆ ಇರುತ್ತದೆ. ಅಸಾಧ್ಯತೆಗಳತ್ತ ಮಾತ್ರ ಗಮನಹರಿಸದೆ, ಸಾಧ್ಯತೆಗಳನ್ನೇ ಆಧರಿಸಿ ಮುಂದುವರಿಯಬೇಕು. ಸಾಧ್ಯವಾದರೆ, ಎರಡೂ ಭಾಷೆಗಳನ್ನು ಬಲ್ಲವರಿಗೆ ಓದಲು ಕೊಟ್ಟು ಅವರಿಂದ ಪ್ರತಿಕ್ರಿಯೆಗಳನ್ನು ಪಡೆದು, ಸರ್ವಬಗೆಯಲ್ಲಿಯೂ ಪಠ್ಯದ ಪರಿಷ್ಕರಣೆ ಮಾಡುವ ಪ್ರಯತ್ನ ಮಾಡಬೇಕು.

೧೧.೨.೩.೪. ಅಂತಿಮ ಪ್ರತಿ

ಮೂಲಪಠ್ಯದೊಂದಿಗೆ ಲಕ್ಷ್ಯಪಠ್ಯದ ಪ್ರತಿಯನ್ನು ಸೂಕ್ಷ್ಮವಾಗಿ ಹೋಲಿಸಬೇಕು. ಮೂಲ ಪಠ್ಯದಿಂದ ಏನೂ ಉಳಿದುಹೋಗಿಲ್ಲವೆನ್ನುವುದನ್ನು ಧೃಡೀಕರಿಸಿಕೊಳ್ಳಬೇಕು. ಅರ್ಥೈಸಿ ಕೊಳ್ಳುವಲ್ಲಿ ಗಂಭೀರ ತಪ್ಪುಗಳಾಗಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು. ಲಕ್ಷ್ಯಪಠ್ಯದಲ್ಲಿ ಸರಾಗ ಓದಿಗೆ, ಸ್ಪಷ್ಟ ಗ್ರಹಿಕೆಗೆ ತೊಡಕುಗಳಿವೆಯೇ ಎಂದು ಪರೀಕ್ಷಿಸಬೇಕು. ಉದಾಹರಣೆಗೆ, ಇಂಗ್ಲೀಷಿನ ವಾಕ್ಯಸರಣಿಗೂ ಕನ್ನಡದ ವಾಕ್ಯಸರಣಿಗೂ ಮೂಲಭೂತ ವ್ಯತ್ಯಾಸಗಳಿವೆ. ಕನ್ನಡದಲ್ಲಿ ಕ್ರಿಯಾಪದ ವಾಕ್ಯದ ಅಂತ್ಯದಲ್ಲಿದ್ದರೆ, ಇಂಗ್ಲಿಷಿನಲ್ಲಿ ಅದು ಮಧ್ಯದಲ್ಲಿರುತ್ತದೆ. ಹೀಗಾಗಿ ಅನುವಾದಿಸುವಾಗ ಅನುಕ್ರಮದಲ್ಲಿ ಬದಲಾವಣೆ ಅಗತ್ಯವಾಗುತ್ತದೆ. ಇಂತಹ ಸೂಕ್ಷ್ಮ ಶೈಲಿಸಂಬಂಧೀ ವಿವರಗಳ ಕಡೆ ಗಮನಕೊಡಬೇಕು. ಕೊನೆಯದಾಗಿ, ಲಕ್ಷ್ಯಭಾಷೆಯಲ್ಲಿ ಯಾವುದೇ ವ್ಯಾಕರಣ, ಕಾಗುಣಿತ ಇತ್ಯಾದಿ ತಪ್ಪುಗಳಿಲ್ಲವೆಂದು ಖಚಿತ ಮಾಡಿಕೊಳ್ಳಬೇಕು. ಇದೀಗ ಅನುವಾದಿತ ಕೃತಿ ಸಿದ್ಧವಾದಂತೆ!

೧೧.೨.೪. ಅನುವಾದದ ಪ್ರಮುಖ ಸಿದ್ಧಾಂತಗಳು

ಅನುವಾದವನ್ನು ಕುರಿತು ಪ್ರತಿಪಾದಿಸಲಾಗಿರುವ ಪ್ರಮುಖ ಸಿದ್ಧಾಂತಗಳನ್ನು ಅರಿಯುವ ಮೂಲಕ ಅನುವಾದ ಕೌಶಲವನ್ನು ಕಲಿಯುವುದಕ್ಕೆ ಅಗತ್ಯವಿರುವ ಸ್ಪಷ್ಟತೆ ದೊರಕುತ್ತದೆ. ಇಲ್ಲಿ ಅಂತಹ ಆರು ಸಿದ್ಧಾಂತಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಲಾಗಿದೆ.

೧೧.೨.೪.೧. ಭಾಷಾಶಾಸ್ತ್ರೀಯ ಸಿದ್ಧಾಂತ

ಈ ಸಿದ್ಧಾಂತಕ್ಕೆ ಹಲವು ಮಜಲುಗಳಿವೆ. ಪ್ರಸಿದ್ಧ ಅನುವಾದ ತಜ್ಞ ಯೂಜೀನ್ ನೀದಾ ಅವರ ಪ್ರಕಾರ ಶೈಲಿಯ ಲಕ್ಷಣಗಳು ಮತ್ತು ಅಲಂಕಾರದ ತಂತ್ರಗಳಿಗೆ

ಭಾಷಾಶಾಸ್ತ್ರೀಯ ಸಿದ್ಧಾಂತ ಒತ್ತುಕೊಡುತ್ತದೆ. ಶಬ್ದ, ವಾಕ್ಯ, ವಿಷಯ–ತತ್ವಗಳ ಸ್ತರಗಳಲ್ಲಿ ಸಮಾನತೆಯನ್ನು ಸಾಧಿಸಬೇಕೆಂದು ಈ ಸಿದ್ಧಾಂತ ವಾದಿಸುತ್ತದೆ.

೧೧.೨.೪.೧. ಸಾಹಿತ್ಯಿಕ ಸಿದ್ಧಾಂತ

ಸಾಹಿತ್ಯಿಕ ಅನುವಾದದ ಅನುಭವಗಳ ಆಧಾರದ ಮೇಲೆ ತಜ್ಞರು ಪಠ್ಯಕ್ಕಿರುವ ಓಘ, ಲಯ, ಧ್ವನಿ, ಪ್ರತಿಮಾವಿನ್ಯಾಸ ಇತ್ಯಾದಿ ಲಕ್ಷಣಗಳನ್ನು ಮನದಲ್ಲಿಟ್ಟುಕೊಂಡು ಅನುವಾದಿಸ ಬೇಕೆಂದು ವಾದಿಸುತ್ತಾರೆ. ಅಂದರೆ, ಕೇವಲ ಭಾಷಿಕ ಲಕ್ಷಣಗಳ ಬದಲು ಪಠ್ಯದ ಸಾಹಿತ್ಯಿಕ ಲಕ್ಷಣಗಳಿಗೆ ಸೂಕ್ತ ಗಮನ ಕೊಡಬೇಕೆಂದು ಹೇಳುತ್ತಾರೆ. ಉದಾಹರಣೆಗೆ, ಕವನದ ಮೂಲಪಠ್ಯದಲ್ಲಿ ನಿಸರ್ಗಸಂಬಂಧಿ ಪ್ರತಿಮಾವಿನ್ಯಾಸವಿದ್ದರೆ (ಇಮೇಜರಿ), ಅನುವಾದದಲ್ಲಿ ಅಂತಹ ವಿನ್ಯಾಸ ಕಾಣೆಯಾಗಬಾರದು.

೧೧.೨.೪.೨. ಸಾಂಸ್ಕೃತಿಕ ಸಿದ್ಧಾಂತ

ಎರಡು ಭಾಷೆಗಳ ನಡುವಣ ಸಂವಹನದಲ್ಲಿ ಆ ಭಾಷೆಗಳು ಪ್ರತಿನಿಧಿಸುವ ಸಂಸ್ಕೃತಿಯೂ ಮುಖ್ಯವಾಗುತ್ತದೆ. ಮೂಲಪಠ್ಯ ಸೂಚಿಸುವ ಸಾಂಸ್ಕೃತಿಕ ವಿವರಗಳು ಅಥವಾ ಒಳಾರ್ಥಗಳಿಗೆ ಸೂಕ್ತವಾದ ಸಂವಾದಿ ಅಭಿವ್ಯಕ್ತಿ ಮಾರ್ಗ ಕಂಡುಹಿಡಿಯಬೇಕೆಂಬುದು ಇಲ್ಲಿನ ಉದ್ದೇಶ. ಉದಾಹರಣೆಗೆ, ಕನ್ನಡದಲ್ಲಿ ತಾಯಿಯ ಸಹೋದರರಿಗೆ 'ಮಾವ' ಎನ್ನುತ್ತೇವೆ. ಇಂಗ್ಲಿಷಿನಲ್ಲಿ ಸೂಕ್ತ ಏಕಪದ ಸಿಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಇಂಗ್ಲಿಷಿನಲ್ಲಿ ದೊರೆಯುವ 'ಅಂಕಲ್' ಎಂಬ ಪದವನ್ನು ಬಳಸಿಬಿಟ್ಟರೆ ಸಾಕಾಗದು. ಹಾಗೆ ಮಾಡಿದಲ್ಲಿ 'ಮಾವ' ಪದಕ್ಕಿರುವ ಸಾಂಸ್ಕೃತಿಕ ನಿರ್ದಿಷ್ಟತೆ ಸೋರಿಹೋಗುತ್ತದೆ.

೧೧.೨.೪.೪. ಸಾಮಾಜಿಕ ಭಾಷಾಶಾಸ್ತ್ರೀಯ ಸಿದ್ಧಾಂತ

ಈ ಸಿದ್ಧಾಂತದ ತತ್ವವೆಂದರೆ ಯಾವುದೇ ಪಠ್ಯ ಒಂದು ಸಾಮಾಜಿಕ ಸಂದರ್ಭದಲ್ಲಿ ನೆಲೆಗೊಂಡ ಭಾಷಿಕ ಪದಾರ್ಥ. ಆದುದರಿಂದ ಅನುವಾದವೂ ಕೂಡ ಆಯಾ ಸಾಮಾಜಿಕ ಲಕ್ಷಣಗಳು ಮರೆಯಾಗದ ರೀತಿಯಲ್ಲಿ ಆಗಬೇಕು. ಅನುವಾದಕರ ಸಾಮಾಜಿಕ ಹಿನ್ನೆಲೆಯೂ ಅನುವಾದಕ್ಕೆ ಆಯ್ಕೆ ಮಾಡಿಕೊಂಡ ಅರ್ಥವ್ಯಾಖ್ಯಾನದ (ಇಂಟರ್‌ಪ್ರಿಟೇಶನ್) ಮೇಲೆ ಪರಿಣಾಮ ಬೀರಬಹುದು. ಸಾಮಾಜಿಕ ಸಂದರ್ಭಗಳು ಪಠ್ಯವೊಂದರ ಹುಟ್ಟಿನಲ್ಲಿ ಹೇಗೋ, ಹಾಗೇ ಅದರ ಅನುವಾದ ಮತ್ತದರ ಓದಿನ ಮೇಲೆ ಕೂಡ ಪರಿಣಾಮ ಬೀರುತ್ತದೆ.

೧೧.೨.೪.೫. ಅರ್ಥವ್ಯಾಖ್ಯಾನಶಾಸ್ತ್ರೀಯ ಸಿದ್ಧಾಂತ

ಯಾವುದೇ ಪಠ್ಯದ ಅರ್ಥ ಅದನ್ನು ಅರ್ಥೈಸುವ ವಿಧಾನದ ಮೇಲೆ ಅವಲಂಬಿತ ವಾಗಿರುತ್ತದೆ ಎಂದು ಅರ್ಥವ್ಯಾಖ್ಯಾನಶಾಸ್ತ್ರದ (ಹರ್ಮಿನ್ಯೂಟಿಕ್ಸ್) ವಾದ. ಅರ್ಥವೆನ್ನುವುದು ಸಹಜವಾಗಿ ಪಠ್ಯದಲ್ಲಿ ಇರುವುದಿಲ್ಲ ಅಥವಾ ಓದುಗರ ಗ್ರಹಿಕೆಗೆ ಒದಗುವುದಿಲ್ಲ. ಓದುಗರ ಗ್ರಹಿಕೆಯ ಹಿಂದೆ ಒಂದು ಕ್ರಮವಿರುತ್ತದೆ ಮತ್ತು ಅದರ ಆಧಾರದ ಮೇಲೆಯೇ ಅರ್ಥವ್ಯಾಖ್ಯಾನ ಮಾಡುವುದು ಸಾಧ್ಯವಾಗುತ್ತದೆ. ಅನುವಾದ ಮಾಡುವಾಗಲೂ ಕೂಡ ಸಮಾನತೆಯ ಶೋಧಕ್ಕೆ ಮೊದಲು ಇಂತಹ ನಿರ್ದಿಷ್ಟ ಅರ್ಥವ್ಯಾಖ್ಯಾನವನ್ನು ಬಳಸಿಕೊಂಡು ಮುಂದು ವರಿಯಬೇಕಾಗುತ್ತದೆ.

೧೧.೨.೪.೬. ಸಂಜ್ಞಾಶಾಸ್ತ್ರೀಯ ಸಿದ್ಧಾಂತ

ಸಂಜ್ಞಾಶಾಸ್ತ್ರದ (ಸಿಮಿಯಾಟಿಕ್ಸ್) ಪ್ರಕಾರ ಸಂಜ್ಞೆಗಳ ಸಮಗ್ರ ವ್ಯವಸ್ಥೆಯಿಂದಾಗಿ (ಸಿಮಿಯಾಟಿಕ್ ಸಿಸ್ಟಮ್) ಸಂವಹನ ಸಾಧ್ಯವಾಗುತ್ತದೆ. ಸಂಜ್ಞೆಗಳ ಸಮಗ್ರ ವ್ಯವಸ್ಥೆ ಅಂದರೆ, ಸಂಜ್ಞೆಗಳ ಸಂವಹನಕ್ಕೆ ಆಧಾರವಾಗಿ ಆಯಾ ಸಮುದಾಯದಲ್ಲಿ ಅವುಗಳನ್ನು ಅರ್ಥೈಸಲು ಇರುವ ಸಂರಚನೆಗಳು, ಮನೋಭಾವಗಳು, ಒಡಂಬಡಿಕೆಗಳ ಒಟ್ಟಾರೆ ವ್ಯವಸ್ಥೆ. ಪ್ರತಿ ಭಾಷಿಕ / ಸಾಂಸ್ಕೃತಿಕ ಸಮುದಾಯವೂ ತನ್ನದೇ ವಿಶಿಷ್ಟ ಸಂಜ್ಞಾ–ವಿಧಾನಗಳನ್ನು ಹೊಂದಿರುತ್ತದೆ. ಸಮುದಾಯದ ಸದಸ್ಯರು ತಂತಮ್ಮ ಸಂಜ್ಞಾವ್ಯವಸ್ಥೆಯನ್ನು ಅರಿತುಕೊಳ್ಳುವುದು ಮೂಲಭೂತ ಸಾಮಾಜೀಕರಣದ (ಸೋಶಿಯಲೈಜ಼ೇಶನ್) ಭಾಗವಾಗಿ. ಹೀಗಾಗಿ ಅನುವಾದದ ಸಂದರ್ಭದಲ್ಲಿ, ಶಬ್ದಗಳನ್ನು ಅಥವಾ ಪ್ರತಿಮೆಗಳನ್ನು ಯಥಾವತ್ತಾಗಿ ಅನುವಾದಿಸುವ ಬದಲು, ಮೂಲಪಠ್ಯ ತನ್ನ ಸಂಸ್ಕೃತಿಯಲ್ಲಿ ಏನನ್ನು ಸೂಚಿಸುತ್ತಿದೆಯೋ, ಆ ಸೂಚನೆಗಳನ್ನು ಸಾಧಿಸುವ ಪಠ್ಯವಾಗಬೇಕು ಎನ್ನುವುದು ಈ ಸಿದ್ಧಾಂತದ ಸಂಕ್ಷಿಪ್ತ ವಾದ.

ಅಭ್ಯಾಸ ೧

೧. 'ಅ' ಮತ್ತು 'ಬ' ಗುಂಪುಗಳ ಕೆಳಗೆ ಕೊಟ್ಟಿರುವ ಶಬ್ದಗಳನ್ನು ಹೊಂದಿಸಿರಿ.

	ಅ		ಬ
೧.	ಮೂಲಭಾಷೆ	i.	ಮೆಟಫ್ರಾಸಿಸ್
೨.	ರೋಮನ್ ತತ್ವಜ್ಞಾನಿ	ii.	ಸೋಶಿಯಲೈಜ಼ೇಶನ್
೩.	ಅರ್ಥವ್ಯಾಖ್ಯಾನ	iii.	ಸಿಸೆರೋ
೪.	ನುಡಿಯ ವರ್ಗಾವಣೆ	iv.	ಇಂಟರಪ್ರಿಟೇಶನ್
೫.	ಸಾಮಾಜೀಕರಣ	v.	ಸೋರ್ಸ್ ಟೆಕ್ಸ್ಟ

೧೧.೩. ಅನುವಾದದ ಪ್ರಕಾರ ಮತ್ತು ಪ್ರಭೇದಗಳು

ಅನುವಾದ ಪ್ರಕ್ರಿಯೆಯನ್ನು ಮೂಲಭೂತವಾಗಿ ಪ್ರಕಾರ ಮತ್ತು ಪ್ರಭೇದವೆಂಬ ಅವಳಿ ವರ್ಗೀಕರಣದ ಅಡಿಯಲ್ಲಿ ಚರ್ಚಿಸಬಹುದು.

೧೧.೩.೧. ಪ್ರಕಾರಗಳು

ಅನುವಾದದ ಇತಿಹಾಸದಲ್ಲಿ ಬಗೆಬಗೆಯ ಮಾರ್ಗಗಳನ್ನು ಅನುಸರಿಸಿ ಅನುವಾದವನ್ನು ಪರಿಣಾಮಕಾರಿಯಾಗಿಸುವ ಪ್ರಯತ್ನಗಳಾಗಿವೆ. ಯಾವ ರೀತಿಯ ಅನುವಾದ ಮಾಡಬೇಕೆಂದು ನಿರ್ಧರಿಸಲು ಅನುವಾದದ ಪ್ರಕಾರಗಳ ಅರಿವು ಸಹಾಯಕವಾಗಬಹುದು. ಅನುವಾದಿಸಲು ಆಯ್ಕೆ ಮಾಡಿದ ಮಾರ್ಗವನ್ನು ಅನುಸರಿಸಿ ಕೆಲವು ಪ್ರಕಾರಗಳನ್ನು ಇಲ್ಲಿ ವಿವರಿಸಲಾಗುವುದು.

೧೧.೩.೧.೧. ಪದನಿಷ್ಠ ಅನುವಾದ

ಪದನಿಷ್ಠ ಅಥವಾ ಅಕ್ಷರಶಃ ಅನುವಾದವು ಒಟ್ಟಾರೆ ಅನುವಾದ ಪ್ರಕ್ರಿಯೆಯ ಮೊದಲ ಹೆಜ್ಜೆಯಾಗಿ ಬಳಕೆಯಾಗಬಹುದು ಅಥವಾ ಕೆಲವು ಸಂದರ್ಭಗಳಲ್ಲಿ ಅನುವಾದಿಸುವ ತಂತ್ರವೇ ಆಗಬಹುದು. ಇದು ಮೂಲಭಾಷೆಯ ರಚನೆಗಳನ್ನು ಅವಲಂಬಿಸಿದ ಅನುವಾದ ಕ್ರಮವಾಗಿದೆ. ಶಬ್ದಕ್ಕೆ ಶಬ್ದ, ವಾಕ್ಯಕ್ಕೆ ವಾಕ್ಯವನ್ನು ಸಮಾನವಾಗಿ ಬಳಸಿ ಮಾಡುವ ಈ ಅನುವಾದ ಕ್ರಮವನ್ನು ಎಲ್ಲ ಸಂದರ್ಭದಲ್ಲಿಯೂ ಅಂತಿಮ ವಿಧಾನವನ್ನಾಗಿ ಉಪಯೋಗಿಸ ಲಾಗದು. ಇದಕ್ಕೆ ಶಬ್ದಾನುವಾದವೆಂದೂ, ಅಥವಾ ಯಥಾವತ್ ಅನುವಾದವೆಂದೂ ಹೇಳಬಹುದು. ಕೆಳಗೆ ನಮೂದಿಸಿರುವ ಡ್ರೈಡನ್ನನ ವರ್ಗೀಕರಣದಲ್ಲಿ ಇದಕ್ಕೆ 'ಮೆಟಫ್ರೇಸ್' ಎನ್ನಲಾಗಿದೆ. ಅನುವಾದದಲ್ಲಿ ಯಥಾವತ್ ಅನುವಾದ ಪದ್ಧತಿ ಅಥವಾ ಮೂಲಪಠ್ಯವನ್ನು ಅಕ್ಷರಶಃ ಅನುವಾದಿಸಬೇಕೆಂಬ ಸಿದ್ಧಾಂತವನ್ನು ಧಾರ್ಮಿಕ ಪಠ್ಯಗಳ ಅನುವಾದಗಳ ಸಂದರ್ಭದಲ್ಲಿ ಪ್ರತಿಪಾದಿಸಲಾಗಿತ್ತು.

೧೧.೩.೧.೨. ರೂಪಾಂತರ ಮತ್ತು ಅಳವಡಿಕೆ

ಈ ಪರಿಕಲ್ಪನೆಯ ಅರ್ಥವೇನೆಂದರೆ ಮೂಲಪಠ್ಯವನ್ನು ಲಕ್ಷ್ಯಭಾಷೆಗೆ ಯಥಾವತ್ತಾಗಿ ವರ್ಗಾಯಿಸುವ ಬದಲು, ಅದರ ವಸ್ತು–ವಿಚಾರ–ಆಶಯಗಳನ್ನು ಎತ್ತಿಕೊಂಡು ಸರಿಸುಮಾರು ಅದೇ ವಸ್ತು–ವಿಚಾರ–ಆಶಯಗಳನ್ನು ಹೊಂದಿದ ಇನ್ನೊಂದು ಕೃತಿಯನ್ನು ಲಕ್ಷ್ಯಭಾಷೆಯಲ್ಲಿ ಮರುರೂಪಿಸುವುದು. ಕನ್ನಡದ ಪ್ರಸಿದ್ಧ ಅನುವಾದಕ ಬಿ.ಎಂ. ಶ್ರೀಕಂಠಯ್ಯ ಅವರು ಇಂಗ್ಲಿಷಿನಿಂದ ಕನ್ನಡಕ್ಕೆ ಮಾಡಿದ ಅನುವಾದಗಳು ಇದಕ್ಕೆ ಒಳ್ಳೆಯ ಉದಾಹರಣೆ. ಅದೇರೀತಿ ಶೇಕ್ಸಪಿಯರನ ನಾಟಕವನ್ನು ಹಿಂದಿ ಸಿನೆಮಾವಾಗಿ ಮರುರೂಪಿಸಿದ ವಿಶಾಲ ಭಾರಧ್ವಾಜ ಅವರ 'ಓಂಕಾರ'ವನ್ನು ನೆನೆಯಬಹುದು. ಹಾಗೆಯೇ ಅಮೇರಿಕದ ಪ್ರಸಿದ್ಧ ಟಿ.ವಿ. ಕಾರ್ಯಕ್ರಮವಾದ 'ಹು ವಾಂಟ್ಸ್ ಟು ಬಿ ಎ ಮಿಲಿಯನೈರ್' ಅವಲಂಬಿಸಿ ಮಾಡಿರುವ ಹಿಂದಿ ಟಿವಿ ಕಾರ್ಯಕ್ರಮ 'ಕೌನ್ ಬನೆಗಾ ಕರೋರಪತಿ' ಮತ್ತು ಕನ್ನಡವೂ ಸೇರಿದಂತೆ ಹಲವು ಭಾಷೆಗಳಲ್ಲಿ ಮಾಡಲಾಗಿರುವ ಇದರ ಅವತರಣಿಕೆಗಳನ್ನು ಗಮನಿಸ ಬಹುದು.

೧೧.೩.೧.೩. ಕ್ರಿಯಾತ್ಮಕ ಅನುವಾದ

ಅನುವಾದಶಾಸ್ತ್ರಜ್ಞ ಯೂಜೀನ್ ನೀದಾ ಅವರ ಪ್ರಕಾರ, ಲಕ್ಷ್ಯಭಾಷೆಗೆ ಮೂಲಭಾಷೆಯ ವಸ್ತುವಿಷಯವನ್ನು ವರ್ಗಾಯಿಸುವಾಗ ಮೂಲಪಠ್ಯವು ತನ್ನ ಓದುಗರ ಮೇಲೆ ಯಾವ ಬಗೆಯ ಸಾಂಸ್ಕೃತಿಕ ಪರಿಣಾಮ ಹೊಂದಿದೆಯೊ ಅದಕ್ಕೆ ಸಮನಾದ ಪರಿಣಾಮವನ್ನು ಲಕ್ಷ್ಯಭಾಷೆಯ ಓದುಗರು ಲಕ್ಷ್ಯಪಠ್ಯವನ್ನು ಓದಿದಾಗ ಉಂಟಾಗುವಂತೆ ಮಾಡುವುದು ಕ್ರಿಯಾತ್ಮಕ ಅನುವಾದ (Eugene A. Nida and Charles R. Taber (1982). The Theory and Practice of Translation. Leiden: E.J Brill). ಈ ಬಗೆಯ ಅನುವಾದದಲ್ಲಿ ಸೃಜನಶೀಲತೆಯೂ ಅಗತ್ಯ.

೧೧.೩.೧.೪. ಅರ್ಥನಿಷ್ಠ ಅನುವಾದ

ಇದೇ ರೀತಿ ನ್ಯುಮಾರ್ಕ್, ಪದನಿಷ್ಠ ಮತ್ತು ಭಾಷಾಶಾಸ್ತ್ರೀಯ ಮಾರ್ಗಗಳಿಗೆ ಬದಲಿಯಾಗಿ ಅರ್ಥಕ್ಕೆ ಒತ್ತುಕೊಡುವ ಅನುವಾದ ಮಾರ್ಗವನ್ನು ಸೂಚಿಸಿದ್ದಾರೆ. (Peter Newmark (1991). About Translation. Great Britain: Longdunn Press, Ltd.) ಅರ್ಥನಿಷ್ಠ ಮಾರ್ಗವೂ ಕೂಡ ಮೂಲಪಠ್ಯಕ್ಕೆ ನಿಷ್ಠವಾಗಿಯೇ ಇರುತ್ತದೆ. ಇದು ಮೂಲಭೂತ ಪಠ್ಯದ ರಚನೆ ಮತ್ತು ಅರ್ಥಗಳನ್ನು ವರ್ಗಾಯಿಸುವುದಕ್ಕೆ ಜೋರು ಕೊಡುವುದರಿಂದ, ಲೇಖಕಕೇಂದ್ರಿತವೂ ಆಗಿರುತ್ತದೆ.

೧೧.೩.೧.೫. ಜಾನ್ ಡ್ರೈಡನ್ನನ ಪ್ರಕಾರಗಳು

ಇಂಗ್ಲಿಷ್ ಲೇಖಕ ಡ್ರೈಡನ್ನನು ಮೂರು ಪ್ರಕಾರದ ಅನುವಾದಗಳನ್ನು ಸೂಚಿಸಿದ್ದಾನೆ: ಮೆಟಫ್ಲೇಸ್, ಪ್ಯಾರಫ್ಲೇಸ್ ಮತ್ತು ಇಮಿಟೇಶನ್. ಇದ್ದುದನ್ನು ಇದ್ದ ಹಾಗೆಯೇ ಅಕ್ಷರಶಃ ಅಥವಾ ಯಥಾವತ್ ಅನುವಾದಿಸುವುದು ಮೆಟಫ್ಲೇಸ್. ಮೂಲ ಭಾವದ ಸಂವಹನಕ್ಕೆ ಒತ್ತುಕೊಟ್ಟು, ಪಠ್ಯವನ್ನು ಪುರ್ನನಿರೂಪಿಸುವುದು ಭಾವಾನುವಾದ (ಪ್ಯಾರಾಫ್ಲೇಸ್). ಮೂಲಪಠ್ಯದ ಕೆಲವು ಅಂಶಗಳನ್ನಿರಿಸಿಕೊಂಡು, ಕೆಲವು ಅಂಶಗಳನ್ನು ಮಾರ್ಪಡಿಸಿ, ಹೊಸ ವಸ್ತುವಿಚಾರಗಳನ್ನು ಸೇರಿಸಿಕೊಂಡು ಬರೆಯುವುದನ್ನು ಡ್ರೈಡನ್ನನು ಇಮಿಟೇಶನ್ (ಅನುಕರಣೆ) ಎಂದು ಕರೆದಿದ್ದಾನೆ. ಈ ಮೂರನೆಯ ವಿಧವನ್ನು ಅಳವಡಿಕೆಯ ವಿಧಾನಕ್ಕೂ ಹೋಲಿಸಬಹುದು.

೧೧.೩.೧.೬. ರೋಮನ್ ಯಾಕೋಬ್ಸನ್‌ನ ಪ್ರಕಾರಗಳು

ರಶಿಯಾ ಮೂಲದ ಭಾಷಾಶಾಸ್ತ್ರಜ್ಞನಾದ ರೋಮನ್ ಯಾಕೋಬ್ಸನ್ನನು ಮೂರು ಬಗೆಯ ಅನುವಾದಗಳನ್ನು ಗುರುತಿಸಿದ್ದಾನೆ: ಅಂತರ್‌ಭಾಷಿಕ, ಭಾಷೆಯ ಆಂತರಿಕ ಮತ್ತು ಅಂತರ್–ಸಂಜ್ಞಾತ್ಮಕ. ನಾವು ಸಾಮಾನ್ಯವಾಗಿ ಅನುವಾದವೆಂದು ಕರೆಯುವ ಎರಡು ಭಾಷೆಗಳ ನಡುವಿನ ವ್ಯವಹಾರಕ್ಕೆ ಯಾಕೋಬ್ಸನ್ ಅಂತರ್–ಭಾಷಿಕ (ಇಂಟರ್‌ಲಿಂಗ್ವಲ್) ಅನುವಾದ ಎನ್ನುತ್ತಾನೆ. ಒಂದು ಭಾಷೆಯ ಸ್ತರದಲ್ಲಿ ವಿವಿಧ ಆಡುನುಡಿಗಳ ನಡುವೆ, ಹಳೆಗನ್ನಡದಿಂದ ಹೊಸಗನ್ನಡಕ್ಕೆ ಅಥವಾ ಕಾವ್ಯದಿಂದ ಗದ್ಯಕ್ಕೆ ಇತ್ಯಾದಿ ನಡೆಯುವ ಅನುವಾದಕ್ಕೆ ಭಾಷೆಯ ಆಂತರಿಕ (ಇಂಟ್ರಾಲಿಂಗ್ವಲ್) ಅನುವಾದವೆಂದಿದ್ದಾನೆ. ಮೂರನೆಯದಾಗಿ, ಒಂದು ಸಂಜ್ಞಾವ್ಯವಸ್ಥೆಯಿಂದ (ಉದಾ: ಭಾಷೆಯಿಂದ) ಇನ್ನೊಂದು ಸಂಜ್ಞಾವ್ಯವಸ್ಥೆಗೆ (ಉದಾ: ಗ್ರಾಫ್ಸು, ನಕ್ಷೆ ಇತ್ಯಾದಿ ದೃಶ್ಯ ಪ್ರಸ್ತುತಿಗಳಿಗೆ) ನಡೆಯುವ ಅನುವಾದವನ್ನು ಯಾಕೋಬ್ಸನ್ನನು ಅಂತರ್–ಸಂಜ್ಞಾತ್ಮಕ (ಇಂಟರ್‌ಸಿಮಿಯಾಟಿಕ್) ಅನುವಾದ ಎನ್ನುತ್ತಾನೆ.

೧೧.೩.೨. ಅನುವಾದದ ಪ್ರಭೇದಗಳು

ಅನುವಾದಕ್ಕೆ ಆಯ್ದುಕೊಂಡಿರುವ ಪಠ್ಯದ ವಿಷಯವನ್ನಾಧರಿಸಿ ಸಾಹಿತ್ಯಿಕ ಮತ್ತು ಸಾಹಿತ್ಯೇತರ ಎಂದು ಎರಡು ಪ್ರಮುಖ ಪ್ರಭೇದಗಳನ್ನು ಗುರುತಿಸಬಹುದು. ಪ್ರಭೇದವನ್ನು ಕುರಿತು ಸ್ಪಷ್ಟತೆ ಹೊಂದಿರುವುದು ಅನುವಾದ ಕಾರ್ಯಕ್ಕೆ ಸಹಾಯಕ. ಎಲ್ಲ ವಿಷಯಕ್ಕೆ

ಸಂಬಂಧಿಸಿದ ಪಠ್ಯಗಳ ಅನುವಾದಗಳನ್ನೂ ಒಂದೇ ರೀತಿಯಲ್ಲಿ ಮಾಡಲಾಗುವುದಿಲ್ಲ. ಪ್ರತಿ ವಿಷಯ ಅಥವಾ ಕ್ಷೇತ್ರಗಳಿಗೂ ಅವುಗಳದೇ ಆದ ನಿರ್ದಿಷ್ಟ ಲಕ್ಷಣಗಳು ಮತ್ತು ಅಗತ್ಯತೆಗಳು ಇರುತ್ತವೆ.

೧೧.೩.೨.೧. ಸಾಹಿತ್ಯಿಕ ಅನುವಾದ

ಸಾಹಿತ್ಯ ಕೃತಿಗಳ ಅನುವಾದ ವಿಸ್ತಾರವಾದ ಚರ್ಚೆ ಹಾಗೂ ವಿಶ್ಲೇಷಣೆಗೆ ಒಳಪಟ್ಟ ವಿಷಯ. ಸಾಹಿತ್ಯಿಕ ಪಠ್ಯಗಳು ಇತರ ಪಠ್ಯಗಳಿಗಿಂತ ಅನುವಾದಕನಿಗೆ ಹೆಚ್ಚು ಸಮಸ್ಯೆಗಳನ್ನು ಒಡ್ಡಬಹುದು. ಮೂಲಭಾಷೆಯ ಸಾಹಿತ್ಯಿಕ ಪರಂಪರೆಯಲ್ಲಿ ಬೇರೂರಿರುವ ಕೃತಿಗಳನ್ನು ಅನುವಾದಕ ಬೇರೆಯೇ ಬಗೆಯ ಸಾಹಿತ್ಯಿಕ ಪರಂಪರೆಯನ್ನು ಹೊಂದಿರುವ ಲಕ್ಷ್ಯಭಾಷೆಗೆ ಅನುವಾದ ಮಾಡುವಾಗ ಎಚ್ಚರಿಕೆ ವಹಿಸಬೇಕಾಗುತ್ತದೆ. ಸಾಹಿತ್ಯಿಕ ಅನುವಾದದ ವೈಶಿಷ್ಟ್ಯತೆ ಯೆಂದರೆ ಇಲ್ಲಿ ಕೇವಲ ಮಾಹಿತಿ ಅಥವಾ ವಿಷಯ ಮಾತ್ರ ಮುಖ್ಯವಾಗುವುದಿಲ್ಲ. ಉದಾಹರಣೆಗೆ ಸುದ್ದಿಪತ್ರಿಕೆಯ ವರದಿಯೊಂದರ ಅನುವಾದದಲ್ಲಿ ಮಾಹಿತಿಯ ನಿಖರತೆ ಮತ್ತು ಸ್ಪಷ್ಟತೆಗಳು ಮುಖ್ಯವಾಗುತ್ತವೆ. ಆದರೆ ಕವನವೊಂದರ ಅನುವಾದದಲ್ಲಿ ಮೂಲ ಭಾಷೆಯ ಕವನದ ರಚನೆ, ಕಾವ್ಯಪ್ರಕಾರ, ಲಯ, ನುಡಿಗಟ್ಟು, ಪ್ರತಿಮಾವಿನ್ಯಾಸ, ಧ್ವನಿ, ಇತ್ಯಾದಿಗಳ ಜೊತೆಗೆ ಲಕ್ಷ್ಯಪಠ್ಯವು ಚೆನ್ನಾಗಿ ಓದಿಸಿಕೊಳ್ಳುವ ಗುಣವನ್ನೂ ಪಡೆದಿರ ಬೇಕಾಗಿರುತ್ತದೆ. ವಾಚ್ಯಾರ್ಥ, ಧ್ವನ್ಯಾರ್ಥ, ಒಳಾರ್ಥಗಳೆಲ್ಲವೂ ಸಾಹಿತ್ಯದಲ್ಲಿ ಅಷ್ಟೇ ಮುಖ್ಯ. ಅನುವಾದಕ ಇವೆಲ್ಲವುಗಳಿಗೆ ತಕ್ಕಮಟ್ಟಿನ ಗಮನ ಕೊಡಬೇಕಾಗುತ್ತದೆ. ಮೂಲಪಠ್ಯದ ಸಾಹಿತ್ಯಿಕ ಮತ್ತು ಭಾಷಿಕ ಲಕ್ಷಣಗಳ ಜೊತೆಗೆ ಅದು ಧ್ವನಿಸುವ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಅರ್ಥಗಳನ್ನೂ ಲಕ್ಷ್ಯಪಠ್ಯ ಬಿಂಬಿಸಬೇಕು. ಸಾಹಿತ್ಯಿಕ ಅನುವಾದಗಳಲ್ಲಿಯೂ ಕಾವ್ಯದ ಅನುವಾದಕ್ಕೆ ತನ್ನದೇ ವಿಶಿಷ್ಟತೆ, ನಾಟಕ, ಗದ್ಯ ಕಥನಗಳಿಗೆ ತಮ್ಮದೇ ವಿಶಿಷ್ಟತೆ ಗಳಿರುತ್ತವೆ.

ಉದಾಹರಣೆಗಳು

ಮೂಲ ಇಂಗ್ಲಿಷ್ ಪಠ್ಯ

My heart leaps up when I behold
My heart leaps up when I behold
A rainbow in the sky:
So was it when my life began;
So is it now I am a man;
So be it when I shall grow old,
Or let me die:
The Child is father of the Man;
And I could wish my days to be
Bound each to each by natural piety.

- William Wordsworth

ಬಿ.ಎಂ. ಶ್ರೀಕಂಠಯ್ಯನವರ ಅನುವಾದ

ಮುಗಿಲಿನಲಿ ಮಳೆಬಿಲ್ಲು ಕಾಣುತಲೆ ನಾನು
ನೆಗೆದು ಕುಣಿದಾಡುವುದು ಹೃದಯ ತಾನು!
ಅಂತೆ ಇದ್ದುದು ಮೊದಲು ಚಿಕ್ಕಂದಿನಂದು;
ಅಂತೆ ಇಹುದೀ ಮೆರೆವ ಯೌವನದಲಿಂದು,
ಅಂತೆ ಇರಲೆನಗಿನ್ನು ಮುಪ್ಪಿನಲೆ ಮುಂದೆ–
ಅಂತಿರದೆ, ಸಾವು ಬರಲಂದೆ!
ಮನುಜನಿಗೆ ಮಗು ತಂದೆ–ನಾನದನು ಬಗೆದು,
ಹೊಂದಿಸಲು ಬಯಸುವೆನು ದಿನಗಳನು ತೆಗೆದು
ಒಂದಕೊಂದನು ಪ್ರಕೃತಿಭಕ್ತಿಯಲಿ ಬಿಗಿದು.

೧೧.೩.೨.೨. ಸಾಹಿತ್ಯೇತರ ಅನುವಾದ

ಸಾಹಿತ್ಯಿಕ ಪಠ್ಯಗಳಲ್ಲಿ ವಸ್ತು ಮತ್ತು ಶೈಲಿಗಳೆರಡೂ ಸಮಾನ ಮಹತ್ವ ಹೊಂದಿದ್ದರೆ ಸಾಹಿತ್ಯೇತರ ಪಠ್ಯಗಳಲ್ಲಿ ವಸ್ತು ಸಾಮಾನ್ಯವಾಗಿ ಶೈಲಿಗಿಂತ ಹೆಚ್ಚು ಮಹತ್ವದ್ದಾಗಿರುತ್ತದೆ. ಆದ್ದರಿಂದ ಅನುವಾದದಲ್ಲಿಯೂ ಮೂಲಪಠ್ಯದಲ್ಲಿರುವ ಮಾಹಿತಿಯ ಸಂವಹನಕ್ಕೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ. ಸಾಹಿತ್ಯೇತರ ವಿಷಯಗಳೆಂದರೆ ಕಾನೂನು ದಾಖಲೆಗಳು, ವೈಚಾರಿಕ ಅಥವಾ ವೈಜ್ಞಾನಿಕ ಬರಹಗಳು, ತಾಂತ್ರಿಕ ಮಾಹಿತಿಗಳು, ಸಮಾಜಶಾಸ್ತ್ರೀಯ ಪಠ್ಯಗಳು, ವ್ಯಾವಹಾರಿಕ ದಾಖಲೆಗಳು, ಆಡಳಿತಾತ್ಮಕ ಮಾಹಿತಿಗಳು ಇತ್ಯಾದಿ ಹಲವು ಬಗೆಯ ಗದ್ಯ ಬರಹಗಳಾಗಿರುತ್ತವೆ. ಈ ಎಲ್ಲ ವಿಷಯ–ಸಂಬಂಧೀ ಪಠ್ಯಗಳಲ್ಲೂ ಕೂಡ ಶೈಲಿ, ನುಡಿಗಟ್ಟು, ಧ್ವನಿ ಮುಂತಾದ ಲಕ್ಷಣಗಳಿರಬಹುದು. ಆದರೆ ಈ ಪಠ್ಯಗಳ ಪ್ರಥಮ ಆದ್ಯತೆ ಅವು ಸಂವಹಿಸಬಯಸುವ ಮಾಹಿತಿಯಾಗಿರುತ್ತದೆ. ಅಲ್ಲದೆ ಲಕ್ಷ್ಯಪಠ್ಯದಲ್ಲಿ ಮಾಹಿತಿ ಸಮರ್ಥವಾಗಿ ಅಭಿವ್ಯಕ್ತಿಗೊಂಡು ಶೈಲಿ ಮತ್ತಿತರ ಲಕ್ಷಣಗಳಲ್ಲಿ ನ್ಯೂನತೆ ಉಳಿದುಕೊಂಡರೆ ಅದರಿಂದ ಅನುವಾದಿತ ಪಠ್ಯಕ್ಕೆ ಅಷ್ಟೇನೂ ಸಮಸ್ಯೆ ಆಗುವುದಿಲ್ಲ. ಓದುಗರಿಗೂ ಕೂಡ ವಿಷಯ ಕೇಂದ್ರಿತ ಪಠ್ಯಗಳಿಂದ ದೊರೆಯುವ ಮಾಹಿತಿಗಳಲ್ಲಿಯೇ ಆಸಕ್ತಿ ಇರುತ್ತದೆ.

ಉದಾಹರಣೆಗಳು

ಮೂಲ ಕನ್ನಡ ಪಠ್ಯ

ವಿದ್ಯುಚ್ಛಕ್ತಿ ಇಂದು ಮನುಷ್ಯನ ಜೀವನದಲ್ಲಿ ಅತ್ಯಂತ ಅಗತ್ಯದ ಸಂಗತಿಯಾಗಿದೆ. ವಿದ್ಯುಚ್ಛಕ್ತಿಯನ್ನು ಅನೇಕ ರೀತಿಯಲ್ಲಿ ಉತ್ಪಾದಿಸಿ ಎಲ್ಲೆಡೆಗೂ ಪಸರಿಸಲಾಗುತ್ತದೆ. ಕಲ್ಲಿದ್ದಲಿನಲ್ಲಿ ಅಡಕವಾಗಿರುವ ಶಕ್ತಿಯಿಂದ, ಧುಮುಕುವ ನೀರಿನಿಂದ, ಅಣುಶಕ್ತಿಯ ಸಹಾಯದಿಂದ ಇತ್ಯಾದಿ ಮೂಲಗಳಿಂದ ವಿದ್ಯುತ್ತನ್ನು ಉತ್ಪಾದಿಸಲಾಗುತ್ತದೆ. ದಿನದ ಇಪ್ಪತ್ನಾಲ್ಕು ಗಂಟೆಯೂ ನಾವು ಅದನ್ನು ಒಂದಿಲ್ಲೊಂದು ರೀತಿಯಲ್ಲಿ ಉಪಯೋಗಿಸುತ್ತೇವೆ. ಇದರ ಸಂವಹನಕ್ಕೆ ಎಲ್ಲಾ ಪದಾರ್ಥಗಳೂ ಸಹಕರಿಸುವುದಿಲ್ಲ. ಇದನ್ನು ತಮ್ಮ ಮೂಲಕ

ಸಂವಹಿಸಲು ಬಿಡುವ ವಸ್ತುಗಳಿಗೆ ವಿದ್ಯುದ್ವಾಹಕಗಳು ಎಂದು ಕರೆಯುತ್ತಾರೆ. ತಾಮ್ರ ಅತ್ಯಂತ ಉತ್ತಮ ವಿದ್ಯುದ್ವಾಹಕ.

ಇದರ ಇಂಗ್ಲಿಷ್ ಅನುವಾದ

Electricity is an essential part of man's life today. Electricity is produced using different methods and is transmitted far and wide. Electricity is produced by the energy latent in coal, falling water, nuclear energy etc. We use electricity for various purposes day in and day out. Materials that allow electricity to flow through them are called good conductors of electricity. Copper is the best conductor of electricity.

೧೧.೩.೨.೩. ಯಂತ್ರಮುಖೀ ಅನುವಾದ

ಇಪ್ಪತ್ತೊಂದನೇ ಶತಮಾನದಲ್ಲಿ ಅನುವಾದ ಕ್ಷೇತ್ರದಲ್ಲಿ ನಡೆದಿರುವ ಅತಿಮುಖ್ಯ ಬೆಳವಣಿಗೆಯೆಂದರೆ ಕೃತಕ ಬುದ್ಧಿಮತ್ತೆಯ ಬಳಕೆ. ಎ.ಆಯ್. (ಎ.ಐ.) ತಂತ್ರಜ್ಞಾನವು ಮನುಷ್ಯರ ಮಧ್ಯಸ್ತಿಕೆಯಿಲ್ಲದೆಯೇ ಯಾವುದೇ ಪಠ್ಯವನ್ನು ಸೂಚಿತ ಅಥವಾ ಆಯ್ದ ಭಾಷೆಗೆ ಅನುವಾದಿಸುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಈ ಕ್ಷೇತ್ರದಲ್ಲಿ ಪ್ರತಿದಿನವೂ ಗಮನಾರ್ಹ ಬೆಳವಣಿಗೆಯಾಗುತ್ತಿದೆ. ಸಧ್ಯ ಬಳಕೆಯಲ್ಲಿರುವ 'ಗೂಗಲ್ ಟ್ರಾನ್ಸಲೇಟ್'ನಂತಹ ಯಂತ್ರಮುಖೀ ಅನುವಾದ ತಂತ್ರಜ್ಞಾನಗಳು ಅನೌಪಚಾರಿಕ ಅನುವಾದದ ಅಗತ್ಯಗಳನ್ನು ಪೂರೈಸುತ್ತಿವೆ. ಸಧ್ಯಕ್ಕೆ ಇವುಗಳಿಂದ ಔಪಚಾರಿಕ ಮತ್ತು ಗಂಭೀರ ಅನುವಾದಗಳನ್ನು ನಿರೀಕ್ಷಿಸಲಾಗದು. ಆದರೂ ಮುಂದಿನ ದಿನಗಳಲ್ಲಿ ಕ್ಷಿಪ್ರವಾಗಿ ಅನುವಾದ ಮಾಡಿಕೊಡುವ ಈ ತಂತ್ರಜ್ಞಾನವು ಅನುವಾದ ಮತ್ತು ಸಂವಹನ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬೆಳವಣಿಗೆಗಳನ್ನು ಸಾಧ್ಯವಾಗಿಸುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಅನುವಾದದ ಸೇವೆಗಳು ವೇಗದಲ್ಲಿ ವೃದ್ಧಿಯನ್ನು ಪಡೆಯುವುದರೊಂದಿಗೆ, ಆರ್ಥಿಕ ದೃಷ್ಟಿಯಿಂದ ಅಗ್ಗವೂ ಆಗುವುದರ ಮೂಲಕ ಅನುವಾದ ಸೇವೆಗಳು ಮತ್ತಷ್ಟು ಜನಪ್ರಿಯವಾಗಬಹುದು.

ಉದಾಹರಣೆಗಳು

ಕನ್ನಡ ಪಠ್ಯ (ಕುವೆಂಪು ಅವರ ವಿಶ್ವಮಾನವ ಸಂದೇಶದ ಸಾಲು)

ಪ್ರತಿಯೊಂದು ಮಗುವೂ ಹುಟ್ಟುತ್ತಲೆ – ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಮೇಲಿನ ಸಾಲನ್ನು 'ಗೂಗಲ್ ಟ್ರಾನ್ಸಲೇಟ್' ಮೂಲಕ ಅನುವಾದಿಸಿದಾಗ ತಯಾರಾದ ಹಿಂದಿ ಪಠ್ಯ (ಇದು ಯಂತ್ರಮುಖೀ ಅನುವಾದ, ತಪ್ಪುಗಳೂ ಇವೆ. ಉದಾಹರಣೆಗೆ 'ವಿದ್ಯೆಯ ಕರ್ತ್ಯವ್ಯ' ಪದವನ್ನು 'ಮತದಾತಾವೋ ಕಾ ಕರ್ತವ್ಯ' ಅಂದರೆ 'ಓಟು ಹಾಕುವವರ ಕರ್ತವ್ಯ' ಎಂದು ಅನುವಾದಿಸಲಾಗಿದೆ).

हर बच्चा पैदा होता है – सार्वभौमिक। बडे? होकर, हम इसे अल्प बना देते हैं। इसे फिर से सार्वभौमिक बनाना मतदाताओं का कर्तव्य होना चाहिए।

ಅಭ್ಯಾಸ ೨

೧. ಕೆಳಗೆ ನಮೂದಿಸಿರುವ ಪದಗಳಲ್ಲಿ ಯಾವ ಪದ ರೋಮನ್ ಯಾಕೋಬ್ಸನ್ನನ ಸಿದ್ಧಾಂತಕ್ಕೆ ಸಂಬಂಧಿಸಿದೆ?

i. ಇಮಿಟೇಶನ್ ii. ಸೋಶಿಯಲೈಜ಼ೇಶನ್ iii. ಅಂತರ್–ಸಂಜ್ಞಾತ್ಮಕ iv. ಲಕ್ಷ್ಯಪಠ್ಯ

೨. ಕೆಳಗೆ ನಮೂದಿಸಿರುವ ಪದಗಳಲ್ಲಿ ಯಾವ ಪದ ಅನುವಾದದ ಪ್ರಕಾರವನ್ನು ಸೂಚಿಸುವುದಿಲ್ಲ?

i. ಪದನಿಷ್ಠ ii. ಕ್ರಿಯಾತ್ಮಕ iii. ಅರ್ಥನಿಷ್ಠ iv. ಪ್ರತಿಮಾವಿನ್ಯಾಸ

೩. ಸಾಹಿತ್ಯಿಕ ಅನುವಾದದಲ್ಲಿ ಮುಖ್ಯವಾಗುವ ಅಂಶವನ್ನು ಗುರುತಿಸಿ.

i. ಧ್ವನ್ಯಾರ್ಥ ii. ಅಂತರಭಾಷಿಕ iii. ವೈಚಾರಿಕ iv. ಔಪಚಾರಿಕ

೪. ಯಂತ್ರಮುಖೀ ಅನುವಾದಕ್ಕೆ ಸಂಬಂಧಿಸಿದ ಶಬ್ದವನ್ನು ಗುರುತಿಸಿ.

i. ಆಡಳಿತಾತ್ಮಕ ಮಾಹಿತಿ ii. ಏ.ಆಯ್. ತಂತ್ರಜ್ಞಾನ iii. ಪರಂಪರೆ iv. ಭಾವಾನುವಾದ

೫. ಐದು ಇಂಗ್ಲಿಷ್ ನಾಣ್ನುಡಿಗಳನ್ನು ಕನ್ನಡಕ್ಕೆ ಅನುವಾದಿಸಿರಿ.

೧೧.೪. ಪ್ರಮುಖ ಪರಿಕಲ್ಪನೆಗಳು ಮತ್ತು ತಂತ್ರಗಳು

೧೧.೪.೧. ಪ್ರಮುಖ ಪರಿಕಲ್ಪನೆಗಳು

ಅನುವಾದ ಪ್ರಕ್ರಿಯೆಯ ವಿವಿಧ ಅಂಶಗಳ ಮೇಲೆ ಬೆಳಕು ಚೆಲ್ಲುವ ಒಂದು ಬಗೆಯೆಂದರೆ ಈ ಕ್ಷೇತ್ರದಲ್ಲಿ ಪ್ರಮುಖವೆಂದು ಪರಿಗಣಿಸಲಾಗಿರುವ ಪರಿಕಲ್ಪನೆಗಳನ್ನು ಅರ್ಥಮಾಡಿಕೊಂಡು ಮುಂದುವರಿಯುವುದು. ಅನುವಾದಕ್ಕೆ ತೊಡಗುವ ಮೊದಲು ಕೈಗೆತ್ತಿಕೊಂಡಿರುವ ಕಾರ್ಯದ ಕುರಿತಾಗಿ ಸ್ಪಷ್ಟತೆ ಪಡೆಯಲು ಈ ಪರಿಕಲ್ಪನೆಗಳ ಅಧ್ಯಯನ ಸಹಾಯ ಮಾಡುತ್ತದೆ.

೧೧.೪.೧.೧. ಮೂಲಭಾಷೆ ಮತ್ತು ಮೂಲಪಠ್ಯ

ಅನುವಾದ ಕ್ಷೇತ್ರದಲ್ಲಿ ಮೂಲಭಾಷೆ ಎಂದರೆ ಅನುವಾದಿಸಲು ಕೈಗೆತ್ತಿಕೊಂಡಿರುವ ಪಠ್ಯ ಯಾವ ಭಾಷೆಯಲ್ಲಿದೆಯೋ ಅದು. ಹಾಗೆಯೇ ಮೂಲಪಠ್ಯವೆಂದರೆ ಅನುವಾದಿಸಲು ಕೈಗೆತ್ತಿಕೊಂಡಿರುವ ಪಠ್ಯ. ಸಾಮಾನ್ಯವಾಗಿ ಮೂಲ ಅಥವಾ ಲಕ್ಷ್ಯಭಾಷೆಗಳಲ್ಲೊಂದು ಅನುವಾದಕನ ಸ್ವಾಭಾವಿಕ ನುಡಿಯೂ ಆಗಿರುವುದು ಅಪೇಕ್ಷಣೀಯ. ಮೂಲಭಾಷೆ ಮತ್ತು ಲಕ್ಷ್ಯಭಾಷೆಗಳಲ್ಲಿ ಕೆಲವು ಬಾರಿ ಹತ್ತಿರದ ಹೋಲಿಕೆ ಇದ್ದರೆ ಕೆಲವು ಬಾರಿ ತುಂಬ ವ್ಯತ್ಯಾಸಗಳಿರುತ್ತವೆ. ಉದಾಹರಣೆಗೆ, ಭಾರತೀಯ ಭಾಷೆಗಳ ನಡುವೆ ಹಲವಾರು ಸಮಾನತೆಗಳಿವೆ – ಶಬ್ದ, ವಾಕ್ಯರಚನೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ವಿವರಗಳು

ಇತ್ಯಾದಿ. ಐರೋಪ್ಯ ಭಾಷೆಗಳು ಮತ್ತು ಭಾರತೀಯ ಭಾಷೆಗಳ ನಡುವೆ ಇರುವ ಹಲವಾರು ಭಿನ್ನತೆಗಳನ್ನು ನಿವಾರಿಸುವುದೂ ಸಹ ಅನುವಾದದ ವಿಶಿಷ್ಟ ಸವಾಲಾಗಿರುತ್ತದೆ. ಒಂದು ಭೌತಿಕ ವಸ್ತುವಾಗಿ ಮೂಲಪಠ್ಯವನ್ನು ನಾವು ನಿಖರವಾಗಿ ಗುರುತಿಸಬಹುದಾದರೂ ಅದಕ್ಕೆ ವಿಭಿನ್ನ ಅರ್ಥಗಳಿರುವುದು ಸಾಧ್ಯ. ಆದುದರಿಂದ, ಅನುವಾದ ಮಾಡುವ ಮೊದಲು ಪಠ್ಯದ ವ್ಯಾಖ್ಯಾನವನ್ನು (interpretation) ಕುರಿತಂತೆ ಅನುವಾದಕನಿಗೆ ತನ್ನದೇ ಆದ ಸ್ಪಷ್ಟತೆ ಇರುವುದು ಅನಿವಾರ್ಯ.

೧೧.೪.೧.೨. ಲಕ್ಷ್ಯಭಾಷೆ ಮತ್ತು ಲಕ್ಷ್ಯಪಠ್ಯ

ಮೇಲೆ ವಿವರಿಸಿದ ಮೂಲಭಾಷೆ ಮತ್ತು ಮೂಲಪಠ್ಯಕ್ಕೆ ಸಂವಾದಿಯಾಗಿ ಲಕ್ಷ್ಯಭಾಷೆಯೆಂದರೆ ಯಾವ ಭಾಷೆಗೆ ಅನುವಾದವಾಗುತ್ತಿದೆಯೋ ಅದು ಮತ್ತು ಲಕ್ಷ್ಯಪಠ್ಯವೆಂದರೆ ಅನುವಾದಿತ ಕೃತಿ. ಅಂತಿಮವಾಗಿ ಓದುಗರ ಗ್ರಹಿಕೆಗೆ ದಕ್ಕುವುದು ಪ್ರತಿಯೊಂದು ಕೃತಿಗೂ ಮುಖ್ಯವಾದ ಗುರಿಯಾಗಿರುವುದರಿಂದ ಅನುವಾದಿತ ಕೃತಿಯು ಲಕ್ಷ್ಯಭಾಷೆಯಲ್ಲಿ ಸರಾಗವಾಗಿರುವುದು ಮುಖ್ಯ. ಆದುದರಿಂದ ಮೂಲಪಠ್ಯದ ಅರ್ಥವು ಎಷ್ಟು ಮುಖ್ಯವೋ ಲಕ್ಷ್ಯಪಠ್ಯ ಓದಿಸಿಕೊಳ್ಳುವ ಗುಣ ಹೊಂದಿರುವುದೂ ಅಷ್ಟೇ ಮುಖ್ಯ.

೧೧.೪.೧.೩. ಅನುವಾದ ಸಾಧ್ಯತೆ

ಎಲ್ಲ ಭಾಷೆಗಳ ಎಲ್ಲ ಪಠ್ಯಗಳೂ ಎಲ್ಲ ಭಾಷೆಗಳಿಗೂ ಸಮಾನವಾಗಿ ಭಾಷಾಂತರವಾಗುವುದು ಸಾಧ್ಯವೇ? ಕೆಲವು ಅಂಶಗಳನ್ನು ಸುಲಭವಾಗಿ ಸೂಚಿಸಬಹುದಾದರೂ, ಕೆಲವು ಅಂಶಗಳು ಸಮಾಜ ಸಂಸ್ಕೃತಿಯೊಂದರ ನಡವಳಿಕೆಗಳಲ್ಲಿ ಎಷ್ಟು ಆಳವಾಗಿ ಹುದುಗಿರುತ್ತವೆಂದರೆ ಅದು ಕೆಲವು ಭಾಷೆಗಳಿಗೆ ಅನುವಾದಕ್ಕೆ ದಕ್ಕದೇ ಹೋಗಬಹುದು. ಉದಾಹರಣೆಗೆ ತಿನಿಸುಗಳ ಹೆಸರುಗಳು, ಧಾರ್ಮಿಕ ವಿಧಿಗಳು ಇತ್ಯಾದಿ. 'ಇಡ್ಲಿ' ಪದವನ್ನು ಇಂಗ್ಲಿಷಿನಲ್ಲಿ ಅನುವಾದಿಸಲಾಗುವುದಿಲ್ಲ. ಅನುವಾದದಲ್ಲಿ ಇದೇ ಪದವನ್ನು ಬಳಸಿ ಅಗತ್ಯವಿದ್ದರೆ ವಿವರಣೆ ಕೊಡುವ ವಾಡಿಕೆ ಅನುವಾದಕರಲ್ಲಿದೆ. ಇದು ವಸ್ತು–ವಿಷಯಗಳಿಗೆ ಹೇಗೋ ಲಯ, ರಚನೆಗಳಿಗೂ ಹಾಗೇ ಸಂಬಂಧಿಸಬಹುದು. ಉದಾಹರಣೆಗೆ ಭಾಮಿನಿ ಷಟ್ಪದಿಯನ್ನು ಇಂಗ್ಲಿಷಿಗೆ ಹೇಗೆ ಅನುವಾದಿಸುವುದು? ಅಥವಾ ಅಯಾಂಬಿಕ್ ಪೆಂಟಾಮೀಟರನ್ನು ಕನ್ನಡದಲ್ಲಿ ಹೇಗೆ ಮರುರೂಪಿಸುವುದು? ಕೆಲವು ಅಸಾಧ್ಯತೆಗಳು ಸಾಧ್ಯವಾಗಿಸುವ ದಾರಿಯತ್ತ ಅನುವಾದಕರನ್ನು ಒಯ್ಯಬಹುದು. ಉದಾಹರಣೆಗೆ ಇಂಗ್ಲಿಷ್ ಪಠ್ಯವೊಂದರಲ್ಲಿ ಕ್ರೈಸ್ತ 'ಸಾಮ್'ಗಳನ್ನು ಬಳಸಿದ್ದರೆ ಅದರ ಕನ್ನಡ ಅನುವಾದದಲ್ಲಿ ಭಜನೆಯನ್ನು ಬಳಸಬಹುದು. ಒಟ್ಟಾರೆ, ಇವೆಲ್ಲ ವಿಷಯಗಳನ್ನು ಅನುವಾದಸಾಧ್ಯತೆ (Translatability) ಪರಿಕಲ್ಪನೆ ಸೂಚಿಸುತ್ತದೆ. ಕನ್ನಡದ ಕೆಲವೆಡೆ ಪರಸ್ಪರ ಭೇಟಿಯಾದಾಗ ಬಳಸುವ 'ಚೆನ್ನಾಗಿದೀರಾ?' ಅಥವಾ 'ಆರಾಮಾ' ಎನ್ನುವ ಅಭಿವ್ಯಕ್ತಿಗಳನ್ನು ಮರಾಠಿಗೆ 'ರಾಮ್–ರಾಮ್' ಎಂದೋ, ಹಿಂದಿಯಲ್ಲಿ 'ನಮಸ್ಕಾರ್' ಎಂದೋ, ಇಂಗ್ಲಿಷಿನಲ್ಲಿ 'ಹಲೋ' ಎಂದೋ ಅನುವಾದಿಸುವುದು ಸೂಕ್ತವಾಗುತ್ತದೆಯೇ ವಿನಃ ಅಕ್ಷರಶಃ ಅನುವಾದವಲ್ಲ. ಲಕ್ಷ್ಯಭಾಷೆಯ ಸಂಸ್ಕೃತಿಯಲ್ಲಿ ಪಠ್ಯದ ಮೂಲಭಾಷಾ ಸಂಸ್ಕೃತಿಯಲ್ಲಿರುವ ಪರಿಕಲ್ಪನೆ, ನಡವಳಿಕೆ, ವಸ್ತುಗಳಿಲ್ಲದಿದ್ದಾಗ ಅನುವಾದ ಸಾಧ್ಯತೆಯ ಬಗ್ಗೆ ಪ್ರಶ್ನೆಗಳು ಏಳುತ್ತವೆ.

೧೧.೪.೧.೪. ನಿಷ್ಠೆ

ಅನುವಾದ ಸಾಧ್ಯತೆಯ ಪ್ರಶ್ನೆಗಳು ಅನುವಾದ ಪ್ರಕ್ರಿಯೆಯಲ್ಲಿ ನಿಷ್ಠೆಯ ಪ್ರಶ್ನೆಯನ್ನು ಎತ್ತುತ್ತವೆ. ಅನುವಾದದಲ್ಲಿ ನಿಷ್ಠೆಯೆನ್ನುವುದು ಮೂಲಪಠ್ಯಕ್ಕೆ ತೋರುವ ನಿಷ್ಠೆಯಾಗಿ ಮಾತ್ರ ಇರುವುದಿಲ್ಲ. ಅದು, ಮೂಲಭಾಷೆ ಮತ್ತದರ ಸಮಾಜ–ಸಂಸ್ಕೃತಿಗೆ, ಐತಿಹಾಸಿಕ ಹಿನ್ನೆಲೆಗೆ, ಲೇಖಕರ ನಿರ್ದಿಷ್ಟ ಮನೋಭಾವಕ್ಕೆ, ನಂಬಿಕೆಗಳಿಗೆ, ಶೈಲಿ–ಸಂರಚನೆಗಳಿಗೆ ತೋರುವ ನಿಷ್ಠೆಯನ್ನು ಕುರಿತಾಗಿಯೂ ಇರುತ್ತದೆ. ಸಂಪೂರ್ಣ ನಿಷ್ಠೆ ಸಾಧಿಸಲು ಸಾಧ್ಯವಿಲ್ಲದಿರಬಹುದು. ಕೆಲವು ತಜ್ಞರ ಪ್ರಕಾರ ಸಂಪೂರ್ಣ ನಿಷ್ಠೆ ಆದರ್ಶವಾಗಿದ್ದರೂ ಅದು ಅನಗತ್ಯ. ಅದೇ ಸಮಯದಲ್ಲಿ ಮೂಲಪಠ್ಯದಿಂದ ಸಂಪೂರ್ಣ ಸ್ವತಂತ್ರವಾಗಿಬಿಡುವುದು ಅನುವಾದವೇ ಎಂಬ ಪ್ರಶ್ನೆಯೂ ಏಳುತ್ತದೆ. ಅನುವಾದದಲ್ಲಿ ನಿಷ್ಠೆಯ ಪ್ರಶ್ನೆ ಹಾಗಾಗಿ ಸಂಪೂರ್ಣ ನಿಷ್ಠೆ ಮತ್ತು ಸಂಪೂರ್ಣ ಸ್ವಾತಂತ್ರ್ಯದ ನಡುವೆ ಬರುವ ಪ್ರಕಾರವಾಗಿದೆ.

೧೧.೪.೧.೫. ಸಮಾನತೆ

ಅನುವಾದಸಾಧ್ಯತೆಯ ವಿಷಯಕ್ಕೆ ಸಂಬಂಧಿಸಿದ ಇನ್ನೊಂದು ಪರಿಕಲ್ಪನೆಯೆಂದರೆ ಮೂಲ ಮತ್ತು ಲಕ್ಷ್ಯಪಠ್ಯಗಳ ನಡುವಿನ ಸಮಾನತೆ. ಎರಡು ಭಾಷೆಗಳ ನಡುವೆ ಮೌಲ್ಯ, ಪ್ರಮಾಣ, ಮಹತ್ವಗಳಲ್ಲಿ ಸಂಪೂರ್ಣ ಸಮಾನತೆ ಇರುವುದಿಲ್ಲ. ಒಂದೇ ಭೌಗೋಳಿಕ / ಸಾಮಾಜಿಕ / ಸಾಂಸ್ಕೃತಿಕ ಹಿನ್ನೆಲೆಯುಳ್ಳ ಭಾರತದಂತ ದೇಶಗಳಲ್ಲಿ ಅಥವಾ ಯುರೋಪಿನ ವಿವಿಧ ಭಾಷೆಗಳ ನಡುವೆ ಸಮಾನ ಅಂಶಗಳು ಸುಲಭವಾಗಿ ದೊರೆಯಬಹುದು. ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಭಿನ್ನತೆಗಳು ಎಷ್ಟು ಅಧಿಕವಾಗಿರುತ್ತದೋ ಭಾಷೆಗಳ ನಡುವಿನ ಸಮಾನತೆಯು ಅಷ್ಟು ಕಡಿಮೆ ಇರುತ್ತದೆ ಹಾಗೂ ಅನುವಾದದ ಸಮಸ್ಯೆ ಹೆಚ್ಚಾಗಿ ಇರುತ್ತದೆ. ವಸಾಹತುಶಾಹಿ, ಸಾಂಸ್ಕೃತಿಕ ಪ್ರಭಾವ, ಜಾಗತೀಕರಣದಂತ ಪ್ರಕ್ರಿಯೆಗಳು ಈ ಭಿನ್ನತೆಗಳನ್ನು ಮೀರುವ ಸನ್ನಿವೇಶಗಳನ್ನು ಹುಟ್ಟುಹಾಕಿವೆ. ಈ ಹಿನ್ನೆಲೆಯಲ್ಲಿ ಯೂಜೀನ್ ನೀದಾ ಸೂಚಿಸಿರುವ ಕ್ರಿಯಾತ್ಮಕ ಮತ್ತು ರಾಚನಿಕ ಸಮಾನತೆಗಳ ಪರಿಕಲ್ಪನೆಗಳು ಕೂಡ ಉಪಯುಕ್ತವಾಗಿವೆ. ನೀದಾ ಅವರ ಪ್ರಕಾರ, ಒಂದು ಭಾಷೆಯಲ್ಲಿ ವ್ಯಕ್ತವಾಗಿರುವ ವಿಷಯವನ್ನು ಅದಕ್ಕೆ ಸಂವಾದಿಯಾದ ಲಕ್ಷ್ಯಭಾಷಾ ಸಂಸ್ಕೃತಿಯ ವಿಷಯವಾಗಿ ಪರಿವರ್ತಿಸುವ ಮೂಲಕ ಸಾಧಿಸಲಾಗುವ ಸಮಾನತೆ – ಅರ್ಥಕ್ಕೆ ಸಮನಾದ ಅರ್ಥ ಹುಡುಕುವುದು – ಕ್ರಿಯಾತ್ಮಕ ಸಮಾನತೆ. ಉದಾಹರಣೆಗೆ, ಕನ್ನಡದಲ್ಲಿ ರೊಟ್ಟಿ ಎಂದಿರುವುದನ್ನು ಇಂಗ್ಲಿಷಿನಲ್ಲಿ 'ಬ್ರೆಡ್' ಎಂದರೆ ಒಂದು ಸ್ತರದ ಸಮಾನತೆಯನ್ನು ಸಾಧಿಸಿದಂತಾಗುತ್ತದೆ. ನೀದಾ ಅವರ ಪ್ರಕಾರ ರಾಚನಿಕ ಸಮಾನತೆಯೆಂದರೆ ಪದಕ್ಕೆ ಸಮನಾದ ಪದವನ್ನು ಹುಡುಕುವುದು. ಇಂತಹ ಸಂದರ್ಭಗಳಲ್ಲಿ ಅನುವಾದಿತ ಪಠ್ಯವು ಮೂಲಪಠ್ಯಕ್ಕೆ ಅತ್ಯಂತ ಸಮೀಪವಾಗಿರುತ್ತದೆ. ಹಲವಾರು ಬೈಬಲ್ಲಿನ ಅನುವಾದಗಳಲ್ಲಿ (ಉದಾ: ಕಿಂಗ್ ಜೇಮ್ಸ್ ವರ್ಶನ್) ರಾಚನಿಕ ಸಮಾನತೆಯ ಪ್ರಯೋಗವನ್ನು ನಾವು ಕಾಣುತ್ತೇವೆ.

೧೧.೪.೨. ಅನುವಾದದ ತಂತ್ರಗಳು

ಪಠ್ಯವೊಂದನ್ನು ಅನುವಾದಿಸುವಾಗ ಬಳಸುವ ಒಟ್ಟಾರೆ ವಿಧಾನ ಅನುವಾದದ ಪ್ರಕಾರವನ್ನು ನಿರ್ಧರಿಸುತ್ತದೆಯಾದರೆ ಶಬ್ದ, ವಾಕ್ಯಗಳ ಸ್ತರದಲ್ಲಿ ತಂತ್ರಗಳ ಬಳಕೆಯಾಗುತ್ತದೆ. ಈ ತಂತ್ರಗಳು ಒಂದು ರೀತಿಯಲ್ಲಿ ಅನುವಾದಕ ಎದುರಿಸುವ ಕೆಲವು ಸಾಮಾನ್ಯ

ಸಮಸ್ಯೆಗಳಿಗೆ ಪರಿಹಾರಗಳು. ಈ ತಂತ್ರಗಳನ್ನು ಹೇಗೆ, ಎಲ್ಲಿ ಬಳಸಬೇಕೆಂಬುದನ್ನು ಆಯಾ ಸಂದರ್ಭವೇ ನಿರ್ದೇಶಿಸುತ್ತದೆ.

೧೧.೪.೨.೧. ಎರವಲು ಪಡೆಯುವುದು

ಲಕ್ಷ್ಯಭಾಷೆಯಲ್ಲಿ ವಿಷಯವೊಂದಕ್ಕೆ ಸಂವಾದಿಯಾದ ನುಡಿ ಲಭ್ಯವಿಲ್ಲದಿದ್ದಾಗ, ಮೂಲಪಠ್ಯದ ನುಡಿಯನ್ನೇ ಬಳಸಬೇಕಾಗಬಹುದು. ಇದು ವಿಶೇಷತಃ ಕೆಲವು ಕ್ಷೇತ್ರಗಳಿಗೆ ಸಂಬಂಧಿಸಿದ ಪಠ್ಯಗಳ ಅನುವಾದದಲ್ಲಿ ತೋರಬಹುದಾದ ಸಮಸ್ಯೆ. ಉದಾಹರಣೆಗೆ, ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಸೂಕ್ತ ಪದ ಲಭ್ಯವಿಲ್ಲದಿದ್ದರೆ ಮತ್ತು ಮೂಲಪಠ್ಯದ ಪದ ಕನ್ನಡಿಗರಿಗೂ ಪರಿಚಯವಿರುವ ಸನ್ನಿವೇಶವಿದೆಯಾದರೆ ಮೂಲಪದವನ್ನು ಎರವಲು ಪಡೆಯಬಹುದು. ಹೀಗೆ ಎರವಲು ಪಡೆಯುವುದರ ಮೂಲಕವೇ ಭಾಷೆಗಳು ಬೆಳೆಯುತ್ತವೆ ಕೂಡ. ಇಂಗ್ಲಿಷಿನಲ್ಲಿ ಎಷ್ಟೋ ಭಾರತೀಯ ಭಾಷೆಗಳ ಶಬ್ದಗಳು ಇದೇ ರೀತಿಯಲ್ಲಿ ಬಳಕೆಗೆ ಬಂದಿವೆ – ಉದಾ: ದೋಸಾ, ಯೋಗ, ಅಯ್ಯೋ ಇತ್ಯಾದಿ. ಹಾಗೇ ಕನ್ನಡದಲ್ಲಿ ಬಸ್ಸು, ರಿಕ್ಷಾ, ಪೆನ್ನು, ಪೆನ್ಸಿಲ್ಲು, ಫ್ಲ್ಯಾನು, ಫ್ಲೋನು, ಮುಂತಾದ ಪದಗಳು ಎರವಲು ಪದಗಳಾಗಿವೆ.

೧೧.೪.೨.೨. ಪದ ಸ್ವೀಕರಣೆ

ಲಕ್ಷ್ಯಭಾಷೆಯಲ್ಲಿ ಲಭ್ಯವಿಲ್ಲದ ನುಡಿಗಟ್ಟಿಗೆ ಮೂಲಭಾಷೆಯಿಂದ ಅಕ್ಷರಶಃ ಅನುವಾದಿಸಿ ಬಳಸುವುದು ಸಾಧ್ಯ. ಆದರೆ ಇದು ಎಲ್ಲ ನುಡಿಗಟ್ಟು, ಶಬ್ದಗಳ ಸಂದರ್ಭದಲ್ಲಿ ಉಚಿತವಲ್ಲ. ಅನುವಾದಕರು ಎಚ್ಚರಿಕೆಯಿಂದ ಈ ಬಗೆಯ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ, ಕನ್ನಡದಲ್ಲಿ ಬಹಳಷ್ಟು ಜನ ಫ್ಲೇಸ್‌ಬುಕ್ ಅನ್ನು 'ಮುಖಹೊತ್ತಿಗೆ' ಎನ್ನುತ್ತಾರೆ. ಇದು ಸಮಂಜಸವಲ್ಲ, ಯಾಕೆಂದರೆ ಫ್ಲೇಸ್‌ಬುಕ್ ಎನ್ನುವುದು ಒಂದು ಕಂಪನಿಯ ಹೆಸರು ಮತ್ತು ಹೆಸರನ್ನು ಅನುವಾದಿಸಲಾಗದು. ಇದಕ್ಕೆ ಉಚಿತ ಉದಾಹರಣೆಯೆಂದರೆ: ಇಂಗ್ಲಿಷಿನ 'ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಶನ್' ಎಂಬ ಪದವನ್ನು ಯಥಾವತ್ ಅನುವಾದಿಸಿ 'ಜಿಲ್ಲಾಡಳಿತ' ಎಂದು ಬಳಸುವುದು ವಾಡಿಕೆ. ಪದಸ್ವೀಕರಣೆಗೆ ಇನ್ನೊಂದು ಉದಾಹರಣೆಯೆಂದರೆ ಇಂಗ್ಲಿಷಿನ 'ಪಾವರ್ಟಿ ಲೈನ್' ಎಂಬ ಪದವನ್ನು ಕನ್ನಡದಲ್ಲಿ ಯಥಾವತ್ತಾಗಿ ಅನುವಾದಿಸಿ 'ಬಡತನದ ರೇಖೆ' ಎಂದು ಬಳಸಲಾಗುತ್ತದೆ.

೧೧.೪.೨.೩. ಯಥಾವತ್ ಅನುವಾದ

ಯಥಾವತ್ ಅಥವಾ ಅಕ್ಷರಶಃ ಅನುವಾದ ಕೆಲವು ಸಂದರ್ಭದಲ್ಲಿ ಸೂಕ್ತವಾಗಿರುತ್ತದೆ ಯಾದರೆ ಹಲವೆಡೆ ಸಾಧ್ಯವಿಲ್ಲ. ಭಾರತೀಯ ಭಾಷೆಗಳಿಗಿರುವ ರಾಚನಿಕ ಹೋಲಿಕೆಯಿಂದಾಗಿ ಇದು ಸಾಧ್ಯ; ಆದರೆ, ಇಂಗ್ಲಿಷಿನಂತಹ ಭಾಷೆಯಿಂದ ಕನ್ನಡಕ್ಕೆ ಅಥವಾ ಕನ್ನಡದಿಂದ ಇಂಗ್ಲಿಷಿಗೆ ಅನುವಾದಿಸುವಾಗ ಅಕ್ಷರಶಃ ಅನುವಾದ ಕಷ್ಟವಾಗುತ್ತದೆ. ಉದಾಹರಣೆ: रात्रीच्या जेवणानंतर शतपावली करा? (ರಾತ್ರೀಚ್ಯಾ ಜೇವಣಾನಂತರ್ ಶತಪಾವಲಿ ಕರಾ) ಈ ಮರಾಠಿ ಭಾಷೆಯ ವಾಕ್ಯವನ್ನು ಯಥಾವತ್ ಅನುವಾದಿಸಬಹುದು: 'ರಾತ್ರಿಯ ಊಟದ ನಂತರ ನೂರಡಿ ನಡೆಯಿರಿ'. ಕನ್ನಡದ ವಾಕ್ಯ 'ಬಿಸಿಲ್ನಾಗ ಆರಾಮ್ ಮಾಡ್ರೀ' ಎನ್ನುವುದನ್ನು ಇಂಗ್ಲಿಷಿಗೆ ಯಥಾವತ್ 'Take rest under sun' ಎಂದು ಅನುವಾದಿಸಿದರೆ

ಅಪಾರ್ಥಕ್ಕೀಡು ಮಾಡುತ್ತದೆ. ಆದರೆ ಇಂಗ್ಲಿಷಿನ 'ಸೈಲೆನ್ಸ್ ಇಸ್ ಗೋಲ್ಡ್' ಎಂಬ ವಾಕ್ಯವನ್ನು ಕನ್ನಡದಲ್ಲಿ ಯಥಾವತ್ ಅನುವಾದಿಸಲಾಗುತ್ತದೆ 'ಮೌನವೇ ಬಂಗಾರ'.

೧೧.೪.೨.೪. ಸ್ಥಳಾಂತರ

ಭಾಷೆಗಳ ರಾಚನಿಕ ಸ್ವಭಾವಗಳು ಏಕರೂಪವಾಗಿರುವುದಿಲ್ಲ. ಹಾಗಾಗಿ ಮೂಲಪಠ್ಯದಲ್ಲಿ ಇರುವ ಕ್ರಮದಲ್ಲಿಯೇ ಲಕ್ಷ್ಯಭಾಷೆಯಲ್ಲಿಯೂ ಅನುವಾದಿಸಲಾಗದು. ಆಯಾ ಭಾಷೆಗಳಿಗೆ ಸರಿಹೊಂದುವ ಹಾಗೆ ಪದಗಳ, ಸಾಲುಗಳ, ವಾಕ್ಯಗಳ ಸ್ಥಳಾಂತರ ಮಾಡಬೇಕಾಗುತ್ತದೆ. ಉದಾಹರಣೆ: ಇಂಗ್ಲಿಷಿನ 'ಪ್ಲೀಸ್ ಗಿವ್ ಮಿ ಅ ಗ್ಲಾಸ್ ಆಫ್ ವಾಟರ್' ಎಂಬ ವಾಕ್ಯವನ್ನು ಕನ್ನಡ ಜಾಯಮಾನಕ್ಕೆ ತಕ್ಕಂತೆ, 'ದಯವಿಟ್ಟು ನನಗೆ ಒಂದು ಗ್ಲಾಸ್ ನೀರು ಕೊಡಿ' ಎಂದು ಅನುವಾದಿಸಿದಾಗ ಇಂಗ್ಲಿಷಿನಲ್ಲಿ ಎರಡನೇ ಸ್ಥಾನದಲ್ಲಿರುವ 'ಗಿವ್' ಪದ ಕನ್ನಡದಲ್ಲಿ ಅಂತಿಮ ಸ್ಥಾನಕ್ಕೆ ಸ್ಥಳಾಂತರವಾಗಿದೆ. ಪ್ಯಾರಾಗ್ರಾಫುಗಳ ಸ್ತರದಲ್ಲಿಯೂ ವಾಕ್ಯಗಳ ಸ್ಥಾನ ಬದಲಿಸಬೇಕಾಗಬಹುದು. ಕಾವ್ಯದ ಅನುವಾದದಲ್ಲಿ ಸಾಲುಗಳ ಸ್ಥಳಾಂತರವನ್ನೇ ಮಾಡಬೇಕಾಗಿ ಬರುತ್ತದೆ. ನಿದರ್ಶನ: ಬಿ.ಎಂ. ಶ್ರೀಕಂಠಯ್ಯನವರು ಅನುವಾದಿಸಿದ ವರ್ಡ್ಸ್‌ವರ್ತ ಕವಿಯ ಕವನದ ಮೊದಲೆರಡು ಸಾಲುಗಳಲ್ಲಾಗುವ ಪಲ್ಲಟವನ್ನು ನೋಡಿರಿ:

My heart leaps up when I behold
A rainbow in the sky.

ಮುಗಿಲಿನಲಿ ಮಳೆಬಿಲ್ಲು ಕಾಣುತಲೆ ನಾನು
ನೆಗೆದು ಕುಣಿದಾಡುವುದು ಹೃದಯ ತಾನು!

೧೧.೪.೨.೫. ಪರಿವರ್ತನೆ

ಮೂಲಪಠ್ಯದ ಪದಪುಂಜ, ಘೋಷಣೆಗಳು ಮುಂತಾದವನ್ನು ಯಥಾವತ್ ಅನುವಾದಿಸಲು ಸಾಧ್ಯವಾಗದ ಸಂದರ್ಭದಲ್ಲಿ ಅವುಗಳನ್ನು ಬದಲಿಸಿದ ಅಭಿವ್ಯಕ್ತಿಯನ್ನು ಬಳಸಬೇಕಾಗುತ್ತದೆ. ಉದಾಹರಣೆ: 'Avoid keeping the refrigerator door open unnecessarily' ಎಂಬ ಸಾಲನ್ನು ಕನ್ನಡದಲ್ಲಿ ಅನುವಾದಿಸುವಾಗ ಮೊದಲ ಎರಡು ಶಬ್ದಗಳನ್ನು ಅನುವಾದಿಸದೆಯೇ, ಅರ್ಥ ಬದಲಾಗದಂತೆ ಅನುವಾದಿಸಬೇಕಾಗುತ್ತದೆ. 'ರೆಫ್ರಿಜರೇಟರ್ ಬಾಗಿಲನ್ನು ಅನಗತ್ಯ ತೆಗೆದಿರಿಸಬಾರದು'. ಬಿ.ಎಂ. ಶ್ರೀಕಂಠಯ್ಯ ಅವರು ತಮ್ಮ 'ಇಂಗ್ಲಿಷ್ ಗೀತಗಳು' ಕೃತಿಯಲ್ಲಿ ಇಂಗ್ಲಿಷಿನ 'ಗಾರ್ಡಿಯನ್ ಏಂಜೆಲ್ಸ್' ಎಂಬ ಕಲ್ಪನೆ ಕನ್ನಡದಲ್ಲಿಲ್ಲದ ಕಾರಣ 'ಅಭಿಮಾನ ದೇವತೆಗಳು' ಎಂದು ಪರಿವರ್ತಿಸುತ್ತಾರೆ. ಇಂಗ್ಲಿಷಿನ 'ವಾಟರ್ ಬೋರ್ಡ್' ಎಂಬ ಪದವನ್ನು ಕನ್ನಡದಲ್ಲಿ ಯಥಾವತ್ ಅನುವಾದಿಸಿದರೆ 'ನೀರಿನ ಹಲಗೆ' ಎಂದಾಗುತ್ತದೆ. ಈ ಅಸಂಗತತೆಯನ್ನು ನಿವಾರಿಸಲು, ಕನ್ನಡದಲ್ಲಿ ಮುಕ್ತ ಬಗೆಯಲ್ಲಿ ಪರಿವರ್ತಿಸಿ 'ಜಲಮಂಡಳಿ' ಎಂಬ ಪದಸೃಷ್ಟಿ ಮಾಡಬೇಕಾಗುತ್ತದೆ.

೧೧.೪.೨.೬. ಅಳವಡಿಕೆ

ಮೂಲಪಠ್ಯದ ಅಂಶವೊಂದರ ಅರ್ಥವನ್ನು ಸೂಕ್ತ ರೀತಿಯಲ್ಲಿ ಲಕ್ಷ್ಯಭಾಷೆಯಲ್ಲಿ ಮೂಡಿಸಲು ಸ್ವತಂತ್ರವಾದ ಅಳವಡಿಕೆಯ ತಂತ್ರವನ್ನು ಬಳಸಬೇಕಾಗಬಹುದು. ನಿದರ್ಶನಕ್ಕೆ,

'ಹೆಲ್ತ್ ಇಸ್ ವೆಲ್ತ್' ಎಂಬ ಇಂಗ್ಲಿಷಿನ ಹೇಳಿಕೆಯನ್ನು ಕನ್ನಡದಲ್ಲಿ ಕೊಂಚ ಬದಲಾವಣೆಯೊಂದಿಗೆ ಅನುವಾದಿಸುವ ವಾಡಿಕೆ ಇದೆ; 'ಆರೋಗ್ಯವೇ ಭಾಗ್ಯ'. ಇಲ್ಲಿ ವೆಲ್ತ್ ಎನ್ನುವ ಇಂಗ್ಲಿಷ್ ಪದಕ್ಕೆ ಸಂವಾದಿಯಾದ ಕನ್ನಡದ 'ಐಶ್ವರ್ಯ' ಪದದ ಬದಲಿಗೆ 'ಭಾಗ್ಯ' ಪದದ ಬಳಕೆ ಇದ್ದರೂ ಕೂಡ, ಅರ್ಥದಲ್ಲಿ ಹೆಚ್ಚು ವ್ಯತ್ಯಯವಿಲ್ಲ.

೧೧.೪.೨.೭. ನಷ್ಟಭರ್ತಿ

ಕೆಲವೊಮ್ಮೆ ಮೂಲಪಠ್ಯದ ಅಂಶಗಳನ್ನು ಲಕ್ಷ್ಯಭಾಷೆಗೆ ಅನುವಾದಿಸುವುದು ಉಚಿತವಾಗುವುದಿಲ್ಲ. ಅದರಿಂದಾಗುವ ಅರ್ಥದ ನಷ್ಟವನ್ನು ಸರಿದೂಗಿಸಲು ಬೇರೆ ಬಗೆಯಲ್ಲಿ ಅಭಿವ್ಯಕ್ತಿಸಬಹುದು. ಉದಾಹರಣೆಗೆ ಮರಾಠಿ ನಾಟಕಕಾರ ಸತೀಶ್ ಆಲೇಕರ್ ಅವರ 'ಮಹಾನಿರ್ವಾಣ' ನಾಟಕದಲ್ಲಿ ಕೀರ್ತನೆಗಳ ಬಳಕೆಯಿದೆ. ಈ ನಾಟಕವನ್ನು ಇಂಗ್ಲಿಷಿಗೆ ಅನುವಾದಿಸಿದ ಗೌರಿ ದೇಶಪಾಂಡೆಯವರು, ಕೀರ್ತನೆಗಳನ್ನು ಅನುವಾದಿಸದೇ ಸನ್ನಿವೇಶಕ್ಕೆ ಹೊಂದುವ ಬೈಬಲ್ಲಿನ 'ಸಾಮ್'ಗಳನ್ನು ಬಳಸಿದ್ದಾರೆ.

೧೧.೪.೩. ಅನುವಾದಕನ ಜವಾಬ್ದಾರಿಗಳು

ಅನುವಾದವೆನ್ನುವುದು ಒಂದು ಜವಾಬ್ದಾರಿ. ಈ ಕಾರ್ಯಕ್ಕೆ ಬೇಕಾದ ತಯಾರಿ, ಭಾಷಾ ಮತ್ತು ಇತರ ಕೌಶಲಗಳು, ಸೃಜನಶೀಲತೆ, ವಿಷಯದ ಅರಿವು, ಇತ್ಯಾದಿಗಳಿದ್ದರೆ ಮಾತ್ರ ಅನುವಾದಕ್ಕೆ ತೊಡಗುವುದು ಒಳಿತು. ಅನುವಾದ ಮಾಡಬೇಕಿರುವ ಪಠ್ಯ, ಮೂಲ ಮತ್ತು ಉದ್ದಿಷ್ಟ ಭಾಷೆಯ ಪ್ರಾವೀಣ್ಯತೆಗಳೆಲ್ಲವನ್ನು ಗಮನದಲ್ಲಿರಿಸಿಕೊಂಡು ಅನುವಾದಕ್ಕೆ ತೊಡಗಬೇಕಾಗುತ್ತದೆ. ಅನುವಾದಿತ ಪಠ್ಯದಲ್ಲಿ ಸುಧಾರಣೆ, ತಿದ್ದುಪಡಿಗಳನ್ನು ಮಾಡುವ ಅಗತ್ಯವಿರುತ್ತದೆ. ಮೂಲಪಠ್ಯಕ್ಕೆ ಅನ್ಯಾಯವಾಗದಂತೆ, ಓದುಗರ ವಿಶ್ವಾಸಕ್ಕೆ ಅಪಚಾರವಾಗದಂತೆ ಅನುವಾದ ಮಾಡುವ ಹೊಣೆ ಅನುವಾದಕನದಾಗಿರುತ್ತದೆ. ಅನುವಾದ ಕ್ಷೇತ್ರದಲ್ಲಿ ಸಾಮಾನ್ಯವಾಗಿ ಚರ್ಚಿಸುವ ಅನುವಾದಕರ ಪ್ರಮುಖ ಜವಾಬ್ದಾರಿಗಳತ್ತ ಗಮನ ಹರಿಸೋಣ.

೧೧.೪.೩.೧. ಮೂಲಪಠ್ಯ ಮತ್ತು ಲೇಖಕರಿಗೆ ನಿಷ್ಠೆ

ಅನ್ಯ ಲೇಖಕರ ಪಠ್ಯವನ್ನು ಬೇರೊಂದು ಭಾಷೆಗೆ ವರ್ಗಾಯಿಸುವಾಗ, ಬೇರೊಂದು ಓದುಗ ವರ್ಗದೆದುರು ಇಡುವಾಗ, ಅನುವಾದಕನಿಗೆ ಇಬ್ಬಗೆಯ ಜವಾಬ್ದಾರಿ ಇರುತ್ತದೆ – ಮೂಲಲೇಖಕ / ಮೂಲಪಠ್ಯಕ್ಕೆ ಮತ್ತು ಉದ್ದಿಷ್ಟ ಓದುಗ ವರ್ಗಕ್ಕೆ. ಆದುದರಿಂದ ಇವೆರಡೂ ಜವಾಬ್ದಾರಿಯನ್ನು ಉಚಿತವಾಗಿ ನಿಭಾಯಿಸುವ ಆತ್ಮವಿಶ್ವಾಸವಿದ್ದರೆ ಮಾತ್ರ ಅನುವಾದಕ್ಕೆ ತೊಡಗಬೇಕು. ಕೈಲಾದಷ್ಟು ಅನುವಾದಿಸುವುದು, ತಮಗೆ ತೋಚಿದಂತೆ ತಿರುಚುವುದು, ಇಲ್ಲದ್ದನ್ನು ಸೇರಿಸುವುದು ಇತ್ಯಾದಿ ಸ್ವಾತಂತ್ರ್ಯಗಳನ್ನು ಅನುವಾದಕ ತೆಗೆದುಕೊಂಡರೆ ಅದು ಮೂಲ ಲೇಖಕರಿಗೂ, ಉದ್ದಿಷ್ಟ ಓದುಗ ವರ್ಗಕ್ಕೂ ಮಾಡುವ ಅಪಚಾರ. ಲಕ್ಷ್ಯಪಠ್ಯವು ಮೂಲಪಠ್ಯದಂತೆಯೇ ಇರಬೇಕು ಮತ್ತು ಮೂಲ ಲೇಖಕರ ಆಶಯಗಳಿಗನುಗುಣವಾಗಿರಬೇಕು. ಸೂಫಿ ಕವಿ ರೂಮಿ ಹೇಳಿರುವನೆಂದು ತಂತಮ್ಮ ಮನಸ್ಸಿಗೆ ತೋಚಿದ ಸಾಲುಗಳನ್ನು ಸಾಗಹಾಕುವವರು ತಪ್ಪು ಮಾಹಿತಿಗಳನ್ನು ಸೃಷ್ಟಿಸಿ ಜ್ಞಾನದ್ರೋಹ ಬಗೆಯುತ್ತಿರುತ್ತಾರೆ.

೧೧.೪.೩.೨. ಪರಿಣಿತಿ

ಅನುವಾದಕರಿಗೆ ವಿವಿಧ ಬಗೆಯ ಪರಿಣಿತಿಗಳ ಅವಶ್ಯಕತೆ ಇರಬೇಕಾಗುತ್ತದೆ. ಅನುವಾದಕ್ಕೆ ಎತ್ತಿಕೊಂಡಿರುವ ಪಠ್ಯದ ಮೇಲೆ ಇದು ಅವಲಂಬಿಸುತ್ತದೆ. ಅದು ವಿಷಯ ಪರಿಣಿತಿ ಇರಬಹುದು, ಶೈಲಿಯ ಪರಿಣಿತಿ ಇರಬಹುದು, ಐತಿಹಾಸಿಕ ಮಾಹಿತಿ ಇರಬಹುದು. ಅನುವಾದಕ್ಕೆ ಪೂರಕ ಸಂಶೋಧನೆ, ತಜ್ಞರ ಜೊತೆ ಚರ್ಚೆ, ಭಾಷಿಕ ಅಗತ್ಯಗಳ ಬಗೆಗೆ ಸ್ಪಷ್ಟತೆಗಳನ್ನು ಪಡೆದಿರಬೇಕು. ಅಲ್ಲದೇ ಲಕ್ಷ್ಯಭಾಷೆಯಲ್ಲಿ ಉತ್ತಮ ಬರಹಕೌಶಲ ಹೊಂದಿರಬೇಕು. ಎಲ್ಲರೂ ಎಲ್ಲ ಬಗೆಯ ಪಠ್ಯಗಳನ್ನೂ ಅನುವಾದಿಸಲಾಗದು. ಅನುವಾದಕರು ತಮ್ಮ ಪರಿಣಿತಿಯ ಕ್ಷೇತ್ರಕ್ಕೆ ಸಂಬಂಧಿಸಿದ ಪಠ್ಯಗಳನ್ನು ಅನುವಾದಕ್ಕೆ ಆಯ್ದುಕೊಳ್ಳಬೇಕು. ವಿಷಯದ ಕೂಲಂಕುಶ ಪರಿಚಯವಿಲ್ಲದೇ ಒಳ್ಳೆಯ ಅನುವಾದ ಸಾಧ್ಯವಿಲ್ಲ. ವೈದ್ಯಶಾಸ್ತ್ರ, ಶೇರುಬಜ಼ಾರ, ಅಂತರರಾಷ್ಟ್ರೀಯ ಕಾನೂನು ಹೀಗೆ ಯಾವುದೇ ವಿಷಯಕ್ಕೂ ತನ್ನದೇ ಪದಕೋಶ, ಐತಿಹಾಸಿಕ ಮಾಹಿತಿ, ಒಳಾರ್ಥಗಳು ಇರುತ್ತವೆ. ವಿಷಯಜ್ಞಾನವಿಲ್ಲದೇ ಸೂಕ್ತ ಗ್ರಹಿಕೆಯೂ ಕಷ್ಟ, ಸೂಕ್ತ ಅನುವಾದವೂ ಕಷ್ಟ.

೧೧.೪.೩.೩. ಸೂಕ್ತ ಸಾಧನಗಳ ಉಚಿತ ಬಳಕೆ

ಅನುವಾದ ಪ್ರಕ್ರಿಯೆಯಲ್ಲಿ ಕೆಲವು ಸಾಧನಗಳು ಅತ್ಯಗತ್ಯ. ಅವುಗಳಲ್ಲಿ ಮುಖ್ಯವೆಂದರೆ ಮೂಲಭಾಷೆ ಮತ್ತು ಲಕ್ಷ್ಯಭಾಷೆಯ ನಡುವಿನ ಶಬ್ದಕೋಶಗಳು. ಅಲ್ಲದೆ ಅವಶ್ಯ ಮಾಹಿತಿಗಾಗಿ ವಿಶ್ವಕೋಶಗಳು, ತಾಂತ್ರಿಕ ಶಬ್ದಕೋಶಗಳು ಕೂಡ ಅಗತ್ಯವಾಗಬಹುದು. ಕೆಲವು ಸಲ ತಜ್ಞರ ಸಲಹೆ, ಸ್ಥಳ ಭೇಟಿ, ಮೂಲ ಲೇಖಕರ ಸಂದರ್ಶನ ಮುಂತಾದವುಗಳು ಕೂಡ ಅನುವಾದಕ್ಕೆ ಅಗತ್ಯವಾದ ಪೂರ್ವತಯಾರಿಯಾಗಿರುತ್ತವೆ.

೧೧.೪.೩.೪. ಸೃಜನಶೀಲತೆ

ಅನುವಾದ ಒಂದು ಯಾಂತ್ರಿಕ ವರ್ಗಾವಣೆಯಲ್ಲ. ವಿಭಿನ್ನ ಭಾಷಾ–ಸಂಸ್ಕೃತಿಗಳ ನಡುವೆ ಸಮತೋಲ ಸಾಧಿಸುವುದಕ್ಕೆ ಸೃಜನಶೀಲ ಅಭಿವ್ಯಕ್ತಿ ಅತ್ಯಗತ್ಯ. ಉದ್ದಿಷ್ಟ ಓದುಗರಿಗೆ ಸರಾಗವಾಗಿ ಗ್ರಹಿಸಲು ಸಾಧ್ಯವಾಗುವ ಶೈಲಿ, ನುಡಿಗಟ್ಟುಗಳನ್ನು ಬಳಸುವುದು, ಅವಶ್ಯವಿದ್ದಲ್ಲಿ ಮುಕ್ತ ಪ್ರಯೋಗಗಳ ಮೂಲಕ ಆಶಯಗಳಿಗನುಗುಣವಾದ ಅರ್ಥಸಂವಹನೆಗೆ ಪ್ರಯತ್ನಿಸುವುದು, ಸಾಂಸ್ಕೃತಿಕ ಭಿನ್ನತೆಯನ್ನು ದೂರಮಾಡುವ ಕೌಶಲ್ಯ ತೋರುವುದು ಮುಂತಾದವು ಅನುವಾದದಲ್ಲಿ ಅವಶ್ಯ.

೧೧.೪.೩.೫. ಭಾಷಾ ನೈಪುಣ್ಯ

ಅನುವಾದದ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲು ಅನುವಾದಕರಿಗೆ ಮೂಲ ಮತ್ತು ಲಕ್ಷ್ಯಭಾಷೆಗಳಲ್ಲಿ ಸಾಕಷ್ಟು ನೈಪುಣ್ಯ ಅಗತ್ಯ. ವ್ಯಾಕರಣ, ಶಬ್ದಗಳು, ವಾಕ್ಯರಚನೆಯ ಸೂಕ್ಷ್ಮಗಳು, ಶೈಲಿ, ಸಂದರ್ಭೋಚಿತ ಭಾಷಾಪ್ರಯೋಗ, ಮತ್ತು ಸಾಂಸ್ಕೃತಿಕ ಸೂಕ್ಷ್ಮಗಳ ಅರಿವು ಕೂಡ ಅತ್ಯಗತ್ಯ. ಪಠ್ಯದ ಸೂಕ್ಷ್ಮ ಅರ್ಥವ್ಯಾಪ್ತಿಯನ್ನು ಸರಿಯಾಗಿ ಗ್ರಹಿಸಿ, ಅಪಾರ್ಥ ಸೃಷ್ಟಿಯಾಗದಂತೆ, ಆಶಯದಲ್ಲಿ ವ್ಯತ್ಯಯವಾಗದಂತೆ ಅಭಿವ್ಯಕ್ತಿಸುವಷ್ಟು ಸ್ಪಷ್ಟ ಭಾಷಾಜ್ಞಾನದ ಅರಿವು ಅನುವಾದಕರಿಗೆ ಇರಬೇಕಾಗುತ್ತದೆ.

ಅಭ್ಯಾಸ ೩

೧. ಅನುವಾದಕನ ಜವಾಬ್ದಾರಿಯನ್ನು ಗುರುತಿಸಿ.

i. ಸೃಜನಶೀಲತೆ ii. ಸ್ಥಳಾಂತರ iii. ಎರವಲು iv. ಸಮಾನತೆ

೨. ಕೆಳಗೆ ನಮೂದಿಸಿರುವ ಅನುವಾದಿತ ಪದಗಳಲ್ಲಿ ಯಾವುದು ಯಥಾವತ್ ಅನುವಾದ?

i. Breach of law – ಕಾನೂನು ಉಲ್ಲಂಘನೆ ii. Cold war – ಶೀತಲ ಯುದ್ಧ

iii. Water Board – ಜಲಮಂಡಳಿ iv. Imagery – ಪ್ರತಿಮಾವಿನ್ಯಾಸ

೩. ಕನ್ನಡದ 'ರೊಟ್ಟಿ' ಪದಕ್ಕೆ ಇಂಗ್ಲಿಷಿನಲ್ಲಿ 'ಬ್ರೆಡ್' ಪದ ಬಳಸುವುದು ಯಾವ ಬಗೆಯ ಸಮಾನತೆ?

i. ರಾಚನಿಕ ii. ಭೌಗೋಳಿಕ iii. ಪಾರಿಭಾಷಿಕ iv. ಕ್ರಿಯಾತ್ಮಕ

೪. ಐದು ಕನ್ನಡ ನಾಣ್ಣುಡಿಗಳನ್ನು ಇಂಗ್ಲಿಷಿಗೆ ಅನುವಾದಿಸಿರಿ.

೫. ಕೆಳಗಿನ ವಾಕ್ಯಗಳನ್ನು ಕನ್ನಡಕ್ಕೆ ಅನುವಾದಿಸಿ.

ಅ. Arise, awake, stop not till the goal is reached.

ಬ. A friend in need is a friend indeed.

ಕ. Prevention is better than cure.

ಡ. Always speak the truth.

೧೧.೫. ಅನುವಾದದ ವಿಧಾನಗಳು ಮತ್ತು ಸವಾಲುಗಳು

ಮೌಖಿಕವಿರಲಿ ಅಥವಾ ಲಿಖಿತವಿರಲಿ ಎಲ್ಲ ಪಠ್ಯಗಳ ಅನುವಾದವನ್ನೂ ಒಂದೇ ರೀತಿಯಲ್ಲಿ ಮಾಡಲಾಗುವುದಿಲ್ಲ. ಬೇರೆ ಬೇರೆ ಸ್ಥಳಗಳಿಗೆ ಹೋಗಲು ಹೇಗೆ ಬೇರೆ ಬೇರೆ ದಾರಿಗಳನ್ನು ಬಳಸುವುದು ಅವಶ್ಯವೋ ಹಾಗೆಯೇ ವಿಭಿನ್ನ ಪ್ರಕಾರಗಳ ಅನುವಾದಗಳಲ್ಲಿ ವಿಭಿನ್ನ ಕೌಶಲ್ಯದ ಅವಶ್ಯಕತೆ ಬೀಳುತ್ತದೆ. ವಿಷಯ ಜ್ಞಾನದ ಹೊರತಾಗಿಯೂ ಅನುವಾದಕ ಕ್ಷೇತಕ್ಕೆ ಸಂಬಂಧಿಸಿದ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳುವುದು ಅಗತ್ಯವಾಗುತ್ತದೆ. ಹಾಗೆಯೇ ಅನುವಾದದಲ್ಲಿ ತೊಡಗಿದಾಗ ಹಲ ಬಗೆಯ ಸಮಸ್ಯೆಗಳು ಎದುರಾಗುತ್ತವೆ. ಅನುವಾದ ಸಾಧ್ಯತೆಯ (ಮತ್ತು ಅಸಾಧ್ಯತೆಯ) ಹಲವು ಪ್ರಶ್ನೆಗಳನ್ನು ಅನುವಾದಕ ಮತ್ತೆ ಮತ್ತೆ ಎದುರಿಸಬೇಕಾಗುತ್ತದೆ. ಅಂತಹ ಸವಾಲುಗಳನ್ನು ಎದುರಿಸುವ ಪೂರ್ವ ತಯಾರಿಯೂ ಅಗತ್ಯವಾಗುತ್ತದೆ. ಇವುಗಳ ವಿಷದವಾದ ಚರ್ಚೆಯನ್ನು ಈ ವಿಭಾಗದಲ್ಲಿ ನಡೆಸಲಾಗಿದೆ.

೧೧.೫.೧. ಸಾಹಿತ್ಯಿಕ ಪಠ್ಯಗಳನ್ನು ಅನುವಾದಿಸುವ ವಿಧಾನಗಳು

ಕತೆ, ಕಾದಂಬರಿ, ನಾಟಕ, ಕಾವ್ಯ ಇತ್ಯಾದಿ ಸಾಹಿತ್ಯ ಪ್ರಕಾರಗಳಿಗೆ ಸೇರಿದ ಪಠ್ಯಗಳು ಮತ್ತು ಜಾಹೀರಾತು, ಸಿನೆಮಾ ಪ್ರಕಾರಗಳಿಗೆ ಸೇರಿದ ಪಠ್ಯಗಳ ಅನುವಾದಕ್ಕೆ ಅದರದೇ ಆದ ಕೌಶಲ್ಯದ ಅಗತ್ಯವಿರುತ್ತದೆ. ವೃತ್ತಪತ್ರಿಕೆಯ ವರದಿ ಮತ್ತು ಕತೆ ಎರಡೂ ಮೂಲಭೂತವಾಗಿ ಕಥನಗಳೇ ಆಗಿದ್ದರೂ ಅವುಗಳನ್ನು ಅನುವಾದಿಸುವುದರಲ್ಲಿ ವ್ಯತ್ಯಾಸವಿರುತ್ತದೆ. ಸಾಹಿತ್ಯದ ಪಠ್ಯಗಳಲ್ಲಿ ಸೃಜನಶೀಲತೆಗೆ ಹೆಚ್ಚು ಪ್ರಾಮುಖ್ಯತೆ ಇರುತ್ತದೆ. ಏನು ಹೇಳಲಾಗಿದೆ ಎನ್ನುವಷ್ಟೇ ಹೇಗೆ ಹೇಳಲಾಗಿದೆ ಎನ್ನುವುದೂ ಮುಖ್ಯ. ಉದಾಹರಣೆಗೆ ಕನ್ನಡದ

ಮೇರುಕವಿ ದ.ರಾ. ಬೇಂದ್ರೆಯವರ ಕವನಗಳನ್ನು ಅನುವಾದಿಸುವಾಗ, ಅರ್ಥಕ್ಕೆ ಮಾತ್ರ ಗಮನ ಕೊಟ್ಟರೆ ಅನುವಾದಿತ ಪಠ್ಯ ಬಡವಾಗುವುದು ಖಂಡಿತ. ಯಾಕೆಂದರೆ ಬೇಂದ್ರೆಯವರ ಕಾವ್ಯಶಕ್ತಿ ಇರುವುದು ಅರ್ಥದಷ್ಟೇ ಅದರ ಲಯ, ನಾದ ಮತ್ತು ಧ್ವನಿಯಲ್ಲಿ. ಕತೆಯೊಂದರಲ್ಲಿ ಬಳಸಲಾಗಿರುವ ಆಡುನುಡಿಗೆ ಸಂವಾದಿಯಾದ ಲಕ್ಷ್ಯಭಾಷೆಯ ಭಾಷಾ ಲಕ್ಷಣಗಳನ್ನು ಆಯ್ದುಕೊಳ್ಳಬೇಕಾಗಿ ಬರಬಹುದು. ಇದಕ್ಕೆ ಸೂಕ್ತ ತಯಾರಿಯೂ ಅಗತ್ಯ.

೧೧.೫.೧.೧. ಓದುವ ಉತ್ಸಾಹ

ಮೂಲಪಠ್ಯದ ಭಾಷೆಯಲ್ಲಿ ಮತ್ತು ವಿಶೇಷವಾಗಿ ಲಕ್ಷ್ಯಭಾಷೆಯಲ್ಲಿ ಸಾಹಿತ್ಯ ಅನುವಾದಕರಿಗೆ ವಿಶೇಷ ಓದಿನ ಅಗತ್ಯವಿರುತ್ತದೆ. ಅನುವಾದಕ್ಕೆತ್ತಿಕೊಂಡಿರುವ ಸಾಹಿತ್ಯದ ಪ್ರಕಾರದಲ್ಲಿ ಆಳವಾದ ಓದಿರಬೇಕು. ಲಕ್ಷ್ಯಭಾಷೆಯ ಉದ್ದಿಷ್ಟ ಸಾಹಿತ್ಯ ಪ್ರಕಾರದ ಪರಿಚಯ, ಶೈಲಿಯ ಪ್ರಜ್ಞೆ, ಸಾಂಕೇತಿಕತೆ, ಪ್ರತಿಮಾವಿಧಾನಗಳ ಅರಿವು ಇರಬೇಕು. ಲಕ್ಷ್ಯಭಾಷೆಯ ಆಯಾ ಪ್ರಕಾರದಲ್ಲಿ ಆಗಿರುವ ಇತರ ಅನುವಾದಗಳ ಪರಿಚಯವೂ ತುಂಬ ಉಪಯುಕ್ತ.

೧೧.೫.೧.೨. ಬರಹ ಕೌಶಲದ ಮೇಲೆ ಪ್ರಭುತ್ವ

ಲಕ್ಷ್ಯಭಾಷೆಯ ಬರವಣಿಗೆಯ ಮೇಲೆ ಅನುವಾದಕನಿಗೆ ಪ್ರಭುತ್ವ ಬೇಕಾಗುತ್ತದೆ. ಆಯ್ಕೆಯ ಸಂದರ್ಭದಲ್ಲಿ ತಾನು ಯಾವ ಪ್ರಕಾರದಲ್ಲಿ ಸೃಜನಶೀಲ ಬರವಣಿಗೆ ಮಾಡಿರುವನೋ ಅದೇ ಪ್ರಕಾರದ ಅನುವಾದಗಳನ್ನು ಕೈಗೆತ್ತಿಕೊಳ್ಳುವುದು ಸಾಮಾನ್ಯವಾಗಿ ವಾಡಿಕೆ. ನಾಟಕವನ್ನೇ ಬರೆಯದ ವ್ಯಕ್ತಿ ನಾಟಕದ ಅನುವಾದಕ್ಕೆ ತೊಡಗಿದರೆ ಸಮಸ್ಯೆಗಳು ಎದುರಾಗುತ್ತವೆ. ಯಾವ ಬಗೆಯ ಬರವಣಿಗೆಯಲ್ಲಿ ಪ್ರಭುತ್ವ ಸಾಧಿಸಲಾಗಿದೆಯೋ ಅದೇ ಪ್ರಕಾರದಲ್ಲಿ ಅನುವಾದದ ಆಯ್ಕೆ ಮಾಡುವುದು ಒಳಿತು.

೧೧.೫.೧.೩. ಸಂಶೋಧನೆ

ಸಾಹಿತ್ಯಿಕ ಅನುವಾದದಲ್ಲಿ ತೊಡಗುವ ಮುನ್ನ ಆಯ್ದ ಲೇಖಕರ ಬರವಣಿಗೆಯ ವಿಸ್ತೃತ ಓದು ಅಗತ್ಯ. ಅಲ್ಲದೇ, ಲೇಖಕರ ಹಿನ್ನೆಲೆ, ಅವರ ಬರವಣಿಗೆಯ ಶೈಲಿ, ವಿಷಯ, ಮನೋಭಾವ, ಸಿದ್ಧಾಂತ ಇತ್ಯಾದಿಗಳನ್ನು ಕುರಿತು ಕೂಡ ಅನುವಾದಕ ಸಂಶೋಧನೆ ಮಾಡಿ ಮುಂದುವರಿಯುವುದು ಸಹಾಯಕ. ಆಯ್ದ ಕೃತಿಯಲ್ಲಿ ಇತರ ಕೃತಿಗಳ ಉಲ್ಲೇಖಗಳಿರಬಹುದು, ಅವುಗಳ ಬಗ್ಗೆ ಪರಿಜ್ಞಾನ ಇರುವುದು ಮುಖ್ಯ.

೧೧.೫.೧.೪. ಅನುವಾದ ತರಬಹುದಾದ ಸಮಸ್ಯೆಗಳು

ಏನನ್ನು, ಏತಕ್ಕೆ, ಯಾರಿಗಾಗಿ ಅನುವಾದ ಮಾಡುತ್ತಿದ್ದೇವೆ? ನನ್ನ ಓದುಗರು ಹೇಗೆ ಪ್ರತಿಕ್ರಿಯಿಸಬಹುದು ಮತ್ತು ಅದನ್ನು ಹೇಗೆ ಎದುರಿಸುವುದು? ಉದ್ದಿಷ್ಟ ಸಮಾಜ / ರಾಷ್ಟ್ರದಲ್ಲಿ ಅನುವಾದಿಸುತ್ತಿರುವ ಕೃತಿಯ ಪ್ರಕಟಣೆಗೆ ಅನುಮತಿ ಇದೆಯಾ? ಇತ್ಯಾದಿ ಪ್ರಶ್ನೆಗಳಿಗೆ ಕೂಡ ಅನುವಾದಕ ಉತ್ತರ ಕಂಡುಕೊಂಡ ನಂತರವೇ ಮುಂದುವರಿಯಬೇಕು. ಅನುವಾದಕರೂ ಕೂಡ ತೊಂದರೆಗೆ ಸಿಲುಕಿದ ಅನೇಕ ಸನ್ನಿವೇಶಗಳಿವೆ.

ಅನುವಾದಿತ ಸಾಹಿತ್ಯ ಕೃತಿಗಳನ್ನು ಯಾರು ಪ್ರಕಟಿಸುತ್ತಾರೆ ಎಂಬ ಸಂಶೋಧನೆ ಕೂಡ ಮುಖ್ಯ. ಸೂಕ್ತ ಪ್ರಕಾಶಕರಿಂದ ಪ್ರಕಟವಾದ ಕೃತಿಗಳು ಓದುಗರನ್ನು ತಲುಪುತ್ತವೆ. ಸಾಹಿತ್ಯ ಕೃತಿಗಳ ಹಿನ್ನೆಲೆ, ಆ ಕೃತಿ ಯಾವ ಪರಂಪರೆಗೆ ಸೇರಿದೆಯೋ ಅದರ ಪರಿಚಯ, ಕೃತಿಕಾರರ ಪರಿಚಯಗಳನ್ನು ಪೂರಕ ಮಾಹಿತಿಯಾಗಿ ಕೊಟ್ಟರೆ ಓದುಗರಿಗೆ ಉಪಯುಕ್ತವಾಗಿರುತ್ತದೆ.

ಉದಾಹರಣೆಗಳು

ಕಾವ್ಯ

ಬಸವಣ್ಣನವರ ವಚನ

ಉಳ್ಳವರು ಶಿವಾಲಯವ ಮಾಡುವರು
ನಾನೇನು ಮಾಡಲಿ ಬಡವನಯ್ಯ?
ಎನ್ನ ಕಾಲೇ ಕಂಬ ದೇಹವೆ ದೇಗುಲ
ಶಿರವೇ ಹೊನ್ನ ಕಳಸವಯ್ಯ!
ಕೂಡಲಸಂಗಮದೇವ ಕೇಳಯ್ಯ
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ!

ಕೆಳಗೆ ಈ ವಚನದ ಲಕ್ಷ್ಮೀ ಚಂದ್ರಶೇಖರ ಮತ್ತು ವಿಜಯಾ ಗುತ್ತಲ್ ಅವರು ಮಾಡಿರುವ ಇಂಗ್ಲಿಷ್ ಅನುವಾದವನ್ನು ಕೊಡಲಾಗಿದೆ:

The wealthy build
temples of Shiva
Lord, what can I do
a poor man?
My legs are the column
and body itself a temple
my head the golden crest.
Listen,O lord Koodalasangama,
things fixed shall end
the moving shall stay.

ಇದೇ ವಚನದ ಪ್ರಿಯಾಂಕ್ ಚೌಹಾನ್ ಮಾಡಿರುವ ಹಿಂದಿ ಅನುವಾದವನ್ನು ಗಮನಿಸಿ:

धनवान तो बनाएंगे
मंदिर शिव के
मैं निर्धन जन
करूँगा क्या

मेरे पैर स्तम्भ होंगे
मंदिर शरीर
और सिर
कलश सोने का

सुनो हे संगमदेव
जो चीज़ें हैं खड़ी
गिर जाएँगी कभी
जो चीजें चलाएमान
वो चलती रहेंगी

ಕಥನ

ಒಂದು ಇಂಗ್ಲಿಷ್ ಕತೆಯ ತುಣುಕನ್ನು ನಿದರ್ಶನವಾಗಿ ಕೆಳಗೆ ಕೊಡಲಾಗಿದೆ.

I had never seen a house on fire before. So, one evening when I heard the loud sirens of the fire engines rushing past my house, I quickly ran out and a few streets away found a large crowd of people. We could see the fire only from a distance as the police would not allow anyone near the building on fire. Three engines were busily engaged in containing fire. Watching the house burn and hearing those neighbours of mine wailing in anxiety, I thought how the fire is a blessing in many ways, yet it can also be a great danger to human life and property.

ಕನ್ನಡ ಅನುವಾದ

ಉರಿಯುವ ಮನೆಯನ್ನು ನಾನು ಎಂದೂ ನೋಡಿರಲಿಲ್ಲ. ಒಂದು ಸಂಜೆ ಅಗ್ನಿಶಾಮಕದಳದ ವಾಹನಗಳು ಸೈರನ್ ಬಾರಿಸುತ್ತಾ ನಮ್ಮ ಮನೆಯ ಎದುರುಗಡೆ ಹಾದು ಹೋದುವು. ನಾನು ಕೂಡಲೇ ಹೊರಗೆ ಓಡಿದೆ. ಕೆಲವು ಬೀದಿಗಳ ಆಚೆ ದೊಡ್ಡ ಗುಂಪು ಸೇರಿತ್ತು. ಬೆಂಕಿಯನ್ನು ನಾವು ದೂರದಿಂದ ಮಾತ್ರವೇ ನೋಡಬಹುದಾಗಿತ್ತು. ಏಕೆಂದರೆ ಪೊಲೀಸರು ಉರಿಯುತ್ತಿರುವ ಮನೆಯ ಹತ್ತಿರ ಹೋಗಲು ನಮ್ಮನ್ನು ಬಿಡುತ್ತಿರಲಿಲ್ಲ. ಮೂರು ಯಂತ್ರಗಳು ಬೆಂಕಿಯನ್ನು ಆರಿಸುವಲ್ಲಿ ತೊಡಗಿದ್ದವು. ಮನೆ ಬೆಂಕಿಗೆ ಆಹುತಿಯಾಗುವುದನ್ನು ನೋಡುತ್ತ ನನ್ನದೇ ನೆರೆಯವರು ರೋಧಿಸುವುದನ್ನು ಕೇಳಿಸಿಕೊಳ್ಳುತ್ತ ನಾನೆಂದುಕೊಂಡೆ: ಬೆಂಕಿ ಹಲವು ಬಗೆಯಲ್ಲಿ ವರ; ಕೆಲವೊಮ್ಮೆ ಅದು ಮಾನವನ ಜೀವಕ್ಕೆ ಮತ್ತು ಆಸ್ತಿಗೆ ಅಪಾಯಕಾರಿಯೂ ಹೌದು.

೧೧.೫.೨. ತಾರ್ಕಿಕ ಪಠ್ಯಗಳನ್ನು ಅನುವಾದಿಸುವ ವಿಧಾನಗಳು

ವೈಚಾರಿಕ ಸಾಹಿತ್ಯ, ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಶಾಸ್ತ್ರೀಯ ಬರಹಗಳು, ಸಂಶೋಧನಾ ಗ್ರಂಥಗಳು, ವರದಿಗಳು, ಮುಂತಾದ ತಾರ್ಕಿಕ ಪಠ್ಯಗಳ ಅನುವಾದಕ್ಕೆ ಅದರದೇ ಆದ ನಿರ್ದಿಷ್ಟ ಬಗೆಯ ಅಗತ್ಯಗಳಿರುತ್ತವೆ. ಆಯ್ದ ಪಠ್ಯ ತಾಂತ್ರಿಕವಿರಬಹುದು. ಓದುಗ ವರ್ಗ ತಜ್ಞರದೋ, ಜನಸಾಮಾನ್ಯರದೊ? ವಿಷಯದ ಕುರಿತಾಗಿ ಉದ್ದಿಷ್ಟ ಓದುಗರಿಗಿರುವ ಪ್ರಜ್ಞೆ ಎಷ್ಟು? ಇವೆಲ್ಲವುಗಳನ್ನು ಗಮನದಲ್ಲಿಟ್ಟುಕೊಂಡು ಅನುವಾದ ಮುಂದುವರೆಯ ಬೇಕಾಗುತ್ತದೆ. ಉದಾಹರಣೆಗೆ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಅಧ್ಯಾಪಕರುಗಳನ್ನು ಗುರಿಯಾಗಿಟ್ಟುಕೊಂಡು ಮಾಡುವ ಅನುವಾದ ಭಾಷೆ, ರಚನೆ, ಶೈಲಿ, ವಿವರಣೆಗಳೆಲ್ಲ ದರಲ್ಲಿಯೂ ನಿಖರವಾಗಿರಬೇಕಾಗುತ್ತದೆ. ಸಾರ್ವಜನಿಕ ಓದಿಗೆ ಮೀಸಲಾಗಿರುವ ವೃತ್ತಪತ್ರಿಕೆಯಲ್ಲಿ ಪ್ರಕಟಣೆಗೆಂದು ಅನುವಾದಿಸುತ್ತಿರುವ ಪಠ್ಯದ ಶೈಲಿ ಹಗುರವಾಗಿರ ಬೇಕಾಗುತ್ತದೆ. ಹೀಗಾಗಿ ಕ್ಷೇತ್ರಸಂಬಂಧಿ ಭಾಷೆಯ ಮತ್ತು ಶೈಲಿಯ ಪರಿಚಯ ಅತ್ಯಗತ್ಯ.

೧೧.೫.೨.೧. ಅನುವಾದಕ್ಕೆ ಎತ್ತಿಕೊಂಡಿರುವ ಪಠ್ಯದ ಅಮೂಲಾಗ್ರ ಅಭ್ಯಾಸ

ಅನುವಾದಕ್ಕೆ ತೊಡಗುವ ಮೊದಲು ಸಂಪೂರ್ಣ ಪಠ್ಯ ಸಿಗುವುದೆಂದು ಖಾತರಿ ಮಾಡಿಕೊಂಡು, ಪಠ್ಯವನ್ನು ಆಮೂಲಾಗ್ರವಾಗಿ ಓದಿಕೊಳ್ಳಬೇಕು. ಆ ಪಠ್ಯವನ್ನು ಅನುವಾದಿಸುವ ನೈಪುಣ್ಯವಿದೆಯೇ ಎಂದು ಪರಾಮರ್ಶಿಸಿಕೊಳ್ಳಬೇಕು. ಅನುವಾದ ಯೋಜನೆಯ ವೇಳಾಪತ್ರಿಕೆಯ ಪ್ರಕಾರ ಅನುವಾದ ಮಾಡಿ ಮುಗಿಸುವುದು ಸಾಧ್ಯವೇ ಎಂದು ಧೃಡಪಡಿಸಿ ಕೊಳ್ಳಬೇಕು.

೧೧.೫.೨.೨. ಉದ್ದಿಷ್ಟ ಓದುಗರು

ಅನುವಾದಿತ ಕೃತಿಯ ಓದುಗರು ಯಾರು ಎಂಬ ಸ್ಪಷ್ಟತೆ ಇದ್ದರೆ, ಏತಕ್ಕಾಗಿ ಕೃತಿಯ ಅನುವಾದವಾಗುತ್ತಿದೆ ಎಂಬ ಸ್ಪಷ್ಟತೆ ಇದ್ದರೆ, ಯಾವ ಶೈಲಿಯಲ್ಲಿ ಅನುವಾದ ಮಾಡಬಹುದು ಎನ್ನುವುದು ಅನುವಾದಕರ ಅರಿವಿಗೆ ಬರುತ್ತದೆ. ಉದ್ದಿಷ್ಟ ಓದುಗರಿಗನು ಗುಣವಾಗಿ ಮೂಲಪಠ್ಯ ಭಾವಾನುವಾದವಾಗಿ ಅಥವಾ ಸಂಗ್ರಹಾನುವಾದವಾಗಿ ಮಾಡಬೇಕಾಗಿ ಬರಬಹುದು. ಅಥವಾ ಹೆಚ್ಚಿನ ಮಾಹಿತಿ ಕೊಡುವ ಅವಶ್ಯಕತೆ ಕೂಡ ಬರಬಹುದು.

೧೧.೫.೨.೩. ನಿಖರತೆ

ಶಾಸ್ತ್ರೀಯ ಬರಹಗಳ ಶೈಲಿಯ ಪ್ರಮುಖ ಗುಣವೆಂದರೆ ನಿಖರತೆ. ವಿವರಗಳು, ಪ್ರಮಾಣಗಳು, ಅಂಕಿಸಂಖ್ಯೆಗಳು ಕರಾರುವಾಕ್ಕಾಗಿ ಇರಬೇಕಾಗುತ್ತದೆ. ತಾಂತ್ರಿಕ ನುಡಿಗಟ್ಟುಗಳ ಪ್ರಯೋಗವಿದ್ದಾಗ ವಿವರಣೆ, ಅಡಿಟಿಪ್ಪಣಿಗಳ ಮೂಲಕ ಸ್ಪಷ್ಟತೆಯನ್ನು ಸಾಧಿಸಬೇಕು. ಭಾಷೆ ಮತ್ತು ಶೈಲಿಯಲ್ಲಿ ಸಂದಿಗ್ಧತೆ ಇರಕೂಡದು. ಮೂಲ ಲೇಖಕರ ಆಶಯ, ಧಾಟಿ, ಧ್ವನಿ, ತತ್ವಗಳಿಗೆ ಅಪಚಾರವಾಗಕೂಡದು. ಆದರೆ ಅದೇ ವೇಳೆ ಓದುಗರಿಗೆ ಗ್ರಹಿಸಲು ಸಮಸ್ಯೆ ಆಗದಂತೆ ನೋಡಿಕೊಳ್ಳುವುದು ಮುಖ್ಯ.

೧೧.೫.೨.೪. ವಿಷಯ ಪರಿಣಿತಿ

ಅನುವಾದಕ್ಕೆಂದು ಎತ್ತಿಕೊಳ್ಳುವ ಕೃತಿಯ ವಿಷಯವನ್ನು ಕುರಿತು ಅನುವಾದಕನಿಗೆ ಪರಿಣಿತಿ ಅಗತ್ಯ. ಸಮಾಜಶಾಸ್ತ್ರದಲ್ಲಿ ಪರಿಣಿತಿ ಹೊಂದಿರುವ ಉತ್ತಮ ಅನುವಾದಕನೊಬ್ಬ ಭಾಷಾಪ್ರಾವೀಣ್ಯತೆ ಅಥವಾ ಅನುವಾದದ ಮೇಲಿನ ಪ್ರಭುತ್ವದ ಆತ್ಮವಿಶ್ವಾಸದಿಂದ ವೈದ್ಯ ಶಾಸ್ತ್ರದ ಅಥವಾ ಸಂಖ್ಯಾಶಾಸ್ತ್ರದ ಪಠ್ಯವನ್ನು ಅನುವಾದಿಸಲು ಪ್ರಯತ್ನಿಸಿದರೆ ಅದು ದುರಂತವೇ ಸರಿ. ಅನುವಾದಕರು ತಂತಮ್ಮ ಪರಿಣಿತಿ ಮತ್ತು ಕೌಶಲ್ಯಗಳನ್ನಾಧರಿಸಿ ಕೃತಿಗಳನ್ನು ಅನುವಾದಕ್ಕೆ ಆಯ್ದುಕೊಳ್ಳುವುದು ಒಳ್ಳೆಯದು.

೧೧.೫.೨.೫. ತಜ್ಞರ ಸಹಾಯ

ಅನುವಾದಕ್ಕೆ ಸೂಕ್ತ ಭಾಷೆ ಯಾವುದು ಎನ್ನುವ ಸಮಸ್ಯೆಗಳು ಎದುರಾಗುವುದು ಸಾಮಾನ್ಯ. ಕೆಲವೊಮ್ಮೆ ಅನುವಾದ ಕಾರ್ಯವೇ ಕೆಲಕಾಲ ನಿಂತು ಹೋಗಬಹುದು. ಮೂಲ ಲೇಖಕರೊಂದಿಗೆ ಅಥವಾ ಲಕ್ಷ್ಯಭಾಷೆಯ ವಿಷಯ ತಜ್ಞರೊಂದಿಗೆ ಚರ್ಚಿಸುವುದರ ಮೂಲಕ ಕೆಲವು ಸಮಸ್ಯೆಗಳಿಗೆ ಪರಿಹಾರ ಸಿಗಬಹುದು. ಪರಿಣಿತ ಓದುಗರ ಪ್ರತಿಕ್ರಿಯೆಗಳೂ ಅಂತಿಮ ಪ್ರತಿಯ ತಯಾರಿಯಲ್ಲಿ ತುಂಬಾ ಸಹಾಯಕವಾಗುತ್ತವೆ.

ಉದಾಹರಣೆಗಳು

ಬಾಬಾಸಾಹೇಬ ಅಂಬೇಡ್ಕರ ಅವರ ಭಾಷಣದ ಆಯ್ದ ಭಾಗ

On 26th January 1950, we are going to enter into a life of contradictions. In politics we will have equality and in social and economic life we will have inequality..... How long shall we continue to live this life of contradictions? How long shall we continue to deny equality in our social and economic life? If we continue to deny it for long, we will do so only by putting our political democracy in peril. We must remove this contradiction at the earliest possible moment or else those who suffer from inequality will blow up the structure of political democracy which this Assembly has so laboriously built up.

- B. R. Ambedkar

(Speech to the Constituent Assembly on 25th November 1949)

ಇದರ ಕನ್ನಡ ಅನುವಾದ

೧೯೫೦ರ ಜನವರಿ ೨೬ರಂದು ನಾವು ವಿರೋಧಾಭಾಸದ ಜೀವನಕ್ಕೆ ತೊಡಗಲಿದ್ದೇವೆ. ನಮ್ಮ ದೇಶದ ರಾಜಕೀಯ ಜೀವನದಲ್ಲಿ ಸಮಾನತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಅಸಮಾನತೆ ಇರಲಿದೆ. ಇನ್ನೂ ಎಷ್ಟು ಕಾಲದವರೆಗೆ ನಾವು ಈ ವಿರೋಧಾಭಾಸದಲ್ಲಿ ಬಾಳಲಿದ್ದೇವೆ?

ಇನ್ನೂ ಎಷ್ಟು ಕಾಲದವರೆಗೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಿರಾಕರಿಸಲಿದ್ದೇವೆ? ದೀರ್ಘ ಕಾಲದವರೆಗೆ ನಾವು ಆ ಸಮಾನತೆಯನ್ನು ನಿರಾಕರಿಸುತ್ತ ಉಳಿದರೆ ನಮ್ಮ ದೇಶದ ರಾಜಕೀಯ ಲೋಕ ತಂತ್ರವನ್ನೇ ಅಪಾಯಕ್ಕೆ ಒಡ್ಡಲಿದ್ದೇವೆ. ಈ ವಿರೋಧಾಭಾಸವನ್ನು ನಾವು ಶೀಘ್ರವೇ ನಿವಾರಿಸಬೇಕಿದೆ, ಇಲ್ಲದಿದ್ದರೆ ಯಾರು ಈ ಅಸಮಾನತೆಯಿಂದಾಗಿ ಬಳಲುತ್ತಿದ್ದಾರೋ ಅವರು ಈ ಸಂವಿಧಾನ ಸಭೆಯು ಶ್ರಮವಹಿಸಿ ಕಟ್ಟಿರುವ ರಾಜಕೀಯ ಲೋಕತಂತ್ರದ ಸಂರಚನೆಯನ್ನೇ ಕಿತ್ತೆಸೆಯಲಿದ್ದಾರೆ.

– ಬಿ.ಆರ್. ಅಂಬೇಡ್ಕರ್

(೨೫ ನವೆಂಬರ್ ೧೯೪೯ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದಿಂದ)

೧೧.೫.೩. ವ್ಯಾವಹಾರಿಕ ಮತ್ತು ಶಾಸಕೀಯ ಪಠ್ಯಗಳನ್ನು ಅನುವಾದಿಸುವ ವಿಧಾನಗಳು

ತಾರ್ಕಿಕ ಪಠ್ಯಗಳ ಅನುವಾದದ ಹಾಗೆಯೇ ವ್ಯಾವಹಾರಿಕ ಮತ್ತು ಶಾಸಕೀಯ ಪಠ್ಯಗಳ ಅನುವಾದಕ್ಕೂ ವಿಶೇಷ ಪರಿಣಿತಿ ಬೇಕಾಗುತ್ತದೆ. ಸರಕಾರದ ಅಥವಾ ಕೋರ್ಟು ದಾಖಲೆಗಳ ಅನುವಾದ ದೈನಂದಿನ ಬದುಕಿನಲ್ಲಿ ಸಾಮಾನ್ಯವಾಗಿ ಅವಶ್ಯಕ. ಇದು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಸ್ತರದಲ್ಲಿಯೂ ಇರಬಹುದು. ಬಿಸಿನೆಸ್ ಸಂಸ್ಥೆಗಳೂ ಕೂಡ ಸ್ಥಳೀಯ ಮತ್ತು ಜಾಗತಿಕ ಮೂಲದವಾಗಿರಬಹುದು. ವಿವಿಧ ವ್ಯವಹಾರಗಳಿಗೆ ಸಂಬಂಧಿಸಿದ ವರದಿಗಳು, ಸರಕು ವರ್ಣನೆ, ಇತ್ಯಾದಿ ದಾಖಲೆಗಳ ಅನುವಾದವೂ ಸಹ ದೈನಂದಿನ ಚಟುವಟಿಕೆಯಾಗಿದೆ. ಈ ಬಗೆಯ ಅನುವಾದಗಳಿಗೆ ತಮ್ಮದೇ ಆದ ವಿಶಿಷ್ಟ ಸವಾಲುಗಳಿವೆ ಹಾಗೂ ವಿಶಿಷ್ಟ ಕೌಶಲ್ಯದ ಅಗತ್ಯವಿರುತ್ತದೆ. ಸಾಹಿತ್ಯಿಕ ಮತ್ತು ತಾರ್ಕಿಕ ಪಠ್ಯಗಳ ಅನುವಾದಕ್ಕಿಂತಲೂ ಹೆಚ್ಚು ದೈನಂದಿನ ಸ್ತರದಲ್ಲಿ ವ್ಯಾವಹಾರಿಕ ಮತ್ತು ಶಾಸಕೀಯ ಅನುವಾದಗಳು ಆಗುತ್ತಿರುತ್ತವೆ. ಈ ಬಗೆಯ ಅನುವಾದದ ಪ್ರಮುಖ ಲಕ್ಷಣಗಳನ್ನು ಗಮನಿಸೋಣ.

೧೧.೫.೩.೧. ಪಾರಿಭಾಷಿಕ ಶಬ್ದಗಳು

ಒಂದು ಕಾನೂನಿನ ದಾಖಲೆಯಾಗಲೀ, ಸರಕಾರದ ಸುತ್ತೋಲೆಯಾಗಲೀ, ವ್ಯಾವಹಾರಿಕ ವರದಿಯಾಗಲೀ ತುಂಬ ನಿರ್ದಿಷ್ಟ ಬಗೆಯ ಪಠ್ಯವಾಗಿರುತ್ತದೆ. ಸಾಮಾನ್ಯವಾಗಿ ಇಂತಹ ಪಠ್ಯಗಳಲ್ಲಿ ಬಳಕೆಯಾಗುವ ಪದಗಳಲ್ಲಿ ಹಲವು ಆಯಾ ಕ್ಷೇತ್ರದಲ್ಲಿ ನಿರ್ದಿಷ್ಟ ಅರ್ಥ ಹೊಂದಿರುತ್ತವೆ ಮತ್ತು ಆ ಕ್ಷೇತ್ರದ ಹೊರಗೆ ಆ ಪದವೇ ಇಲ್ಲದಿರಬಹುದು ಅಥವಾ ಇದ್ದರೂ ಅದರ ಅರ್ಥ ಭಿನ್ನವಾಗಿರಬಹುದು. ಈ ಹಿನ್ನೆಲೆಯಲ್ಲಿ, ವ್ಯಾವಹಾರಿಕ, ಕಾನೂನಿಗೆ ಸಂಬಂಧಿಸಿದ ಅಥವಾ ಶಾಸಕೀಯ ಪಠ್ಯಗಳನ್ನು ಅನುವಾದಿಸುವಾಗ ಪಾರಿಭಾಷಿಕ ಪದಗಳನ್ನು ಕುರಿತು ವಿಶೇಷ ಗಮನ ಕೊಡಬೇಕು.

೧೧.೫.೩.೨. ಅಧಿಕೃತತೆ

ಮೇಲೆ ಹೇಳಿದ ಕ್ಷೇತ್ರಗಳಿಗೆ ಸಂಬಂಧಿಸಿದ ಪಠ್ಯಗಳಿಗೆ ನಿರ್ದಿಷ್ಟವಾದ ಬಳಕೆ ಇರುತ್ತದೆ. ಈ ಪಠ್ಯಗಳು ಓದುಗರ ರಂಜನೆಗಾಗಲೀ ಮಾಹಿತಿಗಾಗಲೀ ಸೀಮಿತವಲ್ಲ. ಇಂತಹ

ಪಠ್ಯಗಳು ಸರಕಾರೀ ಯೋಜನೆಗಳು, ನಿರ್ಧಾರಗಳು, ಕಾನೂನು ಕ್ರಮಗಳು, ಕೋರ್ಟಿನ ತೀರ್ಪುಗಳು, ಸಾಮಗ್ರಿಯೊಂದರ ಬಳಕೆ ಇತ್ಯಾದಿ ಅಂಶಗಳನ್ನು ಅವಲಂಬಿಸಿರುತ್ತವೆ. ಇಂತಹ ಪಠ್ಯಗಳು ಅನುವಾದವಾದಾಗ ಅವು ಮೂಲಪಠ್ಯದಷ್ಟೇ ಅರ್ಥಪೂರ್ಣವಾಗಿರಬೇಕು ಎನ್ನುವುದು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಅಂದರೆ ಅವುಗಳಿಗೆ ಮೂಲಪಠ್ಯದಷ್ಟೇ ಅಧಿಕೃತತೆ ಇರಬೇಕು. ಅನುವಾದಕರು ಸ್ವಯಂಪ್ರೇರಣೆಯಿಂದ ಅನುವಾದಿಸಿದರೆ ಸಾಲದು. ಸೂಕ್ತ ಅಧಿಕಾರಿಗಳ, ಸಂಸ್ಥೆಗಳ, ಕಛೇರಿಯ ಅನುಮೋದನೆಯೂ ಅವಶ್ಯಕವಾಗಿರುತ್ತದೆ. ಉದಾಹರಣೆಗೆ ಕಾನೂನು ಪಠ್ಯವೊಂದರ ಅನುವಾದಿತ ಪಠ್ಯಕ್ಕೆ ಮೂಲಪಠ್ಯ ತನ್ನ ಸಮಾಜದಲ್ಲಿ ಹೊಂದಿದ್ದ ಅಧಿಕೃತತೆಯೇ ದೊರೆಯುವಂತಾಗಬೇಕು.

೧೧.೫.೩.೩. ನಿರ್ದಿಷ್ಟ ವ್ಯವಸ್ಥೆಗಳು

ಪ್ರತಿಯೊಂದು ದೇಶವೂ (ಅಥವಾ ಒಕ್ಕೂಟ ದೇಶದ ರಾಜ್ಯಗಳೂ) ತನ್ನದೇ ಆದ ಕಾನೂನು ವ್ಯವಸ್ಥೆಯನ್ನು ಹೊಂದಿರುತ್ತದೆ. ಶಾಸಕೀಯ ಪಠ್ಯಗಳು ಕೂಡ ಈ ವ್ಯವಸ್ಥೆಯ ಭಾಗವೇ ಆಗಿರುತ್ತವೆ. ಅವುಗಳಿಗಿರುವ ಅರ್ಥ ಆಯಾ ವ್ಯವಸ್ಥೆಯಲ್ಲಿಯೇ ಸ್ಪಷ್ಟವಿರುತ್ತದೆ. ಇನ್ನೊಂದು ದೇಶದ ವ್ಯವಸ್ಥೆಯಲ್ಲಿ ಅದಕ್ಕಿರುವ ಪದಕ್ಕೂ, ಅದೇ ಪದದ ಅಕ್ಷರಶಃ ಅರ್ಥಕ್ಕೂ ಹೋಲಿಕೆ ಇಲ್ಲದಿರಬಹುದು. ಅನುವಾದಕರು ಒಂದು ಅಧಿಕೃತ ವ್ಯವಸ್ಥೆಯಿಂದ ಇನ್ನೊಂದಕ್ಕೆ ಅನುವಾದಿಸುವಾಗ ಲಕ್ಷ್ಯ–ವ್ಯವಸ್ಥೆಯಲ್ಲಿ ಚಾಲ್ತಿಯಲ್ಲಿರುವ ಶಬ್ದವನ್ನು ಹುಡುಕಬೇಕಾಗುತ್ತದೆ. ಉದಾಹರಣೆಗೆ, ಕಾನೂನಿನ ಶಬ್ದಗಳಿಗೆ ಅದು ಉಲ್ಲೇಖಿಸುವ ವಸ್ತುವಿನ ಲಕ್ಷಣಕ್ಕೆ ಸಂಬಂಧಿಸಿದ ಅರ್ಥವಿರುವುದಿಲ್ಲ. ಬದಲಿಗೆ, ತನ್ನದೇ ವ್ಯವಸ್ಥೆ ನಿರ್ಮಿಸಿದ ಅಮೂರ್ತ ಅರ್ಥವಿರುತ್ತದೆ.

ಉದಾಹರಣೆಗಳು

ಸರಕಾರೀ ಸುತ್ತೋಲೆ

> The main objective of this act is transparency in administration, openness and making public authorities answerable. Right to Information Act is a significant tool in bringing about change in government and officers' performance of duty. Under the Right to Information Act, citizens can seek information available with public authorities. By way of doing this it will possible to maintain transparency in administration. Every public authority is supposed to appoint an information officer. Public Information Officer / Asst. are responsible for providing information sought by applicants and also to provide assistance to them.

ಈ ಪಠ್ಯದ ಕನ್ನಡ ಅನುವಾದವನ್ನು ಗಮನಿಸಿ.

ಭಾರತ ಸರಕಾರದ ಮಾಹಿತಿ ಹಕ್ಕು ಅಧಿನಿಯಮದ ಮುಖ್ಯ ಉದ್ದೇಶ ಆಡಳಿತದಲ್ಲಿ ಪಾರದರ್ಶಕತೆ, ಮುಕ್ತತೆ ಹಾಗೂ ಸಾರ್ವಜನಿಕ ಪ್ರಾಧಿಕಾರಗಳಲ್ಲಿ

ಹೊಣೆಗಾರಿಕೆ ಉಂಟುಮಾಡುವುದು. ಸರ್ಕಾರ ಹಾಗೂ ಅದರ ಅಧಿಕಾರಿಗಳ ಕರ್ತವ್ಯ ನಿರ್ವಹಣೆಯಲ್ಲಿ ಬದಲಾವಣೆ ತರಲು ಮಾಹಿತಿ ಹಕ್ಕು ಅಧಿನಿಯಮವು ಒಂದು ಪ್ರಮುಖ ಸಾಧನವಾಗಿದೆ. ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಪ್ರಜೆಗಳು ಸಾರ್ವಜನಿಕ ಪ್ರಾಧಿಕಾರಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಪಡೆಯಲು ಅವಕಾಶವನ್ನು ಕಲ್ಪಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡಲು ಸಾಧ್ಯವಾಗಲಿದೆ. ಪ್ರತಿ ಸಾರ್ವಜನಿಕ ಪ್ರಾಧಿಕಾರವು ಆಡಳಿತ ಘಟಕ ಅಥವಾ ಕೇಂದ್ರ ಕಛೇರಿಯಲ್ಲಿ ಮಾಹಿತಿ ಒದಗಿಸಲು ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನು ನೇಮಕ ಮಾಡ ಬೇಕಾಗಿರುತ್ತದೆ. ಸಾರ್ವಜನಿಕ ಮಾಹಿತಿ ಅಧಿಕಾರಿ / ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಅರ್ಜಿದಾರರು ಕೋರಿದ ಮಾಹಿತಿ ಒದಗಿಸುವ ಹಾಗೂ ಮಾಹಿತಿ ಕೋರುವ ವ್ಯಕ್ತಿಗಳಿಗೆ ಅಗತ್ಯ ನೆರವು ನೀಡುವ ಜವಾಬ್ದಾರಿಯನ್ನು ಹೊಂದಿರುತ್ತಾರೆ.

೧೧.೫.೪. ಅನುವಾದಿಸುವಾಗ ಎದುರಾಗುವ ಸವಾಲುಗಳು

ಅನುವಾದವನ್ನು ಅನೇಕ ಬಗೆಯಲ್ಲಿ ವ್ಯಾಖ್ಯಾನಿಸಲಾಗುತ್ತದೆಯಾದರೂ ಮೂಲತಃ ಮೂಲಭಾಷೆಯ ಪಠ್ಯವನ್ನು ಲಕ್ಷ್ಯಭಾಷೆಯ ಓದುಗರಿಗೆ ತಲುಪಿಸುವುದೇ ಅನುವಾದದ ಜೀವಾಳ. ಮೂಲಪಠ್ಯದ ಅರ್ಥ, ಆಶಯ ಮತ್ತು ಸಂದರ್ಭಗಳನ್ನು ಅನುವಾದಿತ ಕೃತಿಯು ಪ್ರತಿಬಿಂಬಿಸಿದೆಯಾದರೆ ಅದೊಂದು ಯಶಸ್ವೀ ಅನುವಾದ. ಹೀಗಾದಾಗ ಉದ್ದಿಷ್ಟ ಓದುಗರು ಆ ಕೃತಿಯ ಮೂಲ ಓದುಗರು ಪಡೆದ ಲಾಭದ ಅನುಭವವನ್ನೇ ಪಡೆಯುವುದು ಸಾಧ್ಯ. ಇದಕ್ಕೆ ಅತ್ಯಗತ್ಯವಾದುದೆಂದರೆ ಅನುವಾದಕನಿಗೆ ಮೂಲ ಮತ್ತು ಲಕ್ಷ್ಯಭಾಷೆಯ ಮೇಲಿರುವ ಪ್ರಭುತ್ವ ಮತ್ತು ಕೃತಿಯ ವಿಷಯ / ಪ್ರಕಾರದ ಕುರಿತು ಇರುವ ಪರಿಣಿತಿ.

ವಾಸ್ತವದಲ್ಲಿ, ಇವುಗಳನ್ನು ಸಾಧಿಸುವುದು ಸುಲಭವಲ್ಲ. ಅನುವಾದ ಎನ್ನುವುದು ಒಂದು ಸಂಕೀರ್ಣ ಪ್ರಕ್ರಿಯೆ. ಅನುವಾದಕರು ಎದುರಿಸುವ ಸವಾಲುಗಳು ಹಲವಾರು. ಸಾಮಾಜಿಕ, ಸಾಂಸ್ಕೃತಿಕ ಭಿನ್ನತೆಗಳ ಜೊತೆಜೊತೆಗೆ ಓದುಗ ವರ್ಗದ ಹಿನ್ನೆಲೆಯೂ ಕೂಡ ಅನುವಾದದಲ್ಲಿ ಸವಾಲುಗಳನ್ನು ತರುತ್ತದೆ. ಪ್ರತಿ ಭಾಷೆಗೂ ತನ್ನದೇ ವಿಶಿಷ್ಟತೆ ಇರುತ್ತದೆ. ಲೇಖಕರು ಯಾವಾಗಲೂ ಭಾಷೆಯ ಅತ್ಯಂತ ಪರಿಣಾಮಕಾರಿ ಮತ್ತು ಪ್ರಭಾವಶಾಲೀ ಶೈಲಿಯನ್ನು ಬಳಸಿ ಬರೆದಿರುತ್ತಾರೆ. ಅಂದರೆ ಅನುವಾದಯೋಗ್ಯ ಕೃತಿಗಳು ಅಂತಹ ಶೈಲಿಯಲ್ಲಿರುವುದು ಸಾಮಾನ್ಯ. ಭಾಷೆಯಿಂದ ಭಾಷೆಗೆ ವಿಷಯದ ವರ್ಗಾವಣೆ ಕಷ್ಟವಾದರೂ ಅದು ಸಾಧ್ಯ. ಶೈಲಿಯ ವರ್ಗಾವಣೆ ಅನೇಕ ಸಂದರ್ಭದಲ್ಲಿ ಅಸಾಧ್ಯವೇ ಆಗಿರುತ್ತದೆ –ಅಥವಾ ಪರಿಣಾಮಕಾರಿ ಮತ್ತು ಪ್ರಭಾವಶಾಲೀ ಶೈಲಿ ಪ್ರತಿ ಭಾಷೆಯಲ್ಲಿಯೂ ವಿಭಿನ್ನವಾಗಿರುತ್ತವೆಯಾದ್ದರಿಂದ ಅನುವಾದಕನಿಗೆ ಲಕ್ಷ್ಯಭಾಷೆಯಲ್ಲಿ ಬರವಣಿಗೆಯ ಪ್ರಭುತ್ವ ಇರಬೇಕು. ಇವೆಲ್ಲವುಗಳ ಆಧಾರದ ಮೇಲೆ ಕೈಗೆತ್ತಿಕೊಂಡ ಅನುವಾದವೂ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು. ಇಲ್ಲಿ ಅಂತಹ ಕೆಲವು ಸಮಸ್ಯೆಗಳನ್ನು ಚರ್ಚಿಸಲಾಗಿದೆ.

೧೧.೫.೪.೧. ಶೈಲಿಯ ಸವಾಲುಗಳು

ಸ್ಪಷ್ಟತೆ, ಸಂಕ್ಷೇಪಣೆ, ಪುನರುಕ್ತಿ, ಸ್ಥಳಾಂತರ: ಓದುಗರ ಮೇಲೆ ಪರಿಣಾಮ ಬೀರುವ ಪ್ರತಿಯೊಂದು ಬರಹವೂ ವಿಷಯದ ಜೊತೆಗೆ ಶೈಲಿಯಲ್ಲಿಯೂ ವಿಶಿಷ್ಟತೆ ಹೊಂದಿರುತ್ತದೆ. ಶೈಲಿಯ ವೈಶಿಷ್ಟ್ಯಗಳು ಓದಲು ಸೊಗಸು; ಆದರೆ ಅನುವಾದಿಸುವಾಗ ಸಮಸ್ಯಾತ್ಮಕ. ಅನುವಾದದ ಪ್ರಕ್ರಿಯೆಯಲ್ಲಿ ಶೈಲಿಯನ್ನು ಉಪೇಕ್ಷಿಸುವ ಪ್ರವೃತ್ತಿ ಇರುವುದರಿಂದಲೇ ಅನುವಾದಿತ ಕೃತಿಗಳಲ್ಲಿ ಬಹುಪಾಲು ಓದುಗರ ಮನಸೆಳೆಯುವುದಿಲ್ಲ. ಶೈಲಿಯ ಪ್ರಶ್ನೆ ಸಹಜವಾಗಿಯೇ ಸಾಹಿತ್ಯಿಕ ಕೃತಿಗಳ ಸಂದರ್ಭದಲ್ಲಿ ಪರಮೋಚ್ಚ ಕಾಳಜಿಯಾಗಿದ್ದರೂ, ಎಲ್ಲ ಬಗೆಯ ಕೃತಿಗಳೂ ತಮ್ಮದೇ ಆದ ಶೈಲಿಯನ್ನು ಹೊಂದಿರುತ್ತವೆ. ಪದಗಳ ಆಯ್ಕೆ, ವಾಕ್ಯರಚನೆ, ವಿಷಯಪ್ರಸ್ತುತಿಯಲ್ಲಿನ ಧಾಟಿ, ಭಾಷೆಯ ಲಾಕ್ಷಣಿಕ ಬಳಕೆ, ಪದದ ನಾದ ಮುಂತಾದ ಶೈಲಿಯ ಅಂಶಗಳು ತೀರಾ ವೈಯಕ್ತಿಕವೂ, ಲೇಖಕರ ವಿಶಿಷ್ಟ ಸಾಮರ್ಥ್ಯಕ್ಕೆ ಸಂಬಂಧಿಸಿದ್ದೂ ಆಗಿವೆ. ಓದುಗ ವರ್ಗಕ್ಕೆ ಅನುಗುಣವಾಗಿಯೂ ಶೈಲಿಯಲ್ಲಿ ಬದಲಾವಣೆ ಇರುತ್ತದೆ.

೧. ಸ್ಪಷ್ಟತೆ

ಅನುವಾದಕರು ನಿಖರವಾದ ಭಾಷೆಯತ್ತ ಗಮನ ಕೊಟ್ಟು, ಸಂದಿಗ್ಧತೆಗಳನ್ನು ನಿವಾರಿಸಿ ಕೊಂಡು, ಸುಲಭಗ್ರಾಹ್ಯ ಶೈಲಿಯಲ್ಲಿ ಬರೆದರೆ ಸ್ಪಷ್ಟತೆ ತನಗೆ ತಾನೇ ಬರುತ್ತದೆ. ಓದುಗ ವರ್ಗಕ್ಕೆ ಸೂಕ್ತವಾದ ಶೈಲಿಯಲ್ಲಿ ಬರೆಯುವುದು ಅಗತ್ಯ. ಪರಿಣಿತರಿಗಾಗಿ ಅನುವಾದಿಸಲಾಗಿರುವ ಕೃತಿಯ ಶೈಲಿ ಮತ್ತು ಸಾಮಾನ್ಯ ಓದುಗರಿಗಾಗಿ ಅನುವಾದಿಸಲಾಗಿರುವ ಕೃತಿಯ ಶೈಲಿ ಏಕರೂಪದ್ದಾಗಿರಲು ಸಾಧ್ಯವಿಲ್ಲ. ಸಂದರ್ಭೋಚಿತತೆಯ ಕಡೆಯೂ ಲಕ್ಷ್ಯ ಕೊಡಬೇಕು. ಸಾಹಿತ್ಯಿಕ ಕೃತಿಗಳ ಅನುವಾದದಲ್ಲಿ ಆಡುನುಡಿ ಬಳಸಬಹುದು; ಆದರೆ ಶಾಸ್ತ್ರೀಯ ಅಥವಾ ಶಾಸಕೀಯ ದಾಖಲೆಗಳಲ್ಲಿ ಔಪಚಾರಿಕ ಭಾಷೆಯನ್ನು ಬಳಸ ಬೇಕಾಗುತ್ತದೆ. ಘನತೆ ಮತ್ತು ಸಂವಹನ ಪ್ರತಿಯೊಂದು ಅನುವಾದದಲ್ಲಿಯೂ ಅವಶ್ಯ.

೨. ಸಂಕ್ಷೇಪಣೆ

ಶೈಲಿಯ ಒಂದು ವಿಶಿಷ್ಟ ಅಂಶವೆಂದರೆ ಸಂಕ್ಷೇಪಣೆ ಅಥವಾ ವಾಕ್ಯವೊಂದರಲ್ಲಿ ಕೆಲವು ಭಾಗವನ್ನು ಬಿಟ್ಟುಬಿಡುವುದು ಅಥವಾ ಹ್ರಸ್ವಗೊಳಿಸುವುದು. ಹಿಂದುಮುಂದಿನ ಅಥವಾ ಸಂದರ್ಭಕ್ಕೆ ತಕ್ಕ ಅರ್ಥವನ್ನು ಓದುಗರು ಗ್ರಹಿಸಬಲ್ಲವರಾಗಿರುತ್ತಾರೆ. ಸಂಕ್ಷೇಪಣೆಯ ಮೂಲಕ ಲೇಖಕರು ಓದುಗರನ್ನು ಕ್ರಿಯಾತ್ಮಕ ಓದುಗರನ್ನಾಗಿಸುತ್ತಾರೆ. ಅನುವಾದಕರು ಎದುರಿಸಬೇಕಾಗಿರುವ ಸವಾಲು ಎಂದರೆ ಒಂದು ಭಾಷೆಯಲ್ಲಿ ಬಳಸಲಾಗುವ ಸಂಕ್ಷೇಪಣೆ ಇನ್ನೊಂದು ಭಾಷೆಯಲ್ಲಿ ಸಂದಿಗ್ಧತೆಯನ್ನು ಹುಟ್ಟುಹಾಕಬಲ್ಲದು. ಅನುವಾದಕರು ಸಂದರ್ಭಕ್ಕೆ ಉಚಿತವಾದ ತಂತ್ರಗಳನ್ನು ಬಳಸಿ ನಿಭಾಯಿಸಬೇಕಾಗುತ್ತದೆ.

೩. ಪುನರುಕ್ತಿ

ಸಂಕ್ಷೇಪಣೆಗೆ ವಿರುದ್ಧವಾದ ಶೈಲಿಯ ಅಂಶವೆಂದರೆ ಪುನರುಕ್ತಿ. ಇದರ ಬಳಕೆ ಸಾಮಾನ್ಯವಾಗಿ ಅಲಂಕಾರಿಕ. ಆದರೆ ಓದುಗರ ಗಮನ ಸೆಳೆಯುವ ಅಂಶಗಳಲ್ಲಿ ಇದೂ ಒಂದು. ಕೆಲವು ಭಾಷೆಗಳಲ್ಲಿ ಪುನರುಕ್ತಿಯ ಬಳಕೆ ಹೆಚ್ಚು. ಉದಾಹರಣೆಗೆ ಹಿಂದಿ ಭಾಷೆಯಲ್ಲಿ ಪುನರುಕ್ತಿ ಸರ್ವೇಸಾಮಾನ್ಯ. ಅನುವಾದಕರ ತೊಂದರೆ ಎಂದರೆ ಪುನರುಕ್ತಿ ಸೃಜಿಸುವ ಪರಿಣಾಮವನ್ನು ಲಕ್ಷ್ಯಭಾಷೆಗೆ ಒಯ್ಯುವುದು ಹೇಗೆ ಎಂಬುದು.

೪. ಸ್ಥಳಾಂತರ

ವಾಸ್ತವವಾಗಿ ಇದೊಂದು ಕಗ್ಗಂಟೇನೂ ಅಲ್ಲ. ಆದರೆ ಅನುವಾದಕರು ಗಮನವಿಡದಿದ್ದರೆ ಲಕ್ಷ್ಯಭಾಷೆಯಲ್ಲಿ ವಿಚಿತ್ರ ವಾಕ್ಯರಚನೆಗಳಾಗುವ ಸಾಧ್ಯತೆಯಿದೆ. ಪ್ರತಿ ಭಾಷೆಗೂ ಅದರದೇ ಆದ ರಾಚನಿಕ ಸ್ವರೂಪವಿರುತ್ತದಷ್ಟೇ. ಅನುವಾದಕರು ತಮ್ಮ ಲಕ್ಷ್ಯಭಾಷೆಯ ಜಾಯಮಾನಕ್ಕೆ ಅನುಗುಣವಾದ ವಾಕ್ಯರಚನೆಯನ್ನು ಸಾಧಿಸಲು ಮೂಲಪಠ್ಯದಲ್ಲಿರುವ ಕ್ರಮಕ್ಕೆ ವ್ಯತಿರಿಕ್ತವಾದ ಕ್ರಮವನ್ನು ಬಳಸಬೇಕಾಗಬಹುದು. ಅದಕ್ಕಾಗಿ ವಾಕ್ಯದ ವಿವಿಧ ಅಂಗಗಳನ್ನು ಸ್ಥಳಾಂತರ ಮಾಡಿ ಸಹಜ ವಾಕ್ಯರಚನೆ ಮಾಡಬೇಕಾಗುತ್ತದೆ.

೧೧.೫.೪.೨. ಭಾಷೆಯ ರಾಚನಿಕ ಸವಾಲುಗಳು

ಶಬ್ದಾರ್ಥ, ವ್ಯಾಕರಣ, ವಾಕ್ಯರಚನೆ

ಭಾಷೆಯ ರಾಚನಿಕ ಸ್ವರೂಪಗಳಲ್ಲಿರುವ ಭಿನ್ನತೆಯನ್ನು ಸೂಕ್ಷ್ಮವಾಗಿ ಅವಲೋಕಿಸುವ ಮೂಲಕ ಸರಾಗವಾಗಿ ಓದಿಸಿಕೊಳ್ಳುವ ಗುಣವುಳ್ಳ ಶೈಲಿಯಲ್ಲಿ ಅನುವಾದ ಮಾಡಬಹುದು. ಮೂಲಪಠ್ಯದ ರಾಚನಿಕ ಸ್ವರೂಪಕ್ಕೆ ಕಟ್ಟುಬಿದ್ದರೆ ಲಕ್ಷ್ಯಪಠ್ಯ ಅಸ್ಪಷ್ಟವಾಗಿ ಬಿಡುವ ಅಪಾಯ ವಿರುತ್ತದೆ.

೧. ಶಬ್ದಾರ್ಥ

ಅನುವಾದ ಪ್ರಕ್ರಿಯೆಯಲ್ಲಿ ಅನೇಕ ಪದಗಳು ಕಸಿವಿಸಿ ಉಂಟುಮಾಡಬಹುದು. ಯಾವೊಂದು ಪದಕ್ಕೂ ಸಂದರ್ಭೋಚಿತ ಅರ್ಥವಿರುವುದರಿಂದ, ಲಕ್ಷ್ಯಭಾಷೆಯಲ್ಲಿ ನಿರ್ದಿಷ್ಟ ಅರ್ಥವ್ಯಾಪ್ತಿ ಹೊಂದಿರುವ ಪದಕ್ಕಾಗಿ ಹುಡುಕಬೇಕಾಗುತ್ತದೆ. ನುಡಿಗಟ್ಟುಗಳು, ಸಂಯುಕ್ತಪದಗಳು, ದ್ವಿ–ಶಬ್ದ ಕ್ರಿಯಾಪದಗಳು ಅನುವಾದಕರಿಗೆ ಸಮಸ್ಯಾತ್ಮಕವಾಗಬಹುದು. ಅಂತಹ ಸಂದರ್ಭಗಳಲ್ಲಿ ಸೂಕ್ತ ಮಾರ್ಪಾಡುಗಳೊಂದಿಗೆ ಅರ್ಥವ್ಯತ್ಯಯವಾಗದ ಹಾಗೆ ಅನುವಾದಿಸಬೇಕು; ಅಕ್ಷರಶಃ ಅನುವಾದಿಸಬಾರದು. ಪಾರಿಭಾಷಿಕ ಪದಗಳ ಜಾಗದಲ್ಲಿ ಸಾಧಾರಣ ಪದಗಳ ಪ್ರಯೋಗ ಉಚಿತವಲ್ಲ. ಆದುದರಿಂದ ವಿಷಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಕೋಶವನ್ನು ಸಹ ಅನುವಾದಕರು ಬಳಸಬೇಕಾಗುತ್ತದೆ. ಕೆಲವು ಪದಗಳಿಗೆ ಐತಿಹಾಸಿಕವಾಗಿ ನಿರ್ದಿಷ್ಟ ಅರ್ಥವಿರುತ್ತವೆ. ಅದನ್ನು ಕಡೆಗಣಿಸಲಾಗದು. ಕೆಲವು ಸಂದರ್ಭಗಳಲ್ಲಿ ಪರ್ಯಾಯ ಪದಗಳ ಬಳಕೆ, ಹೊಸ ಪದಗಳ ಸೃಷ್ಟಿ ಹಾಗೂ ಸಂದರ್ಭೋಚಿತ ಸಮಾನಾರ್ಥಕ ಪದ ಬಳಕೆ ಅವಶ್ಯವಾಗಬಹುದು.

೨. ವ್ಯಾಕರಣ

ಮೂಲಭಾಷೆಯ ರಚನಾ ವಿಧಾನ ಲಕ್ಷ್ಯಭಾಷೆಯಲ್ಲಿಯೂ ಅರ್ಥವ್ಯತ್ಯಯವಿಲ್ಲದೇ ಸಾಧ್ಯವಾಗದಿರಬಹುದು. ಬಗೆಬಗೆಯ ಕಾರಣಗಳಿಗಾಗಿ ಲಕ್ಷ್ಯಭಾಷೆಯಲ್ಲಿ ಬೇರೆ ರೀತಿಯಲ್ಲಿ ವಾಕ್ಯರಚನೆಯನ್ನು ಮಾಡಬೇಕಾಗಬಹುದು. ಅನುವಾದಕರು ಲಕ್ಷ್ಯಭಾಷೆಯ ಜಾಯಮಾನಕ್ಕೆ ಸರಿಹೊಂದುವ ಹಾಗೂ ಸರಾಗ ಓದಿಗೆ ಅಡಚಣೆ ತರದ ರೀತಿಯಲ್ಲಿ ವ್ಯಾಕರಣವನ್ನು ಬಳಕೆ ಮಾಡಬೇಕಾಗುತ್ತದೆ.

೩. ವಾಕ್ಯರಚನೆ

ಲಕ್ಷ್ಯಭಾಷೆಗೆ ಹೊಂದುವ ವಾಕ್ಯರಚನಾ ಮಾದರಿಗಳನ್ನು ಬಳಸುವುದು ಉಚಿತವೇ ಹೊರತು ಮೂಲಪಠ್ಯದ ವಾಕ್ಯರಚನಾ ಕ್ರಮವನ್ನು ಅನುಸರಿಸುವುದಲ್ಲ. ಇದು ವಿಶೇಷವಾಗಿ,

ಕರ್ತರಿ–ಕರ್ಮಣಿ ಪ್ರಯೋಗಗಳಿಗೆ ಮತ್ತು ಇತರ ಅಲಂಕಾರಿಕ ಪ್ರಯೋಗಗಳ ಸಂದರ್ಭದಲ್ಲಿ ಗಮನದಲ್ಲಿಡಬೇಕಾದ ಅಂಶ.

೧೧.೫.೪.೩. ಸಾಂಸ್ಕೃತಿಕ ಸವಾಲುಗಳು

ಭಾಷೆಯ ಸ್ವಭಾವ ಅದರ ಸಂಸ್ಕೃತಿಯ ಮೇಲೆ ಅವಲಂಬಿತವಾಗಿರುತ್ತದೆ. ಪದಗಳ ಅರ್ಥ ಸಾಂಸ್ಕೃತಿಕ ಸ್ತರದಲ್ಲಿ ಹೊಂದಿರುವ ಧ್ವನಿಸಾಧ್ಯತೆಗಳು ಅಪಾರ. ಆಡುನುಡಿಗಳು ಭಾಷೆಯೊಳಗೆ ಹಾಸುಹೊಕ್ಕಾಗಿರುತ್ತವೆ. ಸಮುದಾಯವೊಂದರ ನಂಬಿಕೆಗಳು, ಆಚರಣೆಗಳು, ಸಂಪ್ರದಾಯಗಳು ಭಾಷೆಯನ್ನು ಹಲವು ಹತ್ತು ಬಗೆಯಲ್ಲಿ ಪ್ರಭಾವಿಸಿರುತ್ತವೆ. ಅನುವಾದಕರು ಮೂಲ ಮತ್ತು ಲಕ್ಷ್ಯಭಾಷೆಯ ಸಾಂಸ್ಕೃತಿಕ ಅಂಶಗಳಿಗೆ ಗಮನಕೊಟ್ಟು ಮುಂದುವರಿಯಬೇಕಾಗುತ್ತದೆ. ಕೆಲವು ಅಭಿವ್ಯಕ್ತಿಗಳು, ಚಟುವಟಿಕೆಗಳು, ಹೇಳಿಕೆಗಳು ಮೂಲಭಾಷೆಯಲ್ಲಿ, ಕೆಲವೊಮ್ಮೆ ಮೂಲ ಸಂದರ್ಭದಲ್ಲಿ ಮಾತ್ರ ಅರ್ಥವತ್ತಾಗಿದ್ದು, ಇತರ ಭಾಷೆಗಳಲ್ಲಿ ಅಸಂಗತವಾಗಿಬಿಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಅನುವಾದಕರಿಗೆ ಸಾಂಸ್ಕೃತಿಕ ಸೂಕ್ಷ್ಮತೆ ಇರುವುದು ಅತ್ಯಗತ್ಯ.

೧. ನಂಬಿಕೆಗಳು

ಧಾರ್ಮಿಕ, ಸಾಂಸ್ಕೃತಿಕ, ಸ್ಥಳೀಯ ನಂಬಿಕೆಗಳಿಗೆ ಸಂಬಂಧಿಸಿದ ನುಡಿ, ನುಡಿಗಟ್ಟು, ಪರಿಕಲ್ಪನೆಗಳನ್ನು ಅಕ್ಷರಶಃ ಅನುವಾದ ಮಾಡಲಾಗುವುದಿಲ್ಲ. ಆಯಾ ನಂಬಿಕೆಗಳ ಹಿನ್ನೆಲೆಯ ವಿವರಣೆಯನ್ನು ಕೊಡಬೇಕಾಗುತ್ತದೆ.

೨. ಹಾಸ್ಯ ಮತ್ತು ವ್ಯಂಗ್ಯೋಕ್ತಿ

ಭಾಷೆಯ ಬಳಕೆಯಲ್ಲಿ ನೇರ ಅಭಿವ್ಯಕ್ತಿಗಳಷ್ಟೇ ಪರೋಕ್ಷ ಅಭಿವ್ಯಕ್ತಿಗಳ ಪಾತ್ರವೂ ಇರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ವ್ಯಂಗ್ಯೋಕ್ತಿಯ ಬಳಕೆಯಾಗಿರುತ್ತದೆ ಮತ್ತು ವ್ಯಂಗ್ಯವನ್ನು ನೇರವಾಗಿ ಅನುವಾದಿಸಲಾಗದೇ ಇರಬಹುದು. ವ್ಯಂಗ್ಯದ ಪರಿಣಾಮ ಅರ್ಥಕ್ಕೆ, ಧ್ವನಿಗೆ, ಸಂದರ್ಭಕ್ಕೆ ಅವಶ್ಯವಿರಬಹುದು. ಹಾಗೆಯೇ ಹಾಸ್ಯವೂ ಕೆಲವೊಮ್ಮೆ ಭಾಷೆಗೆ ನಿರ್ದಿಷ್ಟವಾಗಿರುತ್ತದೆ ಮತ್ತು ಇಂಗಿತ ಅರ್ಥಕ್ಕೆ ಆ ಹಾಸ್ಯಮಯತೆಯ ಅವಶ್ಯವಿರಬಹುದು. ಅನುವಾದಕರು ಸೂಕ್ತ ರೀತಿಯಲ್ಲಿ ಹಾಸ್ಯ ಮತ್ತು ವ್ಯಂಗ್ಯೋಕ್ತಿಗಳನ್ನು ಲಕ್ಷ್ಯಭಾಷೆಗೆ ದಾಟಿಸಬೇಕಾಗುತ್ತದೆ.

೩. ನುಡಿಗಟ್ಟುಗಳು

ನುಡಿಗಟ್ಟುಗಳನ್ನು ಅಕ್ಷರಶಃ ಅನುವಾದಿಸಿದರೆ ಅಸಂಗತ ಅರ್ಥಕ್ಕೀಡುಮಾಡುತ್ತದೆ. ಹಾಗಾಗಿ, ನುಡಿಗಟ್ಟುಗಳನ್ನು ಸೂಕ್ತ ಬದಲಾವಣೆಯೊಂದಿಗೆ ಬಳಸಬೇಕು ಅಥವಾ ಲಕ್ಷ್ಯಭಾಷೆಯಲ್ಲಿ ಅದೇ ಅರ್ಥ ಹೊಮ್ಮಿಸುವ ನುಡಿಗಟ್ಟಿದ್ದರೆ ಅದನ್ನು ಬಳಸಬೇಕು.

೪. ಉಲ್ಲೇಖಗಳು

ಸಾಮಾನ್ಯವಾಗಿ ಎಲ್ಲ ಬಗೆಯ ಪಠ್ಯಗಳಲ್ಲಿ ಸಮಕಾಲೀನ, ಸ್ಥಳೀಯ, ಐತಿಹಾಸಿಕ, ರಾಜಕೀಯ, ಧಾರ್ಮಿಕ, ವೈಯುಕ್ತಿಕ ಉಲ್ಲೇಖಗಳಿರುತ್ತವೆ. ಕೆಲ ಉಲ್ಲೇಖಗಳಿಗೆ ಸಾರ್ವತ್ರಿಕತೆ ಇದೆಯಾದರೂ ಬಹುಪಾಲು ಉಲ್ಲೇಖಗಳು ಸಂದರ್ಭದಲ್ಲಿ ಹುದುಗಿರುತ್ತವೆ.

ಒಟ್ಟಾರೆ ಹೇಳುವುದಾದರೆ, ಅನುವಾದದಲ್ಲಿ ಎದುರಾಗುವ ಅನೇಕ ಸವಾಲುಗಳನ್ನು ಸಂದರ್ಭೋಚಿತ ಬಗೆಯಲ್ಲಿ ಪರಿಹರಿಸಿಕೊಳ್ಳುವ ಅವಶ್ಯಕತೆಯಿರುತ್ತದೆ. ಅಡಿಟಿಪ್ಪಣಿಗಳ ಮೂಲಕ, ಹಿನ್ನೆಲೆಯ ವಿವರಣೆಗಳನ್ನು ಒದಗಿಸುವ ಮೂಲಕ, ಪರ್ಯಾಯ ಪರಿಕಲ್ಪನೆಗಳ ಪ್ರಯೋಗದ ಮೂಲಕ, ಸೂಕ್ತ ವಿಸ್ತರಣೆ ಅಥವಾ ಸಂಕ್ಷೇಪಣೆಗಳ ಮೂಲಕ ಈ ಸವಾಲುಗಳನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ.

ಅಭ್ಯಾಸ ೪

೧. ಕೆಳಗೆ ಕೊಟ್ಟಿರುವ ಇಂಗ್ಲಿಷ್ ಕವನದ ಸಾಲುಗಳನ್ನು ಕನ್ನಡಕ್ಕೆ ಅನುವಾದಿಸಿರಿ.

My Love is like a red, red rose,
That's newly sprung in June.
O my Love is like the melodie,
That's sweetly play'd in tune.

೨. ಕೆಳಗೆ ಕೊಟ್ಟಿರುವ ಕನ್ನಡ ಗದ್ಯ ಭಾಗವನ್ನು ಇಂಗಿಷ್ ಅಥವಾ ನೀವು ಪ್ರಭುತ್ವ ಹೊಂದಿರುವ ಭಾಷೆಗೆ ಅನುವಾದಿಸಿ.

ಇಂದಿನ ವಿದ್ಯಾರ್ಥಿಗಳು ಭಾರತದ ನಾಳಿನ ಪ್ರಜೆಗಳು. ಅವರು ಸ್ವತಂತ್ರ ಮತ್ತು ಆಧುನಿಕ ಭಾರತದ ಶಿಲ್ಪಿಗಳಾಗಿದ್ದಾರೆ. ದೇಶವನ್ನು ಕಟ್ಟುವ ದೊಡ್ಡ ಜವಾಬ್ದಾರಿಯು ವಿದ್ಯಾರ್ಥಿಗಳ ಮೇಲೆ ಇದೆ. ಯಾವುದೇ ಸನ್ನಿವೇಶವನ್ನು ಆತ್ಮವಿಶ್ವಾಸ ಮತ್ತು ಯಶಸ್ಸಿನ ಸಹಿತವಾಗಿ ಎದುರಿಸಬೇಕು ಎಂದರೆ ವಿದ್ಯಾರ್ಥಿಗಳು ಶಿಸ್ತಿನ ಅಭ್ಯಾಸಗಳನ್ನು ಕಲಿಯಬೇಕು. ಗಟ್ಟಿಯಾದ ಮನಸ್ಸು, ತ್ಯಾಗ, ಪ್ರಾಮಾಣಿಕತೆ ಮತ್ತು ಉತ್ತಮ ಚಾರಿತ್ರ್ಯಗಳಿಂದ ವಿದ್ಯಾರ್ಥಿಗಳು ಭಾರತದ ಗತಕಾಲದ ವೈಭವವನ್ನು ಪುನಃ ಸ್ಥಾಪಿಸಬಹುದು.

೩. ಅನುವಾದದ ಅಂತಿಮ ಪ್ರತಿಯ ತಯಾರಿ ಹೇಗಿರಬೇಕೆಂಬುದನ್ನು ವಿವರಿಸಿ.

೪. 'ಯಾರಿಗಾಗಿ ಮತ್ತು ಯಾತಕ್ಕಾಗಿ ಅನುವಾದ' ಎನ್ನುವ ಅಂಶಗಳು ಅನುವಾದ ಪ್ರಕ್ರಿಯೆಯನ್ನು ಹೇಗೆ ನಿರ್ಧರಿಸುತ್ತವೆ?

೧೧.೬. ಸಾರಾಂಶ

ಈ ಅಭ್ಯಾಸ ಘಟಕದಲ್ಲಿ ಅನುವಾದದ ಅರ್ಥ, ಪ್ರಕಾರಗಳು, ವಿಧಾನಗಳು, ತಂತ್ರಗಳನ್ನು ತಿಳಿದುಕೊಂಡಿದ್ದೀರಿ. ಅನುವಾದಕರಾಗುವತ್ತ ಮೂಲಭೂತ ತಯಾರಿ ಹೇಗಿರಬೇಕು, ಅನುವಾದಕರ ಜವಾಬ್ದಾರಿಗಳೇನು, ಎದುರಿಸಬಹುದಾದ ಸವಾಲುಗಳೇನು ಮುಂತಾದ ವಿಷಯಗಳನ್ನು ಅರಿತಿದ್ದೀರಿ. ವಿಷಯ ಪರಿಣಿತಿಗೆ ಮತ್ತು ವೈಯಕ್ತಿಕ ಆಸಕ್ತಿಗೆ ಅನುಗುಣವಾದ ಕ್ಷೇತ್ರದಲ್ಲಿ ಅನುವಾದ ಕಾರ್ಯ ಕೈಗೊಂಡರೆ ಸುಲಭಸಾಧ್ಯವೆನ್ನುವುದನ್ನು ಕಲಿತಿದ್ದೀರಿ.

ಉತ್ತಮ ಅನುವಾದಕರು ಒಳ್ಳೆಯ ಓದುಗರೂ ಆಗಿರುತ್ತಾರೆ, ತಾವು ಅನುವಾದಿಸಲಿರುವ ಪಠ್ಯವನ್ನು ಹಲವು ಸಲ ಅಭ್ಯಸಿಸಿ, ಸೂಕ್ತ ಅರ್ಥವ್ಯಾಖ್ಯಾನದ ನಿರ್ಧಾರಕ್ಕೆ ತಲುಪಿ, ಉದ್ದಿಷ್ಟ ಓದುಗರಿಗಾಗಿ, ನಿಷ್ಠ ಉದ್ದೇಶ ಸಾಧನೆಗಾಗಿ, ಅನುವಾದವನ್ನು ಕೈಗೆತ್ತಿಕೊಳ್ಳುವುದು

ಉಚಿತವೆಂದು ವಿವರಿಸಲಾಗಿದೆ. ಅನುವಾದಕ್ಕೆ ತೊಡಗುವ ಮೊದಲು ಎದುರಾಗಬಹುದಾದ ಸಮಸ್ಯೆಗಳನ್ನು ಗುರುತಿಸಿಕೊಂಡು, ಅವಶ್ಯ ಸಂಶೋಧನೆ ಕೈಗೊಂಡು, ಮುಂದುವರಿಯ ಬೇಕೆಂದು ಒತ್ತಿಹೇಳಲಾಗಿದೆ. ಭಾಷೆಯ ರಚನೆ, ಶೈಲಿ ಮತ್ತು ಪದಗಳ ಸ್ತರದಲ್ಲಿ ಮಾಡಬೇಕಾಗಿ ಬರುವ ಮಾರ್ಪಾಡುಗಳು, ಸಾಂಸ್ಕೃತಿಕ ಅಂಶಗಳನ್ನು ವರ್ಗಾಯಿಸುವಾಗ ಮನದಲ್ಲಿಡಬೇಕಾದ ಅಂಶಗಳನ್ನು ಚರ್ಚಿಸಲಾಗಿದೆ. ಪಾರಿಭಾಷಿಕ ಶಬ್ದಗಳ ಪ್ರಯೋಗ, ವಿಷಯದ ನಿಖರತೆ, ಅನುವಾದಿತ ಪಠ್ಯದ ಅಧಿಕೃತತೆಗಳ ಪ್ರಾಮುಖ್ಯವನ್ನು ಎತ್ತಿ ತೋರಿಸಲಾಗಿದೆ.

ವಿಷಯ ಹಾಗೂ ಕ್ಷೇತ್ರಕ್ಕೆ ತಕ್ಕ ಹಾಗೆ ಅನುವಾದಪೂರ್ವ ತಯಾರಿ ಮಾಡಿಕೊಳ್ಳಿ. ಮೂಲ ಲೇಖಕರ ಜೊತೆ ಚರ್ಚೆ ಸಾಧ್ಯವಾದರೆ ಒಳ್ಳೆಯದು. ತಜ್ಞರ ಜೊತೆ ಕೈಗೆತ್ತಿಕೊಂಡ ಅನುವಾದ ಯೋಜನೆಯನ್ನು ಚರ್ಚಿಸಿ, ಮುಂದಿನ ಮಾರ್ಗವನ್ನು ಸ್ಪಷ್ಟಪಡಿಸಿಕೊಳ್ಳಿ. ಮೂಲ ಮತ್ತು ಲಕ್ಷ್ಯಭಾಷೆಗಳನ್ನು ಬಲ್ಲ ಓದುಗರ ಪ್ರತಿಕ್ರಿಯೆ ಪಡೆದು ಆಮೂಲಾಗ್ರ ತಿದ್ದುಪಡಿ ಮಾಡಿರಿ. ಅನುವಾದಿತ ಪಠ್ಯದಲ್ಲಿ ಯಾವ ರೀತಿಯ ತಪ್ಪುಗಳೂ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಿ.

ಅನುವಾದಕರು ಎರಡು ಭಾಷೆಗಳ ನಡುವೆ, ಎರಡು ಸಂಸ್ಕೃತಿಗಳ ನಡುವೆ, ಎರಡು ಸಮುದಾಯಗಳ ನಡುವೆ ಸೇತುವೆ ಸೃಷ್ಟಿಸುವ ಗುರುತರ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಅನುವಾದಿತ ಕೃತಿಯ ಪರಿಣಾಮ ಮತ್ತು ಪ್ರಭಾವ ಅನೇಕರ ಮೇಲೆ ಆಗಬಹುದು. ಅವುಗಳಿಗೆ ಶಾಸಕೀಯ, ವ್ಯಾವಹಾರಿಕ ಮಹತ್ವ ಇದ್ದೀತು. ಅನುವಾದಿತ ಕೃತಿಯಿಂದ ಓದುಗರಿಗೆ ಇರುವ ನಿರೀಕ್ಷೆಗಳ ಅಂದಾಜು ಅನುವಾದಕರಿಗೆ ಅವಶ್ಯ. ವೈಯಕ್ತಿಕ ಆಸಕ್ತಿಯ ಜೊತೆಗೆ ವೃತ್ತಿಪರತೆಯ ಸ್ತರದಲ್ಲಿಯೂ ಅನುವಾದ ಕಾರ್ಯದಲ್ಲಿ ತೊಡಗಿಕೊಳ್ಳುವುದು ಸಾಧ್ಯ.

ಅಭ್ಯಾಸಗಳಿಗೆ ಉತ್ತರಗಳು

ಅಭ್ಯಾಸ ೧ರ ಉತ್ತರಗಳು

೧. v

೨. iii

೩. iv

೪. i

೫. ii

ಅಭ್ಯಾಸ ೨ರ ಉತ್ತರಗಳು

೧. iii

೨. iv

೩. i

೪. ii

೫. ಇಂಗ್ಲಿಷ್ ನಾಣ್ಣುಡಿ	**ಕನ್ನಡ ಅನುವಾದ**
i. Barking dogs seldom bite.	ಬೊಗಳುವ ನಾಯಿ ಕಚ್ಚುವುದು ಕಡಿಮೆ.

ii. Prevention is better than cure. ಚಿಕಿತ್ಸೆಗಿಂತ ತಡೆಗಟ್ಟುವಿಕೆಯೇ ಮೇಲು.
iii. Silence is gold. ಮೌನವೇ ಬಂಗಾರ.
iv. Man proposes God disposes. ನಾವೊಂದು ಬಗೆದರೆ ದೈವವೊಂದು ಬಗೆವುದು.
v. All that glitters in not gold. ಹೊಳೆಯುವುದೆಲ್ಲ ಬಂಗಾರವಲ್ಲ.

ಅಭ್ಯಾಸ ೩ರ ಉತ್ತರಗಳು

೧. i
೨. ii
೩. iv

೪. ಕನ್ನಡ ನಾಣ್ಣುಡಿ **ಇಂಗ್ಲಿಷ್ ಅನುವಾದ**
೧. ಕಾಯಕವೇ ಕೈಲಾಸ. Work is worship.
೨. ಆರೋಗ್ಯವೇ ಭಾಗ್ಯ. Health is wealth.
೩. ಖಾಲಿ ಕೊಡ ತುಳುಕುವುದಿಲ್ಲ. Empty pot makes more noise.
೪. ಮನಸ್ಸಿದ್ದಲ್ಲಿ ಮಾರ್ಗ. Where there is a will there is a way.
೫. ಬೊಗಳುವ ನಾಯಿ ಕಚ್ಚುವುದಿಲ್ಲ. Barking dogs seldom bite.

೫. ಅ. ಏಳಿ, ಎದ್ದೇಳಿ, ಗುರಿ ಮುಟ್ಟುವವರೆಗೆ ನಿಲ್ಲದಿರಿ.
ಬ. ಕಷ್ಟಕ್ಕಾದವನೇ ಒಳ್ಳೆಯ ಸ್ನೇಹಿತ.
ಕ. ಚಿಕಿತ್ಸೆಗಿಂತ ತಡೆಗಟ್ಟುವಿಕೆಯೇ ಮೇಲು.
ಡ. ಯಾವಾಗಲೂ ಸತ್ಯವನ್ನೇ ನುಡಿಯಿರಿ.

ಅಭ್ಯಾಸ ೪ರ ಉತ್ತರಗಳು

೧. ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು,
ತಾವರೆಯ ಹೊಸ ಅರಳ ಹೊಳೆವ ಕೆಂಪು.
ನನ್ನ ಪ್ರೇಮದ ಹುಡುಗಿ ಕೊಳಲ ಮೆಲುನುಡಿಯಿಂಪು,
ಕೊಳಲು ಮೋಹಿಸಿ ನುಡಿವ ಗಾನದಿಂಪು.

– (ಬಿ.ಎಂ.ಶ್ರೀ.)

೨. Students of today are the future citizens of India. They are the architects of free and modern India. The great responsibility of nation building lies on the students. Students should develop the habit of discipline in order to face any situation with confidence and success. Students can revive the lost glory of India with a strong will, sacrifice, honesty and character.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಕಮಲಾಕರ ಭಟ್**

ಘಟಕ ೧೨

ಅಂತರ್ಜಾಲ ಹಾಗೂ ಸಾಮಾಜಿಕ ಜಾಲ ವ್ಯವಸ್ಥೆ

ಹಿನ್ನೆಲೆ

ಗಣಕ ಯಂತ್ರಗಳ ಆವಿಷ್ಕಾರವು ಅಂತರ್ಜಾಲ, ತಂತ್ರಾಂಶ, ಯುನಿಕೋಡ್, ಸಾಮಾಜಿಕ ಸಂವಹನ ಹಾಗೂ ಬ್ಲಾಗ್ ಮತ್ತು ಅಂಕಣ ಬರಹಗಳ ಉಗಮಕ್ಕೆ ದಾರಿ ಮಾಡಿ ಕಳೆದ ಕೆಲವು ದಶಕಗಳಲ್ಲಿ ನಿಧಾನವಾಗಿ ಭಾಷೆಗಳ ಬಳಕೆ, ಉಪಯೋಗ ಹಾಗೂ ಸಂವಹನ ಮಾಧ್ಯಮದಲ್ಲಿ ಕ್ರಾಂತಿಕಾರಕ ಬೆಳವಣಿಗೆಗಳನ್ನು ತಂದಿದೆ. ಮೇಲಿನ ಬೆಳವಣಿಗೆಗಳು ಸಂವಹನದ ಸಾಧ್ಯತೆ, ಅನುವಾದ, ಸಂಪರ್ಕ ಹಾಗೂ ಸಾಮಾಜಿಕ ನಡುವಳಿಕೆಗಳಲ್ಲಿ ಮೂಲಭೂತ ಬದಲಾವಣೆಗಳನ್ನು ಉಂಟುಮಾಡಿವೆ. ಎಲ್ಲಕ್ಕಿಂತ ಮಿಗಿಲಾಗಿ ಆರಂಭಿಕವಾಗಿ ಕೇವಲ ಇಂಗ್ಲಿಷ್ ಹಾಗೂ ಯೂರೋಪಿನ ಭಾಷೆಗಳಿಗಷ್ಟೇ ಸೀಮಿತವಾಗಿದ್ದ ಈ ಬೆಳವಣಿಗೆಗಳು ಜಗತ್ತಿನ ಎಲ್ಲ ಭಾಷೆಗಳಿಗೂ ಹಬ್ಬಿ ಭಾಷಾ ಸಂಗೋಪನೆಯಲ್ಲಿ ಬೆಂಬಲವಾಗಿ ನಿಂತಿವೆಯಲ್ಲದೆ ಹೊಸಹೊಸ ಭಾಷಿಕ ಶೈಲಿಗಳು ಬೆಳೆಯಲು ಅನುವು ಮಾಡಿಕೊಟ್ಟಿವೆ. ಇವುಗಳ ವ್ಯಾಪಕ ಬಳಕೆಯ ಪರಿಣಾಮವಾಗಿ ಪರಂಪರಾನುಗತವಾಗಿ ಉಳಿದುಬಂದಿದ್ದ ತರತಮ ಭೇದಗಳು, ಕರಿಯ–ಬಿಳಿಯ, ಉಚ್ಚ–ನೀಚ, ಗಂಡು–ಹೆಣ್ಣು, ನಗರ–ಹಳ್ಳಿ, ಹಿರಿಯ–ಕಿರಿಯ ಮುಂತಾದವು, ಗಮನಾರ್ಹವಾಗಿ ಇಳಿಮುಖವಾಗುತ್ತಿವೆ. ತಾಂತ್ರಿಕತೆ ಹಾಗೂ ಸುಲಭವಾಗಿ ಉಪಲಬ್ಧತೆ ಇಲ್ಲದಿರುವ ಕಾರಣದಿಂದ ಇವುಗಳ ಉಪಯೋಗಕ್ಕೆ ಎಲ್ಲರಿಗೂ ಸಮಾನ ಅವಕಾಶಗಳು ಸಿಗುವುದು ಕಷ್ಟ ಎಂಬುದು ನಿಜವಾದರೂ ಅವು ಸಮಾಜದ ಮೇಲೆ ತರಲು ಸಾಧ್ಯವಾಗಿರುವ ಸಾಮಾಜಿಕ ಒತ್ತಡಗಳ ಪರಿಣಾಮ ನಿರ್ಣಾಯಕವಾದುದು. ಪ್ರಸ್ತುತ ಘಟಕ ಐದು ಅಂಶಗಳ ಪರಿಚಯವನ್ನು ಮಾಡಿಕೊಡುತ್ತದೆ: ೧. ಅಂತರ್ಜಾಲ, ೨. ತಂತ್ರಾಂಶ, ೩. ಯುನಿಕೋಡ್ ಮತ್ತು ಕನ್ನಡ, ೪. ಸಾಮಾಜಿಕ ಸಂವಹನ ಹಾಗೂ ೫. ಬ್ಲಾಗ್ ಮತ್ತು ಅಂಕಣ ಬರಹ.

ವಿಷಯಾನುಕ್ರಮಣಿಕೆ

೧೨.೦. ಉದ್ದೇಶ
೧೨.೧. ಪೀಠಿಕೆ
೧೨.೨. ಅಂತರ್ಜಾಲ
೧೨.೩. ತಂತ್ರಾಂಶ (ಪದ ಸಂಸ್ಕರಣ)
೧೨.೪. ಯುನಿಕೋಡ್ ಮತ್ತು ಕನ್ನಡ

೧೨.೫. ಸಾಮಾಜಿಕ ಸಂವಹನ
೧೨.೬. ಬ್ಲಾಗ್ ಮತ್ತು ಅಂಕಣ ಬರಹ
೧೨.೭. ಸಾರಾಂಶ
ಅಭ್ಯಾಸಗಳಿಗೆ ಉತ್ತರಗಳು
೧೨.೮. ಮುಂದಿನ ಓದಿಗಾಗಿ ಮತ್ತು ಆಕರ ಗ್ರಂಥಗಳು

೧೨.೦. ಉದ್ದೇಶ

೧. ಈ ಘಟಕವನ್ನು ಓದುವುದರಿಂದ ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವು ವಿಷಯಗಳ ಬಗೆಗೆ ನಿಮಗೆ ತಿಳಿಯುತ್ತದೆ.
೨. ಕನ್ನಡ ಭಾಷೆಯ ಅಭಿವೃದ್ಧಿಗೆ ಗಣಕ ತಂತ್ರಜ್ಞಾನದ ಅವಶ್ಯಕತೆಯ ಪರಿಚಯವಾಗುತ್ತದೆ.
೩. ಅಂತರ್ಜಾಲ, ಪದಸಂಸ್ಕಾರ, ಯುನಿಕೋಡ್ ಮತ್ತು ಬ್ಲಾಗ್‌ಗಳ ಮೂಲಕ ಕನ್ನಡ ಭಾಷೆಯ ಬೆಳವಣಿಗೆಯ ವಿಷಯ ನಿಮಗೆ ಮನವರಿಕೆ ಆಗುತ್ತದೆ.
೪. ಮಾಹಿತಿ ತಂತ್ರಜ್ಞಾನದ ಸವಲತ್ತುಗಳು ಕನ್ನಡ ಭಾಷೆ–ಸಾಹಿತ್ಯದ ತಿಳಿವಳಿಕೆಗೆ ಯಾವ ರೀತಿ ಪೂರಕವಾಗಿವೆ ಎಂಬುದರ ಕಲ್ಪನೆ ನಿಮಗೆ ಆಗುತ್ತದೆ.

೧೨.೧. ಪೀಠಿಕೆ

೧೨.೧.೧. ತಂತ್ರಜ್ಞಾನದ ಮಹತ್ವ

ಕಂಪ್ಯೂಟರ್ (ಗಣಕಯಂತ್ರ) ಮತ್ತು ಅಂತರ್ಜಾಲ ಎನ್ನುವ ಪದಗಳನ್ನು ನಾವೆಲ್ಲರೂ ದಿನ ನಿತ್ಯದಲ್ಲಿ ಕೇಳಿಯೇ ಇರುತ್ತೇವೆ. ಯಾವುದೋ ಒಂದು ಖಾಸಗಿ / ಸರಕಾರಿ ಕೆಲಸಕ್ಕೆ ಬೇಕಾಗುವ ದಾಖಲೆಗಳನ್ನು ಮುದ್ರಣ ರೂಪದಲ್ಲಿ ಪಡೆಯುವುದರಿಂದ ಹಿಡಿದು ಚಲನಚಿತ್ರ ನೋಡುವ, ವಿವಿಧ ಆಟಗಳನ್ನು ಆಡುವ, ಬೇಕಾದ ಮಾಹಿತಿಗಳನ್ನು ಪ್ರಪಂಚದ ಹೆಚ್ಚೂ–ಕಡಿಮೆ ಯಾವುದೇ ಭಾಷೆಯಲ್ಲಿ ಪಡೆಯುವುದರ ವರೆಗೆ ಎಲ್ಲಾ ಕೆಲಸಕ್ಕೂ ಗಣಕಯಂತ್ರ ಮತ್ತು ಅಂತರ್ಜಾಲವನ್ನು ಇಂದು ಅನಿವಾರ್ಯವಾಗಿ ಅವಲಂಬಿಸಿದ್ದೇವೆ. ಯಾರಿಗೆ ಇಷ್ಟವಾಗಲಿ ಬಿಡಲಿ ಇಂದು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಕಂಪ್ಯೂಟರ್ ಮತ್ತು ಅಂತರ್ಜಾಲ ಎಲ್ಲರ ಜೀವನದ ಮೇಲೂ ಕೃಷಿ, ಸಾರಿಗೆ, ಮನರಂಜನೆಯಿಂದ ಹಿಡಿದು ಅಂತರಿಕ್ಷ ವಿಜ್ಞಾನದವರೆಗೂ, ಬಳಕೆ ಮತ್ತು ಪ್ರಭಾವ ಹೊಂದಿದೆ. ತಂತ್ರಜ್ಞಾನದ ಅನ್ವಯದಿಂದಾಗಿ ನಮ್ಮ ಜೀವನಮಟ್ಟ ಸುಧಾರಿಸಿದೆ. ನಮ್ಮ ಅಗತ್ಯತೆಗಳು ಸುಲಭವಾಗಿ ಪೂರ್ಣಗೊಳ್ಳುತ್ತಿವೆ. ತಂತ್ರಜ್ಞಾನವು ಕೃಷಿಯಲ್ಲಿ ಪ್ರಗತಿಯನ್ನು ತಂದಿದೆ, ಇದರಿಂದಾಗಿ ಆಹಾರ ಉತ್ಪನ್ನ ಹೆಚ್ಚಾಗಿದೆ. ಎಂಜಿನಿಯರಿಂಗ್ ಮತ್ತು ವಾಸ್ತುಶಿಲ್ಪದ ಬೆಳವಣಿಗೆಗಳ ಕಾರಣದಿಂದ, ದೃಢವಾದ ಕಟ್ಟಡಗಳ ರಚನೆಗಳನ್ನು ನಿರ್ಮಿಸುವುದು ಸಾಧ್ಯವಾಗಿದೆ. ತಂತ್ರಜ್ಞಾನವು ಪ್ರತಿ ಉದ್ಯಮದಲ್ಲೂ ಸಹಕರಿಸಿದೆ. ವ್ಯಾಪಾರಗಳು ಹೆಚ್ಚಾಗಿದ್ದು, ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿವೆ. ತಂತ್ರಜ್ಞಾನದಲ್ಲಿನ ಪ್ರಗತಿಗಳು ಹೊಸ ಮತ್ತು ವೇಗವಾಗಿ ಚಲಿಸುವ ಸಾರಿಗೆ ಮತ್ತು ಸಂವಹನದ ವಿಕಾಸಕ್ಕೆ ಕಾರಣವಾಗಿವೆ. ತಂತ್ರಜ್ಞಾನದ ಅನ್ವಯವು ತಳಿಶಾಸ್ತ್ರದಿಂದ ಬಾಹ್ಯಾಕಾಶದವರೆಗೆ ಸಂಶೋಧನೆಗಳನ್ನು ಹೆಚ್ಚಿಸಿದೆ. ಕಂಪ್ಯೂಟರ್

ಮತ್ತು ಇಂಟರ್‌ನೆಟ್ ತಂತ್ರಜ್ಞಾನಗಳು ಸರ್ವತ್ರವಾಗಿವೆ. ಔಷಧ, ಪ್ರವಾಸೋದ್ಯಮ, ಶಿಕ್ಷಣ, ಮನರಂಜನೆ, ಹೀಗೆ ಪ್ರತಿ ವಲಯದಲ್ಲೂ ಬದಲಾವಣೆಯನ್ನು ತರುತ್ತಿದೆ. ತಂತ್ರಜ್ಞಾನವು ಜೀವನದ ಪ್ರತಿ ಮಗ್ಗುಲನ್ನೂ ಸುಲಭ, ಉತ್ತಮ ಮತ್ತು ವಿಭಿನ್ನವಾಗಿಸಿದೆ. ಅಕ್ಷರಾಭ್ಯಾಸವಿಲ್ಲದವನು ಅವಿದ್ಯಾವಂತ ಎಂದೆನಿಸಿಕೊಳ್ಳುತ್ತಿದ್ದ ಕಾಲ ಮುಗಿಯಿತು. ಈಗ ಗಣಕ ಮತ್ತು ಅಂತರ್ಜಾಲ ಗೊತ್ತಿಲ್ಲದವನು ಅವಿದ್ಯಾವಂತ ಎಂದು ಕರೆಯಿಸಿಕೊಳ್ಳುವ ಕಾಲ ಬಂದಿದೆ. ಕಂಪ್ಯೂಟರ್ ಇಂದಿನ ದಿನಗಳಲ್ಲಿ ಕೇವಲ ಒಂದು ಪರಿಕಲ್ಪನೆಯಾಗಿ ಉಳಿದಿಲ್ಲ; ಅದು ನಮ್ಮ ಜನಜೀವನದ ಪರಿಕಲ್ಪನೆಯನ್ನೇ ಬದಲಿಸಿದೆ. ದಿನನಿತ್ಯದ ಬದುಕಿನ ವಿಧಾನವೇ ಅದಾಗಿದೆ. ಇಂದು ತಂತ್ರಜ್ಞಾನದಿಂದಾಗಿ ನಮ್ಮ ಮೂಲ ಅಗತ್ಯತೆಗಳು ಸುಲಭವಾಗಿ ಈಡೇರುತ್ತಿವೆ. ಇಂದಿನ ಬದುಕಿನಲ್ಲಿ ಮಾಹಿತಿ ತಂತ್ರಜ್ಞಾನದ ಪಾತ್ರ ಮಹತ್ವದ್ದು. ಬೆಳಗಿನಿಂದ ರಾತ್ರಿಯವರೆಗೆ ಒಂದಲ್ಲ ಒಂದು ರೂಪದಲ್ಲಿ ಮಾಹಿತಿ ತಂತ್ರಜ್ಞಾನದ ಸವಲತ್ತುಗಳನ್ನು ನಾವೆಲ್ಲ ಬಳಸುತ್ತಲೇ ಇರುತ್ತೇವೆ. ಈ ವ್ಯವಹಾರವನ್ನೆಲ್ಲ ನಮ್ಮ ಭಾಷೆಯಲ್ಲೇ ನಡೆಸುವಂತಾದರೆ ಭಾಷೆ–ತಂತ್ರಜ್ಞಾನಗಳೆರಡರ ವ್ಯಾಪ್ತಿಯೂ ಹೆಚ್ಚುತ್ತದೆ, ಎರಡೂ ಪರಸ್ಪರ ಪೂರಕವಾಗಿ ಬೆಳೆಯುತ್ತವೆ.

ಇಂದು ಗಣಕಗಳು ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ಸರ್ವವ್ಯಾಪಿಯಾಗಿ ಆವರಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಈ ಬೆಳವಣಿಗೆ ಸಹಜ. ಆದರೆ ಕನ್ನಡವನ್ನು ಗಣಕಯಂತ್ರ ದೊಡನೆ ಬಳಸಲು ಸಾಧ್ಯವಿಲ್ಲವೆಂಬ ಅಜ್ಞಾನದಿಂದ ನಾವು ಮುಕ್ತರಾಗಿ, ಅದರ ಬಳಕೆಯ ಹೆಚ್ಚಳದೊಡನೆ ಅವುಗಳಲ್ಲಿ ಕನ್ನಡದ ಬಳಕೆಯನ್ನು ಹೆಚ್ಚು ಮಾಡದಿದ್ದರೆ, ಕನ್ನಡವು ವ್ಯವಹಾರದ ಆಡಳಿತದ ಭಾಷೆಯ ಸ್ಥಾನದಿಂದ ಕೆಳಗಿಳಿದು ಬರೇ ಆಡುಭಾಷೆಯಾಗಿ, ಮನೆಯ ಮಾತಾಗಿ ಮಾತ್ರ ಉಳಿಯುತ್ತದೆ. 'ವಾಣಿಜ್ಯ ಮತ್ತು ಆಡಳಿತವೇ ನಮ್ಮ ದೈನಂದಿನ ವ್ಯವಹಾರಗಳ ಮುಕ್ಕಾಲು ಅಂಶವಾಗಿರುವುದರಿಂದ, ವಿದ್ಯುನ್ಮಾನ ಮಾಧ್ಯಮದಲ್ಲಿ ಕನ್ನಡವನ್ನು ಸಮರ್ಥವಾಗಿ ಉಪಯೋಗಿಸಲಾಗದಿದ್ದರೆ ಕನ್ನಡದ ದಿನಬಳಕೆ ಸಂಪೂರ್ಣ ಸ್ಥಗಿತವಾಗುವು ದರಿಂದ ಅತ್ಯಗತ್ಯವಾದ ಎಲ್ಲ ಕನ್ನಡ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಇಂದಿನ ತುರ್ತುಗಳಲ್ಲಿ ಒಂದಾಗಿದೆ' ಎಂದು ಪೂರ್ಣಚಂದ್ರ ತೇಜಸ್ವಿಯವರು ಹೇಳಿದ ಮಾತುಗಳು ಅಕ್ಷರಶಃ ಸತ್ಯ.

ಮಾಹಿತಿ ತಂತ್ರಜ್ಞಾನ ನಮ್ಮೆಲ್ಲರ ಜೀವನಗಳಲ್ಲಿ ಇಂದು ಹಾಸು ಹೊಕ್ಕಾಗಿದೆ. ನಮ್ಮ ಕಿಸೆಯಲ್ಲಿ ಕೂರುವ ಆ ಮೊಬೈಲ್ ಫೋನ್ ಕೂಡ ಮಾಹಿತಿ ತಂತ್ರಜ್ಞಾನದ ಮಹಾಪೂರ ವನ್ನು ನಮ್ಮ ಬೆರಳಂಚುಗಳಲ್ಲಿ ಹರಿಸುವ ಶಕ್ತಿಯನ್ನು ಹೊಂದಿದೆ. ಆದರೆ ಅದರಲ್ಲಿ ಕನ್ನಡದ ಪ್ರಮಾಣ ಒಂದು ಪ್ರಶ್ನೆ. ದೈನಂದಿನ ಕಾರ್ಯಚಟುವಟಿಕೆಗಳಲ್ಲಿ, ಇಂಟರ್‌ನೆಟ್ ಮೂಲಕ ಹರಟುವಾಗ, ಪತ್ರವ್ಯವಹಾರ ನಡೆಸುವಾಗ, ವಾಣಿಜ್ಯ, ಸರ್ಕಾರಿ ಹಾಗೂ ಇತರೆ ಕಾರ್ಯಚಟುವಟಿಕೆಗಳಲ್ಲಿ ಕನ್ನಡದ ಬಳಕೆ ಆಗುತ್ತಿದೆ. ಅನೇಕ ತಂತ್ರಾಂಶಗಳು ಕನ್ನಡಕ್ಕೆ ಲಿಪ್ಯಂತರವಾಗಿವೆ. ಫೈರ್‌ಫಾಕ್ಸ್, ಗೂಗಲ್ ಕ್ರೋಮ್, ಲಿಬ್ರೆ ಆಫೀಸ್, ಲಿನೆಕ್ಸ್ ಮುಂತಾದ ಕೆಲವು ತಂತ್ರಾಂಶಗಳು ಮುಂತಾದವು ಕನ್ನಡದಲ್ಲಿ ಲಭ್ಯವಿವೆ.

ತಂತ್ರಜ್ಞಾನವು ಇಂದು ಜನರು ಸಂವಹನ ಮಾಡುವ ರೀತಿಯನ್ನೇ ಬದಲಾಯಿಸಿದೆ. ಸಂವಹನ ವ್ಯವಸ್ಥೆಗಳು ಪಾರಿವಾಳ ಸಂದೇಶಗಳಿಂದ ಇಮೇಲ್ ಮತ್ತು ತ್ವರಿತ ಸಂದೇಶಗಳವರೆಗೆ ವಿಕಸನಗೊಂಡಿವೆ. ಸೆಲ್ಯೂಲರ್ ಟೆಕ್ನಾಲಜಿ ಮತ್ತು ಉಪಗ್ರಹ ಸಂವಹನಗಳು ಸಂವಹನ ವೇಗವನ್ನು ಹೆಚ್ಚಿಸಿವೆ ಮತ್ತು ಸಂಪರ್ಕವನ್ನು ಸುಲಭಗೊಳಿಸಿವೆ. ಅಂತರ್ಜಾಲವು ಸುದೀರ್ಘ ಅಂತರದಲ್ಲಿ ಮಾಹಿತಿಯ ಸುಲಭ ವಿನಿಮಯವನ್ನು ಸಾಧ್ಯವಾಗಿಸಿದೆ. ಈಗಲೂ ಸಹ,

ನಾವು ದೂರದ ಒಂದು ವೆಬ್ ಸರ್ವರ್‌ನಿಂದ ಈ ಪುಟವನ್ನು ಓದುತ್ತಿರಬಹುದು. ನಮ್ಮ ಕಂಪ್ಯೂಟರ್ ಮೌಸ್‌ನ ಕೆಲವೇ ಕ್ಲಿಕ್‌ಗಳು ಇಂಟರ್‌ನೆಟ್ಟಿನಲ್ಲಿ ಎಲ್ಲಿಗಾದರೂ ನಮ್ಮನ್ನು ಒಯ್ಯಬಹುದು. ಇಂದು ನಾವು ಅರಿವಿಲ್ಲದೆ ಹೊಸದೊಂದು ಜಗತ್ತನ್ನೇ ಪ್ರವೇಶಿಸುವಂತಾಗಿದೆ. ಶಿಕ್ಷಣದಲ್ಲಿ ಕಂಪ್ಯೂಟರ್‌ಗಳು ಮತ್ತು ಇಂಟರ್‌ನೆಟ್‌ನ ಪಾತ್ರವನ್ನು ನಿರ್ಲಕ್ಷಿಸಲಾಗುವುದಿಲ್ಲ. ಬೋಧನೆಯಲ್ಲಿ ಕಂಪ್ಯೂಟರುಗಳ ಬಳಕೆ ಕಲಿಕೆಯನ್ನು ಆಸಕ್ತಿಕರವಾಗಿಸಿದೆ. ಕಂಪ್ಯೂಟರ್ ಮಾಹಿತಿಯ ಉತ್ತಮ ಸಂಗ್ರಹಣೆ ಮತ್ತು ಪ್ರಸ್ತುತಿಯನ್ನು ಸಾಧ್ಯವಾಗಿಸುತ್ತದೆ, ಇದರಿಂದಾಗಿ ಬೋಧನೆಯ ಪ್ರಕ್ರಿಯೆಯು ಸುಲಭವಾಗಿದೆ ಮತ್ತು ಪರಿಣಾಮಕಾರಿಯಾಗಿದೆ. ಇಂದು ಎಲ್ಲೆಡೆ ಶೈಕ್ಷಣಿಕ ಸಿಡಿಗಳು ಲಭ್ಯವಿದೆ. ಉಪನ್ಯಾಸಗಳು / ಪಾಠಗಳನ್ನು PDF ಅಥವಾ ವೀಡಿಯೋಗಳ ರೂಪದಲ್ಲಿ ವೆಬ್‌ಸೈಟ್‌ಗಳಲ್ಲಿ ಅಪ್ಲೋಡ್ ಮಾಡಬಹುದು. ಇದು ಮಾಹಿತಿಯನ್ನು ಹೆಚ್ಚು ಸುಲಭವಾಗಿ ದೊರಕಿಸುತ್ತದೆ ಮತ್ತು ಜ್ಞಾನ ಹಂಚಿಕೆಗೆ ಉತ್ತಮ ಮಾರ್ಗಗಳನ್ನು ಒದಗಿಸುತ್ತದೆ. ಆನ್ಲೈನ್ ಡಿಗ್ರಿ ಮತ್ತು ತರಬೇತಿ ಕೋರ್ಸ್‌ಗಳು ಶಿಕ್ಷಣವನ್ನು ಸಾರ್ವತ್ರಿಕವಾಗಿಸಿದೆ. ಇಂದು ಜನರು ತಮ್ಮ ಉದ್ಯೋಗಗಳನ್ನು ನಿರ್ವಹಿಸುತ್ತಿರುವಾಗಲೂ ಸಹ ಕಲಿಯುವುದನ್ನು ಮುಂದುವರೆಸಬಹುದು, ಇಂದು ಪ್ರಪಂಚದ ಎಲ್ಲಾ ಮಾಹಿತಿಗಳು ವ್ಯಾಪಕವಾಗಿ ಲಭ್ಯವಿವೆ. ಇತ್ತೀಚೆಗೆ ಸೋಷಿಯಲ್ ಮೀಡಿಯಾ ಅಂತರ್ಜಾಲ ಬಳಕೆದಾರರ ಅವಶ್ಯಕತೆಯಾಗುವುದಷ್ಟೇ ಅಲ್ಲ ಅವು ಒಂದು ಇಡೀ ಸಮಾಜದ ಅಭಿಪ್ರಾಯ ರೂಪಿಸುವ, ಆಳುವ ಸರ್ಕಾರದ ಅಳಿವು ಉಳಿವಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನೂ ಹೊಂದಿವೆ. ತಂತ್ರಜ್ಞಾನ ಕ್ಷೇತ್ರವನ್ನು ಕುರಿತು ಜನರಿಗೆ ಹೆಚ್ಚಿನ ಮಾಹಿತಿ ನೀಡುವುದರ ಅಗತ್ಯವೂ ಬಹಳಷ್ಟಿದೆ. ಹೊಸ ತಂತ್ರಜ್ಞಾನಗಳ ಬಗೆಗಷ್ಟೇ ಅಲ್ಲ, ಈಗಾಗಲೇ ಲಭ್ಯವಿರುವ ಸವಲತ್ತುಗಳನ್ನು ಜವಾಬ್ದಾರಿಯುತವಾಗಿ ಬಳಸುವುದು ಹೇಗೆ ಎನ್ನುವ ನಿಟ್ಟಿನಲ್ಲೂ ಸಾಕಷ್ಟು ಮಾಹಿತಿ ಪ್ರಸರಣದ ಅವಶ್ಯಕತೆಯಿದೆ.

ಕಠಿಣ ಶಬ್ದಗಳು

೧. ಅಂತರ್‌ಸಂಪರ್ಕ
೨. ಪೋರ್ಟಲ್
೩. ಅಪ್‌ಲೋಡ್
೪. ವಿಶ್ವವ್ಯಾಪಿ ಜಾಲ
೫. ಸಂವಹನ

೧೨.೨. ಅಂತರ್ಜಾಲ

ಇದು ಅನೇಕ ಕಂಪ್ಯೂಟರ್ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲ. ಒಂದಕ್ಕಿಂತ ಹೆಚ್ಚು ಕಂಪ್ಯೂಟರುಗಳನ್ನು ಪರಸ್ಪರ ಸಂಪರ್ಕಿಸಿದ ಜಾಲಗಳನ್ನು (ನೆಟ್‌ವರ್ಕ್) ಕಚೇರಿಗಳಲ್ಲಿ, ವಿದ್ಯಾ ಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ, ಬಸ್ಸು–ರೈಲು–ವಿಮಾನ ಸಂಸ್ಥೆಗಳಲ್ಲಿ ಬಳಸುವುದನ್ನು ನಾವು ನೋಡಿದ್ದೇವೆ. ಒಂದು ಕಂಪ್ಯೂಟರಿನಿಂದ ಸಾಧ್ಯವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ. ಇಂತಹ ಹಲವು ಜಾಲಗಳು ಒಟ್ಟು ಸೇರಿದರೆ ಇನ್ನೂ ಹೆಚ್ಚಿನದನ್ನು ಸಾಧಿಸಬಹುದಲ್ಲ ಎಂಬ ಉದ್ದೇಶದಿಂದ ರೂಪುಗೊಂಡದ್ದೇ ಇಂಟರ್‌ನೆಟ್, ಅಂದರೆ ಅಂತರ್ಜಾಲ. ಈ

ಹೆಸರಿನ ಭಾವಾರ್ಥ 'ಇಂಟರ್ ಕನೆಕ್ಷನ್ ಆಫ್ ನೆಟ್‌ವರ್ಕ್' ಎಂದು. ಅನೇಕ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲ ಇದು. ಸಂವಹನದ ಪರಿಕಲ್ಪನೆಯನ್ನೇ ಆಮೂಲಾಗ್ರವಾಗಿ ಬದಲಿಸಿದ ಹೆಗ್ಗಳಿಕೆ ಅಂತರ್ಜಾಲದ್ದು. ವಿಶ್ವದ ವಿವಿಧೆಡೆಗಳಲ್ಲಿರುವ ಕಂಪ್ಯೂಟರುಗಳು, ಮೊಬೈಲ್ ಫೋನುಗಳು, ಸಂಬಂಧಿತ ಸಾಧನಗಳು, ಲ್ಯಾನ್–ವ್ಯಾನ್ ಮುಂತಾದ ಜಾಲಗಳೆಲ್ಲ ಈ ಅಂತರ್ಜಾಲದಿಂದ ರೂಪುಗೊಂಡಿದೆ. ವಿವಿಧ ತಂತ್ರಾಂಶಗಳು, ಅವುಗಳ ನಡುವೆ ಸಂವಹನ ಸಾಧ್ಯವಾಗಿಸುವ ವ್ಯವಸ್ಥೆಗಳೆಲ್ಲ ಇದರ ಭಾಗಗಳು. ಅಂತರ್ಜಾಲದ ಸಂಪರ್ಕದಲ್ಲಿರುವ ಪ್ರತಿಯೊಂದು ಸಾಧನಕ್ಕೂ ಅಂತರ್ಜಾಲ ದಲ್ಲಿರುವ ಇತರ ಎಲ್ಲ ಸಾಧನಗಳ ಜೊತೆಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವ ಅವಕಾಶ ಇರುತ್ತದೆ. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲಸೌಕರ್ಯ ಒದಗಿಸುವುದು ಅಂತರ್ಜಾಲದ ಪ್ರಮುಖ ಜವಾಬ್ದಾರಿಯಾಗಿದೆ. ಅಂತರ್ಜಾಲದಲ್ಲಿರುವ ಸಾಧನಗಳ ನಡುವಿನ ಸಂಪರ್ಕ ಹೇಗಿರಬೇಕು ಎಂದು ನಿರ್ದೇಶಿಸುವುದೂ ಇದರ ಜವಾಬ್ದಾರಿಯಾಗಿದೆ. 'ಜಾಲದಲ್ಲಿ ಕನ್ನಡವೆಂದರೆ ಅದೊಂದು ಪ್ರಾಯೋಗಿಕ ಪ್ರಯತ್ನವಷ್ಟೆ' ಎನ್ನುವಂತಿದ್ದ ಕಾಲವನ್ನು ದಾಟಿ ಬಹಳ ಮುಂದೆ ಬಂದಿರುವ ನಾವು ಇದೀಗ ಹಲವಾರು ಬಗೆಯ ಕನ್ನಡ ಜಾಲತಾಣಗಳನ್ನು ನೋಡಬಹುದು. ಸಂಘಸಂಸ್ಥೆಗಳ ತಾಣಗಳಷ್ಟೇ ಅಲ್ಲದೆ ಪ್ರಚಲಿತ ವಿದ್ಯಮಾನ, ಸಾಹಿತ್ಯ, ವಿಜ್ಞಾನ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ತಾಣಗಳು ಇಂದು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಈ ಸಾಲಿನಲ್ಲಿ 'ದಟ್ಸ್ ಕನ್ನಡ'ದಂತಹ ಪೋರ್ಟಲ್‌ಗಳು, 'ಅವಧಿ–ಕೆಂಡಸಂಪಿಗೆ'ಯಂತಹ ಆನ್‌ಲೈನ್ ಪತ್ರಿಕೆಗಳು, 'ಇಜ್ಞಾನ ಡಾಟ್ ಕಾಮ್'ನಂತಹ ವಿಜ್ಞಾನ ತಾಣಗಳು, 'ಚುಕ್ಕುಬುಕ್ಕು–ಸಿರಿನುಡಿ' ಮುಂತಾದ ವಿಶಿಷ್ಟ ತಾಣಗಳು, ವಿವಿಧ ಪತ್ರಿಕೆಗಳ ಆನ್‌ಲೈನ್ ಆವೃತ್ತಿಗಳು –ಹೀಗೆ ಅನೇಕ ಕನ್ನಡ ಜಾಲತಾಣಗಳನ್ನು ನಾವು ಪಟ್ಟಿ ಮಾಡಬಹುದು.

ಅಭ್ಯಾಸ ೧

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಅಂತರ್ಜಾಲ ಹೆಸರಿನ ಭಾವಾರ್ಥ ತಿಳಿಸಿ.

೨. ಅಂತರ್ಜಾಲದ ಪ್ರಮುಖ ಜವಾಬ್ದಾರಿ ಯಾವುದು?

೩. ಕನ್ನಡ ಅಂತರ್ಜಾಲ ತಾಣಗಳನ್ನು ಹೆಸರಿಸಿ.

೪. ಅಂತರ್ಜಾಲ ತಾಣಗಳ ಉಪಯೋಗಗಳನ್ನು ತಿಳಿಸಿ.

ಅಭ್ಯಾಸಗಳಿಗೆ ಉತ್ತರಗಳು

೧. ಇಂಟರ್‌ಕನೆಕ್ಷನ್ ಅಫ್ ನೆಟ್‌ವರ್ಕ್.

೨. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲ ಸೌಕರ್ಯ ಒದಗಿಸುವುದು.

೩. ಕೆಂಡಸಂಪಿಗೆ, ಇಜ್ಞಾನ ಡಾಟ್ ಕಾಮ್, ಚುಕ್ಕು–ಬುಕ್ಕು, ಸಿರಿನುಡಿ.

೪. ಅ. ಮಾಹಿತಿ ವಿನಿಮಯ ಮಾಡಿಕೊಳ್ಳುವ ಅವಕಾಶ.

ಆ. ಪ್ರಚಲಿತ ವಿದ್ಯಮಾನ, ಸಾಹಿತ್ಯ, ವಿಜ್ಞಾನ ಮುಂತಾದ ಅನೇಕ ವಿಷಯಗಳಿಗೆ ಸಂಬಂಧಿಸಿದ ಮಾಹಿತಿ ಪಡೆಯುವುದು.

ಇ. ಒಂದು ಕಂಪ್ಯೂಟರಿನಿಂದ ಸಾಧ್ಯವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ.

೧೨.೩. ತಂತ್ರಾಂಶ (ವರ್ಡ್ ಪ್ರೊಸೆಸರ್, ಪದಸಂಸ್ಕಾರಕ)

ಇದು ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣದಲ್ಲಿ ನೆರವಾಗುವ ತಂತ್ರಾಂಶ. ಕಂಪ್ಯೂಟರಿನಲ್ಲಿ ಪಠ್ಯವನ್ನು ಟೆಕ್ಸ್ಟ್ / ಟೈಪ್ ಮಾಡಿ, ಪಠ್ಯವನ್ನು ಸುವ್ಯವಸ್ಥಿತ ಗೊಳಿಸಿ, ಪುಟವಿನ್ಯಾಸಗೊಳಿಸಿ ಮುದ್ರಣವನ್ನು ಪಡೆಯುವ ಕೆಲಸಗಳಿಗೆ ಪದಸಂಸ್ಕರಣೆ (ವರ್ಡ್ ಪ್ರೊಸೆಸಿಂಗ್) ಎಂದು ಕರೆಯಲಾಗಿದೆ. ಕಂಪ್ಯೂಟರಿನ ಅಸಂಖ್ಯ ಉಪಯೋಗಗಳ ಪೈಕಿ ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣಕ್ಕೆ ಪ್ರಮುಖ ಸ್ಥಾನವಿದೆ. ಇವಿಷ್ಟೂ ಅಂಶಗಳನ್ನು ಒಟ್ಟು ಸೇರಿಸಿ 'ವರ್ಡ್ ಪ್ರೊಸೆಸಿಂಗ್' (ಪದಸಂಸ್ಕರಣೆ) ಎಂದು ಗುರುತಿಸಲಾಗುತ್ತದೆ. ಪದಸಂಸ್ಕರಣೆಯ ಈ ಕೆಲಸದಲ್ಲಿ ನೆರವಾಗುವ ತಂತ್ರಾಂಶಗಳನ್ನು ವರ್ಡ್ ಪ್ರೊಸೆಸರ್, ಅಂದರೆ ಪದಸಂಸ್ಕಾರಕಗಳೆಂದು ಕರೆಯುತ್ತಾರೆ. ಅಂದ ಹಾಗೆ ಪದ ಸಂಸ್ಕಾರಕಗಳಲ್ಲಿರುವುದು ಕಡತಗಳ ರಚನೆ ಹಾಗೂ ವಿನ್ಯಾಸಕ್ಕೆ ಬೇಕಾದ ಸೌಲಭ್ಯಗಳಷ್ಟೇ ಅಲ್ಲ. ಕಡತದಲ್ಲಿರುವ ಪದಗಳ ಸಂಖ್ಯೆಯನ್ನು ತಿಳಿಸುವ, ಅಕ್ಷರದೋಷ–ವ್ಯಾಕರಣದ ತಪ್ಪುಗಳನ್ನು ತೋರಿಸುವ, ಕಡತದಲ್ಲಿ ಮಾಡಲಾದ ಬದಲಾವಣೆಗಳ ಇತಿಹಾಸವನ್ನು ತೋರಿಸುವಂತಹ ಅನುಕೂಲಗಳೂ ಅನೇಕ ಪದ ಸಂಸ್ಕಾರಕಗಳಲ್ಲಿರುತ್ತವೆ. ಪಠ್ಯವನ್ನಷ್ಟೇ ಟೈಪ್ ಮಾಡಿ ಉಳಿಸಿಡಲು ಸಹಾಯ ಮಾಡುವ ನೋಟ್‌ಪ್ಯಾಡ್‌ನಂತಹ ಸರಳ ತಂತ್ರಾಂಶಗಳಿಂದ ಪ್ರಾರಂಭಿಸಿ ಪತ್ರಿಕೆ–ಪುಸ್ತಕಗಳ ವಿನ್ಯಾಸದಲ್ಲಿ ಬಳಕೆಯಾಗುವ ಆಡೋಬ್ ಪೇಜ್ ಮೇಕರ್, ಇನ್ ಡಿಸೈನ್‌ನಂತಹ ತಂತ್ರಾಂಶಗಳವರೆಗೆ ವಿವಿಧ ಉದ್ದೇಶಗಳಿಗಾಗಿ ಬೇರೆಬೇರೆ ಪದಸಂಸ್ಕಾರಕಗಳನ್ನು ಬಳಸುವುದು ಸಾಮಾನ್ಯ ಅಭ್ಯಾಸವಾಗಿದೆ. ಮೈಕ್ರೋಸಾಫ್ಟ್ ಆಫೀಸ್, ಓಪನ್ ಆಫೀಸ್, ಲಿಬ್ರೆ ಆಫೀಸ್ ಮುಂತಾದ ಎಲ್ಲ ತಂತ್ರಾಂಶ ಸಂಗ್ರಹಗಳಲ್ಲೂ ಒಂದೊಂದು ಪದಸಂಸ್ಕಾರಕ ಇರುತ್ತದೆ. ಮೈಕ್ರೋಸಾಫ್ಟ್ ಆಫೀಸ್ (೩) ತಂತ್ರಾಂಶ ಸಂಗ್ರಹದ ಭಾಗವಾದ 'ಮೈಕ್ರೋಸಾಫ್ಟ್ ವರ್ಡ್' ಸಾಕಷ್ಟು ಹೆಸರು ಮಾಡಿರುವ, ವ್ಯಾಪಕವಾಗಿ ಬಳಕೆಯಾಗುವ ಇಂತಹ ಪದ ಸಂಸ್ಕಾರಕಗಳಲ್ಲೊಂದು. ಕನ್ನಡಭಾಷೆಯಲ್ಲಿ ಕಡತಗಳ ಸೃಷ್ಟಿಯನ್ನು ಸಾಧ್ಯವಾಗಿಸುವ ಸೇಡಿಯಾಪು, ಬರಹ, ನುಡಿ, ಪದ ಮುಂತಾದ ತಂತ್ರಾಂಶಗಳೂ ಪದಸಂಸ್ಕಾರಕಗಳೇ. ಕೆ.ಪಿ. ರಾವ್ ಅವರ 'ಸೇಡಿಯಾಪು' ಕನ್ನಡದ ಮೊದಲ ತಂತ್ರಾಂಶ ಹಾಗೂ ಕನ್ನಡದ ಬೆಳವಣಿಗೆಯ ಉದ್ದೇಶ್ಯದಿಂದ ಉಚಿತವಾಗಿ ಹಂಚಲಾದ ತಂತ್ರಾಂಶ. ಅಂತೆಯೇ ಪವನಜ ಅವರ 'ಬರಹ' ಅನಕೃ ಅವರ ನೆನಪಿಗೆ ತಂದ ತಂತ್ರಾಂಶವಾದರೆ 'ನುಡಿ' ಕರ್ನಾಟಕ ಸರ್ಕಾರ ಬಿಡುಗಡೆ ಮಾಡಿರುವ ತಂತ್ರಾಂಶ.

ಪದಸಂಸ್ಕರಣವು (word-processing) ಈ ತಂತ್ರಾಂಶಗಳ ಮೊದಲ ಹಂತ. ಪತ್ರ, ಲೇಖನ, ದಾಖಲೆಗಳನ್ನು ಬರೆಯಲು, ತಿದ್ದಲು ಇವುಗಳ ಬಳಕೆ ಆಗುತ್ತಿದೆ. ಪದಸಂಸ್ಕರಣದ ಕ್ರಮವಿಧಿಗಳಲ್ಲಿ ಹಲವು ಸೌಕರ್ಯಗಳಿವೆ. ಒಮ್ಮೆ ಬರೆದ ಪತ್ರ ಅಥವಾ ಲೇಖನವನ್ನು ಪುನಃ ಪುನಃ ತಿದ್ದಬಹುದು; ತಿದ್ದಿ ಮುದ್ರಿಸಬಹುದು; ಇಡೀ ವಾಕ್ಯ ಅಥವಾ ಪ್ಯಾರಾವನ್ನು ಒಂದು ಜಾಗದಿಂದ ಎತ್ತಿ ಇನ್ನೊಂದು ಕಡೆಗೆ ಬದಲಾಯಿಸಬಹುದು; ಒಂದೇ ಪತ್ರವನ್ನು ಹಲವಾರು ವ್ಯಕ್ತಿಗಳಿಗೆ ಅವರವರ ಹೆಸರು ವಿಳಾಸ ಸೇರಿಸಿ ಕಳುಹಿಸಬಹುದು. ಪದಸಂಸ್ಕರಣದ ಮುಂದುವರೆದ ಸೌಕರ್ಯವೇ ಡಿ.ಟಿ.ಪಿ. (desk

top publishing). ಪಠ್ಯದ ಜೊತೆ ಚಿತ್ರಗಳನ್ನು ಸೇರಿಸುವುದು, ಅಕ್ಷರದ ಗಾತ್ರವನ್ನು ಸಾವಿರದೊಂದು ಇಂಚಿನಷ್ಟು ನಿಯಂತ್ರಣೆ ಮಾಡುವುದು, ತಲೆಬರಹ, ಪ್ಯಾರಾಗಳ ನಡುವಿನ ಗಾತ್ರ ಮತ್ತು ಅಂತರ, ಹೀಗೆ ಹಲವಾರು ಸೌಕರ್ಯಗಳು ಇಲ್ಲಿವೆ. ಈಗ ಮುದ್ರಣವಾಗುವ ಎಲ್ಲ ಪುಸ್ತಕಗಳೂ ಇದೇ ವಿಧಾನದಿಂದ ತಯಾರಾಗುತ್ತಿವೆ.

ಮಾರುಕಟ್ಟೆಯಲ್ಲಿ ಸಿದ್ಧರೂಪದಲ್ಲಿ ದೊರೆಯುವ ಯಾವುದೇ ರೂಪದ ಅಪ್ಲಿಕೇಷನ್ ಸಾಫ್ಟ್‌ವೇರ್‌ನ್ನು ಪ್ಯಾಕೇಜ್ಡ್ ಅಪ್ಲಿಕೇಷನ್ ಎಂದು ಕರೆಯಲಾಗುತ್ತದೆ. ಉದಾಹರಣೆಗೆ, ಎಂ.ಎಸ್. ಆಫೀಸ್ ಸೂಟ್ ವರ್ಡ್ ಪ್ರೊಸೆಸರ್ ಒಂದು ಸಾಫ್ಟ್‌ವೇರ್ ಆಗಿದ್ದು ನಮಗೆ ಟೆಕ್ಸ್ಟ್ ಜೊತೆ ಕೆಲಸ ಮಾಡಲು ಸಹಕರಿಸುತ್ತದೆ. ಎಂ.ಎಸ್. ವರ್ಡ್ ಅಥವಾ ಮೈಕ್ರೋಸಾಫ್ಟ್ ವರ್ಡ್ ಎನ್ನುವುದು ಮೈಕ್ರೋಸಾಫ್ಟ್ ಸಂಸ್ಥೆಯು ರೂಪಿಸಿರುವ, ಒಂದು ವರ್ಡ್ ಪ್ರೊಸೆಸರ್ ಮತ್ತು ಪದಸಂಸ್ಕರಣ ತಂತ್ರಾಂಶ. ಇದು ಹಣ ಪಾವತಿಸಿ ಬಳಸಬೇಕಾದ ತಂತ್ರಾಂಶ. ಇವುಗಳಲ್ಲಿ ನೀವು ಅಕ್ಷರ ಜೋಡಣೆ ಮಾಡಬಹುದು; ಕೆಲವೆಡೆ ಚಿತ್ರಗಳನ್ನೂ ಸೇರಿಸಬಹುದು. ಇಷ್ಟೆಲ್ಲ ಅನಕೂಲತೆಗಳಿದ್ದರೂ ವರ್ಡ್ ಪ್ರೊಸೆಸರ್‌ಗಳಲ್ಲಿ ಕೆಲವು ಅನಾನುಕೂಲಗಳಿವೆ ಎಂಬುದು ಕೆಲವು ತಜ್ಞರ ಅಭಿಮತ. ಅವುಗಳನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

೧. ವರ್ಡ್ ಪ್ರೊಸೆಸರ್‌ಗಳಲ್ಲಿ ಚಿತ್ರಗಳನ್ನು ಬದಲಿಸುವ, ತಿದ್ದುವ, ಬೇಕಾದ ಸ್ಥಳದಲ್ಲಿ ಬೇಕಾದ ರೀತಿಯಲ್ಲಿ ಸೇರಿಸುವುದಕ್ಕೆ ಆಗುವುದಿಲ್ಲ; ಇರುವ ಸೀಮಿತ ಅವಕಾಶಗಳಲ್ಲಿ ಈ ಚಿತ್ರಗಳನ್ನು ಪಠ್ಯದ ಪಕ್ಕದಲ್ಲೋ, ಪಠ್ಯದ ಕೆಳಭಾಗದಲ್ಲೋ ಸುಮ್ಮನೆ ಇಡಬಹುದೇ ಹೊರತು ಹೆಚ್ಚಿನ ಸಾಧ್ಯತೆಗಳಿಲ್ಲ.

೨. ವರ್ಡ್ ಪ್ರೊಸೆಸರ್‌ಗಳಲ್ಲಿ ಪಠ್ಯವನ್ನು ವಿವಿಧ ವಿನ್ಯಾಸಗಳಿಗೆ ತಕ್ಕಂತೆ ರೂಪಿಸುವ ಅವಕಾಶಗಳೂ ತುಂಬಾ ಸೀಮಿತ. ಅಲ್ಲದೆ ಅಲ್ಲಲ್ಲಿ ಪಠ್ಯಗಳನ್ನು ಎತ್ತಿ ತೆಗೆಯುವ, ಪುಟದ ಹೊರಗಡೆ ಇಟ್ಟುಕೊಳ್ಳುವ, ಅಥವಾ ಪಠ್ಯಭಾಗವನ್ನು ಬೇಕೆಂದ ಸ್ಥಳದಲ್ಲಿ ಕೂರಿಸುವ ಅವಕಾಶವಿಲ್ಲ.

೩. ವರ್ಡ್ ಪ್ರೊಸೆಸರ್‌ಗಳಲ್ಲಿ ಚಿತ್ರ ಮತ್ತು ಪಠ್ಯಗಳನ್ನು ಭಿನ್ನಭಿನ್ನ ವಿನ್ಯಾಸಗಳಿಗೆ ರೂಪಾಂತರಿಸುವ ಅವಕಾಶವಿಲ್ಲ. ಆದ್ದರಿಂದ, ಅಸಂಖ್ಯ ವಿನ್ಯಾಸದ ಸಾಧ್ಯತೆಗಳನ್ನು ಹೊಂದಿರುವ ಡಿ.ಟಿ.ಪಿ. ತಂತ್ರಾಂಶಗಳನ್ನೇ ನಾವು ಡಿ.ಟಿ.ಪಿ. ಮಾಡಲು ಬಳಸಬೇಕಿದೆ. ಆರಂಭದ ಅಕ್ಷರ ಜೋಡಣೆಗೆ ಮಾತ್ರವೇ ವರ್ಡ್ ಪ್ರೊಸೆಸರ್‌ಗಳನ್ನು ಬಳಸಬಹುದಾಗಿದೆ.

ವರ್ಡ್ ಪ್ರೊಸೆಸಿಂಗ್‌ನ ಅನುಕೂಲಗಳು

೧. ಕಾಗದದ ಪತ್ರದಲ್ಲಿ (ಡಾಕ್ಯುಮೆಂಟ್) ಟೈಪ್ ಮಾಡುವುದು.

೨. ತಿದ್ದುಪಡಿ ಮಾಡುವುದು.

೩. ಮುದ್ರಿಸಿದ ಪಠ್ಯವನ್ನು ಆಕರ್ಷಕಗೊಳಿಸುವುದು.

೪. ಅಕ್ಷರಗಳ ಆಕಾರ, ಪ್ರಕಾರ ಬದಲಾಯಿಸುವುದು.

೫. ಅಕ್ಷರಗಳನ್ನು ಕಟ್ (ಕತ್ತರಿಸುವುದು), ಕಾಪಿ (ನಕಲು), ಪೇಸ್ಟ್ (ಅಂಟಿಸುವುದು) ಮತ್ತು ಇನ್‌ಸರ್ಟ್ ಮಾಡುವುದು.

೬. ಬಾರ್ಡರ್ಸ್ (ಚೌಕಟ್ಟು) ಮತ್ತು ಶೇಡಿಂಗ್ (ನೆರಳು) ಕೊಡುವುದು.
೭. ಮಾಡಿದ ಕೆಲಸವನ್ನು ಉಳಿಸುವುದು (ಸೇವ್).
೮. ಮಾಡಿದ ಕೆಲಸವನ್ನು ಮುದ್ರಿಸುವುದು (ಪ್ರಿಂಟ್ ಮಾಡುವುದು).

ವರ್ಡ್ ಪ್ರೊಸೆಸರ್‌ನ ಉಪಯೋಗಗಳು

೧. ನಾವು ಬರೆದಿರುವ ಯಾವುದೇ ವಿಷಯವನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಬಹುದು.
೨. ನಾವು ನಮ್ಮ ಡಾಕ್ಯುಮೆಂಟನ್ನು ಹಲವು ಪ್ರತಿಗಳಲ್ಲಿ ನಮಗೆ ಬೇಕೆನಿಸಿದಾಗ ಮುದ್ರಿಸ ಬಹುದು.
೩. ಡಾಕ್ಯುಮೆಂಟ್‌ನ ಪ್ರತಿಯನ್ನು ಪುನಃ ಇಡೀ ವಿಷಯವನ್ನು ಮತ್ತೆ ಟೈಪ್ ಮಾಡದೇ ಬದಲಾವಣೆಗಳನ್ನು ಮಾಡಬಹುದು.
೪. ವರ್ಡ್ ಪ್ರೊಸೆಸರ್‌ನ ಮೂಲಭೂತ ವೈಶಿಷ್ಟ್ಯಗಳನ್ನು ಕಲಿಯುವ ಮೂಲಕ ಅದನ್ನು ನಾವು ಸರಳವಾಗಿ, ಪರಿಣಾಮಕಾರಿಯಾಗಿ ಉಪಯೋಗಿಸಬಹುದು.
೫. ವರ್ಡ್ ಪ್ರೊಸೆಸಿಂಗ್ ತಂತ್ರಾಂಶವು ನಮ್ಮ ಪದಗಳು ಕಾಣುವ ರೀತಿಯನ್ನು ಶೀಘ್ರವಾಗಿ ಮತ್ತು ಸುಲಭವಾಗಿ ಬದಲಾಯಿಸುವುದಷ್ಟೇ ಅಲ್ಲ, ಚಿತ್ರಗಳನ್ನು ಸೇರಿಸಲು ಮತ್ತು ವೆಬ್ ಪುಟಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ. ಮೈಕ್ರೋಸಾಫ್ಟ್ / ಓಪನ್ ಆಫೀಸ್, ಆರ್ಗ್ ರೈಟರನ್ನು ಒಳಗೊಂಡ ಹಲವಾರು ವರ್ಡ್ ಪ್ರೊಸೆಸಿಂಗ್ ತಂತ್ರಾಂಶಗಳಿವೆ.

ವರ್ಡ್ ಪ್ರೊಸೆಸಿಂಗ್ ತಂತ್ರಾಂಶವು ಪದಗಳು ಕಾಣುವ ರೀತಿಯನ್ನು ಶೀಘ್ರವಾಗಿ ಮತ್ತು ಸುಲಭವಾಗಿ ಬದಲಾಯಿಸುವುದಷ್ಟೇ ಅಲ್ಲದೆ ಚಿತ್ರಗಳನ್ನು ಸೇರಿಸಲು ಮತ್ತು ವೆಬ್ ಪುಟಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ.

ಕಠಿಣ ಪದಗಳು

೧. ಕಡತ
೨. ತಂತ್ರಾಂಶ
೩. ನೋಟ್‌ಪ್ಯಾಡ್
೪. ಸಂಸ್ಕಾರಕ
೫. ಅಪ್ಲಿಕೇಶನ್

ಅಭ್ಯಾಸ ೨

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ವರ್ಡ್ ಪ್ರೊಸೆಸಿಂಗ್ ಅಥವಾ ಪದ ಸಂಸ್ಕರಣೆ ಎಂದರೇನು?
೨. ಪದಸಂಸ್ಕರಣೆಯ ಕೆಲಸದಲ್ಲಿ ನೆರವಾಗುವ ತಂತ್ರಾಂಶ ಯಾವುದು?
೩. ಪದಸಂಸ್ಕಾರಕಗಳ ಉಪಯೋಗಗಳೇನು?
೪. ಮೈಕ್ರೋಸಾಫ್ಟ್ ವರ್ಡ್ ತಂತ್ರಾಂಶವನ್ನು ರೂಪಿಸಿದ ಸಂಸ್ಥೆ ಯಾವುದು?
೫. ವರ್ಡ್ ಪ್ರೊಸೆಸಿಂಗ್‌ನ ಅನುಕೂಲಗಳೇನು?
೬. ವರ್ಡ್ ಪ್ರೊಸೆಸಿಂಗ್‌ನ ಅನಾನುಕೂಲಗಳನ್ನು ತಿಳಿಸಿ.

೧೨.೪. ಯುನಿಕೋಡ್ ಮತ್ತು ಕನ್ನಡ

ಗಣಕೀಕರಣದಲ್ಲಿ ಯುನಿಕೋಡ್ ಎಂದರೆ ಒಂದು ಅಂತರರಾಷ್ಟ್ರೀಯ ನಿರ್ದಿಷ್ಟಮಾನ. ಯುನಿಕೋಡ್ ಎನ್ನುವುದು ಇಂಗ್ಲಿಷ್ ಸೇರಿದಂತೆ ಬಹುತೇಕ ಎಲ್ಲಾ ವಿಶ್ವ ಭಾಷೆಗಳನ್ನು ಕಂಪ್ಯೂಟರ್‌ನಲ್ಲಿ ಗೊಂದಲವಿಲ್ಲದೆ ಪ್ರತಿನಿಧಿಸುವ, ಬಳಸಲು ಸಾಧ್ಯವಾಗಿಸುವ ಒಂದು 'ಎನ್ಕೋಡಿಂಗ್' ಸ್ಟ್ಯಾಂಡರ್ಡ್. ಯುನಿಕೋಡ್ ಎಂಬುದರ ಅರ್ಥ ವಿಶ್ವಸಂಕೇತ.

ಪ್ರಪಂಚಕ್ಕೆಲ್ಲ ಒಂದೇ ಸಂಕೇತವಿಧಾನ ಎಂಬ ಆಶಯ ಹೊಂದಿರುವ ಯುನಿಕೋಡ್ನಲ್ಲಿ ಪ್ರಪಂಚದ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇರುತ್ತದೆ. ಯುನಿಕೋಡ್ ಆಧಾರಿತ ತಂತ್ರಾಂಶಗಳಲ್ಲಿ ಬೆರಳಚ್ಚು ಮಾಡಿದ ಮಾಹಿತಿಯನ್ನು ನೇರವಾಗಿ ಮಾಹಿತಿ ಶೇಖರಣೆಯ ಸಂಕೇತವಾದ ಯುನಿಕೋಡ್‌ನಲ್ಲೇ ಸಂಗ್ರಹಿಸಿಡಲಾಗುತ್ತದೆ. ಮಾಹಿತಿ ಸಂವಹನೆಯಲ್ಲಿ ಅಕ್ಷರಶೈಲಿಯ ಸಂಕೇತಗಳ ಬದಲಿಗೆ ಮೂಲ ಮಾಹಿತಿಯನ್ನೇ ಕಳುಹಿಸುವು ದರಿಂದ ಸಂದೇಶ ಪಡೆದುಕೊಳ್ಳುವವರ ಗಣಕದಲ್ಲಿ ಇಂಥದ್ದೇ ಅಕ್ಷರಶೈಲಿ ಇರಬೇಕು ಎಂಬ ಅಗತ್ಯ ಇರುವುದಿಲ್ಲ. ನಾವು ಕಳುಹಿಸಿದ ಕಡತವನ್ನು ಅಥವಾ ನಮ್ಮ ಜಾಲತಾಣವನ್ನು ಬೇರೊಬ್ಬರು ಓದಲು ಕನ್ನಡದ ಯಾವುದೇ ಓಪನ್ ಟೈಪ್ ಅಕ್ಷರಶೈಲಿ ಇದ್ದರೆ ಸಾಕು. ವಿನ್ಯಾಸದಲ್ಲಿ ಬದಲಾವಣೆಯಿಲ್ಲದೆ ಯಾವುದೇ ತಂತ್ರಾಂಶ ಅಥವಾ ಜಾಲತಾಣವನ್ನು ಬೇರೆಬೇರೆ ಭಾಷೆಯಲ್ಲಿ ಬಳಸಲೂ ಯುನಿಕೋಡ್ ಸಹಾಯ ಮಾಡುತ್ತದೆ. ಅಷ್ಟೇ ಅಲ್ಲ, ಯುನಿಕೋಡ್‌ನಲ್ಲಿ ಮಾಹಿತಿಯನ್ನು ಶೇಖರಿಸುವುದಾದರೆ ಪ್ರಪಂಚದ ಎಲ್ಲ ಭಾಷೆಗಳನ್ನೂ ಒಂದೇ ಕಡತದಲ್ಲಿ ಸಂಗ್ರಹಿಸಿಡಬಹುದು. ವಿಶ್ವವ್ಯಾಪಿ ಜಾಲದಲ್ಲಿರುವ ಮಾಹಿತಿ ಯುನಿಕೋಡ್‌ನಲ್ಲಿದ್ದರೆ ಸರ್ಚ್ ಇಂಜಿನ್‌ಗಳನ್ನು ಬಳಸಿ ಸುಲಭವಾಗಿ ಹುಡುಕಲೂಬಹುದು.

'ANSI'ಯನ್ನು ಆಂಗ್ಲ ಭಾಷೆಯನ್ನಷ್ಟೇ ಗಣಕಕ್ಕೆ ಸೇರಿಸಲು ಸಿದ್ಧಪಡಿಸಲಾಯಿತಾದರೂ ಪ್ರಪಂಚದ ಬೇರೆ ಬೇರೆ ಭಾಷೆಗಳನ್ನು ಆರಂಭದಲ್ಲಿ ಇದರ ಮೂಲಕವೇ ಸಂಕೇತ ರೂಪಕ್ಕೆ ಪರಿವರ್ತಿಸಲಾಗುತ್ತಿತ್ತು. ಆದರೆ, ಆಂಗ್ಲ ಭಾಷೆಯನ್ನು ಹೊರತುಪಡಿಸಿ ಬೇರೆ ಭಾಷೆಗಳನ್ನು ಸಂಗ್ರಹಿಸುವ ಪದ್ಧತಿಯಲ್ಲಿ ಒಂದು ಶಿಷ್ಟತೆ (ಸ್ಟ್ಯಾಂಡರ್ಡ್) ಇರಲಿಲ್ಲ. ಇದರಿಂದಾಗಿ ಅಂತರಜಾಲದಲ್ಲಿ ವಿವಿಧ ಭಾಷೆಗಳ ಪಠ್ಯವನ್ನು ತೋರಿಸುವುದು ಕಷ್ಟದ ಕೆಲಸವಾಗಿತ್ತು. ಈ ಸಮಸ್ಯೆಯನ್ನು ಪರಿಹರಿಸಲು ಯುನಿಕೋಡ್ ಎಂಬ ಅಂತರರಾಷ್ಟ್ರೀಯ ಶಿಷ್ಟತೆಯನ್ನು ಜಾರಿಗೊಳಿಸಲಾಯಿತು. ಈ ಶಿಷ್ಟತೆಯನ್ನು 'ಯುನಿಕೋಡ್ ಕನ್ಸೋರ್ಟಿಯಂ' ಎನ್ನುವ ಸಂಘಟನೆಯು ನಿರ್ವಹಿಸುತ್ತದೆ. ಕಾಲಕಾಲಕ್ಕೆ ಭಾಷೆಗಳ ವರ್ಣಮಾಲೆಗಳಲ್ಲಾಗುವ ಬದಲಾವಣೆಗಳಿಗೆ ಅನುಗುಣವಾಗಿ ಶಿಷ್ಟತೆಯನ್ನು ಬದಲಾಯಿಸುವ ಅಥವಾ ಈ ಶಿಷ್ಟತೆಗೆ ಸಂಬಂಧಪಟ್ಟ ಇತರ ಕೆಲಸಗಳನ್ನು ಈ ಸಂಘಟನೆಯು ನೋಡಿಕೊಳ್ಳುತ್ತದೆ. ಇದರಿಂದಾಗಿ ಪ್ರಪಂಚದ ಎಲ್ಲಾ ಭಾಷೆಗಳನ್ನೂ ಗಣಕದಲ್ಲಿ ಸೇರಿಸುವುದು ಸುಲಭಸಾಧ್ಯ. ಆದ್ದರಿಂದ ಯಾವುದೇ ಭಾಷೆಯನ್ನು ಅಂತರ್ಜಾಲದಲ್ಲಿ ತೋರಿಸುವುದು ಸಾಧ್ಯವಾಗುತ್ತದೆ. ಅಲ್ಲದೇ ಈ ಏಕರೂಪ ಶಿಷ್ಟತೆಯು ವಿವಿಧ ಭಾಷೆಗಳಲ್ಲಿ ತಂತ್ರಾಂಶವನ್ನು ಸಿದ್ಧಪಡಿಸಲು ಅನುಕೂಲ ಮಾಡಿಕೊಡುತ್ತದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಕನ್ನಡದಲ್ಲಿನ ಅನೇಕ ಮಾಹಿತಿಗಳು ಅಂತರ್ಜಾಲದಲ್ಲಿ ಲಭ್ಯವಿವೆ; ಅಲ್ಲದೇ ಕನ್ನಡದಲ್ಲಿಯೂ ತಂತ್ರಾಂಶದ ಬೆಳವಣಿಗೆ ಸಾಧ್ಯವಾಗಿದೆ.

ನೀವು ಅಂಗಡಿಗೆ ಹೋಗಿ ಒಂದು ಬಲ್ಬ್ ಬೇಕೆಂದು ಕೇಳಿ ನೋಡಿ. ಅಂಗಡಿಯಾತ ನಿಮ್ಮ ಮನೆಯಲ್ಲಿ ಯಾವ ಕಂಪೆನಿಯ ಹೋಲ್ಡರ್ ಇದೆ ಎಂದು ಕೇಳುವುದಿಲ್ಲ. ಯಾಕೆಂದರೆ ಯಾವುದೇ ಕಂಪೆನಿಯ ಹೋಲ್ಡರ್ ಆದರೂ ಎಲ್ಲ ಬಲ್ಬ್‌ಗಳು ಎಲ್ಲ ಹೋಲ್ಡರ್‌ಗಳಿಗೆ ಹೊಂದಿಕೆಯಾಗುತ್ತವೆ. ಆದರೆ ಕನ್ನಡ ಮತ್ತು ಗಣಕ ಕ್ಷೇತ್ರದಲ್ಲಿ ಈ ರೀತಿ ಆಗುವುದಿಲ್ಲ. ನಮ್ಮ ಮನೆಯ ಗಣಕದಲ್ಲಿ ಕಡತವೊಂದನ್ನು ತಯಾರಿಸಿ ಅದನ್ನು ಲೇಸರ್ ಮುದ್ರಣಕ್ಕೆ ಯಾವುದಾದರು ಡಿ.ಟಿ.ಪಿ. ಅಥವಾ ಸೈಬರ್ ಕೇಂದ್ರಕ್ಕೆ ತೆಗೆದುಕೊಂಡು ಹೋದಾಗ, ಆತ ನಮ್ಮನ್ನು ಕೇಳುವ ಪ್ರಶ್ನೆಯೆಂದರೆ 'ನೀವು ಯಾವ ತಂತ್ರಾಂಶ ತಯಾರಿಸಿ ಕಡತವನ್ನು ತಯಾರು ಮಾಡಿದ್ದೀರಾ?' ನೀವು ಬಳಸಿದ ತಂತ್ರಾಂಶ ಆತನ ಗಣಕದಲ್ಲಿ ಇಲ್ಲದಿರುವ ಸಂಭವವೇ ಹೆಚ್ಚು. ಕನ್ನಡದ ಯಾವುದೇ ತಂತ್ರಾಂಶವನ್ನು ಬಳಸಿ ತಯಾರಿಸಿದ ಕಡತವನ್ನು ಕನ್ನಡದ ಯಾವುದೇ ತಂತ್ರಾಂಶದಲ್ಲಿ ಓದಲು ಸಾಧ್ಯವಿರಬೇಕಲ್ಲವೇ ಎಂದು ನಮಗೆ ಆಗ ಅನಿಸುವುದು ಸಹಜ. ಅದನ್ನು ಸಾಧ್ಯ ಮಾಡಿಕೊಡುವುದೇ ಈ ಯುನಿಕೋಡ್. ಕನ್ನಡದಲ್ಲಿ ಕಡತವೊಂದನ್ನು ತಯಾರಿಸಿ ಜಪಾನಿಗೆ ಕಳುಹಿಸಿದರೆ ಅವರಿಗೆ ಇದು ಕನ್ನಡ ಭಾಷೆಯಲ್ಲಿದೆ ಎಂದು ತಿಳಿಯುವುದು ಹೇಗೆ? ವಿಶ್ವಕ್ಕೆಲ್ಲ ಒಂದೇ ಸಂಕೇತ ವಿಧಾನ ಇದ್ದರೆ ಒಳ್ಳೆಯದಲ್ಲವೇ? ಇದುವೇ ಯುನಿಕೋಡ್.

ಯುನಿಕೋಡ್ ಅಳವಡಿಸಿದ ತಂತ್ರಾಂಶಗಳನ್ನು ಬಳಸುವ ಮೂಲಕ ಕನ್ನಡದ ಅಥವಾ ಯಾವುದೇ ಭಾರತೀಯ ಭಾಷೆಯ ಪತ್ರಿಕೆಗಳಲ್ಲಿ ಪ್ರಕಟವಾಗುವ ಮಾಹಿತಿಗಳನ್ನು ಕಂಪ್ಯೂಟರ್‌ನಲ್ಲಿಯೇ ಪರಸ್ಪರ ಹೋಲಿಸುವುದು, ಹುಡುಕುವುದು, ವಿನಿಮಯ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಪ್ರಪಂಚದ ಮಟ್ಟಿಗೆ ಹೇಳುವುದಾದರೆ ಭಾರತೀಯ ಭಾಷೆಗಳ ಜೊತೆ, ಚೀನಾ, ಜಪಾನ್, ಅರೇಬಿಯಾ ಹಾಗೂ ಯುರೋಪಿನ ಭಾಷೆಗಳು, ಹೀಗೆ ನೂರಾರು ಭಾಷೆಗಳಿಗೆ ಸ್ಥಾನ ಕಲ್ಪಿಸಿ ಕೊಡಬೇಕಾಗುತ್ತದೆ. ಯುನಿಕೋಡ್ ಎಂಬುದು universal, uniform, uinique ಮತ್ತು code (ಸಂಕೇತ) ಎಂಬ ಪದಗಳನ್ನು ಸೂಚಿಸುತ್ತದೆ. ಪ್ರಪಂಚಕ್ಕೆಲ್ಲಾ ಒಂದೇ ಸಂಕೇತ ವಿಧಾನ ಇರಬೇಕು. ಪ್ರಪಂಚದ ಪ್ರತಿ ಭಾಷೆಯ ಪ್ರತಿಯೊಂದು ಅಕ್ಷರಕ್ಕೂ ತನ್ನದೇ ಆದ ಪ್ರತ್ಯೇಕ ಸಂಕೇತ ಇರಬೇಕು. ಈ ಎಲ್ಲ ಬೇಕುಗಳಿಗೆ ಉತ್ತರವೇ ಯುನಿಕೋಡ್. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇದೆ. ಇದು ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಯುನಿಕೋಡ್ ವಿಧಾನದಲ್ಲಿ ಮಾಹಿತಿ ಸಂಗ್ರಹಣೆ ಮಾಡಿದರೆ ಒಂದೇ ಕಡತದಲ್ಲಿ ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮಾಹಿತಿಯನ್ನು ಶೇಖರಣೆ ಮಾಡಲು ಸಾಧ್ಯ. ಗ್ರಂಥಾಲಯವೊಂದರಲ್ಲಿ ಭಾರತದ ಎಲ್ಲ ಭಾಷೆಯ ಪುಸ್ತಕಗಳಿದ್ದಲ್ಲಿ ಅವುಗಳ ವಿವರಗಳ ದತ್ತಸಂಚಯ (data-base) ತಯಾರಿಸಬೇಕಾದರೆ ಯುನಿಕೋಡ್ ವಿಧಾನದಿಂದ ಮಾತ್ರ ಸಾಧ್ಯ.

ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಗಳಿರುವುದು ಮಾತ್ರವಲ್ಲ, ಪ್ರತಿ ಭಾಷೆಗೂ ತನ್ನದೇ ಆದ ಅಕಾರಾದಿ ವಿಂಗಡಣೆಯ ಸೂತ್ರವೂ ಯುನಿಕೋಡ್‌ನಲ್ಲಿದೆ. ಮಾಹಿತಿಯನ್ನು ಅಕ್ಷರಶೈಲಿಯ ಸಂಕೇತಗಳ ಬದಲಿಗೆ ಮೂಲ ಮಾಹಿತಿಯಾಗಿಯೇ ಕಳುಹಿಸುವುದರಿಂದ ಮಾಹಿತಿ ಸಂವಹನೆಯಲ್ಲಿ ಯಾವ ತೊಡಕೂ ಇಲ್ಲ. ಮೈಕ್ರೋಸಾಫ್ಟ್ ನವರ ವಿಂಡೋಸ್ ಎಕ್ಸ್.ಪಿ. ಮತ್ತು ಸರ್ವರ್ ೨೦೦೩ ಹಾಗೂ ನಂತರದ ಕಾರ್ಯಾಚರಣೆ ವ್ಯವಸ್ಥೆಗಳಾದ (operating system) ವಿಂಡೋಸ್ ೮, ವಿಂಡೋಸ್ ೧೦, ವಿಂಡೋಸ್ ೧೧ರಲ್ಲಿ ಕನ್ನಡದ ಯುನಿಕೋಡ್ ಸವಲತ್ತನ್ನು ನೀಡಲಾಗಿದೆ. ಕನ್ನಡ ಲಿನೆಕ್ಸ್ ಉತ್ಸಾಹಿಗಳು ನೇರವಾಗಿ ಯುನಿಕೋಡನ್ನೇ ಬಳಸುತ್ತಿದ್ದಾರೆ.

ಕನ್ನಡದ ಪಠ್ಯವು ಯುನಿಕೋಡ್‌ನಲ್ಲಿದ್ದರೆ ಮಾಹಿತಿ ಹುಡುಕುವುದು ಅತಿ ಸುಲಭ. ಕಂಪ್ಯೂಟರ್‌ನಲ್ಲಿ ಮೊದಲು ಕನ್ನಡಕ್ಕೆ ತನ್ನದೇ ಸ್ವತಂತ್ರ ಸ್ಥಾನಮಾನ ಇರಲಿಲ್ಲ. ಈಗ ಆ ಪರಿಸ್ಥಿತಿ ಇಲ್ಲ. ಯುನಿಕೋಡ್ ಬಂದ ನಂತರ ಕನ್ನಡಕ್ಕೆ ತನ್ನದೇ ಆದ ಸ್ಥಾನ ದೊರೆತಿದೆ. ಯುನಿಕೋಡ್ ಸಂಕೇತ ವಿಧಾನ ಬಳಕೆಗೆ ಬಂದಾಗ ಇಮೇಲ್ ಕಳುಹಿಸುವುದು, ಜಾಲತಾಣಗಳಿಗೆ–ಬ್ಲಾಗ್‌ಗಳಿಗೆ ಮಾಹಿತಿ ಸೇರಿಸುವುದು, ಅವನ್ನು ಓದುವುದು, ಕನ್ನಡದ ಮಾಹಿತಿಯನ್ನು ಸರ್ಚ್ ಇಂಜಿನ್‌ಗಳಲ್ಲಿ ಕನ್ನಡದಲ್ಲೇ ಹುಡುಕುವುದು – ಇದೆಲ್ಲವನ್ನೂ ನಿರ್ದಿಷ್ಟ ತಂತ್ರಾಂಶದ ಮೇಲೆ ಅವಲಂಬಿತರಾಗದೆ ಮಾಡಲು ಸಾಧ್ಯವಾಗಿಸಿದ್ದು ಯುನಿಕೋಡ್. ಈಗ ಭಾಷೆಯೊಂದರ ಅಕ್ಷರಗಳನ್ನು ಕಂಪ್ಯೂಟರ್‌ನಲ್ಲಿ ಪ್ರತಿನಿಧಿಸುವ 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ'ಯು ವಿಶ್ವಮಟ್ಟದಲ್ಲಿ ಜಾರಿಯಾಗಿದೆ. ಇದರಿಂದಾಗಿ, ಭಾರತೀಯ ಭಾಷೆಗಳು ಮಾತ್ರವಲ್ಲ ಜಗತ್ತಿನ ಎಲ್ಲ ಭಾಷೆಗಳ ಜೊತೆ ಕನ್ನಡವೂ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಜಗತ್ತಿನ ಎಲ್ಲ ಭಾಷೆಗಳ ಎನ್ಕೋಡಿಂಗ್‌ಗೆ ಅವಕಾಶವಿರುವ ಶಿಷ್ಟತೆ ಅಥವಾ ಮಾನಕ ಈ 'ಯುನಿಕೋಡ್ ಸಂಕೇತೀಕರಣ'. ಕಂಪ್ಯೂಟರ್‌ನಲ್ಲಿ ಜಗತ್ತಿನ ಎಲ್ಲ ಭಾಷೆಗಳ ಪ್ರತಿ ಅಕ್ಷರಕ್ಕೂ ಸಂಕೇತ ನೀಡುವ ವ್ಯವಸ್ಥೆಯನ್ನು 'ಯುನಿಕೋಡ್ ಸಂಕೇತೀಕರಣ ವ್ಯವಸ್ಥೆ' ಎನ್ನಲಾಗಿದೆ. ಇದರ ವೈಶಿಷ್ಟ್ಯವೆಂದರೆ ಜಗತ್ತಿನ ಎಲ್ಲ ಭಾಷೆಗಳಿಗೂ ಇದರಲ್ಲಿ ಪ್ರತ್ಯೇಕ ಸ್ಥಾನವನ್ನು ನೀಡಲಾಗಿದೆ. ಅಂದರೆ ಆಸ್ಕಿ ಮಾನಕದಲ್ಲಿ ಇದ್ದಂತೆ, ಇಂಗ್ಲಿಷ್‌ನ ಜಾಗದಲ್ಲಿ ಕನ್ನಡ ಭಾಷೆಯನ್ನು ಕೂರಿಸಬೇಕಾಗಿಲ್ಲ. ಈಗ ಯುನಿಕೋಡ್ ನಿಂದಾಗಿ ಕನ್ನಡಕ್ಕೆ ಕಂಪ್ಯೂಟರ್‌ನಲ್ಲಿ ತನ್ನದೇ ಸ್ವತಂತ್ರವಾದ ಸ್ಥಾನಮಾನಗಳು ದೊರೆತಿವೆ.

ಮಾಹಿತಿ ತಂತ್ರಜ್ಞಾನದಲ್ಲಿ 'ಯುನಿಕೋಡ್ ಅನ್ನು ಕನ್ನಡದ ಶಿಷ್ಟತೆಯೆಂದು ಅಧಿಸೂಚನೆ ಹೊರಡಿಸಬೇಕು ಕನ್ನಡದ ಎಲ್ಲ ವೆಬ್‌ಸೈಟ್‌ಗಳೂ ಯುನಿಕೋಡ್‌ನಲ್ಲೇ ಇರುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು'. ಕರ್ನಾಟಕ ಸರಕಾರವೂ ಕನ್ನಡಕ್ಕೆ ಯುನಿಕೋಡ್ ಶಿಷ್ಟತೆಯನ್ನು ಕಡ್ಡಾಯವೆಂದು ಪ್ರಕಟಿಸುವಂತಾದರೆ ಒಳ್ಳೆಯದು. ಸರಕಾರದ ಎಲ್ಲ ಜಾಲತಾಣಗಳೂ ಕನ್ನಡದಲ್ಲಿ – ಅದರಲ್ಲೂ ಯುನಿಕೋಡ್‌ನಲ್ಲಿ – ಇರುವಂತೆ ಮಾಡುವುದು ಮತ್ತು ಅವುಗಳಲ್ಲಿರುವ ಮಾಹಿತಿ ಆಗಿಂದಾಗ್ಗೆ ಅಪ್ಡೇಟ್ ಆಗುತ್ತಿರುವಂತೆ ನೋಡಿಕೊಂಡರೆ ಇನ್ನೂ ಒಳ್ಳೆಯದು. ತಮಗೆ ಬೇಕಾದ ಯಾವುದೇ ಮಾಹಿತಿಯನ್ನು ಯಾರು ಯಾವಾಗ ಬೇಕಿದ್ದರೂ ಸುಲಭವಾಗಿ ಹುಡುಕಿಕೊಳ್ಳುವುದು ಇದರಿಂದ ಸಾಧ್ಯವಾಗುತ್ತದೆ. ಸರಕಾರದ ತಾಣಗಳಷ್ಟೇ ಅಲ್ಲ, ಎಲ್ಲ ಪತ್ರಿಕೆಗಳ ಜಾಲತಾಣಗಳೂ ಯುನಿಕೋಡ್‌ನಲ್ಲಿದ್ದರೆ ಗೂಗಲ್ ನ್ಯೂಸ್‌ನಂತಹ ಸೇವೆಗಳಲ್ಲಿ ಕನ್ನಡಕ್ಕೆ ಸ್ಥಾನ ಬೇಕೆಂಬ ಬಹುದಿನಗಳ ಬೇಡಿಕೆಗೂ ಇನ್ನಷ್ಟು ಬಲ ಬರುತ್ತದೆ. ಕೊನೆಗೂ ಈ ಅಧಿಸೂಚನೆ ಹೊರಟಿದೆ. ಇನ್ನು ಮುಂದೆ ಸರಕಾರದ ಎಲ್ಲ ಕೆಲಸ ಕಾರ್ಯಗಳಲ್ಲಿ ಕನ್ನಡ ಭಾಷೆಯನ್ನು ಮಾಹಿತಿ ತಂತ್ರಜ್ಞಾನದ ಮೂಲಕ ಬಳಕೆ ಮಾಡುವಾಗ ಯುನಿಕೋಡ್ ವಿಧಾನದಲ್ಲೇ ಮಾಡತಕ್ಕದ್ದು. ಇದು ಕೇವಲ ಗಣಕಗಳಿಗೆ ಮಾತ್ರವಲ್ಲ, ಎ.ಟಿ.ಎಂ., ಮೊಬೈಲ್, ಅಂತರ್ಜಾಲ ತಾಣ, ಪತ್ರ ವ್ಯವಹಾರ, ಪತ್ರಿಕಾ ಪ್ರಕಟಣೆ – ಹೀಗೆ ಎಲ್ಲ ಅಂಗಗಳಿಗೂ ಅನ್ವಯಿಸುತ್ತದೆ.

ಯುನಿಕೋಡ್ ಫಾಂಟುಗಳು

ಯುನಿಕೋಡ್ ಫಾಂಟ್‌ಗಳು ಬಳಕೆಗೆ ಬಂದ ನಂತರ ಕನ್ನಡವನ್ನು ಸಮಗ್ರವಾಗಿ ಕಂಪ್ಯೂಟರ್‌ನಲ್ಲಿ ಬಳಸಲು ಹಿಂದೆ ಇದ್ದ ಬಹುತೇಕ ತಂತ್ರಜ್ಞಾನದ ಸಮಸ್ಯೆಗಳು ಪರಿಹಾರ ಕಂಡವು. ಹೀಗಾಗಿ ಇಂದು ಡೇಟಾಬೇಸ್ ಅಪ್ಲಿಕೇಷನ್‌ಗಳಲ್ಲಿ ಕೂಡ ಕನ್ನಡದ

ಪಠ್ಯವನ್ನು ಸುಲಭವಾಗಿ ಬಳಸಲು ಸಾಧ್ಯವಾಗಿದೆ. ಕನ್ನಡದಲ್ಲಿಯೇ ವೆಬ್‌ಸೈಟ್‌ಗಳನ್ನು ನಿರ್ಮಿಸುವ ಸೌಲಭ್ಯ ದೊರೆತಿದೆ. ಹಾಗೆಯೇ ಬ್ಲಾಗ್, ಇಮೇಲ್ ಮತ್ತು ಚಾಟಿಂಗ್‌ಗಳಲ್ಲಿ ಕನ್ನಡ ಭಾಷೆಯನ್ನು ಹಾಸುಹೊಕ್ಕಾಗಿ ಬಳಸಲಾಗುತ್ತಿದೆ.

ಯುನಿಕೋಡ್ ಫ್ಲಾಂಟ್ ಬಳಕೆಯಿಂದಾಗಿ ಕನ್ನಡದ ಲಿಪಿಗಳು ವಿಚಿತ್ರಲಿಪಿಗಳಾಗಿ ಅಂದರೆ ಜಂಕ್ ಕ್ಯಾರೆಕ್ಟರ್‌ಗಳಾಗಿ ಕಾಣಿಸುವ ಸಮಸ್ಯೆಗಳು ಇಲ್ಲವಾಗಿದೆ.

ಯುನಿಕೋಡ್ ಫ್ಲಾಂಟುಗಳ ಅನುಕೂಲಗಳು

ಪಠ್ಯವು ಯುನಿಕೋಡ್ ಫ್ಲಾಂಟ್‌ನಲ್ಲಿದ್ದರೆ, ಹುಡುಕುವುದು ಸುಲಭ. ಕಾರಣವೇನೆಂದರೆ, ಯುನಿಕೋಡ್ ಸೌಲಭ್ಯದಿಂದಾಗಿ ಗೂಗಲ್ ಬಳಸಿ ಕನ್ನಡದ ಪಠ್ಯವನ್ನು ಸುಲಭವಾಗಿ ಹುಡುಕಬಹುದು. ಯುನಿಕೋಡ್‌ನಿಂದಾಗಿ ಕನ್ನಡದ ವಿಚಿತ್ರಲಿಪಿಗಳ ಸಮಸ್ಯೆ ಪರಿಹಾರ ವಾಗಿದೆ. ಕಾರ್ಯಾಚರಣೆ ವ್ಯವಸ್ಥೆಯ ಹಂತದಲ್ಲಿಯೇ ಕಂಪ್ಯೂಟರ್ ಕನ್ನಡವನ್ನು ಗುರುತಿಸುತ್ತದೆ. ಹೀಗಾಗಿ, ಯಾವುದೇ ಅಪ್ಲಿಕೇಷನ್ ತಂತ್ರಾಂಶಗಳಲ್ಲಿ ಇಂಗ್ಲಿಷ್‌ನಷ್ಟೇ ಸುಲಭವಾಗಿ ಕನ್ನಡವನ್ನು ಸಹ ಬಳಸಬಹುದು.

ಕಠಿಣ ಪದಗಳು

೧. ಗಣಕೀಕರಣ
೨. ಎನ್ಕೋಡಿಂಗ್
೩. ಸಂಕೇತಶ್ರೇಣಿ
೪. ಶಿಷ್ಟತೆ
೫. ದತ್ತಸಂಚಯ
೬. ಸೈಬರ್

ಅಭ್ಯಾಸ ೩

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಯುನಿಕೋಡ್ ಎಂದರೇನು?
೨. ANSI ಯ ಬಗ್ಗೆ ಬರೆಯಿರಿ.
೩. ಯುನಿಕೋಡ್ ಕನ್ಸೋರ್ಟಿಯಂ ಎಂದರೇನು? ಅದರ ಕಾರ್ಯ ತಿಳಿಸಿ.
೪. ಕನ್ನಡಕ್ಕೆ ಯುನಿಕೋಡ್‌ನ ಕೊಡುಗೆ.
೫. ಯುನಿಕೋಡ್‌ನ ವಿಸ್ತೃತ ರೂಪ ಬರೆಯಿರಿ.

೧೨.೫. ಸಾಮಾಜಿಕ ಸಂವಹನ

ಸಂವಹನ ಎಂಬ ಪದವು ಇಂಗ್ಲಿಷಿನ್ 'ಕಮ್ಯುನಿಕೇಷನ್' ಎಂಬ ಪದಕ್ಕೆ ಸಮಾನ ಅರ್ಥವನ್ನು ನೀಡುವ ಕನ್ನಡದ ಪದವಾಗಿದೆ. ಕಮ್ಯುನಿಕೇಷನ್ ಪದದ ಮೂಲ ಲ್ಯಾಟಿನ್ ಭಾಷೆಯಲ್ಲಿದ್ದು, ಕಮ್ಯುನಿಕೇರ್ ಎಂಬ ಲ್ಯಾಟಿನ್ ಪದದಿಂದ ಉತ್ಪತ್ತಿಯಾಗಿರುತ್ತದೆ. ಹಂಚಿಕೊ ಎಂಬ ಅರ್ಥವನ್ನು ನೀಡುವ ಲ್ಯಾಟಿನ್ ಭಾಷೆಯ 'ಕಮ್ಯುನಿಕೇರ್' ಪದವು

ನಾವು ಕನ್ನಡದಲ್ಲಿ ಬಳಸುವ ಸಂವಹನ ಪದದ ಅರ್ಥಕ್ಕೆ ಸಮಾನಾಂತರ ಅರ್ಥವನ್ನು ಹೊಂದಿರುತ್ತದೆ. ಕನಿಷ್ಠ ಇಬ್ಬರು ಭಾಗವಹಿಸುವವರನ್ನು ಒಳಗೊಂಡ ಸಾಮಾಜಿಕ ಕ್ರಿಯೆಯನ್ನು ಸಂವಹನ ಎಂದು ಕರೆಯಲಾಗುತ್ತದೆ. ಸಾಮಾಜಿಕ ಮಾಧ್ಯಮವೆಂದರೆ ವರ್ಚುವಲ್ ಸಮುದಾಯಗಳು ಮತ್ತು ನೆಟ್‌ವರ್ಕ್‌ಗಳಲ್ಲಿ ಜನರು ಮಾಹಿತಿ ಮತ್ತು ಆಲೋಚನೆಗಳನ್ನು ರಚಿಸುವ, ಹಂಚಿಕೊಳ್ಳುವ ಅಥವಾ ವಿನಿಮಯ ಮಾಡುವ ಸಾಮಾಜಿಕ ಸಂವಹನ. ಆಂಡ್ರಿಯಾಸ್ ಕಪ್ಲಾನ್ ಮತ್ತು ಮೈಕೆಲ್ ಹೆನ್ಲೈನ್ ಅವರು ಸಾಮಾಜಿಕ ಮಾಧ್ಯಮವನ್ನು 'ವೆಬ್ ೨.೦ನ ಸೈದ್ಧಾಂತಿಕ ಮತ್ತು ತಾಂತ್ರಿಕ ಅಡಿಪಾಯಗಳ ಮೇಲೆ ನಿರ್ಮಿಸುವ ಮತ್ತು ಬಳಕೆದಾರ–ರಚಿತ ವಿಷಯದ ರಚನೆ ಮತ್ತು ವಿನಿಮಯಕ್ಕೆ ಅನುವು ಮಾಡಿಕೊಡುವ ಇಂಟರ್ನೆಟ್ ಆಧಾರಿತ ಅಪ್ಲಿಕೇಷನ್‌ಗಳ ಗುಂಪು' ಎಂದು ವ್ಯಾಖ್ಯಾನಿಸಿದ್ದಾರೆ. ಇದಲ್ಲದೆ, ಬಳಕೆದಾರರು ಮತ್ತು ಸಮುದಾಯಗಳು ಬಳಕೆದಾರ–ರಚಿಸಿದ ವಿಷಯವನ್ನು ಹಂಚಿಕೊಳ್ಳಲು, ಸಹ–ರಚಿಸಲು, ಚರ್ಚಿಸಲು ಮತ್ತು ಮಾರ್ಪಡಿಸುವ ಮೂಲಕ ಹೆಚ್ಚು ಸಂವಾದಾತ್ಮಕ ವೇದಿಕೆಗಳನ್ನು ರಚಿಸಲು ಸಾಮಾಜಿಕ ಮಾಧ್ಯಮ ಮೊಬೈಲ್ ಮತ್ತು ವೆಬ್ ಆಧಾರಿತ ತಂತ್ರಜ್ಞಾನಗಳನ್ನು ಅವಲಂಬಿಸಿದೆ. ಸಂಸ್ಥೆಗಳು, ಸಮುದಾಯಗಳು ಮತ್ತು ವ್ಯಕ್ತಿಗಳ ನಡುವಿನ ಸಂವಹನದಲ್ಲಿ ಅವರು ಗಣನೀಯ ಮತ್ತು ವ್ಯಾಪಕ ಬದಲಾವಣೆಗಳನ್ನು ಪರಿಚಯಿಸುತ್ತಾರೆ. ನಾವು ಇದೀಗ ಆನ್‌ಲೈನ್ ಸಾಮಾಜಿಕ ಮಾಧ್ಯಮ ಕ್ಷೇತ್ರದಲ್ಲಿ ಕುಟುಂಬ, ಸ್ನೇಹಿತರು, ಸಂಸ್ಥೆಗಳು, ಸರ್ಕಾರಗಳು ಮತ್ತು ಒಟ್ಟು ಅಪರಿಚಿತರೊಂದಿಗೆ ಸಂವಹನ ನಡೆಸುತ್ತೇವೆ. ಅಂತರ್ಜಾಲದ ಹೆಚ್ಚಿನ ಭಾಗಗಳು ಸಾಮಾಜಿಕ ಮಾಧ್ಯಮ ತತ್ವಗಳನ್ನು ಅನುಸರಿಸುತ್ತಿವೆ ಅಥವಾ ಕನಿಷ್ಠ ಒಂದು ರೀತಿಯಲ್ಲಿ ಸಾಮಾಜಿಕ ನೆಟ್‌ವರ್ಕ್‌ಗಳನ್ನು ಬೆಂಬಲಿಸುತ್ತವೆ. ನಾವು ಇತರರಿಂದ ಕಲಿಯುತ್ತೇವೆ, ನಮಗೆ ಆಸಕ್ತಿಯುಂಟು ಮಾಡುವ ದೈನಂದಿನ ಸುದ್ದಿಗಳನ್ನು ಪಡೆದುಕೊಳ್ಳುತ್ತೇವೆ ಮತ್ತು ಲೇಖಕರು ಮತ್ತು ಸಮಾನ ಮನಸ್ಸಿನ ಬಳಕೆದಾರರೊಂದಿಗೆ ಸಂವಹನ ನಡೆಸುತ್ತೇವೆ.

ಸಂವಹನ ಪ್ರಕ್ರಿಯೆಯಲ್ಲಿ ವ್ಯಕ್ತಿಯು ತನ್ನಲ್ಲಿರುವ ಮಾಹಿತಿ ಭಾವನೆ, ಆಲೋಚನೆ, ಅಭಿಪ್ರಾಯಗಳನ್ನು ತನ್ನ ಸಹಸಂವಾದಿಯೊಂದಿಗೆ ಹಂಚಿಕೊಳ್ಳುತ್ತಾನೆ. ಹೀಗೆ ವ್ಯಕ್ತಿಯೊಬ್ಬ ತನ್ನೊಡನೆ ಸಂವಹನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವ್ಯಕ್ತಿ, ಗುಂಪು ಅಥವಾ ಸಮೂಹ ದೊಡನೆ, ಇಬ್ಬರಿಗೂ ಅರ್ಥವಾಗುವಂತಹ ಚಿನ್ಹೆ ಅಥವಾ ಸಂಜ್ಞೆಗಳ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ನಾವು ಸಂವಹನ ಎಂದು ಕರೆಯುತ್ತೇವೆ. ಸರಳವಾಗಿ ಹೇಳುವುದಾದರೆ ವ್ಯಕ್ತಿಯೊಬ್ಬ ತನ್ನ ನೋವು–ನಲಿವುಗಳನ್ನು ಬೇರೊಬ್ಬರ ಜೊತೆ ಹಂಚಿಕೊಳ್ಳುವ ಪ್ರಕ್ರಿಯೆಗೆ ಸಂವಹನ ಎನ್ನಬಹುದಾಗಿರುತ್ತದೆ. ಹೀಗೆ ವ್ಯಕ್ತಿಯೊಬ್ಬ ತನ್ನ ನೋವು–ನಲಿವುಗಳನ್ನು ಹಂಚಿಕೊಳ್ಳಲು ಬಳಸುವ ಸಾಧನ ಅಂದರೆ ಮಾಧ್ಯಮ.

ಸಂವಹನವು ಸಾಮಾನ್ಯವಾಗಿ ಕೇಳುಗ ಮತ್ತು ಮಾತನಾಡುವವರನ್ನು ಆಧರಿಸಿದೆ. ಶೇಕಡಾವಾರು ಗಣನೆಯಲ್ಲಿ ಏರುಪೇರಾದರೂ ಈ ಎಲ್ಲಾ ಸಂವಹನ ಪ್ರಯತ್ನಗಳ ಉದ್ದೇಶವು ಒಂದೇ ಆಗಿರುತ್ತದೆ. ಹೀಗಾಗಿ ಹೆಚ್ಚಿನ ಸಂದರ್ಭದಲ್ಲಿ ಈ ಮೇಲಿನ ಅಂಕಿ ಅಂಶಗಳು ಸಾರ್ವತ್ರಿಕವಾಗಿ ಸಾಮಾನ್ಯವಾಗಿರುತ್ತವೆ. ಧ್ವನಿ, ರಾಗ ಅಥವಾ ಶ್ರುತಿ, ಸಂಜ್ಞಾಪದ್ಧತಿ ಅಥವಾ ಬರಹ ರೂಪದ ಸಂಕೇತಗಳ ವ್ಯವಸ್ಥೆಯ ಮೂಲಕ ಯೋಚನೆ–ವಿಚಾರಗಳು ಮತ್ತು ಅಭಿಪ್ರಾಯಗಳನ್ನು ತಿಳಿಸಬಹುದು. ಸಾಮಾಜಿಕ ಸಂವಹನವು ಸಾಮಾಜಿಕ

ವ್ಯಸನವನ್ನು ಆಧರಿಸಿದೆ. ಸಾಮಾಜಿಕ ಸಂವಹನವು ಸಾಮಾಜಿಕ ಸಂಪರ್ಕದ ಪ್ರಕಾರಗಳಲ್ಲಿ ಒಂದಾಗಿದೆ. ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆಗಳ ವಿನಿಮಯದ ಪರಸ್ಪರ ನಿರ್ದೇಶನದ ಪ್ರಕ್ರಿಯೆಯೂ ಆಗಿದೆ.

ಸಾಮಾಜಿಕತೆಯು ಇತರೆ ಜನರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದರ ಮೂಲಕ ಮತ್ತು ಅವರ ಮಾಹಿತಿಯನ್ನು ಸ್ವೀಕರಿಸುವ ಮೂಲಕ ಸಂವಹನವನ್ನು ಸೂಚಿಸುತ್ತದೆ. 'ಮಾಧ್ಯಮವು' ಅಂತರ್ಜಾಲದಂತೆಯೇ ಸಂವಹನ ಸಾಧನವನ್ನು ಸೂಚಿಸುತ್ತದೆ (ಟಿ.ವಿ., ರೇಡಿಯೊ ಮತ್ತು ಪತ್ರಿಕೆಗಳು ಹೆಚ್ಚು ಸಾಂಪ್ರದಾಯಿಕ ಮಾಧ್ಯಮಗಳ ಉದಾಹರಣೆ ಗಳಾಗಿವೆ).

ಸಾಮಾಜಿಕ ಮಾಧ್ಯಮವು ವೆಬ್ ಆಧಾರಿತ ಸಂವಹನ ಸಾಧನವಾಗಿದ್ದು, ಜನರು ಪರಸ್ಪರ ಹಂಚಿಕೊಳ್ಳುವ ಮತ್ತು ಉಪಯೋಗಿಸುವ ಮಾಹಿತಿಯ ಮೂಲಕ ಪರಸ್ಪರ ಸಂವಹನ ನಡೆಸಲು ಸಾಧ್ಯವಾಗುತ್ತದೆ. ಹೌದು, ಇದು ವಿಶಾಲವಾದ ವ್ಯಾಖ್ಯಾನವಾಗಿದೆ. ಆದರೆ ಸಾಮಾಜಿಕ ಮಾಧ್ಯಮವು ಬಹಳ ವಿಶಾಲವಾದ ಪದವಾಗಿದೆ. ಸಾಮಾಜಿಕ ಮಾಧ್ಯಮದ ಹೆಚ್ಚು ನಿರ್ದಿಷ್ಟವಾದ ಉಪವಿಭಾಗದಲ್ಲಿ ಮಾಹಿತಿಯನ್ನು ನಾವು ಹೆಚ್ಚು ಕಳೆದುಕೊಳ್ಳದೇ ಪಡೆಯಬಹುದು ಎಂದು ಇದು ನಿರ್ದಿಷ್ಟವಾಗಿ ಸ್ಪಷ್ಟಪಡಿಸುತ್ತದೆ. ಸರಿಯಾದ ಸಮಯದಲ್ಲಿ ಮಹತ್ವದ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಸಾಮಾಜಿಕ ಮಾಧ್ಯಮಗಳು ಮಾಡುತ್ತಿದೆ. ಜನರ ಕಷ್ಟಗಳಿಗೆ ಸ್ಪಂದಿಸಿ ಆದಷ್ಟು ಜನರ ಹಿತವನ್ನು ಬಯಸುತ್ತಾ ಸಹಾಯ ಮಾಡುತ್ತಾ ಬಂದಿವೆ. ೨೦ ವರ್ಷದ ಯುವಕರಿಂದ ೬೦ ವರ್ಷದ ವಯಸ್ಕರವರೆಗೂ ಸಾಮಾಜಿಕ ಜಾಲತಾಣ ಒಂದು ಅವಿಭಾಜ್ಯ ಅಂಗವಾಗಿದೆ. ವಿಶ್ವದಾದ್ಯಂತ ಯಾವುದೇ ಮೂಲೆಯಲ್ಲಿರುವ ತಮ್ಮ ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಸಂವಹನ ನಡೆಸುವ ಒಂದು ವಿಶೇಷ ವೇದಿಕೆಯಾಗಿ ಇದು ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ಜೂನ್ ೩೦ನೆಯ ತಾರೀಕಿನಂದು ವಿಶ್ವ ಸಾಮಾಜಿಕ ಮಾಧ್ಯಮ ದಿನವನ್ನಾಗಿ ಆಚರಿಸಲಾಗುತ್ತದೆ.

ಜಗತ್ತಿನ ಮೂಲೆ ಮೂಲೆಯಲ್ಲಿರುವ ಜನರನ್ನು ಸಂಪರ್ಕಿಸುವುದರಿಂದ ಹಿಡಿದು ಜನರಿಗೆ ಮಾಹಿತಿಯನ್ನು ಅಥವಾ ಪತ್ರಕರ್ತರಿಗೆ ಸುದ್ದಿಯನ್ನು ನೀಡಲು ಸಾಮಾಜಿಕ ಜಾಲತಾಣ ಸಹಾಯಕವಾಗಿದೆ. ಪ್ರಸ್ತುತದಲ್ಲಿ ಕೊರೊನಾ ಸಾಂಕ್ರಾಮಿಕ ಸಮಯದಲ್ಲಿ ಕಷ್ಟದಲ್ಲಿರುವ ಜನರಿಗೆ ಸಹಾಯವಾಣಿಯಾಗಿಯೂ ಅದು ಕೆಲಸ ನಿರ್ವಹಿಸಿದೆ.

ವಿಶ್ವದ ಯಾವುದೇ ಮೂಲೆಯಲ್ಲಿ ನಡೆದ ಘಟನೆಯನ್ನು ನಾವು ಕುಳಿತಿರುವಲ್ಲಿಯೇ ತಿಳಿಸುವುದು ಸಾಮಾಜಿಕ ಮಾಧ್ಯಮದ ಮಹತ್ವ. ಇದು ನಮ್ಮ ಕಾಲದ ಒಂದು ದೊಡ್ಡ ಆಧುನಿಕ ವಿದ್ಯಮಾನವಾಗಿದೆ. ಜನರು ಯಾವ ಮಾಧ್ಯಮವನ್ನು ಬಳಸುತ್ತಾರೆ ಎಂಬುದನ್ನು ನಿಯಂತ್ರಿಸಲು ಇದು ಅನುಕೂಲಿಸುತ್ತದೆ. ಅವರು ಕಲಿಯಲು ಬಯಸುವ ವಿಷಯಗಳನ್ನು ಕಲಿಯಲು ಮತ್ತು ಅವರ ಆಲೋಚನೆಗಳನ್ನು ಅವರಂತೆ ಯೋಚಿಸುವ ಜನರಿಗೆ ತಲುಪಿಸಲು ಅಥವಾ ಅವರ ಆಲೋಚನೆಗಳನ್ನು ಓದುವುದರ ಮೂಲಕ ಆನಂದಿಸಲು ಇದು ಅವಕಾಶ ಮಾಡಿಕೊಡುತ್ತದೆ. ಮೂಲತಃ ಸಾಮಾಜಿಕ ಮಾಧ್ಯಮವು ಅನೇಕ ರೀತಿಯ ಸಂವಹನ, ಸಹಕಾರ ಮತ್ತು ಇತರರಿಗೆ ಸಹಾಯ ಮಾಡಲು ಅನುವು ಮಾಡಿಕೊಡುತ್ತದೆ.

ಸಾಮಾಜಿಕ ಸಂಪರ್ಕ ತಾಣಗಳು

ಸಾಮಾಜಿಕ ಸಂಪರ್ಕ ತಾಣಗಳು ಈಗ ಯುವ ಜನತೆಯಲ್ಲಿ, ಉದ್ಯೋಗಿಗಳಲ್ಲಿ ಮತ್ತು ಉದ್ದಿಮೆಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಮತ್ತು ಹೆಚ್ಚು ಬಳಸಲ್ಪಡುತ್ತಿರುವ ಸಂಪರ್ಕ ತಾಣಗಳಾಗಿವೆ. ಇವುಗಳಲ್ಲಿ ನಮ್ಮ ಪ್ರೊಫೈಲ್ ರಚಿಸಿಕೊಳ್ಳಬಹುದು, ಸ್ನೇಹಿತರನ್ನು ಹೊಂದಬಹುದು, ಹೊಸ ಗುಂಪುಗಳನ್ನು ರಚಿಸಬಹುದು ಮತ್ತು ಸೇರಿಕೊಳ್ಳಬಹುದು. ಇಷ್ಟೇ ಅಲ್ಲದೇ ಸುದ್ದಿಗಳನ್ನು, ಮನರಂಜನೆಯ ಮಾಹಿತಿಗಳನ್ನು ಹಂಚಿಕೊಳ್ಳಬಹುದು ಮತ್ತು ಅವುಗಳಿಗೆ ಪ್ರತಿಕ್ರಿಯೆ ನೀಡಬಹುದು. ಇದಕ್ಕೆ ಉದಾಹರಣೆ ಎಂದರೆ ಫೇಸ್‌ಬುಕ್, ಆರ್ಕುಟ್, ಗೂಗಲ್ ಪ್ಲಸ್ ಮುಂತಾದ ಸಂಪರ್ಕ ತಾಣಗಳು. ಇದಷ್ಟೇ ಅಲ್ಲದೇ ಪ್ರತಿಯೊಬ್ಬರೂ ತಮ್ಮ ದೇಶ, ಭಾಷೆ, ಊರು, ಆಸಕ್ತಿ ಮುಂತಾದ ಸಂಗತಿಗಳ ಕುರಿತು ತಮ್ಮದೇ ಆದ ಸಾಮಾಜಿಕ ಸಂಪರ್ಕ ತಾಣಗಳನ್ನು, ಗುಂಪುಗಳನ್ನು ರಚಿಸಿಕೊಳ್ಳಬಹುದು.

ಸೋಶಿಯಲ್ ಬುಕ್‌ಮಾರ್ಕಿಂಗ್ ತಾಣಗಳು

ಈ ತಾಣದಲ್ಲಿ ನಾವು ಹೆಚ್ಚಾಗಿ ಬಳಸುವ ಅಥವಾ ಇಷ್ಟವಾದ ಇತರೆ ತಾಣಗಳನ್ನು ಬುಕ್‌ಮಾರ್ಕ್ ಮಾಡಬಹುದು ಮತ್ತು ನಮ್ಮ ಆಸಕ್ತಿಗೆ ತಕ್ಕಂತೆ ಬುಕ್‌ಮಾರ್ಕ್ ಮಾಡಿದ ತಾಣಗಳನ್ನು ನೋಡಬಹುದು.

ಸಾಮಾಜಿಕ ಸುದ್ದಿ ತಾಣಗಳು

ಇವುಗಳಲ್ಲಿ ಸುದ್ದಿಗಳು ಮತ್ತು ಲೇಖನಗಳನ್ನು ಓದಬಹುದು ಮತ್ತು ಅವುಗಳಿಗೆ ಮತ ನೀಡುವ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಚರ್ಚೆ ಮಾಡಬಹುದು.

ಉದ್ಯೋಗ ಮತ್ತು ವ್ಯವಹಾರ

ಸಾಮಾಜಿಕ ಮಾಧ್ಯಮಗಳಲ್ಲಿ ಉದ್ಯೋಗಗಳನ್ನು ಮತ್ತು ಉದ್ಯೋಗಾಕಾಂಕ್ಷಿಗಳನ್ನು ಹುಡುಕುವುದು ಸುಲಭವಾಗಿದೆ. ಅರೆಕಾಲಿಕ ಮತ್ತು ಮನೆಯಿಂದಲೇ ಮಾಡಬಹುದಾದ ಉದ್ಯೋಗಗಳ ಅವಕಾಶಗಳನ್ನು ಹುಡುಕುವುದು ಈ ಸಾಮಾಜಿಕ ಮಾಧ್ಯಮಗಳ ಸಹಾಯದಿಂದಾಗಿ ಸುಲಭವಾಗಿದೆ. ಉದ್ಯೋಗವನ್ನರಸುವವರು, ವೃತ್ತಿನಿರತರು ಸಂಪರ್ಕ ಗಳನ್ನು ಬೆಳೆಸಿಕೊಳ್ಳಲು ಮತ್ತು ಚರ್ಚಿಸಲು ಬ್ರಾಂಚ್‌ಔಟ್, ಲಿಂಕ್ಡ್‌ಇನ್ ಮುಂತಾದ ತಾಣಗಳು ಸಹಾಯ ಮಾಡುತ್ತವೆ. ಇನ್ನು ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸುವವರಿಗೆ ತಮ್ಮ ಉದ್ದಿಮೆಯ ಕುರಿತು, ತಾವು ನೀಡುವ ಸೇವೆಗಳ ಕುರಿತು ಜನರಿಗೆ ತಿಳಿಸಲು, ತಮ್ಮ ಉದ್ದಿಮೆ, ಕಂಪನಿಗಳಿಗೆ ಪ್ರಚಾರ ಪಡೆದುಕೊಳ್ಳಲು ಇದು ಸುಲಭ ಮತ್ತು ಉಚಿತವಾದ ಅವಕಾಶವಾಗಿದೆ. ಈ ರೀತಿಯಾಗಿ ಯಾವುದೇ ತಾಣದಲ್ಲಿ ಬಳಕೆದಾರರು ಸಂವಹನ ಮಾಡಲು ಸಾಧ್ಯವಿದೆಯೋ ಅವುಗಳನ್ನೆಲ್ಲ ಸಾಮಾಜಿಕ ಮಾಧ್ಯಮ ತಾಣಗಳು ಎಂದು ಕರೆಯಬಹುದು. ಸಾಮಾಜಿಕ ಮಾಧ್ಯಮಗಳ ಪರಿಚಯ ಮತ್ತು ಬಳಕೆ ಇತ್ತೀಚಿನ ಜೀವನದಲ್ಲಿ ಅತ್ಯಂತ ಅಗತ್ಯವಾಗಿದೆ. ಅಷ್ಟೇ ಅದನ್ನು ಹಿತಮಿತವಾಗಿಯೂ ಬಳಸುವುದು ಅನಿವಾರ್ಯವಾಗಿದೆ.

ಸಾಮಾಜಿಕ ಮಾಧ್ಯಮಗಳು

ಅಂತರ್ಜಾಲದ ಆಗಮನದೊಡನೆ ಮಾಹಿತಿ ಮಹಾಪೂರವೇ ಹರಿಯತೊಡಗಿದೆ. ಕೇವಲ ಒಂದು ದಿಕ್ಕಿನ ಮಾಹಿತಿ ಹರಿಯುವಿಕೆ ಸಾಕಾಗುತ್ತಿಲ್ಲ ಎನ್ನುವ ಹಾಗೆ ಸಂಭಾಷಣೆ,

ಚರ್ಚೆಗಳೂ ಸಹಿತ ಪ್ರಾರಂಭವಾಗಿವೆ. ಅದಷ್ಟೇ ಅಲ್ಲ, ಪ್ರತಿಯೊಬ್ಬರಿಗೂ ತಮ್ಮದೇ ಆದ ಆನ್‌ಲೈನ್ ಐಡೆಂಟಿಟಿ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿಕೊಳ್ಳುವ ಅವಕಾಶಗಳು ದೊರೆಯತೊಡಗಿವೆ. ಇತ್ತೀಚೆಗೆ ಸೋಷಿಯಲ್ ಮೀಡಿಯಾ ಅಂತರ್ಜಾಲ ಬಳಕೆದಾರರ ಅವಶ್ಯಕತೆ ಇರುವುದಷ್ಟೇ ಅಲ್ಲ ಅವು ಒಂದಿಡೀ ಸಮಾಜದ ಅಭಿಪ್ರಾಯ ರೂಪಿಸುವ, ಆಳುವ ಸರ್ಕಾರದ ಅಳಿವು ಉಳಿವಿನ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವನ್ನೂ ಹೊಂದಿವೆ.

ಸಾಮಾಜಿಕ ಮಾಧ್ಯಮಗಳೆಂದರೆ ಏನು ಎಂಬುದನ್ನು ವ್ಯಾಖ್ಯಾನಿಸುವುದು ಸುಲಭವಲ್ಲ. ಇವು ಜನರು ಭಾಗಿಗಳಾಗಿ ಚರ್ಚಿಸುವ ಮತ್ತು ಮಾಹಿತಿ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಅಂತರ್ಜಾಲ ಜಾಲತಾಣಗಳಾಗಿವೆ ಎಂಬುದಾಗಿ ಸುಲಭದಲ್ಲಿ ಹೇಳಬಹುದು. ಆದರೆ ಒಂದೊಂದು ಸಾಮಾಜಿಕ ಮಾಧ್ಯಮ ಜಾಲತಾಣವೂ ಒಂದೊಂದು ರೀತಿಯ ವಿಭಿನ್ನ ಸೇವೆಗಳನ್ನು ನೀಡುವುದರಿಂದಾಗಿ ಅವುಗಳೆಲ್ಲವನ್ನೂ ಒಂದೇ ಕಡೆ ಇಟ್ಟು ವ್ಯಾಖ್ಯಾನಿಸುವುದು ಕಷ್ಟಕರ. ಉದಾಹರಣೆಗೆ ನೋಡಿ: ಫ್ಲೇಸ್‌ಬುಕ್, ಬ್ಲಾಗರ್, ವಿಕಿಪೀಡಿಯಾ ಇವೆಲ್ಲವೂ ಸಾಮಾಜಿಕ ಮಾಧ್ಯಮ ಜಾಲತಾಣಗಳೇ ಹೌದು. ಆದರೆ ಫ್ಲೇಸ್‌ಬುಕ್‌ನಲ್ಲಿ ಒಬ್ಬ ವ್ಯಕ್ತಿ ತನ್ನದೇ ಪ್ರೊಫೈಲ್ ರಚಿಸಿ ಸ್ನೇಹಿತರನ್ನು ಸೇರಿಸಿಕೊಳ್ಳಬಹುದು, ಹೊಸ ಗೆಳೆಯರನ್ನು ಹುಡುಕಬಹುದು ಅವರೊಡನೆ ವಿಷಯಗಳನ್ನು ಹಂಚಿಕೊಳ್ಳಬಹುದು, ವೀಡಿಯೋಗಳನ್ನು ಅಪ್‌ಲೋಡ್ ಮಾಡಬಹುದು. ಬ್ಲಾಗರ್‌ನಲ್ಲಿ ಕಥೆ, ಕವಿತೆ, ಲೇಖನಗಳನ್ನು ಬರೆದು ಪ್ರಕಟಿಸುವುದು, ಫೋಟೊ, ವೀಡಿಯೋಗಳನ್ನು ಪ್ರಕಟಿಸುವುದು ಮತ್ತು ಚರ್ಚೆ ಮಾಡುವುದು ಸಾಧ್ಯವಿದೆ. ಅಂತರ್ಜಾಲದ ಆಗಮನದೊಡನೆ ಮಾಹಿತಿ ಮಹಾಪೂರವೇ ಹರಿಯತೊಡಗಿದೆ. ಕೇವಲ ಒಂದು ದಿಕ್ಕಿನ ಮಾಹಿತಿ ಹರಿಯುವಿಕೆ ಸಾಕಾಗುತ್ತಿಲ್ಲ ಎನ್ನುವ ಹಾಗೆ ಸಂಭಾಷಣೆ, ಚರ್ಚೆಗಳೂ ಸಹಿತ ಪ್ರಾರಂಭವಾಗಿವೆ. ಅದಷ್ಟೇ ಅಲ್ಲ, ಪ್ರತಿಯೊಬ್ಬರಿಗೂ ತಮ್ಮದೇ ಆದ ಆನ್‌ಲೈನ್ ಐಡೆಂಟಿಟಿ ಮತ್ತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿಕೊಳ್ಳುವ ಅವಕಾಶಗಳು ದೊರೆಯತೊಡಗಿವೆ. ಆದರೆ ವಿಕಿಪೀಡಿಯಾದಲ್ಲಿ ಸ್ನೇಹ–ಸಂಪರ್ಕ ಎಲ್ಲ ಗೌಣ. ಇಲ್ಲಿ ಕೇವಲ ಜಾಗತೀಕವಾಗಿ ಓದುಗರಿಗೆ ಅಗತ್ಯವಾದ ಮಾಹಿತಿಯನ್ನು ಮಾತ್ರ ಹಾಕಬಹುದು ಮತ್ತು ಬೇರೆಯವರು ಹಾಕಿದ ಮಾಹಿತಿಯನ್ನು ಬೆಳೆಸಬಹುದು.

ಸಾಮಾಜಿಕ ಸಂಪರ್ಕ ತಾಣಗಳು ಈಗ ಯುವ ಜನತೆಯಲ್ಲಿ, ಉದ್ಯೋಗಿಗಳಲ್ಲಿ ಮತ್ತು ಉದ್ದಿಮೆಗಳಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಮತ್ತು ಹೆಚ್ಚು ಬಳಸಲ್ಪಡುತ್ತಿರುವ ತಾಣಗಳಾಗಿವೆ. ಇವುಗಳಲ್ಲಿ ನಮ್ಮ ಪ್ರೊಫೈಲ್ ರಚಿಸಿಕೊಳ್ಳಬಹುದು, ಸ್ನೇಹಿತರನ್ನು ಹೊಂದಬಹುದು, ಹೊಸ ಗುಂಪುಗಳನ್ನು ರಚಿಸಬಹುದು ಮತ್ತು ಸೇರಬಹುದು. ಇಷ್ಟೇ ಅಲ್ಲದೇ ಸುದ್ದಿಗಳನ್ನು, ಮನರಂಜನೆಯ ಮಾಹಿತಿಗಳನ್ನು ಹಂಚಿಕೊಳ್ಳಬಹುದು ಮತ್ತು ಅವುಗಳಿಗೆ ಪ್ರತಿಕ್ರಿಯೆ ನೀಡಬಹುದು. ಇದಕ್ಕೆ ಉದಾಹರಣೆ ಫ್ಲೇಸ್‌ಬುಕ್, ಆರ್ಕುಟ್, ಗೂಗಲ್ ಪ್ಲಸ್, ಮುಂತಾದವುಗಳು. ಇದಷ್ಟೇ ಅಲ್ಲದೇ ಪ್ರತಿಯೊಬ್ಬರೂ ತಮ್ಮ ದೇಶ, ಭಾಷೆ, ಊರು, ಆಸಕ್ತಿ ಮುಂತಾದ ಸಂಗತಿಗಳ ಕುರಿತು ತಮ್ಮದೇ ಆದ ಸಾಮಾಜಿಕ ಸಂಪರ್ಕ ತಾಣಗಳನ್ನು, ಗುಂಪುಗಳನ್ನು ರಚಿಸಿಕೊಳ್ಳಬಹುದು.

ಸಾಮಾಜಿಕ ಮಾಧ್ಯಮಗಳಲ್ಲಿ ಬ್ಲಾಗಿಂಗ್‌ಗೆ ಮಹತ್ವದ ಸ್ಥಾನ. ಅಂತರ್ಜಾಲದಲ್ಲಿ ವಿಷಯಗಳನ್ನು ಪ್ರಕಟಪಡಿಸುವುದನ್ನು 'ವೆಬ್ ಲಾಗಿಂಗ್' ಅಥವಾ ಬ್ಲಾಗಿಂಗ್ ಎಂದು ಕರೆಯುತ್ತಾರೆ. ಯಾರು ಬೇಕಾದರೂ ಉಚಿತವಾಗಿ ತಮ್ಮದೇ ಆದ ಬ್ಲಾಗ್ (ಅಂತರ್ಜಾಲ

ಪತ್ರಿಕೆ, ದಿನಚರಿ ಎಂತಲೂ ಕರೆಯಬಹುದು.) ರಚಿಸಿಕೊಂಡು ತಮ್ಮದೇ ಆದ ವಿಚಾರಗಳನ್ನು, ಸೃಜನಶೀಲ ಬರಹಗಳನ್ನು, ಫೋಟೋ, ವೀಡಿಯೋಗಳನ್ನು ಪ್ರಕಟಿಸಬಹುದು. ಬ್ಲಾಗ್ ಪೋಸ್ಟ್‌ಗಳು ಎಂದು ಕರೆಯಲ್ಪಡುವ ಈ ಪ್ರಕಟಣೆಗಳನ್ನು ಆಸಕ್ತರು ಓದಬಹುದು, ಪ್ರತಿಕ್ರಿಯೆ ನೀಡಬಹುದು ಮತ್ತು ಸಾಮಾಜಿಕ ತಾಣಗಳಲ್ಲಿ ಹಂಚಿಕೊಳ್ಳಬಹುದು. ಈ ಬ್ಲಾಗಿಂಗ್ ಸೇವೆ ನೀಡುತ್ತಿರುವ ಪ್ರಮುಖ ತಾಣಗಳೆಂದರೆ ವರ್ಡ್‌ಪ್ರೆಸ್, ಬ್ಲಾಗರ್, ಕನ್ನಡದ ಸಂಪದ ಇತ್ಯಾದಿಗಳು.

ಕಠಿಣ ಪದಗಳು

೧. ಸೈದ್ಧಾಂತಿಕ
೨. ತಾಂತ್ರಿಕ
೩. ಸಂವಾದಾತ್ಮಕ
೪. ಸಹ ಸಂವಾದಿ
೫. ಸಂಜ್ಞಾ ಪದ್ಧತಿ

ಅಭ್ಯಾಸ ೪

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.
೧. ಸಂವಹನ ಪದದ ಮೂಲವನ್ನು ತಿಳಿಸಿ.
೨. ಸಂವಹನ ಎಂದರೇನು?
೩. ಸಾಮಾಜಿಕ ಸಂವಹನಕ್ಕೆ ನೆರವಾಗುವ ಸಾಮಾಜಿಕ ಮಾಧ್ಯಮಗಳನ್ನು ತಿಳಿಸಿ.
೪. ಸಾಮಾಜಿಕ ಮಾಧ್ಯಮ ದಿನವನ್ನು ಎಂದು ಆಚರಿಸುತ್ತಾರೆ?
೫. ಕೊರೋನಾ ಸಾಂಕ್ರಾಮಿಕ ಸಮಯದಲ್ಲಿ ಸಾಮಾಜಿಕ ಜಾಲತಾಣದ ಕೊಡುಗೆಯೇನು?
೬. ಸಾಮಾಜಿಕ ಮಾಧ್ಯಮ ಎಂದರೇನು?
೭. ಸಾಮಾಜಿಕ ಮಾಧ್ಯಮ ಬಳಕೆಯ ಕುರಿತು ತಿಳಿಸಿ.

೧೨.೬. ಬ್ಲಾಗ್ ಮತ್ತು ಅಂಕಣ ಬರಹ

ಬ್ಲಾಗ್‌ಗಳ ಸ್ವರೂಪ, ಬ್ಲಾಗ್ ಬರಹಗಳು

ಇತ್ತೀಚೆಗಿನ ದಿನಗಳಲ್ಲಿ ತುಂಬ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ ಪದ 'ಬ್ಲಾಗ್'. ಅದರ ಹಲವು ಪ್ರತ್ಯಯಗಳೇ ಬ್ಲಾಗಿಂಗ್, ಬ್ಲಾಗರ್, ಇತ್ಯಾದಿ. ಈ ಬ್ಲಾಗ್ ಎಂದರೆ ಏನು? ಪವನಜರ ಮಾತಿನಲ್ಲಿ ಹೇಳುವುದಾದರೆ 'ಬ್ಲಾಗ್ ಎಂದರೆ ಒಂದು ರೀತಿಯಲ್ಲಿ ಸಾರ್ವಜನಿಕ ಸ್ವಗತ ಎನ್ನಬಹುದು. ಎಲ್ಲರಿಗೂ ಓದಲು ಅನುಕೂಲವಾಗುವಂತೆ ಅಂತರ್ಜಾಲದಲ್ಲಿ (ಇಂಟರ್‌ನೆಟ್‌ನಲ್ಲಿ) ಇಟ್ಟಂತಹ ತೆರೆದ ದಿನಚರಿ ಅಥವಾ ಡೈರಿ ಎಂದೂ ಕರೆಯಬಹುದು. ಬ್ಲಾಗ್‌ನ ಕ್ರಿಯಾರೂಪವೇ ಬ್ಲಾಗಿಂಗ್ ಅಂದರೆ ಬ್ಲಾಗ್ ನಡೆಸುವ ಕ್ರಿಯೆ. ಬ್ಲಾಗರ್ ಎಂದರೆ ಬ್ಲಾಗ್ ಬರೆಯುವ ವ್ಯಕ್ತಿ'.

ಬ್ಲಾಗ್ ಎನ್ನುವುದು ವೆಬ್‌ಲಾಗ್ (weblog) ಎನ್ನುವ ಪದದಿಂದ ವ್ಯುತ್ಪತ್ತಿಯಾಗಿದೆ. ಇದನ್ನು ಮೊತ್ತಮೊದಲು ಜಾನ್ ಬಾರ್ಗರ್ ಎಂದವರು ೧೯೯೭ರಲ್ಲಿ ಬಳಸಿದರು.

ಪೀಟರ್ ಮಹೋರ್ಲ್ಟ್ ಅವರು ೧೯೯೯ರಲ್ಲಿ ಇದನ್ನು ವಿ ಬ್ಲಾಗ್ (we blog) ಎಂಬುದಾಗಿ ವಿಭಜಿಸಿದರು. ಎಂದರೆ ನಾವು ಬ್ಲಾಗ್ ಮಾಡುತ್ತಿದ್ದೇವೆ ಎಂಬ ಅರ್ಥದಲ್ಲಿ. ತದನಂತರ ಬ್ಲಾಗ್ ಎನ್ನುವುದು ನಾಮಪದ ಮತ್ತು ಕ್ರಿಯಾಪದವಾಗಿ ಬಳಕೆಯಾಗತೊಡಗಿತು. ೨೦೦೧ರ ನಂತರದಲ್ಲಿ ಬ್ಲಾಗ್ ಜನಪ್ರಿಯವಾಗ ತೊಡಗಿತಾದರೂ ೨೦೦೩ರಲ್ಲಿ ಹಲವು ಉಚಿತ ಬ್ಲಾಗಿಂಗ್ ತಾಣಗಳು ಅವತರಿಸಿ ಬ್ಲಾಗಿಂಗ್ ಮನೆಮಾತಾಗುವಂತಾಯಿತು. ಇವನ್ನು ಜಾಲತಾಣಗಳೆಂದು ಕರೆಯುವುದಕ್ಕಿಂತ ಆನ್‌ಲೈನ್ ದಿನಚರಿಗಳೆಂದು ಕರೆಯುವುದೇ ಸೂಕ್ತ. ನಾವು ಓದಿದ ಪುಸ್ತಕ, ಇಷ್ಟವಾದ ತಿಂಡಿ, ಇಷ್ಟವಾಗದ ಚಲನಚಿತ್ರಗಳಿಂದ ಪ್ರಾರಂಭಿಸಿ ನಮ್ಮ ಹವ್ಯಾಸಗಳು, ಬರವಣಿಗೆಗಳು, ಅಭಿಪ್ರಾಯಗಳು – ಹೀಗೆ ನಮ್ಮ ಮನಸ್ಸಿಗೆ ಬಂದ ಯಾವುದೇ ವಿಷಯವನ್ನು ಬ್ಲಾಗುಗಳ ಮೂಲಕ ಅತ್ಯಂತ ಸುಲಭವಾಗಿ ಇಡೀ ಜಗತ್ತಿನೊಡನೆ ಹಂಚಿಕೊಳ್ಳಬಹುದು.

ಹೊಸತೊಂದು ಬ್ಲಾಗನ್ನು ಸೃಷ್ಟಿಸಿಕೊಳ್ಳುವುದು ನಮಗೊಂದು ಇಮೇಲ್ ವಿಳಾಸ ಪಡೆದುಕೊಂಡಷ್ಟೇ ಸುಲಭ! ಬ್ಲಾಗರ್, ವರ್ಡ್‌ಪ್ರೆಸ್ ಮುಂತಾದ ಯಾವುದೇ ತಾಣಕ್ಕೆ ಹೋಗಿ ಅವರು ಕೇಳುವ ಒಂದಷ್ಟು ಮಾಹಿತಿ ಕೊಟ್ಟು ನೋಂದಾಯಿಸಿಕೊಂಡರೆ ಸಾಕು, ನಮ್ಮದೇ ಆದ ಬ್ಲಾಗು ಸಿದ್ಧವಾಗುತ್ತದೆ. ನಾವು ನಮ್ಮ ಬ್ಲಾಗಿಗೆ ಮಾಹಿತಿ ಸೇರಿಸುತ್ತಿದ್ದಂತೆ ಅದನ್ನು ಎಲ್ಲರೂ ನೋಡುವುದು ಸಾಧ್ಯವಾಗುತ್ತದೆ. ಅಷ್ಟೇ ಅಲ್ಲ, ಓದುಗರಿಗೆ ಇಷ್ಟವಾದ, ಇಷ್ಟವಾಗದ ವಿಷಯಗಳ ಬಗ್ಗೆ ಅವರ ಪ್ರತಿಕ್ರಿಯೆ ದಾಖಲಿಸಲೂ ಬ್ಲಾಗುಗಳು ಅನುವು ಮಾಡಿಕೊಡುತ್ತವೆ.

ಬ್ಲಾಗ್ ಬಗ್ಗೆ ಈಗ ಇನ್ನಷ್ಟು ವಿವರಗಳನ್ನು ನೋಡೋಣ. ಅಂತರ್ಜಾಲದಲ್ಲಿ ಕೋಟಿಗಟ್ಟಲೆ ತಾಣಗಳಿವೆ (ವೆಬ್‌ಸೈಟ್). ಈ ತಾಣಗಳಿಗೂ ಬ್ಲಾಗ್‌ಗಳಿಗೂ ಇರುವ ವ್ಯತ್ಯಾಸವೇನು? ನಿಜವಾಗಿ ನೋಡಿದರೆ ಬ್ಲಾಗ್ ಕೂಡ ಒಂದು ಅಂತರ್ಜಾಲ ತಾಣವೇ. ಆದರೆ ಒಂದು ವಿಧದ ತಾಣಗಳನ್ನು ಮಾತ್ರ ಬ್ಲಾಗ್ ಎಂದು ಕರೆಯಲಾಗುತ್ತದೆ, ಬ್ಲಾಗ್‌ನ ಲಕ್ಷಣಗಳು ಅವು ನಿಯಮಿತವಾಗಿ ಹೊಸ ಬರವಣಿಗೆಗಳನ್ನು ಸೇರಿಸುತ್ತಿರಬೇಕು, ಅವುಗಳನ್ನು ಸೇರಿಸಿದ ದಿನಾಂಕ ಪ್ರಕಾರ ಅಳವಡಿಸಿರಬೇಕು, ಇದರಲ್ಲಿ ಕೊನೆಯ ಬರೆವಣಿಗೆ ಮೊದಲು ಲಭ್ಯವಾಗುವಂತೆ ಇರುತ್ತದೆ. ಬ್ಲಾಗ್‌ನಲ್ಲಿ ಸೇರಿಸಲ್ಪಡುವ ಲೇಖನಕ್ಕೆ ಪೋಸ್ಟ್ ಅಥವಾ ಪೋಸ್ಟಿಂಗ್ ಎನ್ನುತ್ತಾರೆ, ಈ ಪೋಸ್ಟಿಂಗ್‌ಗೆ ಒಂದು ಶೀರ್ಷಿಕೆ, ಸೇರಿಸಿದ ದಿನಾಂಕ, ಮುಖ್ಯ ಬರಹ ಅಥವಾ ಲೇಖನ, ವಿಷಯ ಇತ್ಯಾದಿ ಲಕ್ಷಣಗಳಿರುತ್ತವೆ. ಈ ಪೋಸ್ಟಿಂಗ್‌ನ ಕೆಳಗೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯವಿರುತ್ತದೆ. ಇಷ್ಟಲ್ಲದೆ ಈ ಬ್ಲಾಗ್‌ಗಳಿಗೆ ಆರ್.ಎಸ್.ಎಸ್. ಸೌಲಭ್ಯವೂ ಇದೆ. ಆರ್.ಎಸ್.ಎಸ್. ಎಂದರೆ ರಿಯಲಿ ಸಿಂಪಲ್ ಸಿಂಡಿಕೇಶನ್ ಎನ್ನುವುದರ ಸಂಕ್ಷಿಪ್ತ ರೂಪ. ಆರ್.ಎಸ್.ಎಸ್. ರೀಡರ್ ಎಂಬ ಹೆಸರಿನ ತಂತ್ರಾಂಶವನ್ನು (ಸಾಫ್ಟ್ ವೇರ್) ಗಣಕಗಳಲ್ಲಿ (ಕಂಪ್ಯೂಟರ್) ಅಳವಡಿಸಿಕೊಂಡರೆ ಈ ಬ್ಲಾಗ್‌ಗಳನ್ನು ಗಣಕಕ್ಕೆ ಇಮೈಲ್‌ಗಳನ್ನು ಇಳಿಸಿಕೊಂಡಂತೆ ಇಳಿಸಿಕೊಂಡು ಅಂತರಜಾಲ ಸಂಪರ್ಕ ಕಡಿದ ಮೇಲೂ ಓದಬಹುದು. ಬ್ಲಾಗ್ ಸುಲಭವಾಗಿ ಹೊಸ ಪುಟವನ್ನು ಸೇರಿಸುವ ಸೌಲಭ್ಯವನ್ನು ಹೊಂದಿದೆ. ಮಾಮೂಲಿ ಅಂತರ್ಜಾಲ ತಾಣಗಳಿಗೆ ಈ ಸೌಲಭ್ಯವಿರುವುದಿಲ್ಲ, ಹೊಸ ಪೋಸ್ಟಿಂಗ್ ಸಾಮಾನ್ಯವಾಗಿ ಪುಟದ ಮೇಲೆ ತೋರುತ್ತದೆ. ಇನ್ನೊಂದು ಹೊಸ ಪೋಸ್ಟಿಂಗ್ ಬಂದಾಗ ಹಳೆಯ ಪೋಸ್ಟಿಂಗ್ ತನಗೆ ತಾನೆ ಕೆಳಗೆ ತಳ್ಳಲ್ಪಡುತ್ತದೆ. ಟೀಕೆಯ ಕೆಳಗೆ ಇತರೆ ಓದುಗರು

ಟೀಕೆಗೆ ತಂತಮ್ಮ ಟೀಕೆಗಳನ್ನು ಸೇರಿಸಬಹುದು, ಕೆಲವೊಮ್ಮೆ ಈ ಸರಪಣಿ ದೊಡ್ಡ ಚರ್ಚೆ ಅಥವಾ ವಾಗ್ವಾದವಾಗುವುದೂ ಇದೆ. ಎಲ್ಲ ಅಂತರ್ಜಾಲ ತಾಣಗಳಿಗಿರುವಂತೆ ಬಾಗ್‌ಗಳಿಗೂ ಇತರ ತಾಣಗಳು ಅಥವಾ ಬ್ಲಾಗ್‌ಗಳಿಗೆ ಕೊಂಡಿ ನೀಡುವ ಸೌಲಭ್ಯವಿದೆ. ಸರಳವಾಗಿ ಹೇಳಬೇಕೆಂದರೆ ಬ್ಲಾಗ್ ಒಬ್ಬ ವ್ಯಕ್ತಿಯ ವೈಯಕ್ತಿಕ ಅನಿಸಿಕೆಗಳನ್ನು ಜಗತ್ತಿಗೆಲ್ಲ ತಿಳಿಯುವಂತೆ ಸಾರ್ವಜನಿಕವಾಗಿ ಬರೆಯುವ ವ್ಯವಸ್ಥೆ.

ಯಾವ ಯಾವ ರೀತಿಯ ಬ್ಲಾಗ್‌ಗಳಿವೆ ಎಂಬುದನ್ನು ವೀಕ್ಷಿಸಿ ನೋಡಿದರೆ ನಮಗೆ ಅಂತರ್ಜಾಲದಲ್ಲಿ ಎಷ್ಟು ವೈವಿಧ್ಯದ ತಾಣಗಳಿವೆಯೋ ಅಷ್ಟೇ ವೈವಿಧ್ಯ ಬ್ಲಾಗ್‌ಗಳಲ್ಲೂ ಇರುವುದು ಗೋಚರವಾಗುತ್ತದೆ. ಬ್ಲಾಗ್‌ಗಿಗರಲ್ಲಿ ಬಹುಪಾಲು ಮಂದಿ ತಮ್ಮ ಹೊತ್ತು ಕಳೆಯಲು ಅಥವಾ ಏನಾದರೂ ಹೇಳಬೇಕು ಎನ್ನುವ ತುಡಿತ ತೀರಿಸಿಕೊಳ್ಳಲು ಬ್ಲಾಗಿಂಗ್ ಮಾಡುತ್ತಿದ್ದಾರೆ. ಹಾಗಿದ್ದರೂ ಇವರ ಬ್ಲಾಗ್‌ಗಳಲ್ಲಿ ಹಲವು ಉಪಯುಕ್ತ ಮಾಹಿತಿಗಳು ದೊರೆಯುವ ಸಾಧ್ಯತೆಗಳಿವೆ. ಬ್ಲಾಗ್ ಮಾಡುತ್ತಿರುವವರು ವಿಜ್ಞಾನಿ, ತಂತ್ರಜ್ಞಾನಿ, ಕಥೆಗಾರ ಅಥವಾ ಸಾಹಿತಿಯಾಗಿದ್ದರಂತೂ ಓದುಗರಿಗೆ ಅದು ಒಂದು ಬೋನಸ್ ಎನ್ನಬಹುದು. ಪರಿಣತರಾದ ತಂತ್ರಜ್ಞರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಆಗುತ್ತಿರುವ ಹೊಸ ಸಂಶೋಧನೆಗಳ ಬಗ್ಗೆ ಪೂರ್ವಭಾವಿಯಾಗಿ ಬ್ಲಾಗ್ ಬರೆಯುವ ಮೂಲಕ ಈ ವಿಷಯಗಳಲ್ಲಿ ಆಸಕ್ತಿ ಇರುವವರಿಗೆ ಮಾಹಿತಿ ಬೇಗನೆ ಸಿಗುವಂತಾಗುತ್ತದೆ. ಕೆಲವು ತಂತ್ರಜ್ಞರು ತಮ್ಮ ಕ್ಷೇತ್ರದ ಬಗ್ಗೆ ಕೆಲವು ಉಪಯುಕ್ತ ಸಲಹೆಗಳ ಕಿವಿಮಾತುಗಳನ್ನೂ ತಮ್ಮ ಬ್ಲಾಗ್‌ಗಳಲ್ಲಿ ನೀಡುತ್ತಿರುತ್ತಾರೆ. ಪವನಜ ಅವರು ಕನ್ನಡ ಮತ್ತು ಗಣಕ ಸಂಬಂಧಿ ಸಲಹೆ ಸೂಚನೆಗಳನ್ನು ಆಗಾಗ ಅವರ ಬ್ಲಾಗ್‌ನಲ್ಲಿ ನೀಡುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಬ್ಲಾಗ್‌ಗಳಿಗೆ ತಮ್ಮದೇ ಆದ ಮಹತ್ವ ಇದೆ.

ಅಂತರ್ಜಾಲದಲ್ಲಿ, ಹೆಚ್ಚು ಮಂದಿಯ ಬ್ಲಾಗ್‌ಗಳು ಇರುವುದು ಉಚಿತ ತಾಣಗಳಲ್ಲಿ; ಅಲ್ಲಿ ಜಾಗದ ಕೊರತೆ ಇಲ್ಲ. ಲೇಖನವೊಂದಕ್ಕೆ ಇಂತಿಷ್ಟೇ ಪದಗಳಿರಬೇಕೆಂಬ ಮಿತಿಯೂ ಇಲ್ಲ. ಸಂಪಾದಕರ ಅಂಕುಶ ಕತ್ತರಿಗಳಿಲ್ಲ. ಬರೆಯಬೇಕೆನಿಸಿದ್ದನ್ನು ನೇರವಾಗಿ ಜಾಲತಾಣದಲ್ಲಿ ದಾಖಲಿಸುವುದರಿಂದ ಬರೆದ ನಂತರ ಅದು ಪ್ರಕಟವಾಗುವ ನಡುವಿನ ಸಮಯ ಉಳಿತಾಯವಾಗುತ್ತದೆ. ಇಲ್ಲಿ ಎಲ್ಲವೂ ಫಾಸ್ಟ್ ಫುಡ್‌ಗಳಂತೆ ಕ್ಷಣಕ್ಷಣದ ವ್ಯವಹಾರ. ಲೇಖನಕ್ಕೆ ಸಂಬಂಧಿಸಿದಂತೆ ಛಾಯಾಚಿತ್ರಗಳಿದ್ದರೆ ಅವುಗಳನ್ನೂ ಜಾಲತಾಣಕ್ಕೆ ಸೇರಿಸಬಹುದು; ನೇರವಾಗಿ ಘಟನೆ ನಡೆಯುತ್ತಿರುವ ಸ್ಥಳದಿಂದಲೇ ಲೇಖನವನ್ನು ಅಂತರ್ಜಾಲಕ್ಕೆ ಸೇರಿಸಬಹುದು; ಕೇವಲ ಲ್ಯಾಪ್‌ಟಾಪ್ ಮತ್ತು ಅಂತರ್ಜಾಲ ಸಂಪರ್ಕ ಇದ್ದರೆ ಸಾಕು. ಈಗೀಗ ಮಾರುಕಟ್ಟೆಯಲ್ಲಿ ಲಭ್ಯವಾಗುತ್ತಿರುವ ಕೆಲವು ಅತ್ಯಾಧುನಿಕ ಮೊಬೈಲ್ ಫೋನುಗಳಿಂದ ಕೂಡ ನೇರವಾಗಿ ಈ ಎಲ್ಲಾ ಕೆಲಸಗಳನ್ನು ನಡೆಸಬಹುದು. ಬ್ಲಾಗಿಂಗ್‌ಗೆ ಇರುವ ಇನ್ನೊಂದು ಅತಿ ಮುಖ್ಯವಾದ ಸವಲತ್ತೆಂದರೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯ. ಆದರೆ ಇದು ಪ್ರತಿಸ್ಪಂದನಾತ್ಮಕ ಅಂತರ್ಜಾಲದಲ್ಲಿ ಮಾತ್ರ ಸಾಧ್ಯ.

ಹಾಗಾದರೆ ಎಲ್ಲ ಬ್ಲಾಗ್‌ಗಳೂ ಪತ್ರಿಕೋದ್ಯಮವೇ? ಯಾವುದಾದರೊಂದು ಪ್ರಮುಖ ಘಟನೆ ಬಗ್ಗೆ ಆ ಘಟನೆ ಜರುಗಿದ ಸ್ಥಳದಿಂದ ಯಾರಾದರೂ ನೇರವಾಗಿ ವರದಿ ರೂಪದಲ್ಲಿ ಬರೆದ ಬರಹಗಳು, ಅಂತರ್ಜಾಲದಲ್ಲಿರುವ ಇತರ ಸುದ್ದಿಗಳಿಗೆ ಕೊಂಡಿ ನೀಡುವ ಬರಹಗಳು ಮುಂತಾದವುಗಳನ್ನು ಬ್ಲಾಗ್ ಪತ್ರಿಕೋದ್ಯಮ ಎನ್ನಬಹುದು.

ಬ್ಲಾಗುಗಳು ಇಂದು ಅಭೂತಪೂರ್ವ ಯಶಸ್ಸು ಗಳಿಸಿಕೊಂಡಿರುವುದು ತಮ್ಮ ಈ ಸರಳತೆಯಿಂದಾಗಿಯೇ. ಹೀಗಾಗಿ ಇಂದು ಕನ್ನಡವೂ ಸೇರಿದಂತೆ ಬಹುತೇಕ ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಬ್ಲಾಗ್‌ಗಳು ಜನಪ್ರಿಯವಾಗಿವೆ.

ಸುಮಾರು ೧೯೯೦ರ ದಶಕದ ಮಧ್ಯಭಾಗದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭವಾದ ಬ್ಲಾಗ್‌ಗಳು ಹೆಚ್ಚಿನ ಜನಪ್ರಿಯತೆ ಗಳಿಸಿಕೊಂಡದ್ದು ಈ ಶತಮಾನದ ಪ್ರಾರಂಭದಲ್ಲಿ. ಇದಾದ ಒಂದೆರಡು ವರ್ಷಗಳ ಅವಧಿಯಲ್ಲೇ ಕನ್ನಡದಲ್ಲೂ ಬ್ಲಾಗ್‌ಗಳು ನಿರ್ಮಾಣವಾದವು. ಕೃಷ್ಣನಂದ ಕಾಮತರ ಪುತ್ರ ವಿಕಾಸ ಕಾಮತರು ೨೦೦೩ರಲ್ಲೇ ತಮ್ಮ ಜಾಲತಾಣದಲ್ಲಿ ಕನ್ನಡ ಬ್ಲಾಗನ್ನು ಪ್ರಾರಂಭಿಸಿದ್ದರು. ಅಲ್ಲಿನ ಬರಹಗಳು ಚಿತ್ರರೂಪದಲ್ಲಿರುತ್ತಿದ್ದವು. ಮುಂದೆ ಕನ್ನಡ ಯುನಿಕೋಡ್ ಸೌಲಭ್ಯ ಲಭ್ಯವಾದಾಗ ಬ್ಲಾಗ್‌ಗಳ ಮೂಲಕ ಮಾಹಿತಿ ಸಂವಹನ ನಡೆಸುವುದು ಇನ್ನಷ್ಟು ಸುಲಭವಾಯಿತು. ಆ ವೇಳೆಗಾಗಲೇ ಪ್ರಸಿದ್ಧವಾಗಿದ್ದ ಬರಹ ಹಾಗೂ ನುಡಿ ತಂತ್ರಾಂಶಗಳು ಸುಲಭವಾಗಿ ಯುನಿಕೋಡ್ ಪಠ್ಯವನ್ನು ಬೆರಳಚ್ಚಿಸಲು ಅನುವು ಮಾಡಿಕೊಟ್ಟಿದ್ದು ಕನ್ನಡದಲ್ಲಿ ಹೊಸಹೊಸ ಬ್ಲಾಗ್‌ಗಳು ತಯಾರಾಗಲು ಪರೋಕ್ಷ ಪ್ರೇರಣೆಯನ್ನು ಒದಗಿಸಿತು.

ಯು.ಬಿ. ಪವನಜ, ಹರಿಪ್ರಸಾದ್ ನಾಡಿಗ್, ಪಿ.ಎಂ. ಕೃಷ್ಣರಾಜ್, ಎಂ.ಎಸ್. ಶ್ರೀರಾಮ್, ಶೇಷಾದ್ರಿ, ಸತೀಶ್ ಕುಮಾರ್ ಮುಂತಾದ ಅನೇಕರು ಕನ್ನಡದಲ್ಲಿ ಬ್ಲಾಗಿಸಲು ಪ್ರಾರಂಭಿಸಿದರು. ಹರಿಪ್ರಸಾದ್ ನಾಡಿಗ್ ೨೦೦೫ರಲ್ಲಿ ಸಂಪದ ಎಂಬ ಸಮುದಾಯತಾಣವನ್ನು ಪ್ರಾರಂಭಿಸಿದ ಮೇಲೆ ಕನ್ನಡ ಬ್ಲಾಗುಗಳಿಗೊಂದು ಪ್ರಭಾವಶಾಲಿ ವೇದಿಕೆಯೂ ದೊರೆಯಿತು. ಕನ್ನಡಕ್ಕಾಗಿಯೇ ಇರುವ, ಈಗಾಗಲೇ ಮೂರು ಸಾವಿರಕ್ಕೂ ಹೆಚ್ಚು ಬಳಕೆದಾರರನ್ನು ಹೊಂದಿರುವ ಈ ತಾಣದಲ್ಲಿ ನೋಂದಾಯಿಸಿಕೊಂಡ ಯಾರು ಬೇಕಿದ್ದರೂ ಕನ್ನಡ ಬ್ಲಾಗ್‌ಗಳನ್ನು ಪ್ರಾರಂಭಿಸ ಬಹುದು. ಈಗಂತೂ ಲೇಖಕರು, ಪತ್ರಕರ್ತರು, ಅಂಕಣಕಾರರು, ತಂತ್ರಜ್ಞರು, ಹವ್ಯಾಸಿ ಬರಹಗಾರರು, ವಿವಿಧ ವಿಷಯಗಳ ಪರಿಣತರು – ಹೀಗೆ ಅನೇಕರು ಬ್ಲಾಗ್ ಪ್ರಪಂಚದಲ್ಲಿ ಸಕ್ರಿಯರಾಗಿ ಕನ್ನಡದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆ ನೀಡುತ್ತಿದ್ದಾರೆ. ಕನ್ನಡದಲ್ಲಿ ಬರೆದ ಸಾವಿರಾರು ಬ್ಲಾಗುಗಳು ಒಟ್ಟಾರೆಯಾಗಿ ಜಾಲಲೋಕದಲ್ಲಿ ಕನ್ನಡದ ಬೆಳವಣಿಗೆಗೆ ತಮ್ಮ ಕೊಡುಗೆ ನೀಡುತ್ತಿವೆ. ಈ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ಕನ್ನಡ ತಾಣಗಳಿಗೆ 'ಬರಹ ಕನ್ನಡಲೋಕ' ಒಂದು ಉದಾಹರಣೆ. ಆ ತಾಣದಲ್ಲಿ ನೋಂದಾಯಿಸಿಕೊಂಡಿರುವ ಕನ್ನಡದ ಬ್ಲಾಗ್‌ಗಳಲ್ಲಿ ಹೊಸದಾಗಿ ಏನೆಲ್ಲ ಲೇಖನಗಳು ಪ್ರಕಟವಾಗುತ್ತಿವೆ ಎನ್ನುವುದನ್ನು ನಾವು ಅಲ್ಲಿ ನೋಡಬಹುದು.

ಬ್ಲಾಗ್‌ಗಳಲ್ಲಿ ಪ್ರಕಟವಾಗುವ ಮಾಹಿತಿಯ ಕೊಂಡಿಯನ್ನು ಫ಼ೇಸ್‌ಬುಕ್ ಮೂಲಕ ಹಂಚಿಕೊಳ್ಳುವ ಅಭ್ಯಾಸವೂ ವ್ಯಾಪಕವಾಗಿದೆ. ವೈಯಕ್ತಿಕ ಪ್ರೊಫ಼ೈಲುಗಳಲ್ಲಷ್ಟೇ ಅಲ್ಲದೆ ಫ಼ೇಸ್‌ಬುಕ್‌ನಲ್ಲಿ ನಮ್ಮ ಬ್ಲಾಗ್‌ಗೆಂದೇ ವಿಶೇಷ ಪುಟಗಳನ್ನು ರೂಪಿಸಿಕೊಳ್ಳುವ ಸಾಧ್ಯತೆಯೂ ಇದೆ. ನಮ್ಮ ಬ್ಲಾಗಿನಲ್ಲಿ ಪ್ರಕಟವಾದ ಮಾಹಿತಿಯ ಕೊಂಡಿ ನೇರವಾಗಿ ಫ಼ೇಸ್‌ಬುಕ್ ಪುಟದಲ್ಲೂ ಕಾಣಿಸಿಕೊಳ್ಳುವಂತೆ ಮಾಡುವ ಸೇವೆಗಳೂ ಲಭ್ಯವಿವೆ.

ಮೈಕ್ರೋಬ್ಲಾಗಿಂಗ್

ಇತ್ತೀಚೆಗೆ ಜಗತ್ಪ್ರಸಿದ್ಧವಾಗಿರುವ ಸೇವೆಗಳಲ್ಲಿ ಮೈಕ್ರೋಬ್ಲಾಗಿಂಗ್ ಮುಖ್ಯವಾದುದು. ಬ್ಲಾಗಿಂಗ್ ತಾಣಗಳಲ್ಲಿ ಎಷ್ಟು ಬೇಕಾದರೂ ಬರೆಯಬಹುದು. ಆದರೆ ಈ ಮೈಕ್ರೋಬ್ಲಾಗಿಂಗ್

ನಲ್ಲಿ ಕೆಲವೇ ಅಕ್ಷರಗಳ ಮಿತಿಯಲ್ಲಿ (ಉದಾಹರಣೆಗೆ, ಟ್ವಿಟರ್‌ನಲ್ಲಿ ಕೇವಲ ೧೪೦ ಅಕ್ಷರಗಳು) ಬ್ಲಾಗ್ ಮಾಡಬೇಕಾಗುತ್ತದೆ. ಇದನ್ನು ಹೊಸ ಮಾಹಿತಿ ಹಾಗೂ ತಕ್ಷಣದ ಸುದ್ದಿಯನ್ನಾಗಿ ಜಗತ್ತಿಗೆ ತಿಳಿಸಲು ಬಳಸುತ್ತಾರೆ. ಫ್ಲೇಸ್‌ಬುಕ್, ಟಂಬ್ಲರ್ ಮತ್ತು ಗೂಗಲ್ ಪ್ಲಸ್‌ನಲ್ಲಿಯೂ ಮೈಕ್ರೋಬ್ಲಾಗಿಂಗ್ ಮಾಡಬಹುದು. ಇಂದು ಟ್ವಿಟರ್ ಅನ್ನು ಸಿನೆಮಾ, ಕ್ರೀಡಾ ತಾರೆಗಳು, ಸುದ್ದಿ ಮಾಧ್ಯಮಗಳು, ವೃತ್ತಿಪರ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳು ಬಳಸುತ್ತಿದ್ದಾರೆ ಅಷ್ಟೇ ಅಲ್ಲದೇ ಉದ್ದಿಮೆಗಳು, ಸಂಘ–ಸಂಸ್ಥೆಗಳೂ ನಿರಂತರವಾಗಿ ಬಳಸುತ್ತಿವೆ.

ಅಂಕಣ ಬರಹ

ಇದೊಂದು ವಿಶಿಷ್ಟ ಬಗೆಯ ಪತ್ರಿಕಾ ಸಾಹಿತ್ಯ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರೆಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಹಾಗೂ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದೆ. ಅಂಕಣವು ದಿನಪತ್ರಿಕೆ, ನಿಯತಕಾಲಿಕ ಅಥವಾ ಇತರ ಪ್ರಕಟಣೆಗಳ ಒಂದು ಪುನರಾವರ್ತಕ ವಿಭಾಗ ಅಥವಾ ಲೇಖನವಾಗಿರುತ್ತದೆ. ಅಂಕಣಗಳು ಅಂಕಣಕಾರರಿಂದ ಬರೆಯಲ್ಪಡುತ್ತವೆ. ಅದು ಒಂದು ಪ್ರಕಟಣೆಯಲ್ಲಿ ಕ್ರಮಬದ್ಧ ಲೇಖನವಾಗಿರುತ್ತದೆ. ಇಂಗ್ಲಿಷಿನ ಕಾಲಂ ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ ಅಂಕಣ ಎಂಬ ಪದ ಬಳಕೆಯಾಗುತ್ತಿದೆ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ ಅಂಕಣಕಾರ. ಅಂಕಣ ಬರೆಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪ ಹಾಗೂ ಛಾಪನ್ನು ನೀಡಬೇಕಾಗುತ್ತದೆ. ಇದು ಅಂಕಣ ಬರಹದ ಒಂದು ಮುಖ್ಯ ಲಕ್ಷಣವಾಗಿದೆ. ಕೆಲವೊಮ್ಮೆ ಅಂಕಣ ಬರಹಗಳು ಜನಸಾಮಾನ್ಯರ ಅಭಿಪ್ರಾಯಗಳ ಧ್ವನಿಯಾಗಿರುತ್ತಿದ್ದವು. ಆಧುನಿಕ ಕಾಲದಲ್ಲಿ ಬೆಳೆದ ಅಂಕಣ ಬರಹ ಪತ್ರಿಕೋದ್ಯಮದಲ್ಲಿ ಒಂದು ಚಿರಸ್ಥಾನವನ್ನು ಪಡೆಯಿತಲ್ಲದೆ ಅದಕ್ಕೆ ಒಂದು ಪರಂಪರೆಯೂ ಸೃಷ್ಟಿಯಾಯಿತು. ಅಂಕಣ ಬರೆಹದ ವೈಶಿಷ್ಟ್ಯವೆಂದರೆ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರ ತನಕ ಎಲ್ಲರನ್ನೂ ಆಕರ್ಷಿಸುವ ಗುಣವನ್ನು ಪಡೆದು ಕೊಂಡಿರುವುದೇ ಆಗಿದೆ. ಓದುಗರಲ್ಲಿ ಅಭಿರುಚಿ ಮೂಡಿಸುವ ಕಾರ್ಯವನ್ನು ಅಂಕಣ ಬರಹ ಮಾಡುತ್ತದೆ. ಅಂಕಣ ಬರೆಹಗಳು ಆತ್ಮಕೇಂದ್ರಿತವೆ ಅಥವಾ ಸಮಾಜ, ಸಾಹಿತ್ಯ, ಸಂಸ್ಕೃತಿ ಕೇಂದ್ರಿತವೆ ಎಂಬ ಪ್ರಶ್ನೆಯೂ ಇದೆ. ಸಾಮಾನ್ಯವಾಗಿ ಅಂಕಣ ಬರಹದಲ್ಲಿ ಲೇಖಕ ನಾನು ಎಂಬ ಪ್ರತ್ಯಯವನ್ನು ಬಳಸಿದರೂ ಅದು ಆತ್ಮಕೇಂದ್ರಿತ ಅಥವಾ ಅಹಮಿಕೆಯನ್ನು ಸೂಚಿಸುವ ಪದವಾಗಿ ಉಳಿಯುವುದಿಲ್ಲ; ಬದಲಿಗೆ ಬರಹಕ್ಕೆ ಒಂದು ಸಂವಾದದ ಸ್ವರೂಪವನ್ನು ನೀಡುವುದಾಗಿರುತ್ತದೆ.

ಅಂಕಣ ಬರಹಕ್ಕೆ ಸಮಕಾಲೀನ ಸಮಾಜದ ಯಾವ ಮುಖವಾದರೂ ವಸ್ತುವಾಗ ಬಹುದೆಂದು ಪ್ರಸಿದ್ಧ ಅಂಕಣಕಾರರಾದ ಹಾ.ಮಾ. ನಾಯಕರು ಅಭಿಪ್ರಾಯ ಪಟ್ಟಿದ್ದಾರೆ. ಹೆಚ್ಚಿನ ಅಂಕಣ ಬರಹಗಳು ಸಮಕಾಲೀನ ರಾಜಕೀಯ ವಿದ್ಯಾಮಾನಗಳನ್ನು ಕುರಿತಿರುತ್ತವೆ. ಸಾಹಿತ್ಯಕ ಪ್ರಸ್ತಾಪವುಳ್ಳ ಅಂಕಣಗಳು ಕನ್ನಡದಲ್ಲಿ ವಿರಳ. ವಿಜ್ಞಾನ, ಸಂಗೀತ, ಕಲೆ, ಶಿಕ್ಷಣ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಣಗಳು

ದುರ್ಲಭವೇನಲ್ಲ. ಈಗೀಗ ಲಘು ಹರಟೆಗಳೂ ಅಂಕಣ ಬರಹದಲ್ಲಿ ಸ್ಥಾನಪಡೆದಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ ಹಾಗೂ ಕಲೆಗಳನ್ನು ಕುರಿತ ಚಿಂತನೆ ಇರುತ್ತದೆ. ಅಂಕಣ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಬಗೆಯ ಗದ್ಯವಿರುತ್ತದೆ. ಕನ್ನಡದ ಸಾಹಿತಿ ಪತ್ರಿಕೋದ್ಯಮಿಗಳಾದ ಡಿ.ವಿ.ಜಿ. ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸಂಪಾದಕೀಯ ಬರಹಗಳು ಕನ್ನಡ ಅಂಕಣ ಸಾಹಿತ್ಯದ ಉಗಮಕ್ಕೆ ತೋರುದೀವಿಗೆಗಳಾದವು. ಕನ್ನಡ ಪತ್ರಿಕೋದ್ಯಮ ಬೆಳೆಯುತ್ತ ಬಂದಂತೆ ಅದರ ವ್ಯಾಪ್ತಿಯೂ ವಿಸ್ತಾರವಾಗತೊಡಗಿತು. ಸಂಪಾದಕೀಯ ಬರಹಗಳ ಜೊತೆಗೆ ಅಂಕಣಗಳು ಪ್ರತ್ಯೇಕವಾಗಿ ಕಾಣಿಸಿಕೊಳ್ಳಲು ಆರಂಭವಾದವು. 'ಸ್ವದೇಶಾಭಿಮಾನಿ', 'ಅಂತರಂಗ', 'ದೇಶಬಂಧು', 'ಛಾಯಾ', 'ಪ್ರಜಾಮತ', 'ಪ್ರಜಾವಾಣಿ', 'ಕನ್ನಡಪ್ರಭ', 'ಕರ್ಮವೀರ', 'ವಿಶ್ವಕರ್ನಾಟಕ', 'ಪ್ರಪಂಚ' – ಮುಂತಾದ ಪತ್ರಿಕೆಗಳು ಅಂಕಣ ಬರಹಗಳಿಗೆ ವೇದಿಕೆಯನ್ನು ನೀಡಿದವಲ್ಲದೆ ಅಂಕಣ ಬರಹಕ್ಕೆ ಒಂದು ಆಯಾಮವನ್ನೂ ಕೊಟ್ಟವು. ಸಿದ್ಧವನಹಳ್ಳಿ ಕೃಷ್ಣಶರ್ಮ, ನಿರಂಜನ, ಎಚ್ಚೆಸ್ಕೆ, ಹಾ.ಮಾ. ನಾಯಕ, ಕು.ಶಿ. ಹರಿದಾಸಭಟ್ಟ, ಪಾ.ವೆಂ. ಆಚಾರ್ಯ, ತಿ.ತಾ. ಶರ್ಮ, ಎನ್ಕೆ, ಎಂ.ವಿ. ಕಾಮತ್, ಕಲ್ಲೆ ಶಿವೋತ್ತಮರಾವ್, ಕೀರ್ತಿನಾಥ ಕುರ್ತಕೋಟಿ, ಟಿ.ಎಸ್. ರಾಮಚಂದ್ರರಾವ್, ಬಿ.ವಿ. ವೈಕುಂಠರಾಜು, ಪಿ. ಲಂಕೇಶ್, ವೈಎನ್ಕೆ, ಜಿ. ವೆಂಕಟಸುಬ್ಬಯ್ಯ, ಸಿ.ವಿ. ರಾಜಗೋಪಾಲ ಬಿ.ಎ. ವಿವೇಕ ರೈ, ಎಸ್.ಎನ್. ಹೆಗಡೆ, ಸೋಮಶೇಖರ ಇಮ್ರಾಪುರ, ಲಿಂಗದೇವರು ಹಳೆಮನೆ ಮೊದಲಾದವರ ಅಂಕಣಗಳು ವಿಶಿಷ್ಟವಾದವು. ಪ್ರಸ್ತುತ ಕನ್ನಡ ಪತ್ರಿಕೋದ್ಯಮದಲ್ಲಿ ಈಗ ಅಂಕಣ ಬರಹ ಇಲ್ಲದ ಒಂದು ಪತ್ರಿಕೆಯೂ ಇಲ್ಲ ಎನ್ನಬಹುದು. ಕನ್ನಡದಲ್ಲಿ ನಿಯತಕಾಲಿಕೆಗಳಿಗೆ ಹೆಚ್ಚುಕಾಲ ಸಾಹಿತ್ಯಕ ಅಂಕಣ ಬರೆದವರಲ್ಲಿ ಹಾ.ಮಾ. ನಾಯಕ ಮತ್ತು ಎಚ್ಚೆಸ್ಕೆ ಅವರನ್ನು ಹೆಸರಿಸಬಹುದು. ಎಚ್ಚೆಸ್ಕೆ ಅವರ ಅಂಕಣ ಸಾಹಿತ್ಯಕ್ಕಷ್ಟೇ ಸೀಮಿತವಲ್ಲ; ಆರ್ಥಿಕ ವಿಚಾರ, ವ್ಯಕ್ತಿವಿಷಯ, ರಾಜಕೀಯ ಮುಂತಾದವೂ ಅಲ್ಲಿ ಪ್ರಸ್ತಾಪಗೊಳ್ಳುತ್ತವೆ. ಎಚ್ಚೆಸ್ಕೆ ಅವರು 'ದೇಶಬಂಧು', 'ವಿಶ್ವಕರ್ನಾಟಕ', 'ಛಾಯಾ', 'ಕನ್ನಡನುಡಿ', 'ಪ್ರಜಾವಾಣಿ,' 'ಸುಧಾ' ಪತ್ರಿಕೆಗಳಲ್ಲಿ ಐದಾರು ದಶಕಗಳ ಕಾಲ ಅಂಕಣ ವ್ಯವಸಾಯ ಮಾಡಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಇತ್ತೀಚೆಗೆ ಅಪರೂಪದ ಹೊಸ ಅಂಕಣ ಬರಹಗಳು ಅಂತರಜಾಲ ತಾಣದಲ್ಲಿ ಲಭ್ಯವಿವೆ. ಶ್ರೀವತ್ಸ ಜೋಷಿಯವರ 'ವಿಚಿತ್ರಾನ್ನ'ವು ಇಂಟರ್‌ನೆಟ್‌ನಲ್ಲಿ ಮೂಡಿಬಂದ ಮೊದಲ ಕನ್ನಡ ಅಂಕಣ ಬರಹಗಳ ಪುಸ್ತಕವಾಗಿದೆ. ಇಂದಿನ ಇಂಟರ್‌ನೆಟ್ ಲೋಕದಲ್ಲಿ ಕನ್ನಡತನವೇನು ಕಡಿಮೆಯಿಲ್ಲ ಎಂಬುದನ್ನು ಕೆಲವರು ಇ–ಅಂಕಣಕಾರರುಗಳಾದ ಜಾಲತರಂಗದ ಡಾ. ಎಂ.ಎಸ್. ನಟರಾಜ್, ತುಳಸಿವನದ ಕೆ. ತ್ರಿವೇಣಿ ಶ್ರೀನಿವಾಸರಾವ್ ಮುಂತಾದವರು ತಮ್ಮ ವಿಚಾರಗಳ ಅನುಭವ ಬುತ್ತಿಯ ಸವಿಯನ್ನು ನಿಯಮಿತವಾಗಿ ಓದುಗರಿಗೆ ಉಣಬಡಿಸುತ್ತಿದ್ದಾರೆ. ಇತ್ತ ವರದಿಯೂ ಅಲ್ಲದ ಅತ್ತ ಪೂರ್ಣವಾಗಿ ಸಾಹಿತ್ಯವೂ ಅಲ್ಲದ ಆದರೆ ಸಮಕಾಲೀನ ಆಗುಹೋಗುಗಳನ್ನು ಹಿಡಿದಿಡುವ ಸೃಜನಶೀಲತೆಯ ಸೆಲೆಯುಳ್ಳ ಬರಹಗಳು ಕನ್ನಡದಲ್ಲಿ ಅಂಕಣ ಸಾಹಿತ್ಯವೆಂದು ಗುರುತಿಸಿಕೊಂಡಿವೆ.

ಕಠಿಣ ಪದಗಳು

೧. ಸ್ವಗತ
೨. ನಿಯಮಿತ

೩. ಬೆರಳಚ್ಚಿಸು
೪. ಪರೋಕ್ಷ
೫. ದಿನಚರಿ

ಅಭ್ಯಾಸ ೫

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

೧. ಬ್ಲಾಗ್ ಎಂದರೇನು? ಅದರ ಆರಂಭ ಹೇಗಾಯಿತು?
೨. ಆರ್.ಎಸ್.ಎಸ್. ಸೌಲಭ್ಯದ ಕುರಿತು ಬರೆಯಿರಿ.
೩. ಕನ್ನಡದಲ್ಲಿ ಬ್ಲಾಗ್ ಬಳಕೆ ಬಗ್ಗೆ ಬರೆಯಿರಿ.
೪. ಕನ್ನಡದಲ್ಲಿನ ಬ್ಲಾಗ್ ತಾಣಗಳನ್ನು ಹೆಸರಿಸಿ.
೫. ಅಂಕಣ ಬರಹ ಎಂದರೇನು?
೬. ಅಂಕಣ ಬರಹದ ಗುಣ ವಿಶೇಷಗಳನ್ನು ತಿಳಿಸಿ.
೭. ಅಂಕಣ ಬರಹಕಾರರನ್ನು ಹೆಸರಿಸಿ.
೮. ಪತ್ರಿಕಾ ಸಾಹಿತ್ಯದಲ್ಲಿ ಅಂಕಣ ಬರಹದ ಸ್ಥಾನವೇನು?

೧೨.೭. ಸಾರಾಂಶ

ಅಂತರ್ಜಾಲ

ಅನೇಕ ಕಂಪ್ಯೂಟರ್ ಜಾಲಗಳ ಅಂತರ್‌ಸಂಪರ್ಕದಿಂದ ರೂಪುಗೊಂಡ ಮಹಾಜಾಲವೇ ಅಂತರ್ಜಾಲ. ಒಂದಕ್ಕಿಂತ ಹೆಚ್ಚು ಕಂಪ್ಯೂಟರ್‌ಗಳನ್ನು ಪರಸ್ಪರ ಸಂಪರ್ಕಿಸಿದ ಜಾಲಗಳನ್ನು (ನೆಟ್‌ವರ್ಕ್) ಕಚೇರಿಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ, ಬ್ಯಾಂಕುಗಳಲ್ಲಿ, ಬಸ್ಸು–ರೈಲು–ವಿಮಾನ ಸಂಸ್ಥೆಗಳಲ್ಲಿ ಬಳಸುವುದನ್ನು ನಾವು ನೋಡಿದ್ದೇವೆ. ಒಂದು ಕಂಪ್ಯೂಟರ್‌ನಿಂದ ಸಾಧ್ಯವಾಗುವುದಕ್ಕಿಂತ ಹೆಚ್ಚಿನದನ್ನು ಸಾಧಿಸಿಕೊಳ್ಳಲು ಇಂತಹ ಜಾಲಗಳು ಸಹಾಯ ಮಾಡುತ್ತವೆ. ಇಂತಹ ಹಲವು ಜಾಲಗಳು ಒಟ್ಟು ಸೇರಿದರೆ ಇನ್ನೂ ಹೆಚ್ಚಿನದನ್ನು ಸಾಧಿಸಬಹುದಲ್ಲ ಎಂಬ ಉದ್ದೇಶದಿಂದ ರೂಪುಗೊಂಡದ್ದೇ ಇಂಟರ್‌ನೆಟ್, ಅಂದರೆ ಅಂತರ್ಜಾಲ. ವಿಶ್ವವ್ಯಾಪಿ ಜಾಲಕ್ಕೆ (ವರ್ಲ್ಡ್ ವೈಡ್ ವೆಬ್) ಮೂಲಸೌಕರ್ಯ ಒದಗಿಸುವುದು ಅಂತರ್ಜಾಲದ ಪ್ರಮುಖ ಜವಾಬ್ದಾರಿಯಾಗಿದೆ. ನಾವು ಇದೀಗ ಹಲವಾರು ಬಗೆಯ ಕನ್ನಡ ಜಾಲತಾಣಗಳನ್ನು ನೋಡಬಹುದು

ತಂತ್ರಾಂಶ

ಪದಸಂಸ್ಕಾರಕವು ಕಡತಗಳ ರಚನೆ, ಸಂಪಾದನೆ, ಪುಟವಿನ್ಯಾಸ ಹಾಗೂ ಮುದ್ರಣದಲ್ಲಿ ನೆರವಾಗುವ ತಂತ್ರಾಂಶ. ಕಂಪ್ಯೂಟರಿನಲ್ಲಿ ಪಠ್ಯವನ್ನು ಟೆಕ್ಸ್ಟ್ / ಟೈಪ್ ಮಾಡಿ, ಪಠ್ಯವನ್ನು ಸುವ್ಯವಸ್ಥಿತಗೊಳಿಸಿ, ಪುಟವಿನ್ಯಾಸಗೊಳಿಸಿ ಮುದ್ರಣವನ್ನು ಪಡೆಯುವ ಕೆಲಸಗಳಿಗೆ ಪದಸಂಸ್ಕರಣೆ ಎಂದು ಕರೆಯಲಾಗಿದೆ. ಪದಸಂಸ್ಕರಣೆಯ ಕೆಲಸದಲ್ಲಿ ನೆರವಾಗುವ ತಂತ್ರಾಂಶಗಳನ್ನು ಪದಸಂಸ್ಕಾರಕಗಳೆಂದು ಕರೆಯುತ್ತಾರೆ. ಪಠ್ಯವನ್ನಷ್ಟೇ ಟೈಪ್ ಮಾಡಿ ಉಳಿಸಿಡಲು ಸಹಾಯ ಮಾಡುವ ನೋಟ್‌ಪ್ಯಾಡ್‌ನಂತಹ ಸರಳ ತಂತ್ರಾಂಶಗಳಿಂದ ಪ್ರಾರಂಭಿಸಿ ಪತ್ರಿಕೆ–ಪುಸ್ತಕಗಳ ವಿನ್ಯಾಸದಲ್ಲಿ ಬಳಕೆಯಾಗುವ ಆಡೋಬ್ ಪೇಜ್ ಮೇಕರ್,

ಇನ್‌ಡಿಸೈನ್‌ನಂತಹ ತಂತ್ರಾಂಶಗಳವರೆಗೆ ವಿವಿಧ ಉದ್ದೇಶಗಳಿಗಾಗಿ ಬೇರೆಬೇರೆ ಪದ ಸಂಸ್ಕಾರಕಗಳನ್ನು ಬಳಸುವುದು ಸಾಮಾನ್ಯ ಅಭ್ಯಾಸವಾಗಿದೆ. ಪದಸಂಸ್ಕರಣದ ಮುಂದುವರೆದ ಸೌಕರ್ಯವೇ ಡಿ.ಟಿ.ಪಿ. (desktop publishing). ಪಠ್ಯದ ಜೊತೆ ಚಿತ್ರಗಳನ್ನು ಸೇರಿಸುವುದು, ಅಕ್ಷರದ ಗಾತ್ರವನ್ನು ಸಾವಿರದೊಂದು ಇಂಚಿನಷ್ಟು ನಿಯಂತ್ರಣೆ ಮಾಡುವುದು, ತಲೆಬರಹ, ಪ್ಯಾರಾಗಳ ನಡುವಿನ ಗಾತ್ರ ಮತ್ತು ಅಂತರ, ಹೀಗೆ ಹಲವು ಸೌಕರ್ಯಗಳು ಇಲ್ಲಿವೆ. ಈಗ ಎಲ್ಲ ಪುಸ್ತಕಗಳು ಇದೇ ವಿಧಾನದಿಂದ ತಯಾರಾಗುತ್ತಿವೆ. ವರ್ಡ್ ಪ್ರೊಸೆಸರ್‌ಗಳಲ್ಲಿ ಅನುಕೂಲಗಳೂ ಇವೆ ಕೆಲವು ಅನಾನುಕೂಲಗಳೂ ಇವೆ.

ಯುನಿಕೋಡ್

ಗಣಕೀಕರಣದಲ್ಲಿ ಯುನಿಕೋಡ್ ಎಂದರೆ ಒಂದು ಅಂತರರಾಷ್ಟ್ರೀಯ ನಿರ್ದಿಷ್ಟಮಾನ. ಯುನಿಕೋಡ್ ಎನ್ನುವುದು ಇಂಗ್ಲಿಷ್ ಸೇರಿದಂತೆ ಬಹುತೇಕ ಎಲ್ಲಾ ವಿಶ್ವ ಭಾಷೆಗಳನ್ನು ಕಂಪ್ಯೂಟರ್‌ನಲ್ಲಿ ಗೊಂದಲವಿಲ್ಲದೆ ಪ್ರತಿನಿಧಿಸುವ, ಬಳಸಲು ಸಾಧ್ಯವಾಗಿಸುವ ಒಂದು 'ಎನ್ಕೋಡಿಂಗ್' ಸ್ಟ್ಯಾಂಡರ್ಡ್. ಯುನಿಕೋಡ್ ಎಂಬುದು ವಿಶ್ವಸಂಕೇತ. ಯುನಿಕೋಡ್ ಆಧಾರಿತ ತಂತ್ರಾಂಶಗಳಲ್ಲಿ ಬೆರಳಚ್ಚು ಮಾಡಿದ ಮಾಹಿತಿಯನ್ನು ನೇರವಾಗಿ ಮಾಹಿತಿ ಶೇಖರಣೆಯ ಸಂಕೇತವಾದ ಯುನಿಕೋಡ್‌ನಲ್ಲೇ ಸಂಗ್ರಹಿಸಿಡಲಾಗುತ್ತದೆ.

ಪ್ರಪಂಚದ ಪ್ರತಿ ಭಾಷೆಯ ಪ್ರತಿಯೊಂದು ಅಕ್ಷರಕ್ಕೂ ತನ್ನದೇ ಆದ ಪ್ರತ್ಯೇಕ ಸಂಕೇತ ಇರಬೇಕು. ಈ ಎಲ್ಲ ಬೇಕುಗಳಿಗೆ ಉತ್ತರವೇ ಯುನಿಕೋಡ್. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಶ್ರೇಣಿ ಇದೆ. ಇದು ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಯುನಿಕೋಡ್ ವಿಧಾನದಲ್ಲಿ ಮಾಹಿತಿ ಸಂಗ್ರಹಣೆ ಮಾಡಿದರೆ ಒಂದೇ ಕಡತದಲ್ಲಿ ಪ್ರಪಂಚದ ಎಲ್ಲ ಭಾಷೆಗಳಲ್ಲಿ ಮಾಹಿತಿಯನ್ನು ಶೇಖರಣೆ ಮಾಡಲು ಸಾಧ್ಯ. ಯುನಿಕೋಡ್‌ನಲ್ಲಿ ಪ್ರತಿ ಭಾಷೆಗೂ ತನ್ನದೇ ಆದ ಸಂಕೇತಗಳಿರುವುದು ಮಾತ್ರವಲ್ಲ, ಪ್ರತಿ ಭಾಷೆಗೂ ತನ್ನದೇ ಆದ ಅಕಾರಾದಿ ವಿಂಗಡಣೆಯ ಸೂತ್ರವೂ ಯುನಿಕೋಡ್‌ನಲ್ಲಿದೆ.

ಸಂವಹನ ಮತ್ತು ಸಾಮಾಜಿಕ ಮಾಧ್ಯಮ

ಸಂವಹನ ಎಂಬ ಪದವು ಇಂಗ್ಲಿಷ್‌ನ ಕಮ್ಯುನಿಕೇಷನ್ ಎಂಬ ಪದಕ್ಕೆ ಸಮಾನ ಅರ್ಥವನ್ನು ನೀಡುವ ಕನ್ನಡದ ಪದವಾಗಿದೆ. ಕಮ್ಯುನಿಕೇಷನ್ ಪದದ ಮೂಲ ಲ್ಯಾಟಿನ್ ಭಾಷೆಯಲ್ಲಿದ್ದು, ಕಮ್ಯುನಿಕೇರ್ ಎಂಬ ಲ್ಯಾಟಿನ್ ಪದದಿಂದ ಉತ್ಪತ್ತಿಯಾಗಿರುತ್ತದೆ. ಹಂಚಿಕೊ ಎಂಬ ಅರ್ಥವನ್ನು ನೀಡುವ ಲ್ಯಾಟಿನ್ ಭಾಷೆಯ ಕಮ್ಯುನಿಕೇರ್ ಪದವು ನಾವು ಕನ್ನಡದಲ್ಲಿ ಬಳಸುವ ಸಂವಹನ ಪದದ ಅರ್ಥಕ್ಕೆ ಸಮಾನಾಂತರ ಅರ್ಥವನ್ನು ಹೊಂದಿರುತ್ತದೆ. ಕನಿಷ್ಠ ಇಬ್ಬರು ಭಾಗವಹಿಸುವವರನ್ನು ಒಳಗೊಂಡ ಸಾಮಾಜಿಕ ಕ್ರಿಯೆಯನ್ನು ಸಂವಹನ ಎಂದು ಕರೆಯಲಾಗುತ್ತದೆ. ವರ್ಚುವಲ್ ಸಮುದಾಯಗಳು ಮತ್ತು ನೆಟ್‌ವರ್ಕ್‌ಗಳಲ್ಲಿ ಜನರು ಮಾಹಿತಿ ಮತ್ತು ಆಲೋಚನೆಗಳನ್ನು ರಚಿಸುವ, ಹಂಚಿಕೊಳ್ಳುವ ಅಥವಾ ವಿನಿಮಯ ಮಾಡುವ ಸಾಮಾಜಿಕ ಸಂವಹನ. ಸಾಮಾಜಿಕ ಸಂವಹನವು ಸಾಮಾಜಿಕ ವ್ಯಸನವನ್ನು ಆಧರಿಸಿದೆ. ಸಾಮಾಜಿಕ ಸಂವಹನವು ಸಾಮಾಜಿಕ ಸಂಪರ್ಕದ ಪ್ರಕಾರಗಳಲ್ಲಿ ಒಂದಾಗಿದೆ. ಎರಡು ಅಥವಾ ಹೆಚ್ಚಿನ ವ್ಯಕ್ತಿಗಳ ನಡುವೆ ಸಾಮಾಜಿಕ ಕ್ರಿಯೆಗಳ ವಿನಿಮಯದ ಪರಸ್ಪರ ನಿರ್ದೇಶನದ ಪ್ರಕ್ರಿಯೆಯೂ ಆಗಿದೆ.

ಸಾಮಾಜಿಕ ಮಾಧ್ಯಮವು ವೆಬ್–ಆಧಾರಿತ ಸಂವಹನ ಸಾಧನವಾಗಿದ್ದು, ಜನರು ಪರಸ್ಪರ ಹಂಚಿಕೊಳ್ಳುವ ಮತ್ತು ಸೇವಿಸುವ ಮಾಹಿತಿಯ ಮೂಲಕ ಪರಸ್ಪರ ಸಂವಹನ

ನಡೆಸಲು ಸಾಧ್ಯವಾಗುತ್ತದೆ. ಸರಿಯಾದ ಸಮಯದಲ್ಲಿ ಮಹತ್ವದ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಸಾಮಾಜಿಕ ಮಾಧ್ಯಮಗಳು ಮಾಡುತ್ತಿದೆ. ಜನರ ಕಷ್ಟಗಳಿಗೆ ಸ್ಪಂದಿಸಿ ಆದಷ್ಟು ಜನರ ಹಿತವನ್ನು ಬಯಸುತ್ತಾ ಸಹಾಯ ಮಾಡುತ್ತಾ ಬಂದಿದೆ. ವಿಶ್ವದಾದ್ಯಂತ ಯಾವುದೇ ಮೂಲೆಯಲ್ಲಿರುವ ತಮ್ಮ ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಸಂವಹನ ನಡೆಸುವ ಒಂದು ವಿಶೇಷ ವೇದಿಕೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಪ್ರತಿ ವರ್ಷ ಜೂನ್ ೩೦ನೆಯ ತಾರೀಕಿನಂದು ವಿಶ್ವ ಸಾಮಾಜಿಕ ಮಾಧ್ಯಮ ದಿನವನ್ನು ಆಚರಿಸಲಾಗುತ್ತದೆ. ವಿಶ್ವದ ಯಾವುದೇ ಮೂಲೆಯಲ್ಲಿ ನಡೆದ ಘಟನೆಯನ್ನು ಕುಳಿತಲ್ಲಿಯೇ ತಿಳಿಸುವ ಸಾಮಾಜಿಕ ಮಾಧ್ಯಮದ ಮಹತ್ವ. ಇದು ನಮ್ಮ ಕಾಲದ ಒಂದು ದೊಡ್ಡ ಆಧುನಿಕ ವಿದ್ಯಮಾನವಾಗಿದೆ.

ಬ್ಲಾಗ್

ಇತ್ತೀಚೆಗಿನ ದಿನಗಳಲ್ಲಿ ತುಂಬ ಎಲ್ಲರ ಬಾಯಲ್ಲೂ ಕೇಳಿಬರುತ್ತಿರುವ ಪದ 'ಬ್ಲಾಗ್'. ಅದರ ಹಲವು ಪ್ರತ್ಯಯಗಳೇ ಬ್ಲಾಗಿಂಗ್, ಬ್ಲಾಗರ್, ಇತ್ಯಾದಿ. ಪವನಜರ ಮಾತಿನಲ್ಲಿ ಹೇಳುವುದಾದರೆ – ಬ್ಲಾಗ್ ಎಂದರೆ ಒಂದು ರೀತಿಯಲ್ಲಿ ಸಾರ್ವಜನಿಕ ಸ್ವಗತ ಎನ್ನಬಹುದು. ಎಲ್ಲರಿಗೂ ಓದಲು ಅನುಕೂಲವಾಗುವಂತೆ ಅಂತರ್ಜಾಲದಲ್ಲಿ ಇಟ್ಟಂತಹ ತೆರೆದ ದಿನಚರಿ ಅಥವಾ ಡೈರಿ ಎಂದೂ ಕರೆಯಬಹುದು. ಬ್ಲಾಗ್‌ನ ಕ್ರಿಯಾರೂಪವೇ ಬ್ಲಾಗಿಂಗ್ ಅಂದರೆ ಬ್ಲಾಗ್ ನಡೆಸುವ ಕ್ರಿಯೆ. ಬ್ಲಾಗರ್ ಎಂದರೆ ಬ್ಲಾಗ್ ಬರೆಯುವ ವ್ಯಕ್ತಿ. ಬ್ಲಾಗ್ ಎಂಬ ಹೆಸರು ವೆಬ್ ಲಾಗ್ ಎಂಬುದರ ಅಪಭ್ರಂಶ. ಇವನ್ನು ಜಾಲತಾಣಗಳೆಂದು ಕರೆಯುವುದಕ್ಕಿಂತ ಆನ್‌ಲೈನ್ ದಿನಚರಿಗಳೆಂದು ಕರೆಯುವುದೇ ಸೂಕ್ತ. ಬ್ಲಾಗ್‌ನಲ್ಲಿ ಸೇರಿಸಲ್ಪಡುವ ಲೇಖನಕ್ಕೆ ಪೋಸ್ಟ್ ಅಥವಾ ಪೋಸ್ಟಿಂಗ್ ಎನ್ನುತ್ತಾರೆ. ಈ ಪೋಸ್ಟಿಂಗ್‌ಗೆ ಒಂದು ಶೀರ್ಷಿಕೆ, ಸೇರಿಸಿದ ದಿನಾಂಕ, ಮುಖ್ಯ ಬರಹ ಅಥವಾ ಲೇಖನ, ವಿಷಯ ಇತ್ಯಾದಿ ಲಕ್ಷಣಗಳಿರುತ್ತವೆ ಈ ಪೋಸ್ಟಿಂಗ್‌ನ ಕೆಳಗೆ ಓದುಗರು ತಮ್ಮ ಟೀಕೆ ಟಿಪ್ಪಣಿಗಳನ್ನು ಸೇರಿಸುವ ಸೌಲಭ್ಯವಿದೆ.

ಯು.ಬಿ. ಪವನಜ, ಹರಿಪ್ರಸಾದ್ ನಾಡಿಗ್, ಪಿ.ಎಂ. ಕೃಷ್ಣರಾಜ್, ಎಂ.ಎಸ್. ಶ್ರೀರಾಮ್, ಶೇಷಾದ್ರಿ, ಸತೀಶ್ ಕುಮಾರ್ ಮುಂತಾದ ಅನೇಕರು ಕನ್ನಡದಲ್ಲಿ ಬ್ಲಾಗಿಸಲು ಪ್ರಾರಂಭಿಸಿದರು. ಹರಿಪ್ರಸಾದ್ ನಾಡಿಗ್ ೨೦೦೫ರಲ್ಲಿ ಸಂಪದ ಎಂಬ ಸಮುದಾಯತಾಣವನ್ನು ಪ್ರಾರಂಭಿಸಿದ ಮೇಲೆ ಕನ್ನಡ ಬ್ಲಾಗುಗಳಿಗೊಂದು ಪ್ರಭಾವಶಾಲಿ ವೇದಿಕೆಯೂ ದೊರೆಯಿತು.

ಅಂಕಣ ಬರಹ

ಇದೊಂದು ವಿಶಿಷ್ಟ ಬಗೆಯ ಪತ್ರಿಕಾಸಾಹಿತ್ಯ. ಪತ್ರಿಕೆಗಳಲ್ಲಿ ನಿಯತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರೆಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಹಾಗೂ ಅಂಕಣ ಸಾಹಿತ್ಯದ ಪರಿಕಲ್ಪನೆ ಇಂಗ್ಲಿಷ್ ಪತ್ರಿಕೋದ್ಯಮದಿಂದ ಬಂದಿದ್ದು. ಅಂಕಣವು ದಿನಪತ್ರಿಕೆ, ನಿಯತಕಾಲಿಕ ಅಥವಾ ಇತರ ಪ್ರಕಟಣೆಯಲ್ಲಿನ ಒಂದು ಪುನರಾವರ್ತಕ ವಿಭಾಗ ಅಥವಾ ಲೇಖನವಾಗಿರುತ್ತದೆ. ಇಂಗ್ಲಿಷಿನ ಕಾಲಂ ಎಂಬ ಪದ ಹಾಗೂ ಪರಿಕಲ್ಪನೆಗೆ ಸಂವಾದಿಯಾಗಿ ಕನ್ನಡದಲ್ಲಿ ಅಂಕಣ ಎಂಬ ಪದ ಬಳಕೆಯಾಗುತ್ತಿದೆ. ಯಾವುದೇ ವಸ್ತು ವಿಷಯವನ್ನು ಕುರಿತು ಒಂದು ನಿರ್ದಿಷ್ಟ ಪತ್ರಿಕೆ ಅಥವಾ ನಿಯತಕಾಲಿಕೆಗೆ ತಮ್ಮ ವೈಯಕ್ತಿಕ ಚಿಂತನೆಯನ್ನು ಸೇರಿಸಿ ನಿಯತವಾಗಿ ಬರೆಯುವವನೇ ಅಂಕಣಕಾರ. ಅಂಕಣ ಬರಹದಲ್ಲಿ ಅಂಕಣಕಾರ ಸಮಕಾಲೀನ ವಸ್ತು ವಿಷಯಗಳಿಗೆ ಸ್ವಂತಿಕೆಯ ಲೇಪ ಹಾಗೂ ಛಾಪನ್ನು ನೀಡಬೇಕಾಗುತ್ತದೆ. – ಇದು ಅಂಕಣ ಬರಹದ ಒಂದು ಮುಖ್ಯ ಲಕ್ಷಣವಾಗಿದೆ.

ಅಂಕಣ ಬರಹಕ್ಕೆ ಸಮಕಾಲೀನ ಸಮಾಜದ ಯಾವ ಮುಖವಾದರೂ ವಸ್ತುವಾಗ ಬಹುದು. ಹೆಚ್ಚಿನ ಅಂಕಣ ಬರಹಗಳು ಸಮಕಾಲೀನ ರಾಜಕೀಯ ವಿದ್ಯಾಮಾನಗಳನ್ನು ಕುರಿತಿರುತ್ತವೆ. ಸಾಹಿತ್ಯಕ ಪ್ರಸ್ತಾಪವುಳ್ಳ ಅಂಕಣಗಳು ಕನ್ನಡದಲ್ಲಿ ವಿರಳ. ವಿಜ್ಞಾನ, ಸಂಗೀತ, ಕಲೆ, ಶಿಕ್ಷಣ, ವೈದ್ಯಕೀಯ, ಕ್ರೀಡೆ ಮುಂತಾದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅಂಕಣಗಳು ದುರ್ಲಭವೇನಲ್ಲ. ಈಗೀಗ ಲಘು ಹರಟೆಗಳೂ ಅಂಕಣ ಬರೆಹದಲ್ಲಿ ಸ್ಥಾನ ಪಡೆದಿವೆ. ಸಾಹಿತ್ಯ ವಿಚಾರ ಪ್ರಧಾನವಾದ ಅಂಕಣಗಳಲ್ಲಿ ಸಾಮಾನ್ಯವಾಗಿ ವ್ಯಕ್ತಿ, ಕೃತಿ, ಸಂಸ್ಕೃತಿ, ಶಿಕ್ಷಣ ಹಾಗೂ ಕಲೆಗಳನ್ನು ಕುರಿತ ಚಿಂತನೆ ಇರುತ್ತದೆ. ಅಂಕಣ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಬಗೆಯ ಗದ್ಯವಿರುತ್ತದೆ.

೧೨.೭. ಮುಂದಿನ ಓದಿಗಾಗಿ ಮತ್ತು ಆಕರ ಗ್ರಂಥಗಳು

ಕನ್ನಡದಲ್ಲಿ ಗಣಕ ಯಂತ್ರಗಳ ಅಳವಡಿಕೆ ಮತ್ತು ಬಳಕೆಗೆ ಸಂಬಂಧಿಸಿದಂತೆ ಈ ಪಠ್ಯವನ್ನು ಸಿದ್ಧಪಡಿಸುವಲ್ಲಿ ಡಿಜಿಟಲ್ ಕನ್ನಡ 'ವಾರ್ತಾ ಭಾರತಿ' ಪತ್ರಿಕೆಯಲ್ಲಿ ಪ್ರಕಟವಾದ ಎ. ಸತ್ಯನಾರಾಯಣ ಅವರ ಅಂಕಣ ಬರಹಗಳು, ಕನ್ನಡ ತಂತ್ರಜ್ಞಾನದ ಲೇಖಕ ಟಿ.ಜಿ. ಶ್ರೀನಿಧಿ ಅವರ ಕಂಪ್ಯೂಟರ್ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ 'ನುಡಿಯ ನಾಳೆಗಳು', 'ಕಂಪ್ಯೂಟರ್ ತಂತ್ರಜ್ಞಾನ ಪದವಿವರಣ ಕೋಶ', 'ಕನ್ನಡ ತಂತ್ರಜ್ಞಾನ ನೆನ್ನೆ–ಇಂದು–ನಾಳೆ' ಕೃತಿಗಳು, ಡಾ. ಯು.ಬಿ. ಪವನಜರವರ 'ವಿಶ್ವಕನ್ನಡ' http://vishvakannada.com ಜಾಲತಾಣ ದಲ್ಲಿ ಲಭ್ಯವಿರುವ ಲೇಖನಗಳು, ವಿವಿಧ ಲೇಖಕರ ಕಂಪ್ಯೂಟರ್ ಮತ್ತು ಕನ್ನಡ ಕೃತಿಗಳು ಹಾಗೂ ಕನ್ನಡದ ಸ್ವತಂತ್ರ (ಮುಕ್ತ) ತಂತ್ರಾಂಶಗಳ ಕುರಿತಾದ ಓಂ ಶಿವಪ್ರಕಾಶ್ ಅವರ ಲೇಖನಗಳಿಗೆ ಉಪಕೃತನಾಗಿದ್ದೇನೆ.

೧. 'ಭಾಷಾತಂತ್ರಜ್ಞಾನ' (ಸಂ.), ಸಾಂಬಮೂರ್ತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. 'ಆಡಳಿತ ಕನ್ನಡ' (ಪ್ರ.ಸಂ.), ಎ. ಮುರಿಗೆಪ್ಪ ಮತ್ತು ಮುಖ್ಯಮಂತ್ರಿ ಚಂದ್ರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೩. 'ಕಂಪ್ಯೂಟರ್ ಪದ ವಿವರಣ ಕೋಶ' (ಸಂ.), ಕೆ. ಚಿದಾನಂದ ಗೌಡ ಮತ್ತು ಚಿ.ವಿ. ಶ್ರೀನಾಥಶಾಸ್ತ್ರೀ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

೪. 'ಕಂಪ್ಯೂಟರ್ ಪ್ರಪಂಚ', ಟಿ.ಜಿ. ಶ್ರೀನಿಧಿ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫. 'ಕನ್ನಡ ತಂತ್ರಜ್ಞಾನ ನೆನ್ನೆ–ಇಂದು–ನಾಳೆ', ಟಿ.ಜಿ. ಶ್ರೀನಿಧಿ, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೭.

೬. 'ಕಂಪ್ಯೂಟರ್ ಮತ್ತು ಕನ್ನಡ', ಎ. ಸತ್ಯನಾರಾಯಣ, ಬೇಳೂರು ಸುದರ್ಶನ, ಟಿ.ಜಿ. ಶ್ರೀನಿಧಿ, ಓಂ ಶಿವಪ್ರಕಾಶ್ ಮತ್ತು ಯು.ಬಿ. ಪವನಜ, ಮಿತ್ರ ಮಾಧ್ಯಮ, ಬೆಂಗಳೂರು, ೨೦೧೪.

೭. ಅಂತರ್ಜಾಲದಲ್ಲಿ ದೊರೆಯುವ ಯು.ಬಿ. ಪವನಜ ಅವರ ಲೇಖನಗಳು.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ಸಿ. ನಾಗಭೂಷಣ**

ಘಟಕ ೧೩

ಸಂವಹನ ಕನ್ನಡ

ಹಿನ್ನೆಲೆ

ಸಂವಹನ ಕೇವಲ ಮಾನವರಲ್ಲಷ್ಟೇ ಅಲ್ಲದೆ ಪ್ರಾಣಿ–ಪಕ್ಷಿಗಳಲ್ಲೂ ನಡೆಯುವ ಸಂವಾದ. ಅದಕ್ಕೆ ಹಲವಾರು ಮುಖಗಳಿವೆ. ವೈಜ್ಞಾನಿಕ, ತಾಂತ್ರಿಕ, ಸಾಮಾಜಿಕ, ಭಾಷಿಕ, ಮಾಧ್ಯಮ ಮುಂತಾದ ಹಲವಾರು ಅಂತರ್‌ಶಿಸ್ತೀಯ ಆಯಾಮಗಳು ಸಂವಹನದ ಅಂಗವಾಗಿವೆ. ಲಿಪಿಯ ಆವಿಷ್ಕಾರ ಸಂವಹನದ ಬರಹ ರೂಪಕ್ಕೆ ಒಂದು ಹೊಸ ಆಯಾಮವನ್ನು ಕೊಟ್ಟಂತೆ, ಮುದ್ರಣ ಯಂತ್ರ ಇನ್ನೊಂದು ಹೊಸ ಆಯಾಮವನ್ನು ಕೊಟ್ಟು ಹೊಸ ಸಾರ್ವಜನಿಕ ವಲಯವನ್ನು ಸೃಷ್ಟಿಸಿತು. ಟೆಲಿಗ್ರಾಫ್, ಟೆಲಿಫೋನ್, ರೇಡಿಯೋ, ಟೆಲಿವಿಷನ್ ಹಾಗೂ ಕಂಪ್ಯೂಟರುಗಳು ಧ್ವನಿ ಹಾಗೂ ದೃಶ್ಯತೆಗಳನ್ನು ಸಂವಹನದ ಚೌಕಟ್ಟಿನೊಳಗೆ ತಂದವು. ಕನ್ನಡಕ್ಕೆ ಸಂಬಂಧಿಸಿದಂತೆ ಈ ಘಟಕ ಭಾಷೆಯ ಬರಹರೂಪವನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಮೂರು ಮುಖ್ಯ ಬರಹ ಮಾದರಿಗಳನ್ನು ಕುರಿತು ಚರ್ಚಿಸುತ್ತದೆ. ಮೊದಲನೆಯದಾಗಿ ಪತ್ರಲೇಖನ, ಅದರ ಲಕ್ಷಣ ಹಾಗೂ ಬಗೆಗಳು, ಎರಡನೆಯದಾಗಿ ವೈಚಾರಿಕ ಬರಹ ಹಾಗೂ ಅದರ ಲಕ್ಷಣಗಳು ಮತ್ತು ಕೊನೆಯದಾಗಿ ವೈಜ್ಞಾನಿಕ ಬರಹ ಹಾಗೂ ಅದರ ವೈಶಿಷ್ಟ್ಯಗಳನ್ನು ಪರಿಚಯ ಮಾಡಿಕೊಡಲಾಗಿದೆ. ಇಲ್ಲಿ ನಡೆದಿರುವ ಚರ್ಚೆ ಭಾಷೆಯ ಬಳಕೆಯನ್ನು ಕೇಂದ್ರದಲ್ಲಿಟ್ಟುಕೊಂಡು ಮಾಡಿದ ಚರ್ಚೆಯಾಗಿದ್ದು ಅದಕ್ಕೆ ಸೂಕ್ತವಾದ ಮಾದರಿ ಲೇಖನಗಳನ್ನು ಆಧರಿಸಿದೆ.

ವಿಷಯಾನುಕ್ರಮಣಿಕೆ

೧೩.೦. ಉದ್ದೇಶ

೧೩.೧. ಪೀಠಿಕೆ

೧೩.೨. ಸಂವಹನ ಕನ್ನಡ: ಸಂಕ್ಷಿಪ್ತ ಪರಿಚಯ

೧೩.೨.೧. ಪತ್ರಲೇಖನ

ಭಾಗ (ಅ) ಪತ್ರಲೇಖನ, ಅದರ ಪ್ರಯೋಜನ ಮತ್ತು ಪತ್ರಲೇಖನ ಕುರಿತು ತಿಳಿಯುವ ಅಗತ್ಯ

ಅಭ್ಯಾಸ ೧೩.೨.೧. ಭಾಗ (ಅ)

ಭಾಗ (ಆ) ಪತ್ರಗಳ ಪ್ರಕಾರಗಳು

೧. ವೈಯಕ್ತಿಕ ಪತ್ರಗಳು

೨. ಆಹ್ವಾನ ಪತ್ರಗಳು
೩. ಉದ್ಯೋಗ ಅರ್ಜಿ ಪತ್ರಗಳು
೪. ಸಂಪಾದಕರಿಗೆ ಪತ್ರಗಳು
೫. ವಾಣಿಜ್ಯ ಪತ್ರಗಳು

ಅಭ್ಯಾಸ ೧೩.೨.೧. ಭಾಗ (ಆ)

೧೩.೨.೨. ವೈಚಾರಿಕ ಬರಹ

೧೩.೨.೨. (ಅ) ವ್ಯಾಖ್ಯಾನ ಮತ್ತು ಭಿನ್ನತೆ

೧೩.೨.೨. (ಆ) ಮಾದರಿ ವೈಚಾರಿಕ ಬರಹ

೧೩.೨.೨. (ಇ) ಭಾಷಾ ಬಳಕೆ

ಅಭ್ಯಾಸ

೧೩.೨.೩. ವೈಜ್ಞಾನಿಕ ಬರಹ

೧೩.೨.೩. (ಅ) ಅರ್ಥ ಮತ್ತು ವ್ಯಾಖ್ಯಾನ

೧೩.೨.೩. (ಆ) ಮಾದರಿ ವೈಜ್ಞಾನಿಕ ಬರಹ

೧೩.೨.೩. (ಇ) ಭಾಷಾ ಬಳಕೆ

ಅಭ್ಯಾಸ

೧೩.೨.೪. ಸಾರಾಂಶ

ಅಭ್ಯಾಸದ ಉತ್ತರಗಳು

೧೩.೦. ಉದ್ದೇಶ

ಈ ಘಟಕದ ಅಭ್ಯಾಸದಿಂದ ಈ ಕೆಳಗಿನ ಅಂಶಗಳನ್ನು ತಿಳಿದುಕೊಳ್ಳಬಹುದು.

೧. ದಿನನಿತ್ಯ ಜೀವನದಲ್ಲಿ ಪತ್ರಬರಹದ ಪ್ರಾಮುಖ್ಯತೆ, ಪತ್ರಬರಹದ ವಿವಿಧ ಪ್ರಕಾರಗಳ ತಿಳುವಳಿಕೆ.

೨. ಪತ್ರಬರಹ ರಚನಾ ಕ್ರಮ, ಅವುಗಳನ್ನು ವಿಂಗಡಿಸುವ ವಿಧಾನ ಹಾಗೂ ಪತ್ರಗಳನ್ನು ಬರೆಯಲು ಕಲಿಯುವಿರಿ.

೩. ವೈಚಾರಿಕ ಮತ್ತು ವೈಜ್ಞಾನಿಕ ಬರಹಗಳ ಪರಿಚಯ.

೪. ವಿವಿಧ ರೀತಿಯ ಬರವಣಿಗೆಯ ಮಾದರಿಗಳ ಪರಿಚಯ.

೫. ಕನ್ನಡದಲ್ಲಿ ಸಂವಹನಕ್ಕೆ ಬಳಸುವ ಭಾಷಾ ಬಳಕೆಯ ಅರಿವು.

೧೩.೧. ಪೀಠಿಕೆ

ಇಂದಿನ ಮಾಹಿತಿ ಜಗತ್ತಿನಲ್ಲಿ ಅತ್ಯಂತ ಬೆಲೆ ಬಾಳುವ ಸರಕಾದ 'ಲೇಖನ' ಅಥವಾ 'ಬರವಣಿಗೆ'ಯನ್ನು ನಾವು ದಿನನಿತ್ಯ ಹಲವು ಬಗೆಯ ಮಾಧ್ಯಮಗಳ ಮೂಲಕ ಅಥವಾ ಅಂತರಜಾಲದಲ್ಲಿ ಪ್ರಕಟವಾಗುತ್ತಿರುವುದನ್ನು ಗಮನಿಸಿರುತ್ತೇವೆ. ಯಾವುದೇ ಭಾರತೀಯ

ಭಾಷೆಯ ದಿನಪತ್ರಿಕೆಯ ಪುಟಗಳನ್ನು ತಿರುವಿ ಹಾಕಿದರೆ ನಮಗೆ ಅನೇಕ ಬಗೆಯ ಲೇಖನಗಳು, ವಿಷಯಾಧಾರಿತ ಬರಹಗಳು, ಸಂದರ್ಶನಗಳು, ಅಂಕಣ ಬರಹಗಳು ಮತ್ತು ಅವುಗಳಲ್ಲಿ ಬಳಸಲಾದ ಭಾಷೆಯ ವೈಶಿಷ್ಟ್ಯತೆ ಎದ್ದು ಕಾಣುತ್ತದೆ. ಪ್ರತಿಯೊಂದು ಜ್ಞಾನಶಾಖೆಗೆ ತನ್ನದೇ ಆದ ನುಡಿಗಟ್ಟು ಇರುವಂತೆ, ದಿನನಿತ್ಯದ ವ್ಯವಹಾರದ ಕಾರಣ ಬರೆಯುವ ಕಛೇರಿ ಪತ್ರಗಳಿಗೆ, ಆತ್ಮೀಯರಿಗೆ ಬರೆಯುವ ಪತ್ರಗಳಿಗೆ ತಮ್ಮದೇ ಆದ ನುಡಿಗಟ್ಟು ಬಳಕೆಯಲ್ಲಿರುತ್ತದೆ. ಅಂತಹ ಕೆಲವು ಬರವಣಿಗೆಯ ಮಾದರಿಗಳನ್ನು, ವೈವಿಧ್ಯಮಯ ಶೈಲಿಯನ್ನು ಇಲ್ಲಿ ಕೊಟ್ಟಿರುವ ಪಾಠದಲ್ಲಿ ತಿಳಿದುಕೊಳ್ಳೋಣ. ಹಾಗೆಯೇ ಕನ್ನಡದಲ್ಲಿ ಬಳಕೆಯಲ್ಲಿರುವ ಕೆಲವು ಬರವಣಿಗೆಯ ಮಾದರಿಗಳನ್ನು ಮತ್ತು ಸಂವಹನಕ್ಕೆ ಬಳಸುವ ಭಾಷೆಯ ಪರಿಚಯವನ್ನು ಇಲ್ಲಿ ಮಾಡಿಕೊಳ್ಳೋಣ.

೧೩.೨. ಸಂವಹನ ಕನ್ನಡ: ಸಂಕ್ಷಿಪ್ತ ಪರಿಚಯ

ಮನುಷ್ಯರು ತಮ್ಮ ದೈನಂದಿನ ಕೆಲಸಗಳ ಸಲುವಾಗಿ, ಯೋಗಕ್ಷೇಮ ತಿಳಿಯುವ ಕಾರಣ, ಶುಭಾಶಯ ಕೋರುವ ಉದ್ದೇಶದಿಂದ, ಅಗತ್ಯ ಕಛೇರಿ ಕೆಲಸಕ್ಕಾಗಿ, ತುರ್ತು ಮಾಹಿತಿ ರವಾನೆಗಾಗಿ ಸುದ್ದಿಯನ್ನು ತಲುಪಿಸಲು ಬರವಣಿಗೆಯ ಮೂಲಕ ಕಾಗದ ಅಥವಾ ಪತ್ರ ಬರೆಯುವುದನ್ನು ಪತ್ರಲೇಖನ ಎನ್ನುತ್ತೇವೆ. ಇಂದಿನ ದಿನಗಳಲ್ಲಿ ಅಂತರ್ಜಾಲ ಸಂಪರ್ಕದ ಕಾರಣ, ಕಾಗದ ಅಥವಾ ಪತ್ರ ಬರೆಯುವ ಅಭ್ಯಾಸ ಕ್ರಮೇಣ ಕ್ಷೀಣಿಸುತ್ತಿದೆ ಯಾದರೂ ಇಮೇಲ್ ಮತ್ತು ಮೊಬೈಲ್‌ಗಳಲ್ಲಿ ಸುದ್ದಿ, ಮಾಹಿತಿ ಮತ್ತು ಪತ್ರ ಬರೆಯುವಾಗ ಪತ್ರಲೇಖನದ ಅಂಶಗಳನ್ನು ಬಳಸಬೇಕಾಗುತ್ತದೆ.

'ಮಂಗಳೂರು ಸಮಾಚಾರ' ೧೮೪೩ ಜುಲೈ ೧ರಂದು ಮೊಟ್ಟ ಮೊದಲ ಕನ್ನಡದ ಸುದ್ದಿ ಪತ್ರಿಕೆಯಾಗಿ ಪ್ರಕಟವಾಯಿತು. ಅದನ್ನು ಛಾಪಿಸಿದ ಹರ್ಮನ್ ಮೊಗ್ಲಿಂಗ್ ಬಳಸಿದ ಕನ್ನಡ ಭಾಷೆಯನ್ನು ಅಧಿಕೃತವಾಗಿ ಮುದ್ರಣ ಮಾಧ್ಯಮದ ಸಂವಹನ ಕನ್ನಡ ಎಂದು ಪರಿಗಣಿಸಬಹುದು. ಚಿತ್ರ ೧ರಲ್ಲಿ ಅದರ ಪ್ರತಿಯನ್ನು ನೋಡಬಹುದು. ಆದರೆ ಕಲ್ಲಚ್ಚು ಮುದ್ರಣಾ ಯಂತ್ರದ ಮೂಲಕ ಪ್ರಕಟವಾದ ಸಮಾಚಾರ ಪತ್ರಿಕೆಗಳಲ್ಲಿ ಬಳಸಲ್ಪಡುತ್ತಿದ್ದ ಕನ್ನಡಕ್ಕೂ ಮೊದಲು, ಜನರು ವೈಯಕ್ತಿಕ ಹಾಗೂ ವ್ಯವಹಾರಿಕ ಪತ್ರಲೇಖನದಲ್ಲಿ ಬಳಸುತ್ತಿದ್ದ ಕನ್ನಡವನ್ನು ಸಹ ಆರಂಭಿಕ ರೂಪದ ಸಂವಹನ ಕನ್ನಡವೆಂದೇ ಭಾವಿಸಲಾಗಿದೆ. ಆರಂಭದ ಇಂತಹ ಕನ್ನಡ ಬರವಣಿಗೆಯಲ್ಲಿ ಭಾಷೆಯು ತುಸು ಗ್ರಾಂಥಿಕವಾಗಿದ್ದು, ಅಂಕಿಗಳನ್ನು ಬರೆಯುವಾಗ ಈಗಿನಂತೆ ಆಂಗ್ಲ ಅಂಕಿಗಳ ಬಳಕೆ ಇರಲಿಲ್ಲ. ಹತ್ತೊಂಬತ್ತನೆಯ ಶತಮಾನದ ಅಂತ್ಯದವರೆಗೂ ಕನ್ನಡದ ಅಂಕಿಗಳ ಬಳಕೆಯನ್ನು ನಾವು ಕಾಣುತ್ತೇವೆ. ನಂತರ 'ಇಂಗ್ಲಿಷ್' ಶಿಕ್ಷಣ ಮತ್ತು ಆಧುನಿಕತೆಯ ಪ್ರಭಾವದ ಕಾರಣ ಕ್ರಮೇಣ ಕನ್ನಡ ಅಂಕಿಗಳ ಬಳಕೆ ಕ್ಷೀಣಿಸಿತು.

ಇಂದು ದೈನಂದಿನ ವ್ಯವಹಾರದ ಸಲುವಾಗಿ ಸಂವಹನಕ್ಕೆ ಬಳಸುವ ಕನ್ನಡದ ವಿವಿಧ ರೂಪಗಳನ್ನು ತಿಳಿದುಕೊಳ್ಳುವುದು ಬಹುಮುಖ್ಯವಾಗಿದೆ. ಬದಲಾದ ಕಾಲಕ್ಕೆ ಅನುಗುಣವಾಗಿ ಬದಲಾದ ಭಾಷೆ, ಶೈಲಿ ಮತ್ತು ಬರವಣಿಗೆಯ ವಿಧಾನವನ್ನು ಅನುಸರಿಸುವುದು ತುಂಬಾ ಅಗತ್ಯ. ಕಂಪ್ಯೂಟರ್ ಯಂತ್ರದ ಮೂಲಕ ಬರವಣಿಗೆ ಆರಂಭವಾದ ದಿನಗಳಲ್ಲಿ



ಮಂಗಳೂರು ಸಮಾಚಾರ

ಗುರುವಾರ

ಚರಿತ್ರೆ.

೧ ಪುಟ ವರ್ತಮಾನ.

೨ ಸರಕಾರದವರ ಕಾಯಿದೆಗಳು.

೩ ಸರಕಾರ್ಯ ವರ್ತಮಾನಪತ್ರ.

ಚಿತ್ರ ೧: 'ಮಂಗಳೂರು ಸಮಾಚಾರ', ೧೯೪೩ರಲ್ಲಿ ಕನ್ನಡದಲ್ಲಿ ಪ್ರಕಟವಾದ ಮೊದಲ ಸುದ್ದಿ ಪತ್ರಿಕೆ

ಕನ್ನಡಕ್ಕೆ ಕೀಲಿಮಣೆ ವಿನ್ಯಾಸ ರೂಪಿಸುವಲ್ಲಿ ಕೆ.ಪಿ. ರಾವ್ ಅವರ ಶ್ರಮವನ್ನು ನೆನೆಯಲೇಬೇಕು. ಮಾಹಿತಿ ಕ್ಷೇತ್ರದಲ್ಲಿ ವ್ಯವಹಾರಿಕ ಬರವಣಿಗೆಯ ಮಹತ್ವವನ್ನು ಅರಿತು, ಕನ್ನಡಕ್ಕಾಗಿ ಪ್ರತ್ಯೇಕ ಕಂಪ್ಯೂಟರ್ ಕೀಲಿಮಣೆ ವಿನ್ಯಾಸದ ಸಂಶೋಧನೆಯಲ್ಲಿ ತೊಡಗಿ, ಯಶಸ್ವಿ ತಂತ್ರಾಂಶವನ್ನು ರೂಪಿಸಿದ ಗೌರವ ರಾವ್ ಅವರಿಗೆ ಸಲ್ಲುತ್ತದೆ. ಡಿ.ಟಿ.ಪಿ.ಗೆ ಸಹಾಯಕವಾಗುವಂತಹ ಪೂರಕ ಕನ್ನಡ ತಂತ್ರಾಂಶಗಳಾದ 'ಶಬ್ದರತ್ನ', 'ವೀನಸ್', 'ಪ್ರಕಾಶಕ' ಮತ್ತು 'ಸೇಡಿಯಾಪು'ಗಳ ಬಳಕೆ ಆರಂಭವಾಗಿದ್ದು ಸಹ ಇದೇ ಕಾಲಾವಧಿಯಲ್ಲಿ. ರಾವ್ ಅವರು ರೂಪಿಸಿದ ಉಚಿತ ತಂತ್ರಾಂಶ ನಂತರ ಬಳಕೆಗೆ ಬಂದ 'ಬರಹ' ಮತ್ತು 'ನುಡಿ' ತಂತ್ರಾಂಶಗಳಿಗೆ ಬುನಾದಿ ಆಯಿತು. 'ನುಡಿ'ಯಲ್ಲಿ ಬಳಸಲ್ಪಡುವ ಲೇಔಟ್ ಸಹ ರಾವ್ ಅವರು ರೂಪಿಸಿದ್ದಾಗಿದೆ. ಸಂವಹನ ಕನ್ನಡದ ಬೆಳವಣಿಗೆಯಲ್ಲಿ ಈ ಸಂಶೋಧನೆಗಳು ಬಹುಮುಖ್ಯ ಪಾತ್ರವಹಿಸಿವೆ.

ಉದ್ದೇಶಿತ ಅರ್ಥವನ್ನು ಉದ್ದೇಶಿತ ಓದುಗನಿಗೆ ಅಥವಾ ಸಂಸ್ಥೆಗೆ ತಲುಪಿಸುವಲ್ಲಿ ಬರಹಗಾರರು ಬಳಸುವ ಕನ್ನಡದ ಕುರಿತು ಇಲ್ಲಿ ಚರ್ಚಿಸಲಾಗಿದೆ. ಇದನ್ನೇ ವಿಶಾಲವಾಗಿ ಸಂವಹನ ಕನ್ನಡ ಎಂದು ಕರೆಯಬಹುದು. ಇದರ ವಿವಿಧ ರೂಪಗಳನ್ನು ನಾವಿಲ್ಲಿ ತಿಳಿದುಕೊಳ್ಳಲು ಪ್ರಯತ್ನಿಸೋಣ. ನಾವು ದಿನನಿತ್ಯ ಮಾಧ್ಯಮಗಳಲ್ಲಿ ಕಾಣುವ ಜಾಹೀರಾತುಗಳಲ್ಲಿ ಮತ್ತು ಸೂಚನಾಫಲಕ ಮುಂತಾದವುಗಳಲ್ಲಿ ಬಳಸುವ ಕನ್ನಡ

ಭಾಷೆಯ ಬಳಕೆ ದ್ವಂದ್ವಾರ್ಥ ಅಥವಾ ಅಪಾರ್ಥಗಳನ್ನು ಹೊಮ್ಮಿಸುವುದನ್ನು ಕಾಣುತ್ತೇವೆ. ಸಂಚಾರಿ ಸೂಚನಾಫಲಕಗಳು ಹಾಗೂ ಅಂಗಡಿಗಳ ಎದುರು ನಿಲ್ಲಿಸಲಾಗುವ ನಾಮಫಲಕಗಳಲ್ಲೂ ವ್ಯಂಗ್ಯಾರ್ಥದ ಭಾಷಾ ಬಳಕೆಯನ್ನು ಕಾಣಬಹುದು. ಉದಾಹರಣೆಗೆ ಸೂಚನಾಫಲಕವೊಂದರಲ್ಲಿ ಇಂಗ್ಲಿಷ್ ವಾಕ್ಯದ ಯಥಾವತ್ತು ಅನುವಾದ ಮಾಡಿರುವ ಎಡವಟ್ಟನ್ನು ಗಮನಿಸಿ. 'ಡು ನಾಟ್ ಪಾಸ್ ಯೂರಿನ್' ಎಂಬ ಸೂಚನೆಯನ್ನು ಕನ್ನಡಕ್ಕೆ 'ಇಲ್ಲಿ ಮೂತ್ರ ತೇರ್ಗಡೆ ಹೊಂದಿಲ್ಲ' ಎಂದು ಅನುವಾದ ಮಾಡಿದರೆ ಆಗುವ ಅಪಾರ್ಥ ದೊಡ್ಡದು.

೧೩.೨.೧. ಪತ್ರಲೇಖನ

ಭಾಗ (ಅ) ಪತ್ರಲೇಖನ, ಅದರ ಪ್ರಯೋಜನ ಮತ್ತು ಪತ್ರಲೇಖನದ ಬಗ್ಗೆ ತಿಳಿಯುವ ಅಗತ್ಯ

ಸುಪ್ರಸಿದ್ಧ ಸಂಸ್ಕೃತ ಖಂಡಕಾವ್ಯವಾದ ಕಾಳಿದಾಸನ 'ಮೇಘದೂತ'ದಲ್ಲಿ ಯಕ್ಷನು ತನ್ನ ಸಖಿಗೆ ಸಂದೇಶ ಕಳಿಸಲು ಮೇಘವನ್ನು – ಅಂದರೆ ಮೋಡವನ್ನು – ಅವಲಂಬಿಸಿದ ಉದಾಹರಣೆ ನಮಗೆಲ್ಲ ತಿಳಿದಿದೆ. ಹಾಗೆಯೇ ಭಾರತ ಮತ್ತು ಐರೋಪ್ಯ ದೇಶಗಳೂ ಸೇರಿದಂತೆ, ರಾಜರ ಆಳ್ವಿಕೆ ಕಾಲದಲ್ಲಿ ಮಾಹಿತಿ ಮತ್ತು ಸಂದೇಶಗಳ ರವಾನೆಗಾಗಿ ಕುದುರೆ ಸವಾರಿ ಸಂದೇಶವಾಹಕರು, ಪಾರಿವಾಳ, ಹಂಸಗಳ ಕಾಲಿಗೆ ಇಲ್ಲವೆ ರೆಕ್ಕೆಗೆ ಲಿಖಿತ ಬರಹ ಕಟ್ಟಿ ನಿಗದಿತ ಸ್ಥಳಕ್ಕೆ ತಲುಪಿಸುವ ಆಚರಣೆ ಜಾರಿಯಲ್ಲಿತ್ತು. ಕಾಲ ಕಳೆದಂತೆ ವ್ಯಾಪಾರದ ಅನುಕೂಲಕ್ಕಾಗಿ ಪತ್ರಿಕಾ ಕಛೇರಿಯ ಕೆಲಸದ ನಿಮಿತ್ತ ಐರೋಪ್ಯ ದೇಶಗಳಲ್ಲಿ ಟೆಲಿಗ್ರಾಮ್ ಸೇವೆ, ಮೇಲ್ ಅಥವಾ ಪೋಸ್ಟಲ್ ಸರ್ವೀಸ್ ಅಂದರೆ ಸುದ್ದಿ ರವಾನೆ ಸೇವೆ ಆರಂಭವಾಯಿತು. ಇದರಿಂದ ಭಾರತ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಾಗ ನಮ್ಮ ದೇಶದಲ್ಲಿಯೂ ಸುದ್ದಿ ರವಾನೆ ಸೇವೆ ಶುರುವಾಯಿತು. ಹಾಗಾಗಿ 'ಹಂಸ ಸೇವೆ' ಪದದಿಂದ 'ಅಂಚೆ ಸೇವೆ' ಬಳಕೆಗೆ ಬಂತು. ಈ ಇಲಾಖೆಯ ನೌಕರರು ದೂರದ ಊರುಗಳಿಂದ ಜನರು ಬರೆದ ಪತ್ರಗಳನ್ನು ಮತ್ತು ತುರ್ತು ಸಂದೇಶಗಳನ್ನು ಉದ್ದೇಶಿತ ಜಾಗಗಳಿಗೆ, ವ್ಯಕ್ತಿಗಳಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾರೆ. ಒಮ್ಮೊಮ್ಮೆ ಅನಕ್ಷರಸ್ಥರಿಗೆ ಬರೆದ ಪತ್ರಗಳನ್ನು ಅಂಚೆ ಇಲಾಖೆಯ ವಿತರಕರು ಓದಿ ತಿಳಿಸುವುದನ್ನು ಸಹ ನಾವು ನೋಡಿದ್ದೇವೆ.

ಪತ್ರ ಲೇಖನದ ಪ್ರಯೋಜನ

ವಾತಾವರಣದ ವೈಪರೀತ್ಯ ಕಾರಣಗಳಿಂದಾಗಿ ಪಾರಿವಾಳಗಳು, ಹಂಸಗಳು, ಕುದುರೆ ಸವಾರಿ ಸಂದೇಶವಾಹಕರ ಸೇವೆ ಸಮಯಕ್ಕೆ ಸರಿಯಾಗಿ ಸುದ್ದಿ ತಲುಪಿಸುವಲ್ಲಿ ವಿಫಲವಾಗುತ್ತಿದ್ದವು. ಹಾಗಾಗಿ ಅಂಚೆ ಸೇವೆ ಜಾರಿಗೆ ಬಂತು. ಯಾವುದೇ ಸಮಯದಲ್ಲಿ ಉದ್ದೇಶಿತ ವ್ಯಕ್ತಿಗೆ ಅಥವಾ ಕಚೇರಿಗೆ ನೇರ ಸುದ್ದಿ ತಲುಪಿಸಲು ಮತ್ತು ಮಾಹಿತಿ ನೀಡಲು ಸಾಧ್ಯವಿಲ್ಲದಿರುವ ಕಾರಣ ಜನರು ಪತ್ರ ಬರವಣಿಗೆಯನ್ನು ಅವಲಂಬಿಸುತ್ತಾರೆ. ಈಗಂತೂ ಅಂತರ್ಜಾಲ ಸೇವೆಯ ಕಾರಣ ಟೈಪ್ ಮಾಡಿದ ಸಂದೇಶವನ್ನು ಕ್ಷಣ ಮಾತ್ರದಲ್ಲಿ ತಲುಪಿಸುವ ಆಧುನಿಕ ಸೌಲಭ್ಯ ದೊರಕಿದೆ. ಇದರಿಂದ ಸಮಯದ ಉಳಿತಾಯ ಹಾಗೂ ತ್ವರಿತ ಸೇವೆಗಳು ಸಾಧ್ಯವಾಗಿದ್ದು ತುಂಬಾ ಅನುಕೂಲವಾಗಿದೆ.

ಪತ್ರಲೇಖನದ ಬಗ್ಗೆ ತಿಳಿಯುವ ಅಗತ್ಯ

ಪ್ರತಿ ಬರವಣಿಗೆಗೆ ತನ್ನದೇ ಆದ ಬರೆಯುವ ಕ್ರಮ, ಶೈಲಿ ಮತ್ತು ವಿಧಾನಗಳು ಇರುತ್ತವೆ. ಪತ್ರ ಬರೆಯುವ ಮತ್ತು ಓದುವ ವ್ಯಕ್ತಿಗೆ ಆ ಭಾಷೆಯ ಅಕ್ಷರ ಜ್ಞಾನ ಇರಲೇಬೇಕು. ಇಂದು ನಾವು ಬರೆಯುವ ಎಸ್.ಎಂ.ಎಸ್. ಅಂದರೆ ಶಾರ್ಟ್ ಮೆಸೇಜ್ ಸರ್ವಿಸ್ ಅಂದರೆ ಲಘು ಸಂದೇಶ ಬರವಣಿಗೆಯಿಂದ ಅನೇಕ ಸಲ ಅಪಾರ್ಥಗಳು ಆಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಬರೆದ ಸಂದೇಶದ ಬಗ್ಗೆ ಸ್ಪಷ್ಟತೆ ಇರಬೇಕು. ಇಲ್ಲವಾದಲ್ಲಿ ಪತ್ರ ಬರೆದ ಉದ್ದೇಶ ಪೂರ್ತಿ ಆಗುವುದಿಲ್ಲ. ಅಲ್ಲದೆ ಕಛೇರಿ ಸಂಬಂಧಿತ ಕೆಲಸಗಳಿಗೆ ಔಪಚಾರಿಕ ಪತ್ರ ಬರೆಯುವ ಅಗತ್ಯ ಇದ್ದೇ ಇರುತ್ತದೆ. ಪತ್ರ ಬರವಣಿಗೆ ಮಾಡುವ ಮೊದಲು ಇಂತಹ ಕೆಲ ಅಂಶಗಳನ್ನು ತಿಳಿಯುವುದು ಮುಖ್ಯ.

ಅಭ್ಯಾಸ ಭಾಗ (ಅ)

೧. ಬಿಟ್ಟಿರುವ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿ ಬರೆಯಿರಿ.

(ಅ) ಕಾಗದ ಬರೆಯುವುದನ್ನು _____ ಎನ್ನುತ್ತೇವೆ.

(ಆ) 'ಅಂಚೆ' ಎಂಬ ಪದವು _____ ಎಂಬ ಸಂಸ್ಕೃತ ಪದದ ಕನ್ನಡ ರೂಪವಾಗಿದೆ.

(ಇ) _____ ಮತ್ತು _____ ಕಂಪ್ಯೂಟರ್‌ನಲ್ಲಿ ಕನ್ನಡ ಬರವಣಿಗೆಯ ಎರಡು ಮುಖ್ಯ ತಂತ್ರಾಂಶಗಳು.

(ಈ) ಕನ್ನಡದ ಮೊದಲ ಪತ್ರಿಕೆಯನ್ನು _____ ಆರಂಭಿಸಿದನು.

೨. ಪತ್ರ ಬರವಣಿಗೆಯಿಂದ ಆಗುವ ಪ್ರಯೋಜನಗಳೇನು ಎಂಬುದನ್ನು ವಿವರಿಸಿ.

೩. ಪತ್ರ ಬರವಣಿಗೆಯ ವಿಧಾನದ ಬಗ್ಗೆ ಏಕೆ ತಿಳಿದುಕೊಳ್ಳಬೇಕು?

೧೩.೨.೧. ಭಾಗ (ಆ) ಪತ್ರಗಳ ಪ್ರಕಾರಗಳು

ಪತ್ರಗಳಲ್ಲಿ ಹಲವಾರು ಪ್ರಕಾರಗಳನ್ನು ಗುರುತಿಸಬಹುದು. ವೈಯಕ್ತಿಕ ಪತ್ರಗಳು, ವಾಣಿಜ್ಯ ಪತ್ರಗಳು, ದೂರು ಮತ್ತು ಉತ್ತರದ ಪತ್ರಗಳು, ಉದ್ಯೋಗ ಪತ್ರಗಳು, ಶ್ರದ್ಧಾಂಜಲಿ ಪತ್ರಗಳು, ಸಂಪಾದಕರಿಗೆ ಪತ್ರಗಳು, ಆಹ್ವಾನ ಪತ್ರಗಳು ಹೀಗೆ ಹಲವಾರು ಪ್ರಕಾರಗಳನ್ನು ನೋಡಬಹುದು. ಈ ಎಲ್ಲಾ ಪ್ರಕಾರಗಳನ್ನು ಇಲ್ಲಿ ಚರ್ಚಿಸಲು ಸಾಧ್ಯವಿಲ್ಲ. ಆದ್ದರಿಂದ ಕೆಲವು ಪ್ರಮುಖ ಪ್ರಕಾರಗಳಾದ ವೈಯಕ್ತಿಕ ಪತ್ರ, ಆಹ್ವಾನ ಪತ್ರ, ಉದ್ಯೋಗ (ಅರ್ಜಿ) ಪತ್ರ, ಸಂಪಾದಕರಿಗೆ ಪತ್ರ, ವಾಣಿಜ್ಯ ಪತ್ರ ಮುಂತಾದವುಗಳ ಬರವಣಿಗೆಯ ಸ್ವರೂಪವನ್ನು ನೋಡೋಣ.

೧. ವೈಯಕ್ತಿಕ ಪತ್ರಗಳು

ತುಂಬಾ ಖಾಸಗಿ ಸಂಬಂಧಿಗಳಿಗೆ ಬರೆಯುವ ಪತ್ರಗಳನ್ನು ವೈಯಕ್ತಿಕ ಪತ್ರಗಳೆಂದು ಕರೆಯುತ್ತೇವೆ. ಇದರಲ್ಲಿ ಇಬ್ಬರು ಪ್ರೇಮಿಗಳು ಪರಸ್ಪರ ಬರೆದುಕೊಳ್ಳುವ ಪ್ರೇಮ ಪತ್ರಗಳು, ಅಪ್ಪ ಮಗನಿಗೆ ಬರೆದ, ಮಗ ತಂದೆ–ತಾಯಿಗಳಿಗೆ ಬರೆದ, ಅಣ್ಣ–ತಮ್ಮಂದಿರು ಪರಸ್ಪರ ಬರೆದುಕೊಂಡ, ಅಕ್ಕ–ತಂಗಿಯರು ಪರಸ್ಪರ ಬರೆದುಕೊಂಡ ಹಾಗೂ ಇತರೆ ನೆಂಟರಿಗೆ ಬರೆಯುವ ಪತ್ರಗಳನ್ನು ಈ ಸಾಲಿಗೆ ಸೇರಿಸಬಹುದು. ಆರೋಗ್ಯದ ವಿಚಾರಣೆ ಮಾಡಲು, ಹಣಕಾಸಿನ ಸಹಾಯ ಕೋರಲು, ಪ್ರಯಾಣದ ವಿವರ ತಿಳಿಸಲು, ಸಂಬಂಧಗಳನ್ನು

ಏರ್ಪಡಿಸಲು, ಮನಸ್ತಾಪಗಳನ್ನು ವ್ಯಕ್ತಪಡಿಸಲು, ಕ್ಷಮೆ ಕೋರಲು ಇತ್ಯಾದಿ ಕಾರಣಗಳಿಗೆ ವೈಯಕ್ತಿಕ ಪತ್ರಗಳನ್ನು ಬರೆಯುವುದು ರೂಢಿಯಲ್ಲಿದೆ. ಇದರಲ್ಲಿ ಕೆಲ ಅಂಶಗಳನ್ನು ತಪ್ಪದೇ ಬರೆಯಬೇಕಾಗುತ್ತದೆ. ಉದಾಹರಣೆಗೆ, (ಅ) ಪತ್ರ ಬರೆಯುವವರ ವಿಳಾಸ ಹಾಗೂ ದಿನಾಂಕ, ಯಾರಿಗೆ ಪತ್ರ ಬರೆಯುತ್ತೇವೋ ಅವರ ವಿಳಾಸ, (ಆ) ಯಾರಿಗೆ ಪತ್ರ ಬರೆಯುತ್ತೇವೋ ಅವರನ್ನು ಗೌರವಪೂರ್ವಕವಾಗಿ ಕರೆಯುವ ಅಂದರೆ ಸಂಬೋಧನೆಯ ಕ್ರಮ, (ಇ) ಹೇಳಬೇಕಾದ ವಿಷಯ ಮತ್ತು (ಈ) ಮುಕ್ತಾಯ.

ಅಂತರ್ಜಾಲದ ಅನುಕೂಲತೆ ಮತ್ತು ಮೊಬೈಲ್ ಸಂಪರ್ಕದ ಇಂದಿನ ದಿನಗಳಲ್ಲಿ ವೈಯಕ್ತಿಕ ಕಾರಣಕ್ಕೆ ಪತ್ರ ಬರೆಯುವ ಅಭ್ಯಾಸ ಕ್ಷೀಣಿಸುತ್ತಿರುವುದನ್ನು ನೋಡಬಹುದು. ಆದರೆ ಅಲ್ಲಲ್ಲಿ ಹಿರಿಯ ತಲೆಮಾರಿನ ಜನಾಂಗ ಇನ್ನೂ ಪತ್ರ ಬರೆಯುವುದನ್ನು ಒಂದು

ಕೃಷ್ಣಮೂರ್ತಿ
ಮನೆ ನಂ. ೧೫
ಪಟೇಲ್ ನಗರ
ಹೊಸಪೇಟೆ

ದಿನಾಂಕ: ೨೬ನೆಯ ಸೆಪ್ಟೆಂಬರ್, ೨೦೨೧

ಪೂಜ್ಯ ತಂದೆಯವರಿಗೆ ನಿಮ್ಮ ಮಗ ಕೃಷ್ಣಮೂರ್ತಿ ಮಾಡುವ ನಮಸ್ಕಾರಗಳು,

ನಿಮ್ಮ ಆಶೀರ್ವಾದದಿಂದ ನಾನಿಲ್ಲಿ ಆರೋಗ್ಯವಾಗಿದ್ದೇನೆ. ವಿದ್ಯಾಭ್ಯಾಸವು ಸುಗಮವಾಗಿ ಸಾಗುತ್ತಿದೆ. ಕಳೆದ ಸೆಮಿಸ್ಟರ್‌ನ ಫಲಿತಾಂಶ ಪ್ರಕಟವಾಗಿದ್ದು, ಶೇ. ೮೦ ಅಂಕ ಪಡೆದು ಉತ್ತೀರ್ಣನಾಗಿರುತ್ತೇನೆ. ಹೀಗೆಯೇ ಉತ್ತಮವಾಗಿ ತಯಾರಿ ಮಾಡಿ ಪರೀಕ್ಷೆ ಬರೆದಲ್ಲಿ ನನ್ನ ಅಂತಿಮ ವರ್ಷದ ಫಲಿತಾಂಶ ಇಡೀ ಮಹಾವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆಯುವುದರಲ್ಲಿ ಸಂದೇಹವಿಲ್ಲ. ಮನೆಯಲ್ಲಿ ಅಜ್ಜಿ, ಅಮ್ಮನಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ, ತಂಗಿಗೆ ನನ್ನ ಪ್ರೀತಿಯ ನೆನಕೆಯನ್ನು ತಿಳಿಸಿ, ಸಾಧ್ಯವಾದರೆ ಬರುವ ದೀಪಾವಳಿ ಹಬ್ಬಕ್ಕೆ ಊರಿಗೆ ಬರಲು ಪ್ರಯತ್ನಿಸುತ್ತೇನೆ. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಉಳಿದಂತೆ ಚಿಕ್ಕಪ್ಪ, ಚಿಕ್ಕಮ್ಮ ಮತ್ತಿತರರಿಗೆ ನನ್ನ ನಮನಗಳನ್ನು ತಿಳಿಸಿ,

ಇಂತಿ ನಿಮ್ಮ ಪ್ರೀತಿಯ ಮಗ
ಚಿ॥ ಕೃಷ್ಣಮೂರ್ತಿ
ಉದಯ ವಸತಿ ನಿಲಯ
ಕರ್ನಾಟಕ ಕಾಲೇಜು
ಧಾರವಾಡ

ಚಿತ್ರ ೨: ವೈಯುಕ್ತಿಕ ಪತ್ರದ ಮಾದರಿ

ಆಪ್ತ ಸಂಬಂಧದಂತೆ ಪರಿಗಣಿಸುವುದನ್ನೂ ಗಮನಿಸಬಹುದು. ಹಾಗಾಗಿ ನಿಖರವಾಗಿ ಹೀಗೇ ಪತ್ರ ಬರೆಯಬೇಕೆಂದು ನಿಯಮ ಇಲ್ಲದಿದ್ದರೂ, ಮೊದಲಿಗೆ ಪತ್ರ ಬರೆಯುವವರ ವಿಳಾಸ ಹಾಗೂ ದಿನಾಂಕಗಳನ್ನು ಬರೆಯುವುದು ಸಾಮಾನ್ಯ. ಎರಡನೆಯ ಅಂಶ ಸಂಬೋಧನೆ. ಪತ್ರ ಬರೆಯುತ್ತಿರುವವರ ಮತ್ತು ಯಾರಿಗೆ ಪತ್ರ ಬರೆಯಲ್ಪಡುತ್ತಿದೆಯೋ ಅವರ ನಡುವಣ ಸಂಬಂಧವನ್ನು ಆಧರಿಸಿ ಸಂಬೋಧನೆಯ ಪದದ ಬಳಕೆ ಅವಲಂಬಿತ ವಾಗಿರುತ್ತದೆ. ಉದಾಹರಣೆಗೆ, ಮಗ ತಂದೆಗೆ ಬರೆಯುವಾಗ 'ಪೂಜ್ಯರಾದ', 'ಪೂಜನೀಯ' ಎಂದೋ, ತಾಯಿಗೆ ಬರೆಯುವ ಪತ್ರದಲ್ಲಿ 'ಮಾತೃಶ್ರೀ'ಯವರಿಗೆ ಎಂದೋ, ಮಾವನವರಿಗೆ ಅಥವಾ ಚಿಕ್ಕಪ್ಪನಿಗೆ ಬರೆಯುವಾಗ 'ತೀರ್ಥರೂಪ ಮಾವನವರಿಗೆ' ಮತ್ತು 'ತೀರ್ಥರೂಪ ಚಿಕ್ಕಪ್ಪನವರಿಗೆ' ಎಂದೋ, ಇಲ್ಲವೆ ಮಗನಿಗೆ ತಂದೆಯಿಂದ ಪತ್ರ ಬರೆಯುವಾಗ 'ಚಿರಂಜೀವಿ' ಅಥವಾ 'ಕುಮಾರನಿಗೆ' ಎಂದೋ, ಸ್ನೇಹಿತರಿಗೆ, ಗೆಳೆಯರಿಗೆ ಅಥವಾ ಪ್ರೀತಿ ಪಾತ್ರರಿಗೆ ಬರೆಯುವಾಗ 'ಅಕ್ಕರೆಯ, ಪ್ರೀತಿಯ ಗೆಳತಿ / ಗೆಳೆಯ' ಎಂದೋ, ಹೀಗೆ ಸಂಬೋಧನೆ ಬದಲಾಗುತ್ತ ಹೋಗುತ್ತದೆ.

ಯಾವ ವಿಷಯವನ್ನು ಹೇಳಬೇಕಾಗಿರುತ್ತದೆಯೊ, ಅದನ್ನು ನೇರವಾಗಿ, ಸರಳವಾಗಿ, ಗೊಂದಲ ಇಲ್ಲದಂತೆ ಹೇಳಬೇಕು. ಬರೆಯುವವರಿಗೆ ಸ್ಪಷ್ಟತೆ ಇದ್ದರೆ ಸಾಲದು; ಪತ್ರವನ್ನು ಓದುವವರಿಗೂ ಸ್ಪಷ್ಟತೆ ಇರುವಂತೆ ಬರೆಯುವುದು ಒಂದು ಕಲೆ.

ಅಂತಿಮವಾಗಿ ವಂದನೆಗಳನ್ನು ಸಲ್ಲಿಸುವ ವಿವಿಧ ಪದಗಳನ್ನು ಬಳಸಬಹುದು. ಧನ್ಯವಾದಗಳೊಂದಿಗೆ, ಪ್ರೀತಿಯಿಂದ, ನಮಸ್ಕಾರಗಳೊಂದಿಗೆ, ಎಂದೆಂದಿಗೂ ಪ್ರೀತಿಯಿಂದ ಇತ್ಯಾದಿ ಪದಗಳಿಂದ ಪತ್ರವನ್ನು ಕೊನೆಗೊಳಿಸಬಹುದು. ನಿದರ್ಶನಕ್ಕೆಂದು ಮೇಲೆ ಚಿತ್ರ ೨ರಲ್ಲಿ ಕೊಟ್ಟಿರುವ ಉದಾಹರಣೆಯನ್ನು ಗಮನಿಸಬಹುದು.

೨. ಆಹ್ವಾನ ಪತ್ರಗಳು

ಆಹ್ವಾನ ಪತ್ರಗಳಲ್ಲಿ ಉದ್ಘಾಟನಾ ಸಮಾರಂಭಕ್ಕೆ ಬರಮಾಡಿಕೊಳ್ಳುವ, ಮದುವೆಯ ಕರೆಯೋಲೆಯನ್ನು ಕಳಿಸುವ, ಗೃಹಪ್ರವೇಶಕ್ಕೆ ಆಮಂತ್ರಣ ನೀಡುವ, ವಾರ್ಷಿಕ ಸಮಾರಂಭಕ್ಕೆ ಕರೆಯಿಸಿಕೊಳ್ಳುವ ಮುಂತಾದ ಪ್ರಕಾರಗಳಿವೆ. ಇವುಗಳನ್ನು ಹೊರತುಪಡಿಸಿ ಇನ್ನೂ ಹಲವು ಬಗೆಯ ಆಹ್ವಾನ ಪತ್ರಗಳನ್ನು ಕನ್ನಡದಲ್ಲಿ ನೋಡಬಹುದು. ಇಂತಹ ಪತ್ರಗಳ ಉದ್ದೇಶ ನಿಗದಿತ ಸಮಯಕ್ಕೆ ಉದ್ದೇಶಿತ ಕಾರ್ಯಕ್ರಮಕ್ಕೆ ಸಂಬಂಧಿಗಳನ್ನು, ನೌಕರರನ್ನು, ಪುರಸ್ಕೃತರನ್ನು, ಗಣ್ಯವ್ಯಕ್ತಿಗಳನ್ನು, ಸಾರ್ವಜನಿಕರನ್ನು, ಪತ್ರಿಕಾ ವರದಿಗಾರರನ್ನು ಬರಮಾಡಿ ಕೊಳ್ಳುವ ಉದ್ದೇಶ ಇರುತ್ತದೆ. ಅದರಂತೆಯೇ ಆಮಂತ್ರಣ ಪತ್ರಗಳನ್ನು ತಯಾರಿಸಲಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಆಹ್ವಾನ ಪತ್ರಗಳ ಬದಲಾಗಿ 'ಇನ್ವಿಟೇಷನ್ ಕಾರ್ಡ್' ಅಂದರೆ ಪತ್ರದ ಬದಲಾಗಿ ಚಿಕ್ಕದಾದ ಆದರೆ ಕ್ರಿಯಾಶೀಲವಾಗಿ ಕಂಪ್ಯೂಟರ್ ಮತ್ತು ತಂತ್ರಾಂಶಗಳ ಸಹಾಯದಿಂದ ಕಾರ್ಡ್‌ಗಳನ್ನು ತಯಾರಿಸಿ ಆಮಂತ್ರಣ ಪತ್ರಗಳನ್ನು ತಯಾರು ಮಾಡುವುದನ್ನು ಗಮನಿಸಬಹುದು. ಕೆಳಗೆ ಚಿತ್ರ ೩ರಲ್ಲಿ ನೀಡಿರುವ ಪುಸ್ತಕ ಬಿಡುಗಡೆಯ ಆಹ್ವಾನ ಪತ್ರಿಕೆಯನ್ನು ಗಮನಿಸಬಹುದು. ಅದರಲ್ಲಿ ತುಂಬಾ ಸಂಕ್ಷಿಪ್ತವಾಗಿ ಕಾರ್ಯಕ್ರಮದ ವಿವರಗಳನ್ನು ಮುದ್ರಿಸಲಾಗಿದೆ. ಪುಸ್ತಕಗಳ ಹೆಸರು, ಅವುಗಳ ಲೇಖಕರು, ಬಿಡುಗಡೆಯ ಸ್ಥಳ, ಸಮಯ, ಅತಿಥಿಗಳು, ಪುಸ್ತಕಗಳನ್ನು ಕುರಿತು ಮಾತನಾಡುವವರ ವಿವರವನ್ನು ಸ್ಪಷ್ಟವಾಗಿ ನೀಡಲಾಗಿದೆ.

ಚಿತ್ರ ೩: ಪುಸ್ತಕ ಬಿಡುಗಡೆ ಸಮಾರಂಭದ ಆಹ್ವಾನಪತ್ರಿಕೆ

೩. ಉದ್ಯೋಗ ಅರ್ಜಿ ಪತ್ರಗಳು

ಉದ್ಯೋಗದ ಅರ್ಜಿ ಅಥವಾ ಇಂಗ್ಲಿಷ್‌ನಲ್ಲಿ 'ಜಾಬ್ ಅಪ್ಲಿಕೇಷನ್' ಎಂದು ಕರೆಯಲ್ಪಡುವ ಈ ಪ್ರಕಾರದ ಪತ್ರಗಳು ಕಛೇರಿ ಮಾದರಿಯ ಪತ್ರಗಳನ್ನು ಹೋಲುತ್ತವೆ. ಆದರೂ ಉದ್ಯೋಗ ಅರ್ಜಿ ಪತ್ರಗಳಲ್ಲಿ ಕೆಲಸ ದೊರಕಿಸಿಕೊಳ್ಳುವ ವಿನಂತಿ ಹಾಗೂ ಕೋರಿಕೆಯ ಧ್ವನಿ ಇರುತ್ತದೆ. ಕೆಲಸಕ್ಕೆ ಸೇರ ಬಯಸುವ ಅಭ್ಯರ್ಥಿಗಳು ಉದ್ಯೋಗ ನೀಡುವ ಸಂಸ್ಥೆಯ ವಿಳಾಸಕ್ಕೆ ಅಭ್ಯರ್ಥಿಯ ನಿಖರವಾದ ವಿವರಗಳನ್ನು ಅಂದರೆ ವಿದ್ಯಾಭ್ಯಾಸ, ಅನುಭವ, ಪರಿಣಿತಿಯ ಕ್ಷೇತ್ರ ಇತ್ಯಾದಿಗಳನ್ನು ಬರೆದು ಕಳಿಸುವ ಪತ್ರ ಉದ್ಯೋಗ ಪತ್ರ ಲೇಖನ ಎನಿಸಿಕೊಳ್ಳುತ್ತವೆ. ಇದರಲ್ಲಿ ಎರಡು ಭಾಗಗಳಿವೆ. ಒಂದು ವಿನಂತಿ ಪತ್ರ; ಮತ್ತೊಂದು ಸ್ವ–ವಿವರ ಪತ್ರ. ವಿನಂತಿ ಪತ್ರದಲ್ಲಿ ಅಭ್ಯರ್ಥಿಯು ಸಂಬಂಧಪಟ್ಟ ಅಧಿಕಾರಿಗೆ ತನ್ನ ಅರ್ಜಿಯನ್ನು ಪರಿಗಣಿಸಲು ಕೋರುತ್ತಾನೆ. ಸ್ವ–ವಿವರ ಪತ್ರದಲ್ಲಿ ತನ್ನ ವೈಯಕ್ತಿಕ ವಿವರಗಳು, ಶೈಕ್ಷಣಿಕ ವಿವರ, ವಿದ್ಯಾರ್ಹತೆ, ಅನುಭವ ಮುಂತಾದ ವಿವರಗಳನ್ನು ಕುರಿತು ಬರೆದಿರುತ್ತಾರೆ. ಸದರಿ ಉದ್ಯೋಗಕ್ಕೆ ಸಂಬಂಧಿಸಿದ ವಿವರಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟು ಅದಕ್ಕೆ ಸಂಬಂಧಿಸಿದ ಅಂಶಗಳನ್ನು ತಪ್ಪದೇ ಬರೆಯಬೇಕು. ಇಂತಹ ಪತ್ರವನ್ನು ಬರೆಯುವಾಗ ಅಭ್ಯರ್ಥಿಯು ತೀರಾ ಹತಾಶೆಯಿಂದಲೋ ಇಲ್ಲವೆ ಕರುಣೆ ಗಿಟ್ಟಿಸಲೋ ಎಂಬಂತೆ ಬರೆಯಬಾರದು. ಸಂಕೀರ್ಣವಾದ ವಾಕ್ಯರಚನೆ, ತಪ್ಪು ಮಾಹಿತಿ, ವೈಯಕ್ತಿಕ ಹವ್ಯಾಸಗಳ ವಿವರಗಳಿಂದ ಪತ್ರ ಮುಕ್ತವಾಗಿರಬೇಕು. ಒಂದೇ ವಿವರವನ್ನು ಮತ್ತೆ ಮತ್ತೆ ಬರೆಯಬಾರದು. ಕೆಳಗೆ ಚಿತ್ರ ೪ರಲ್ಲಿ ಕೊಟ್ಟಿರುವ ಜಾಹೀರಾತಿನ ಉದ್ಯೋಗಕ್ಕಾಗಿ ಬರೆದ ಪತ್ರವನ್ನು ಗಮನಿಸಬಹುದು.

೨೭ ಸೆಪ್ಟೆಂಬರ್ ೨೦೨೧

ಇವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

ಬೆಂಗಳೂರು

ವಿಷಯ: ನೇಮಕಾತಿಗೆ ಅರ್ಜಿ

ಮಾನ್ಯರೆ,

ಈ ಕೆಳಗೆ ಸಹಿ ಮಾಡಿರುವ ನಾನು, ಕುಮಾರ್ ತಂ/ ಸೋಮಶೇಖರ್ ನಾಯಕ ಸಾ: ಅಂಬೇಡ್ಕರ್ ನಗರ, ಜಿಲ್ಲೆ ದಾವಣಗೆರೆ ನಿವಾಸಿಯಾಗಿದ್ದೇನೆ. ಪತ್ರಿಕೆಯಲ್ಲಿ ಪ್ರಕಟವಾದ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಯ ನೇಮಕಾತಿ ಪ್ರಕಟಣೆಯ (ಸು. ಬೆಂಗಜಿಪಂ/ಪಡಿ೨/ರೂರನ್ ೨೦೨೧–೨೧) .ಅನುಸಾರ ಗ್ರಾಮೀಣ ಅಭಿವೃದ್ಧಿ ಮತ್ತು ನಿರ್ವಹಣೆ ಅಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸುತ್ತಿದ್ದೇನೆ. ಸದರಿ ಮನವಿ ಪತ್ರದೊಂದಿಗೆ ನನ್ನ ಸ್ವ–ವಿವರದ ಪ್ರತಿಯನ್ನು ಲಗತ್ತಿಸಿರುತ್ತೇನೆ. ನನ್ನ ವಿದ್ಯಾರ್ಹತೆ ಮತ್ತು ಅನುಭವವನ್ನು ಅನುಲಕ್ಷಿಸಿ ಸಂದರ್ಶಕ್ಕೆ ಪರಿಗಣಿಸುತ್ತೀರೆಂದು ನಂಬುತ್ತೇನೆ.

ವಿಶ್ವಾಸದಿಂದ

ಉದ್ಯೋಗಾಕಾಂಕ್ಷಿ

ಕುಮಾರ್ ತಂ/ ಸೋಮಶೇಖರ್

ಚಿತ್ರ ೪: ಉದ್ಯೋಗದ ಅರ್ಜಿ ಪತ್ರದ ಮಾದರಿ

೪. ಸಂಪಾದಕರಿಗೆ ಪತ್ರಗಳು

ಸುದ್ದಿಪತ್ರಿಕೆಗಳಲ್ಲಿ ಪ್ರಕಟವಾಗುವ ಸಂಪಾದಕೀಯ ಪುಟದಲ್ಲಿ ಓದುಗರ ಅಭಿಪ್ರಾಯಕ್ಕಾಗಿ 'ಲೆಟರ್ಸ್ ಟು ದ ಎಡಿಟರ್' ಅಂದರೆ ಓದುಗರ ಪ್ರತಿಕ್ರಿಯೆಯ ಪತ್ರ ವಿಭಾಗವನ್ನು ಮೀಸಲಿಟ್ಟಿರುತ್ತಾರೆ. ಇದೊಂದು ಓದುಗರ ವೇದಿಕೆ. ಇಲ್ಲಿ ಓದುಗರು ವಿಧವಿಧವಾದ ವಿಷಯಗಳನ್ನು ಕುರಿತು ತಮ್ಮ ಸಂಕ್ಷಿಪ್ತ ಅನಿಸಿಕೆ, ಅಭಿಪ್ರಾಯ ಇಲ್ಲವೆ ಓದುಗರು ತಾವು ಗಮನಿಸಿದ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಗಳ ಬಗ್ಗೆ ಪತ್ರ ಬರೆದು ಸಂಪಾದಕರ ಹಾಗೂ ಇತರ ಓದುಗರ ಗಮನಕ್ಕೆ ತರಬಹುದು. ಸಂಪಾದಕರಿಗೆ ಪತ್ರಗಳು ಓದುಗರ ವೈಯಕ್ತಿಕ ಅನುಭವವೂ ಆಗಿರಬಹುದು. ಒಮ್ಮೊಮ್ಮೆ ದೂರು, ಸಹಾಯ, ಸಲಹೆ, ಧನ್ಯವಾದ, ಕೋರಿಕೆ, ತಿದ್ದುಪಡಿ ಮುಂತಾದವುಗಳನ್ನು

ವಾಚಕರ ವಾಣಿ

ಸೋರಿಕೆ ಮುಖ್ಯವಲ್ಲ; ಸತ್ಯಾಂಶ ಮುಖ್ಯ

ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಲೋಕಾಯುಕ್ತ ವರದಿಯ ಕೆಲವು ಅಂಶಗಳು ಸೋರಿ ಬಹಿರಂಗಗೊಂಡಿವೆ. ಇಂತಹ ಸೋರಿಕೆಯಿಂದ ವರದಿಯ ಅಥವಾ ವಿಷಯದ ಮಹತ್ವ ಕಳೆದುಹೋಗುತ್ತದೆಯೇ? ಖಂಡಿತ ಇಲ್ಲ. ವರದಿಯಲ್ಲಿ ಅಡಕವಾಗಿರುವ ಸಂಗತಿಗಳು ಹೊರಬರಲೇಬೇಕು– ಅಧಿಕೃತವಾಗಿ ಅದನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ.

ವರದಿಯು ತಪ್ಪುಹೊರಿಸುವ ರೀತಿಯಲ್ಲಿದ್ದರೆ, ಮತ್ತು ವಿವಾದಾತೀತ ಹಾಗೂ ನಿರಾಕರಿಸಲಾಗದ ಮತ್ತು ಸಂದೇಹಕ್ಕೆಡೆಯಿಲ್ಲದ ಪುರಾವೆಗಳಿಂದ ಪೋಷಿತಗೊಂಡಿದ್ದರೆ ಅದು ನುಂಗಲಾರದ ತುತ್ತಾಗಿ ಪರಿಣಮಿಸುತ್ತದೆ; ಕೆಲ ಅಂಶಗಳು ಸೋರಿಕೆಯಾದ ಮಾತ್ರಕ್ಕೆ ವರದಿಯ ತೀವ್ರ ಸ್ವರೂಪತೆಗೆ ಧಕ್ಕೆ ಏನಿಲ್ಲ. ವರದಿಯು ಸಿದ್ಧವಾದ ನಂತರವೂ ಯಾವುದೇ ಸಕಾರಣಗಳಿಗಾಗಿ ಅದರ ಸಲ್ಲಿಕೆ ಸ್ವಲ್ಪ ತಡವಾದರೆ, ಅದು ಅಷ್ಟರಮಟ್ಟಿಗೆ ಅದರಿಂದ ಬಾಧಿತರಾಗುವವರ ವಿಷಯದಲ್ಲಿ 'ಕರಾಳ ದಿನಗಳ ಮುಂದೂಡಿಕೆ' ಎಂದಷ್ಟೇ ಆಗುತ್ತದೆ. ವರದಿಯಲ್ಲಿನ ವಾಸ್ತವಾಂಶಗಳು ವಾಸ್ತವಾಂಶಗಳೇ ತಾನೆ! ಹಾಗೆ ನೋಡಿದರೆ, ತಡವಾದಷ್ಟೂ ಹುಳ್ಳು ಹುಳ್ಳು ಮನಸ್ಸಿನವರ ಆತಂಕ ಹೆಚ್ಚಾಗುತ್ತಲೇ ಹೋಗುತ್ತದೆ? ಇದೊಂದು ಮೋಜಿನ ಸಂಗತಿ! ಊಹಾಪೋಹಗಳು ನಿರಾತಂಕವಾಗಿ ಹರಿದಾಡುತ್ತಿರುತ್ತವೆ. ಅಷ್ಟಕ್ಕೂ ಎಲ್ಲವೂ ಮುಗಿದು, ವರದಿ ಸಿದ್ಧವಾದಾಗ ಅದನ್ನು ಸಂಬಂಧಿಸಿದವರಿಗೆ ತಲುಪಿಸುವ ಮುನ್ನವೇ ಅದರ ವಿವರಗಳನ್ನು ಪ್ರಕಟಿಸಿದಲ್ಲಿ ತಪ್ಪಾದರೂ ಏನು? ವರದಿಯನ್ನು ಕ್ರಮವಾಗಿ ಸಲ್ಲಿಸಿದ ನಂತರವೇ ಅದರ ವಿವರಗಳು ಹೊರಬರತಕ್ಕದ್ದೆಂಬ ಕಾನೂನು ಎಲ್ಲೂ ಇಲ್ಲ. ಇದೊಂದು ಶಿಷ್ಟಾಚಾರ ಅಷ್ಟೆ, ಅದು ಬದಲಾಗಲಿ. ಪಾರದರ್ಶಕತೆ ಎನ್ನುವುದು ಅರ್ಥಪೂರ್ಣವಾಗಬೇಕು. ಈಗ ತಪ್ಪಿತಸ್ಥರೆಂದು ಕಂಡುಬಂದಿರುವ ವ್ಯಕ್ತಿಗಳು ನೇರವಾಗಿ ಧೈರ್ಯವಾಗಿ ನಡೆದುಕೊಳ್ಳುವರೇ ಇನ್ನಾದರೂ?

-ಸಾಮಗ ದತ್ತಾತ್ರಿ
ಬೆಂಗಳೂರು.

ಚಿತ್ರ ೫: 'ಪ್ರಜಾವಾಣಿ'ಗೆ ಬರೆದ ವಾಚಕರ ವಾಣಿ ಪತ್ರದ ಮಾದರಿ

ಕುರಿತು ಇರಬಹುದು. ಇಂತಹ ಪತ್ರಗಳು ತುಂಬಾ ಚುಟುಕಾಗಿರುತ್ತವೆ. ನೂರರಿಂದ ನೂರಾ ಐವತ್ತು ಪದಗಳ ಮಿತಿ ಇಂತಹ ಪತ್ರಗಳಿಗೆ ಇರುತ್ತದೆ. ಸಂಪಾದಕರಿಗೆ ಬರೆದ ಪತ್ರದಲ್ಲಿ ಕಡ್ಡಾಯವಾಗಿ ಪತ್ರ ಬರೆದವರ ಹೆಸರು, ವಿಳಾಸ ಇತ್ಯಾದಿ ವಿವರಗಳನ್ನು ಬರೆಯಲೇಬೇಕು. ಇಲ್ಲವಾದಲ್ಲಿ ಪ್ರಕಟಣೆಗೆ ಪರಿಗಣಿಸದೆ ಹೋಗಬಹುದು. ಚಿತ್ರ ೫ರಲ್ಲಿ ನೀಡಿರುವ 'ಪ್ರಜಾವಾಣಿ' ದಿನಪತ್ರಿಕೆಯ 'ವಾಚಕರ ವಾಣಿ'ಯ ಪತ್ರವೊಂದನ್ನು ಗಮನಿಸಬಹುದು.

೫. ವಾಣಿಜ್ಯ ಪತ್ರಗಳು

ವ್ಯವಹಾರಿಕ ಪತ್ರ ಬರವಣಿಗೆಯಲ್ಲಿ ಸಾಮಾನ್ಯವಾಗಿ ಎರಡು ಪ್ರಕಾರದ ಪತ್ರಗಳನ್ನು ನೋಡಬಹುದು.

೧. ವ್ಯಾಪಾರ ಅಥವಾ ವಾಣಿಜ್ಯಕ್ಕೆ ಸಂಬಂಧಿಸಿದ ಪತ್ರಗಳು

೨. ಕಛೇರಿ ಕೆಲಸಗಳಿಗೆ ಸಂಬಂಧಿಸಿದ ಔಪಚಾರಿಕ ಪತ್ರಗಳು

ವ್ಯಾಪಾರದ ಒಪ್ಪಂದಕ್ಕೆ ಸಂಬಂಧಿಸಿದಂತೆ ವ್ಯಕ್ತಿಗಳ ನಡುವೆ ಅಥವಾ ಸಂಸ್ಥೆಗಳ ನಡುವೆ ಆಗುವ ಔಪಚಾರಿಕ ಪತ್ರ ವ್ಯವಹಾರವು 'ವಾಣಿಜ್ಯ ಪತ್ರ' ಪ್ರಕಾರದಲ್ಲಿ ಬರುತ್ತದೆ.

YOGARAJ MOVIES

#184/E, 3rd Cross, 1st Phase
Girinagar, Bangalore - 560085

Phone: (080) 26421251
E-mail: yogarajmovies@gmail.com

DATE: 24/07/201;
ಬೆಂಗಳೂರು.

ಇವರಿಗೆ,
ಅಧ್ಯಕ್ಷರು.
ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ.
ಬೆಂಗಳೂರು.

ಮಾನ್ಯರೆ,

ವಿಷಯ: ದನ ಕಾಯೋನು ಚಲನಚಿತ್ರದ ನಿರ್ದೇಶಕರ ಬಾಕಿ ಹಣ ಸಂದಾಯ ಹಾಗೂ ತಂದದ ಬಾಕಿ ಹಣ ಸಂದಾಯ, 100% ಟ್ಯಾಕ್ಸ್ ಫ್ರೀ ಪ್ರತಿಗೆ ಸಹಿ ಹಾಕುವ ಕುರಿತು.

ನಾನು ಎಂದರೆ ಯೋಗರಾಜ್ ಭಟ್ ಎಂಬ ಕನ್ನಡ ನಿರ್ದೇಶಕ. 'ದನ ಕಾಯೋನು' ಎಂಬ ಕನ್ನಡ ಚಿತ್ರವನ್ನು ನಿರ್ಮಾಪಕ ಆರ್.ಶ್ರೀನಿವಾಸ್ (ಕನಕಪುರ) ಅವರಿಗೆ ನಿರ್ದೇಶನ ಮಾಡಿಕೊಟ್ಟಿದ್ದು, ಶ್ರೀನಿವಾಸ್ ಅವರು ಆ ಚಿತ್ರದ ಸಂಭಾವನೆಯನ್ನು ಬಾಕಿ ಉಳಿಸಿಕೊಂಡಿರುತ್ತಾರೆ. ಆ ಬಾಕಿ ಹಣ 24.5 ಲಕ್ಷ ರೂಪಾಯಿಗಳನ್ನು ಭರ್ಜರಿ ಚಿತ್ರದ ಬಿಡುಗಡೆ ಸಂದರ್ಭದಲ್ಲಿ ಪಾವತಿಸುವುದಾಗಿ ಮಾತು ಕೊಟ್ಟಿದ್ದಾರೆ. ಹಾಗೆಯೇ ತಂದದ ಛಾಯಾಗ್ರಾಹಕ, ನಿರ್ದೇಶನ ತಂಡ ಹಾಗೂ ಇತರರ ಕೆಲವು ಬಾಕಿ ಪಾವತಿಯು ಕೂಡ ನಡೆದಿಲ್ಲ. ಈ ನಡುವೆ ಟ್ಯಾಕ್ಸ್ ಫ್ರೀ ಪತ್ರಕ್ಕೆ ನಮ್ಮ ಸಹಿಗಳಿಲ್ಲದೇ ಚಿತ್ರಮಂದಿರಗಳಿಂದ ದನಕಾಯೋನು ಚಿತ್ರದ ಗಳಿಕೆಯಲ್ಲಿ ಪಾಲನ್ನು(ಶೇರ್) ನಿರ್ಮಾಪಕರು ಪಡೆದಿರುವ ಮಾಹಿತಿಯೂ ಇದೆ. ಈಗ ಅವರ ಭರ್ಜರಿ ಚಿತ್ರ ಬಿಡುಗಡೆಯ ಈ ಸಂದರ್ಭದಲ್ಲಿ ದಯಮಾಡಿ ತಾವುಗಳು ತಂತ್ರಜ್ಞರ ಹಿತಚಿಂತನೆ ಮಾಡಿ, ನಮಗೆ ನಮ್ಮ ಹಣ ಕೊಡಿಸುವಿರಾಗಿ ನಂಬಿ ಈ ಪತ್ರ ಬರೆದಿದ್ದೇನೆ.

ಇಂತಿ
ತಮ್ಮ ವಿಶ್ವಾಸಿಗ,
(ಯೋಗರಾಜ್ ಭಟ್)

ಬೆಂಗಳೂರು.

ಸೂಚನೆ: ಇದೇ ವಿಷಯದ ಕುರಿತಾಗಿ ಭರ್ಜರಿ ಚಿತ್ರದ ವಿತರಕರಾದ ಶ್ರೀಯುತ ಭಾಷಾ ಮತ್ತು ಸಮರ್ಥ ವೆಂಚರ್ಸ್‌ನ ಶ್ರೀಯುತ ಪ್ರಸಾದ್ ಅವರಿಗೆ, ವಾರ್ತಾ ಇಲಾಖೆಗೆ, ನಿರ್ಮಾಪಕರ ಸಂಘಕ್ಕೂ ಪತ್ರ ಬರೆದಿದ್ದೇನೆ.

ಚಿತ್ರ ೬: ಸಂದಾಯವಾಗಬೇಕಾದ ಬಾಕಿ ಹಣವನ್ನು ಪಾವತಿ ಮಾಡಲು ಬರೆದ ವ್ಯವಹಾರ ಪತ್ರದ ಮಾದರಿ

ಮುಚ್ಚಳಿಕೆ ಪತ್ರ, ಮುಂಗಡ ಹಣ ನೀಡಿಕೆ ಕುರಿತು ಒಪ್ಪಂದದ ಪತ್ರ, ಬಾಕಿ ಉಳಿದ ಹಣ ವಾಪಸಾತಿ ಪತ್ರ, ಸಾಮಗ್ರಿಗಳ ಜಪ್ತಿ, ದೂರು ಇತ್ಯಾದಿ ವಿಷಯಗಳನ್ನು ಕುರಿತ ಪತ್ರಗಳ ಬರವಣಿಗೆ ರೀತಿಯನ್ನು ಇಲ್ಲಿ ನೋಡಬಹುದು. ಮೊದಲು ಕೇವಲ ಮಾತಿನಿಂದ ಆರಂಭವಾಗುವ ವ್ಯಾಪಾರದ ಮಾತುಕತೆ ಒಂದು ಒಪ್ಪಂದವಾಗಿ ನಂತರ ಕಾನೂನಿಗೆ ಅನ್ವಯವಾಗುವಂತೆ ಒಪ್ಪಿತವಾಗುವುದು ಮತ್ತು ಪರಸ್ಪರ ವ್ಯವಹಾರದಲ್ಲಿ ತೊಡಗುವ ವ್ಯಕ್ತಿ ಅಥವಾ ಸಂಸ್ಥೆಗಳನ್ನು ಜವಾಬ್ದಾರರನ್ನಾಗಿ ಮಾಡುವುದು ಲಿಖಿತ ಪತ್ರಗಳು ಮಾತ್ರ. ಇತರೆ ಪತ್ರ ಲೇಖನಗಳಿಗೆ ಇರುವಂತೆ ವಾಣಿಜ್ಯ ಪತ್ರ ಲೇಖನಕ್ಕೂ ತನ್ನದೇ ವಿಧಾನ ಮತ್ತು ಸ್ವರೂಪ ಇದೆ. ಚಿತ್ರ ೬ರಲ್ಲಿ ಕೊಟ್ಟಿರುವ ವ್ಯವಹಾರ ಪತ್ರದಲ್ಲಿ ಕನ್ನಡ ಚಲನಚಿತ್ರ ನಿರ್ದೇಶಕರು ತಮಗೆ ಬರಬೇಕಾದ ಬಾಕಿ ಹಣಕ್ಕಾಗಿ, ವಾಣಿಜ್ಯ ಮಂಡಳಿಗೆ ಬರೆದ ಈ ಪತ್ರವನ್ನು ಗಮನಿಸಬಹುದು.

ಪತ್ರದ ಎಡಭಾಗದ ಮೇಲ್ತುದಿಯಲ್ಲಿ ಯಾರಿಗೆ ಪತ್ರ ಬರೆಯಬೇಕಾಗಿದೆಯೋ ಆ ವ್ಯಕ್ತಿ ಅಥವಾ ಸಂಸ್ಥೆಯ ವಿಳಾಸ ಬರೆಯಬೇಕು. ಅದರ ಸಮಾನಾಂತರ ಬಲ ತುದಿಯ

ಮೂಲೆಯಲ್ಲಿ ದಿನಾಂಕ, ತಿಂಗಳು ವರ್ಷದ ವಿವರ ಬರೆಯಬೇಕು. ನಂತರ ಗೌರವ ಸೂಚಕ / ಸಂಬೋಧನೆ ಬರೆಯಬೇಕು. ನಂತರ ಒಂದು ಸಾಲಿನಲ್ಲಿ ವಿಷಯದ ಪ್ರಸ್ತಾಪ ಮಾಡಬೇಕು. ನಂತರ ನೇರವಾಗಿ ವ್ಯವಹಾರಕ್ಕೆ ಸಂಬಂಧಿಸಿದ ವಿಷಯದ ವಿವರದ ಬರವಣಿಗೆ ಇರಬೇಕು. ಇದರಲ್ಲಿ ಈ ಮುಂಚೆ ಬರೆಯಲಾದ ಪತ್ರದ ವಿವರ ಅಥವಾ ಮಾತುಕತೆಯನ್ನು ಪ್ರಸ್ತಾಪಿಸಬಹುದು. ಕೊನೆಯಲ್ಲಿ ಆಗಬೇಕಾದ ಮುಂದಿನ ಕೆಲಸದ ಬಗ್ಗೆ ಬರೆಯಬೇಕು. ಕೊನೆಯಲ್ಲಿ ವಿನಂತಿ / ಧನ್ಯವಾದಗಳೊಂದಿಗೆ ಪತ್ರವನ್ನು ಕೊನೆಗೊಳಿಸಬೇಕು. ಬಲಭಾಗದ ಕೊನೆಯಲ್ಲಿ ಅಂದರೆ ಪತ್ರದ ತುದಿಯಲ್ಲಿ ಪತ್ರ ಬರೆದವರ ಸಹಿ, ಹೆಸರು ಮತ್ತು ಇದ್ದರೆ ಮೊಹರನ್ನು ಹಾಕಬಹುದು. ಒಂದು ವೇಳೆ ಇದೇ ಪತ್ರದ ನಕಲನ್ನು ಇತರೆ ಸಂಬಂಧಪಟ್ಟ ಅಧಿಕಾರಿ ಮತ್ತು ಸದಸ್ಯರಿಗೆ ಹಂಚಿಕೊಳ್ಳುವಂತಿದ್ದರೆ ಅದನ್ನು 'ಪ್ರತಿಗಳು:' ಎಂದು ಹೆಸರುಗಳನ್ನು ಬರೆದು ಸೂಚಿಸ ಲಾಗುತ್ತದೆ.

ಅಭ್ಯಾಸ ಭಾಗ (ಆ)

ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ.

೧. ಪತ್ರಗಳ ಬೇರೆ ಬೇರೆ ಪ್ರಕಾರಗಳನ್ನು ಹೆಸರಿಸಿ.

೨. ಆಹ್ವಾನ ಪತ್ರಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.

೩. ಸಂಪಾದಕೀಯ ಪತ್ರಗಳ ಪ್ರಮುಖ ನಿಯಮಗಳೇನು?

೪. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿ ಬರೆಯಿರಿ.

(ಅ) ಖಾಸಗಿ ಸಂಬಂಧಿಕರಿಗೆ ಬರೆಯುವ ಪತ್ರಗಳನ್ನು _____ ಎಂದು ಕರೆಯುತ್ತೇವೆ.

(ಆ) ತಂದೆ ಮಗನಿಗೆ ಬರೆಯುವ ಪತ್ರದಲ್ಲಿ ಸಂಬೋಧಿಸುವ ಪದ _____ ಆಗಿರುತ್ತದೆ.

(ಇ) ಉದ್ಯೋಗ ಪತ್ರದ ಆರಂಭದಲ್ಲಿ _____ ವಿಳಾಸವನ್ನು ಬರೆಯಬೇಕು.

(ಈ) ಸಂಪಾದಕೀಯ ಪತ್ರಕ್ಕೆ _____ ಪದಗಳ ಪದಮಿತಿ ಇರುತ್ತದೆ.

೫. ವ್ಯವಹಾರಿಕ ಪತ್ರದ ಪ್ರಮುಖ ಪ್ರಕಾರಗಳನ್ನು ತಿಳಿಸಿ ಅವುಗಳ ಉದ್ದೇಶದ ಬಗ್ಗೆ ಬರೆಯಿರಿ.

೧೩.೨.೨. ವೈಚಾರಿಕ ಬರಹ

೧೩.೨.೨. ಭಾಗ (ಅ) ವ್ಯಾಖ್ಯಾನ ಮತ್ತು ಭಿನ್ನತೆ

ಸರಳವಾಗಿ ಹೇಳುವುದಾದರೆ ಒಂದು ವಿಷಯವನ್ನು ಕುರಿತು ಒಬ್ಬ ವ್ಯಕ್ತಿಯ ಅಭಿಪ್ರಾಯವು ಧಾರ್ಮಿಕ ಅಥವಾ ಭಾವನಾತ್ಮಕ ತಳಹದಿಯ ಮೇಲೆ ಆಧರಿಸದೆ, ಕ್ರಿಯೆಯ ಪರಿಣಾಮವನ್ನು ಕಾರ್ಯ ಕಾರಣ ಸಮೇತ ಪ್ರಸ್ತುತ ಪಡಿಸುವ ವಿಧಾನವೇ ವೈಚಾರಿಕ ಬರಹ. ವಿಚಾರಪೂರ್ಣವಾದ ಮಾತು ವಾಸ್ತವವಾಗಿ ಮನುಷ್ಯರನ್ನು ಆಲೋಚನೆಗೆ ಮಾಡಲು ಪ್ರೇರೇಪಿಸುತ್ತದೆ. ತರ್ಕಬದ್ಧವಾಗಿ ಆಲೋಚಿಸಿ ಪಡೆಯುವ ನಿರ್ಧಾರವೇ ಅಂತಿಮ ಸತ್ಯ. ಇಲ್ಲಿ ಭೌತಿಕತೆಯನ್ನು ಅಂದರೆ ಕಣ್ಣಿಗೆ ಕಾಣುವ ಸತ್ಯವನ್ನು

ಆಧರಿಸಿ ವಾದದ ಸರಣಿಯನ್ನು ಹೆಣೆಯಲಾಗುತ್ತದೆ. ಇದು ಭೌತಿಕವಾದಕ್ಕೆ ಹತ್ತಿರವಾದ ಆಲೋಚನಾ ವಿಧಾನ. ಕಾರ್ಯ ಕಾರಣ ಸಂಬಂಧವನ್ನು ತರ್ಕಬದ್ಧವಾಗಿ ವಿವರಿಸಲು ಈ ಕೆಳಗಿನ ಉದಾಹರಣೆಯನ್ನು ಗಮನಿಸಬಹುದು.

ಎಲ್ಲಾ ಮನುಷ್ಯರು ಸಾಯುತ್ತಾರೆ.
ರಾಜಕುಮಾರ ಒಬ್ಬ ಮನುಷ್ಯ.
ಆದುದರಿಂದ ಆತನು ಸಾಯುತ್ತಾನೆ.

ಮೇಲಿನ ಉದಾಹರಣೆಯಲ್ಲಿ ಒಂದು ಸಾರ್ವತ್ರಿಕ ವಾಕ್ಯವಾದರೆ ಮತ್ತೊಂದು ನಿರ್ದಿಷ್ಟ ವಾಕ್ಯ ಮತ್ತು ಇವೆರೆಡೂ ವಾಕ್ಯಗಳಿಂದ ಪಡೆದ ಸತ್ಯವನ್ನು ನಾವು ಮುಕ್ತಾಯದ ಮೂರನೆಯ ಸಾಲಿನಲ್ಲಿ ನೋಡಬಹುದು. ಜಗತ್ತಿನ ಯಾವುದೇ ಮೂಲೆಯಲ್ಲಿ ಸುತ್ತಾಡಿ ಬಂದರೂ ಮನುಷ್ಯರು ಸತ್ತ ಅಥವಾ ಸಾಯುವ ಸಾರ್ವತ್ರಿಕ ಸತ್ಯವನ್ನು ಮೊದಲ ಸಾಲು ಹೇಳುತ್ತದೆ. ಎರಡನೆಯದರಲ್ಲಿ ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿ ಕುರಿತು ಸತ್ಯದ ಮಾತು ಇದೆ. ಮತ್ತು ಇವೆರೆಡು ವಾಕ್ಯಗಳಿಂದ ಪಡೆದ ತಾರ್ಕಿಕ ಅಗತ್ಯ ಅಂದರೆ 'ಮನುಷ್ಯರು' + 'ಸಾವು' ಅಂತಿಮವಾಗಿ 'ರಾಜಕುಮಾರ' + 'ಸಾವು' ಎಂಬ ಅಂತಿಮ ತೀರ್ಮಾನಕ್ಕೆ ಬರುವಂತೆ ಮಾಡಿದೆ. ಇದನ್ನೇ ಭಾವನಾತ್ಮಕವಾಗಿಯೋ ಅಥವಾ ಧಾರ್ಮಿಕವಾಗಿಯೋ ನೋಡಿದರೆ, 'ರಾಜಕುಮಾರ' ಎಂಬ ವ್ಯಕ್ತಿಯ ಕೀರ್ತಿಯೋ ಅಥವಾ ಒಂದು ಕ್ಷೇತ್ರಕ್ಕೆ ಆತ ನೀಡಿದ ಕೊಡುಗೆಯನ್ನೋ ಗಮನದಲ್ಲಿಟ್ಟುಕೊಂಡು ಕೇವಲ ಭಾವುಕವಾಗಿ 'ರಾಜಕುಮಾರರಿಗೆ ಸಾವಿಲ್ಲ, ಆತ ಚಿರಂಜೀವಿ' ಎಂದೆಲ್ಲ ವಾದಿಸಿದರೆ ಅಥವಾ 'ಆತನೊಬ್ಬ ದೈವಭಕ್ತ, ದೇವರಮಗ' ಅಂತೆಲ್ಲ ವಾದಿಸಿದರೆ ಅಂತಹ ವಾಕ್ಯಗಳಲ್ಲಿ ತರ್ಕವಿರಲಾರದು. ಅದೊಂದು ಭಾವನಾವಾದ ಆಗುತ್ತದೆ. ಇದೇ ವೈಚಾರಿಕ ಹಾಗೂ ಇತರೆ ಆಲೋಚನಾ ಕ್ರಮಗಳಿಗೆ ಇರುವ ವ್ಯತ್ಯಾಸ ಎಂದು ಗುರುತಿಸಬಹುದು.

೧೩.೨.೨. (ಆ) ಮಾದರಿ ವೈಚಾರಿಕ ಬರಹ

ವೈಚಾರಿಕ ಬರಹಕ್ಕೆ ಮಾದರಿಯಾಗಿ ಕುವೆಂಪು ಅವರ 'ವಿಚಾರ ಕ್ರಾಂತಿಗೆ ಆಹ್ವಾನ' ಲೇಖನದಿಂದ ಆಯ್ದ ಭಾಗವನ್ನು ಚಿತ್ರ ೭ರಲ್ಲಿ ಕೊಡಲಾಗಿದೆ. ಇದನ್ನು ಅವರ 'ವೈಚಾರಿಕ ಲೇಖನಗಳು' (ಕುವೆಂಪು ಬರಹಗಳ ಸಂಪುಟ), 'ಕುವೆಂಪು ಸಂಚಯ' (ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ೨೦೦೯) ವಾಚಿಕೆಯಿಂದ ಆಯ್ದುಕೊಳ್ಳಲಾಗಿದೆ.

ಚುನಾವಣೆಗಳು ಪ್ರಜಾಸತ್ತಾತ್ಮಕ ಎಂದು ಹೇಳಲಾಗುತ್ತದೆಯೆ? **Politics is the last resort of a scoundrel** ಎಂದಿದ್ದನಂತೆ ಒಬ್ಬ ಪಾಶ್ಚಾತ್ಯ ಮನೀಷಿ. ನಮ್ಮ ಇಂದಿನ ರಾಜಕಾರಣರಂಗವನ್ನು ನೋಡಿದ್ದರೆ ಅವನು ತನ್ನ ಸೂಕ್ತಿಯನ್ನು ತಿದ್ದಿಕೊಳ್ಳುತ್ತಿದ್ದನು,— **Politics is the first resort of a scoundrel** ಎಂದು ಬದಲಾಯಿಸಿ! ಈಗ ನಮ್ಮ ರಾಜಕೀಯ ರಂಗ ಹೇಗಾಗಿದೆ ಎಂದರೆ ಪ್ರಾಮಾಣಿಕರೂ ಸಂಭಾವಿತರೂ ಸುಸಂಸ್ಕೃತರೂ ಯಾರೂ ಅದರ ಹತ್ತಿರ ಸುಳಿಯಲೂ ಅಂಜುತ್ತಾರೆ. ಚುನಾವಣೆಯ ರೀತಿಯನ್ನೆ ಬದಲಾಯಿಸದಿದ್ದರೆ ಮಾನಮರ್ಯಾದೆಯುಳ್ಳ ಯಾವ ಪ್ರಾಮಾಣಿಕ ಯೋಗ್ಯನೂ ಅದರಲ್ಲಿ ಪಾಲುಗೊಳ್ಳುವ ಸಂಭವವಿಲ್ಲ. ಹಣದ ಹೊಳೆಹರಿಸಿ ಚುನಾವಣೆಯಲ್ಲಿ ಗೆಲ್ಲುವ ಯಾವ ವ್ಯಕ್ತಿಯಾಗಲಿ ಯಾವ ಪಕ್ಷವಾಗಲಿ ಭ್ರಷ್ಟಾಚಾರಕ್ಕೆ ಬಲಿಯಾಗದೆ ಇರಲು ಸಾಧ್ಯವೆ ಇಲ್ಲ. ಆದ್ದರಿಂದ ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನೆ ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲಮೇಲೆ ಬೀಳುತ್ತದೆ. ಉಗ್ರ ಕ್ರಾಂತಿಯಿಂದಲಾದರೂ ನೀವು ಚುನಾವಣೆಯನ್ನು ಸಾತ್ತ್ವಿಕಮಾರ್ಗಕ್ಕೆ ತಿರುಗಿಸದಿದ್ದರೆ ಸ್ವಾರ್ಥಿಗಳೂ ಸಮಯಸಾಧಕರೂ ಗೂಂಡಾಗಳೂ, ಕಳ್ಳಸಂತೆಖೋರರೂ ಕಳ್ಳಸಾಗಣೆಯ ಖದೀಮರೂ, ಚಾರಿತ್ರ ಹೀನರೂ ಪ್ರಜಾಸತ್ತೆಯ ಹುಸಿಹೆಸರಿನ ಹಿಂದೆ ಪ್ರಚ್ಛನ್ನಸರ್ವಾಧಿಕಾರ ನಡೆಸುತ್ತಾರೆ.

ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೆ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ! ಅದು ಒಂದು ಅಮೂರ್ತ ವಸ್ತು, ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯಪ್ರವೇಶಮಾಡಿ ನಮ್ಮನ್ನು ಆಕ್ರಮಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ—ಅತ್ಯಂತ ಅಂತರತಮ–ಸತ್ಯಸ್ಯ ಸತ್ಯವಾದ ಸನಾತನ ತತ್ತ್ವಕ್ಕೆ (ಅದನ್ನು ಆಧ್ಯಾತ್ಮ ಎಂದು ಹೆಸರಿಸುತ್ತೇವೆ.) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದ

ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು.

ನಾಲ್ವತ್ತು ವರ್ಷಗಳ ಪೂರ್ವದಲ್ಲಿಯೆ ನಾನು ಹಾಡಿದ ಒಂದು ಕವನದ ಕಡೆಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಅದು ನಿಮ್ಮ ಮುಂದಣ **ಮಾರ್ಗದರ್ಶಕ ಮಂತ್ರದೀಪವಾಗಿ** ನಿಮಗೆ ದಾರಿತೋರಿ ನಡೆಸಲಿ ಎಂದು ಹಾರೈಸುತ್ತೇನೆ :

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ.
ಮೌಢ್ಯತೆಯ ಮಾರಿಯನು ಹೊರದೂಡಲ್ಕೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ.
ಓ, ಬನ್ನಿ, ಸೋದರರೆ, ಬೇಗ ಬನ್ನಿ !

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ;
ಮತಿಯಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ :
ಓ, ಬನ್ನಿ, ಸೋದರರೆ, ವಿಶ್ವಪಥಕೆ !

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ —ಈ ಪದಗಳು ಮಂತ್ರಗಳಾಗಿ ನಿಮ್ಮನ್ನು ಜಾತಿಮತಗಳಿಂದಲೂ ಭೇದಭಾವ ಗಳಿಂದಲೂ ಪಾರುಮಾಡಿ ನಿಮ್ಮಿಂದ ನಿಜವಾದ ಪ್ರಜಾಸತ್ತೆ ಮತ್ತು ಸಮಾಜವಾದ ಸ್ಥಾಪನೆಯಾಗಲಿ ಎಂದು ಹಾರೈಸುತ್ತೇನೆ.

ಚಿತ್ರ ೭: ಕುವೆಂಪು ಅವರ 'ವಿಚಾರಕ್ರಾಂತಿಗೆ ಆಹ್ವಾನ'ದಿಂದ ಆಯ್ದಭಾಗ

೧೩.೨.೨. (ಇ) ಭಾಷಾ ಬಳಕೆ

ಮೇಲೆ ಕೊಟ್ಟಿರುವ ಕುವೆಂಪು ಅವರ ವಿಚಾರ ಕ್ರಾಂತಿಗೆ ಆಹ್ವಾನ ಲೇಖನದ ಆಯ್ದ ಭಾಗದಲ್ಲಿ ಲೇಖಕರು ಯಾವುದೇ ಭಾವುಕ ನೆಲೆಯಲ್ಲಿ ಮಾತನಾಡದೆ, ಕೆಲ ಅಂಕಿ–ಅಂಶಗಳ ಆಧಾರದ ಮೇಲೆ ದೇಶದ ವಾಸ್ತವವನ್ನು ವಿಶ್ಲೇಷಿಸಿದ್ದಾರೆ. ಇಲ್ಲಿ ಸರಳವಾದ ಪದಗಳು ಮತ್ತು ನುಡಿಗಟ್ಟುಗಳನ್ನು ಬಳಸಲಾಗಿದೆ. ಕಾವ್ಯದಲ್ಲಿ ಬಳಸಲಾಗುವ ರೂಪಕ ಭಾಷೆಯನ್ನು ಇಲ್ಲಿ ಬಳಸಿಲ್ಲ. ಉಪಮೆ–ಉಪಮಾನಗಳ ಬಳಕೆಯೂ ಇಲ್ಲ. ದೇಶ ತಲುಪಿರುವ ಸ್ಥಿತಿಯನ್ನು ಸಾಮಾನ್ಯ ವ್ಯಕ್ತಿಗೆ ತಿಳಿಯುವಂತೆ ನೇರವಾಗಿ ಹೇಳಲಾಗಿದೆ. ಸಮಕಾಲೀನ ಪದಗಳ ಬಳಕೆ, ಅಲ್ಲಲ್ಲಿ ಚುಚ್ಚುವ ವ್ಯಂಗ್ಯಗಳು ಓದುಗನನ್ನು ಹರಿತವಾದ ಆಲೋಚನೆಗೆ ಹಚ್ಚುವ ಶೈಲಿ ಇದಾಗಿದೆ.

ಅಭ್ಯಾಸ

ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ವೈಚಾರಿಕತೆ ಅಂದರೇನು?

೨. ತರ್ಕಬದ್ಧವಾಗಿ ಆಲೋಚಿಸಿ, ಅಂತ್ಯ ವಾಕ್ಯ ಪಡೆಯಲು ಬೇಕಾದ ವಾಕ್ಯದೊಳಗಿನ ಬಹುಮುಖ್ಯ ಅಂಶ ಯಾವುದು?

೩. ಭೌತಿಕವಾದ ಎಂದರೇನು? ಸ್ವಂತ ವಾಕ್ಯದಲ್ಲಿ ಉತ್ತರಿಸಿ.

೪ ಭಾವನಾವಾದ ಅಂದರೇನು?

೫. ಕೊಟ್ಟಿರುವ ವೈಚಾರಿಕ ಲೇಖನದಲ್ಲಿ ಕುವೆಂಪು ಅವರು ಗ್ರಾಮಗಳ ಅಭಿವೃದ್ಧಿಯ ನಿರ್ಲಕ್ಷ್ಯ ಇಂದು ನಮ್ಮ ರೈತರ ಮೇಲೆ ಹೇಗೆಲ್ಲ ಪರಿಣಾಮವನ್ನು ಬೀರಿದೆ ಎಂಬುದನ್ನು ವಿಶದಪಡಿಸಿದ್ದಾರೆ?

೧೩.೨.೩. ವೈಜ್ಞಾನಿಕ ಬರಹ

೧೩.೨.೩. ಭಾಗ (ಅ) ಅರ್ಥ ಮತ್ತು ವಾಖ್ಯಾನ

ವೈಜ್ಞಾನಿಕ ಬರಹ: ನಿರ್ದಿಷ್ಟ ಕಾರ್ಯ–ಕಾರಣ ಸಂಬಂಧಗಳನ್ನು ವಿಶ್ಲೇಷಿಸುವ ಉದ್ದೇಶದಿಂದ ಸಂಶೋಧಕನೊಬ್ಬ ತನ್ನ ಸಹ–ಸಂಶೋಧನಾರ್ಥಿಗಳಿಗೆ ಅಥವಾ ಜನಸಾಮಾನ್ಯರಲ್ಲಿ ಮನೆಮಾಡಿರುವ ಗೊಂದಲವನ್ನು ಪರಿಹರಿಸುವ ನಿಟ್ಟಿನಲ್ಲಿ ಬರೆಯುವ ಲೇಖನವನ್ನು ಸರಳವಾಗಿ ವೈಜ್ಞಾನಿಕ ಬರಹ ಎಂದು ಕರೆಯಬಹುದು. ಮಂಡಿಸುವ ವಿಷಯಕ್ಕೆ ಸರಿಯಾದ ಪುರಾವೆ ಒದಗಿಸುತ್ತ, ಪ್ರಸ್ತಾಪ ಮಾಡುತ್ತಿರುವ ವಾದವನ್ನು ಸಮರ್ಥಿಸುತ್ತ, ಓದುಗರಲ್ಲಿ ಉಳಿದ ಅನುಮಾನಗಳನ್ನು ದೂರ ಮಾಡುವ ಇರಾದೆ ಇಂತಹ ಬರವಣಿಗೆಗೆ ಇರುತ್ತದೆ. ಕನ್ನಡ ಸಾಹಿತ್ಯದಲ್ಲಿ ಇಂತಹ ಅನೇಕ ಲೇಖಕರನ್ನು ಕಾಣಬಹುದು. ಸಾಮಾನ್ಯ ಓದುಗರಿಗೆ ನೈಸರ್ಗಿಕ ವಿಸ್ಮಯಗಳನ್ನು ಕುರಿತು, ಗಿಡ, ಮರ, ಜಲ, ಜೀವರಾಶಿಯ ಬಗೆಗೆ ಅರಿವು ಮೂಡಿಸುತ್ತ ಬರವಣಿಗೆಯಲ್ಲಿ ತೊಡಗಿದ ಶಿವರಾಮ ಕಾರಂತ, ಬಿ.ಜಿ.ಎಲ್. ಸ್ವಾಮಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ನಾಗೇಶ ಹೆಗಡೆ, ಆರ್.ಬಿ. ಗುರುಬಸವರಾಜ ಮುಂತಾದ ಲೇಖಕರು ವೈಜ್ಞಾನಿಕ ಬರಹಗಳ ಮೂಲಕ ಸಾಮಾನ್ಯ ಕನ್ನಡ ಓದುಗನಿಗೆ ಪರಿಸರವನ್ನು ಕುರಿತು ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಬರಹಗಳಲ್ಲಿ ಮುಖ್ಯವಾಗಿ ವಿಜ್ಞಾನದ ವಿಷಯಗಳನ್ನು ಸರಳವಾಗಿ ಅರ್ಥವಾಗುವಂತೆ ಬರೆಯುವಿಕೆ ಮುಖ್ಯವಾಗುತ್ತದೆ. ಇಲ್ಲಿ ಸತ್ಯವನ್ನು ಎಲ್ಲೂ ತಿರುಚದೆ, ಸಾಕ್ಷಿ–ಆಧಾರಗಳ ಸಮೇತ ಸಾದರಪಡಿಸುವ ಅಗತ್ಯತೆ ಇರುತ್ತದೆ.

೧೩.೨.೩. (ಆ) ಮಾದರಿ ವೈಜ್ಞಾನಿಕ ಬರಹ

ಹಿಂದೆ ನೋಡಿದ ಕುವೆಂಪು ಅವರ ಬರಹವು ಒಂದು ನಿರ್ದಿಷ್ಟ ಸಂಶೋಧನೆ ಕುರಿತು, ವಿಷಯ ತಜ್ಞರು ಕೈಗೊಂಡ ಅಧ್ಯಯನದ ಫಲಿತಾಂಶವಾದರೆ, ಎರಡನೆಯ ಬಗೆಯ ಬರಹವು ಈಗಾಗಲೇ ಸಾಬೀತುಪಡಿಸಲಾದ ಪ್ರಕೃತಿಯ ನಿಗೂಢಗಳ ಕುರಿತು, ಅಚ್ಚರಿಗಳ ಬಗೆಗೆ, ಮನೋವೈಜ್ಞಾನಿಕ ವಿಷಯಗಳ ಮೇಲೆ ವಿಜ್ಞಾನ ವಿಷಯದಲ್ಲಿ ಆಸಕ್ತಿ ಇರುವವರು ಬರೆಯಬಹುದಾದ ಬರವಣಿಗೆಯ ಮಾದರಿ. ಈ ಎರಡನೆಯ ವಿಧದ ಬರವಣಿಗೆಯ ಮುಖ್ಯ ಉದ್ದೇಶ ಸಾಮಾನ್ಯ ಜನರ ಕಣ್ಣಿಗೆ ಕಾಣದ ರಹಸ್ಯಗಳನ್ನು ವಿವರಿಸುವ, ಅಪನಂಬಿಕೆಗಳನ್ನು ದೂರ ಮಾಡುವ ಮತ್ತು ಆದಷ್ಟು ಸರಳವಾಗಿ, ಮನಮುಟ್ಟುವಂತೆ ತಿಳಿಯ ಹೇಳುವಿಕೆಯನ್ನು ಗಮನಿಸಬಹುದು. ಮಾದರಿ ವೈಜ್ಞಾನಿಕ ಬರಹದಲ್ಲಿ ಇರಬೇಕಾದ ಮುಖ್ಯವಾದ ಅಂಶ ಎಂದರೆ ಸಮಾಜದಲ್ಲಿ ಹರಡುತ್ತಿರುವ



ಗುರುವಾರ • ಆಗಸ್ಟ್ 23, 2018 ಪ್ರಜಾವಾಣಿ

ಶತ್ರುವಿಲ್ಲದ ಈ ಸಮರಕ್ಕೆ ಶಸ್ತ್ರಗಳಿಲ್ಲದ ಕಾಲಾಳುಗಳು ಬೇಕಿದ್ದಾರೆ. ಎಲ್ಲಿಂದ ಬಂದಾರು ಅವರೆಲ್ಲ?

'ಮುಂದಿದೆ: ಮೆಗಾಲೂಟಿಯ ಮಾರಿಹಬ್ಬ'

31 ವರ್ಷಗಳ ಹಿಂದಿನ ಮಾತು: 'ಪಶ್ಚಿಮಘಟ್ಟ ಉಳಿಸಿ' ಹೆಸರಿನ ಮಾತು ಪಾದಯಾತ್ರೆ 1987ರ ಆಕ್ಟೋಬರ್ ನಲ್ಲಿ ಆರಂಭವಾಗಿತ್ತು. ಕೇರಳದಿಂದ ಹೊರಟವರು ಕರ್ನಾಟಕದ ಮೂಲಕ ಗೋವಾಕ್ಕೆ ಸೇರಬೇಕು. ಗುಬ್ಬಚ್ಚಿ ನಿಂದ ಹೊರಟ ಇನ್ನೊಂದು ಜಾಥಾದ ಮಹಾರಾಷ್ಟ್ರದ ಮೂಲಕ ಗೋವಾ ತಲುಪಿ ಅಲ್ಲಿ ಎಲ್ಲರ ಸಂಗಮವಾಗಬೇಕಿತ್ತು. ಕೇರಳದಿಂದ ಹೊರಟ ತಂಡ ಸರಿಯಾಗಿ ಹನ್ನೆರಡು ದಿನಗಳ ಸಂದರ್ಶನಕ್ಕೆ ಭಾಗವಾಗಲಿಕ್ಕೆ ಬಂದಿತ್ತು. ಅವರನ್ನು ಜೊತೆಗೂಡಲೆಂದು ಕನ್ನಡಿಗರು ಸಾಧಿಸಿ ತೊರಗಂತೆ ಭಾಗವಾಗಲಿಕ್ಕೆ ಸೇರಿದ್ದರು. ಆದೇಕಾರ್ 83 ವರ್ಷ ಪ್ರಾಯದ ಡಾ. ಶಿವರಾಮ ಕಾರಂತರು ಆ ಬೃಹತ್ ಸಮಾವೇಶದ ಸ್ವಾಗತ/ವಿದಾಯಭಾಷಣ ಮಾಡುತ್ತಿದ್ದರು.

"ಇನ್ನು ವರ್ಷ ಈ ಫಲ್ಗುನ ಪ್ರವೇಶಕ್ಕೆ ಮಾಸವು ಹಾಗೆ, ಕೊಡಗಿನಿಂದ ಭಾಸ ಮಾಡ್ತಾ ಇದ್ದರು. ಆದರೆಲ್ಲ ಪ್ರಕೃತಿ ಸಹಿಸಿಕೊಂಡಿತ್ತು, ಈಗ ಹಾಗಲ್ಲ. ಸಾವಿರ ಮಾಸುಭರ ಕೆಲಸ ವನ್ನು ತಾನೊಬ್ಬನೇ ಮಾಡಬಲ್ಲ ಯಂತ್ರಗಳು ಬಂದಿವೆ. ನಿಸರ್ಗ ಸಂತಾಪದ ಕೆಲಸ ಇನ್ನು ಸಾವಿರ ಪಟ್ಟು ಹೆಚ್ಚಾಗಲಿದೆ. ಅದೇ ಅಲ್ಲ, ಈ ಯಂತ್ರಗಳೆಂದಾಗಿ ಬಡವ-ಶ್ರೀಮಂತ ಸಮಾಜದ ವ್ಯತ್ಯಾಸವೂ ಸಾವಿರ ಪಟ್ಟು ಹೆಚ್ಚಾಗಲಿದೆ..."

ಆವರ ಕಂಚಿನ ಕಂಠದ ಆ ಮಾತುಗಳು ಮುಂದಿನೊಂದಿಗಳು ಕಾಲ ಫಲ್ಗುಣದಿನ ಅರಣ್ಯ-ಕಣಿವೆಗಳಲ್ಲಿ ಪ್ರತಿಧ್ವನಿಸುತ್ತಲೇ ಇತ್ತು. ಭಾಗಮಂಡಲ, ಚೇರಂಬಾಣೆ, ಮಡಿಕೇರಿ, ತಿಪ್ಪಾಪುರ, ಪೆರ್ನೋಲು ಮೂಲಕ ಹಾದು, ಲಾಪಣೆ. ದೀರ್ಘಾವಲೋಕಗಳ ಜಾಥಾ ಸಾಗುತ್ತಿದ್ದಾಗ ಅಲ್ಲಲ್ಲಿನ ದೊಡ್ಡ ಊರುಗಳ ಸಭೆಗಳಲ್ಲಿ ಚಿಕ್ಕದೊಡ್ಡ ಭಾಷಣಕಾರರೆಲ್ಲ ತಾಂತಾವು ಮಾತುಗಳನ್ನೇ ಮತ್ತೆ ಮತ್ತೆ ಹೇಳುತ್ತಿದ್ದರು.

***

ಈಗ 2010ಕ್ಕೆ ಬರೋಣ: ಮಾಧವ ಗಾಡ್ಗಿಳ್ ಸಮಿತಿಯ ಸದಸ್ಯರು ಗೋವಾ ಸಮೀಪಕ್ಕೆ ಹೋಗಿದ್ದರು. ಅಲ್ಲಿ ಗಣಿಗಾರಿಕೆಯಲ್ಲಿ ತೊಡಗಿದ ಬೃಹತ್ ಯಂತ್ರಗಳ ಜತ್ತೆ ಸಚಿವದ್ದರು. ಒಟ್ಟು 1650 ಚದುರಿಗಳು ಕೆಲಸ ಮಾಡುತ್ತಿದ್ದವು. ಅವುಗಳಲ್ಲಿ ಸೋಂಲಣಿ ಮಾಡಿಕೊಂಡವು ಎಷ್ಟೆಂದು ಹೇಳಿದಾಗ ಕೇವಲ 150 ಯಂತ್ರಗಳು. ಇನ್ನು-ಳಿದವೆಲ್ಲ ಅನಧಿಕೃತವಾಗಿ ಗುಡ್ಡಬೆಟ್ಟುಗಳನ್ನು ಕೆಡ್ಡುತ್ತಿದ್ದವು.

***

ಮೂರನೆಯ ಫಲ್ಗು: ಮಡಿಕೇರಿಯಲ್ಲಿ 2013ರಲ್ಲಿ ನಡೆದ 80ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭ. ಅಧ್ಯಕ್ಷ ಸಾ. ಶಿವೋಣರು ತಮ್ಮ ಭಾಷಣದಲ್ಲಿ ಕೊಡಗಿನ ಜಾಗೂ ಇರೀ ಪಶ್ಚಿಮಘಟ್ಟಗಳ ನಿಸರ್ಗರಮಿಯ ಜರ್ಜರಿತ ಮಾಡುತ್ತಿದ್ದರು. "ಅಲ್ಲಿ ಯಾರೆಲ್ಲ ವಿಪ್ಲವಾತ್ಮಕ ನೀರಡಲು ಹೊರೊಗಳ ರಾಜಾರಂಗೆಗಳು ವಿರೋಧ ಮಾಡಿದರು. ಪರಿಸರ ಇವುವರೇ ಸಮಾಗಿ ಅಧ್ಯಪ ಧೋರಣೆಯಲ್ಲಿ ವೇಷಧಿಕ್ಕೆ ಸಾಜ ಮಾಡುತ್ತಿರುವಾಗ ಸಮ್ಮೇಳ ಎಚ್ಚರಿಕಾ ಕಸ್ತೂರಿ ರಂಗನ್ ವರದಿ ಬಂದಿದೆ..." ಎಂದಿದ್ದೇ ತಡ, ಸ್ಥಳೀಯ ರಾಜಕೀಯ ಜಾಯಕರು ವೇದಿಕೆಗೆ ಸುಗಿದರು. 'ಅದ್ಯಕ್ಷರು ತಮ್ಮ ಮಾತನ್ನು ಹಿಂತೆಗೆದು ಕೊಳ್ಳಬೇಕು, ಕ್ಷಮೆ ಯಾಚಿಸಬೇಕು' ಎಂದು ಪಟ್ಟು ಹಿಡಿದರು. ಮರು ದಿನಗಳ ಸಮ್ಮೇಳನದ ಮಾಧ್ಯಮದ ಸಂವಾದದಲ್ಲಿ 'ಕಸ್ತೂರಿ ರಂಗನ್' ವರದಿಯನ್ನು ತಿರಸ್ಕರಿಸಬೇಕು' ಎಂದು ತೀರ್ಮಾನಿಸಲಾಯಿತು. ಸಮ್ಮೇಳನಾಧ್ಯಕ್ಷರ ಬೆಗಿಯೂರಿನ ಎಲ್ಲ ಕತೆ ಪಚಿಮಾಳೆ. ಪಚಿಸಿರೆ ಸುಗ್ಗಿತೆ. 'ಇಂಡೊಸೀಕ್ಸ್, ಜಪಾನ್, ಚೀನಾ, ಪೆರು, ಕೆನ್ಯಾ ಅಲ್ಲೆಲ್ಲ ಇಂಥದ್ದೇ ಅನಾಹುತ ಸಂಭವಿಸುತ್ತಿದೆ. ನಿಂಬಾರಗಾಲಿ, ಬರ, ಹಿಮಕುಸಿತ, ಹಿಂಡಿ ಬೆಂಕಿಯಂಥ ಮಹಾಘಾತಗಳ ಸಾಮಾಲೆ ಬೇರೆ. ಸಮ್ಮೆ ಗುಡ್ಡಬೆಟ್ಟುಗಳಲ್ಲಿ ಬಲಾಬಂದಕ್ಕೆ ಚಾಟ್ಟ ಇವುವರಿಂದ ಮತ್ತು ಮಾನವನಗ ಉಲ್ಬಣಗಳ ಭೂಮಿ

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಕುಸಿದಿದ್ದರಿಂದ ಆತಂಕ, ಆಕ್ರಂದನ ಹೆಚ್ಚಿದೆ.

ವಿಜ್ಞಾನಿಗಳು ಏನಂತ ಹೇಳುತ್ತಾರೆ? ಸೂಪರ್ ಕಂಪ್ಯೂಟರ್‌ಗಳ ಮುನ್ಸೂಚನೆಯನ್ನು ಏರಿ ಹೊಡೆತ ಅರಿಸಿಕ್ಷಿತ ವಿಪ್ಲವಗಳು ಸಂಭವಿಸುತ್ತಿವೆ. ಭೂಮಿಯ ತಾಪ ಮಾನ ಜಾಸ್ತಿ ಆಗುತ್ತಿರುವುದರಿಂದ ಆವ್ಹಪಿಸ್ಫಾಲ ಕರೂ ವಿಕ್ಷಿಪ್ತಂತೆ ವರ್ತಿಸುತ್ತಿದ್ದಾರೆ. ಸಮುದ್ರದ ತಾಪ ಮಾನ ಏರುತ್ತಿದೆ. ನೆಲದ ತಾಪಮಾನ ಏರುತ್ತಿದೆ. ಹಿಮ ಖಂಡಗಳು ಕರಗಿ ಅಧಿಕ ತಳದ ಕಡ್ಡಗಳ ಹಾಸುಂಬಂತೆ ಗಟ್ಟಿ ವಿಲಿಯಾಗುತ್ತಿವೆ. ಭೂಮಿ ತಣ್ಣನ್ನ ತಾಪ ಖುಸ ಆವರಣದಲ್ಲಿ ತಂಪು ಮಾಡಿಕೊಳ್ಳಲಿಂದು ಸಮುದ್ರಕ್ಕೂ ಏಸ್ ಚೆಲ್ಲುತ್ತಿದ್ದವರೆ ತೋಯುತ್ತಿದೆ. ಎಲ್ಲೋ ಮೇಘಸ್ಫೋಟ, 'ಬಲ್ಲೋ ಹಿಮಕುಸಿತ, ಮತ್ತೆಲ್ಲೋ ಚಂಡಮಾರುತ. ನಾವು ಕಂಬಳಿ ಹೊದ್ದು ಬೆಚ್ಚಗೆ ಸಿದ್ದೆ-ಯಲ್ಲಿದ್ದಾಗ ಸಿತೆ ಹೆಚ್ಚುವರೆ ಹೊಸಿಕೆಯನ್ನು ಆಚೆಸಿ ಸರಿಸಿ, ಕೈಹಾಲನ್ನು ಹೊರಕ್ಕೆಳೆದೋ ಮೈಯನ್ನು ಮಗುಚಿ ಕೊಂಡೋ ಮಲಗುತ್ತೀವಲ್ಲ. ಹಾಗೆಲ್ಲೂ ಇರಲಿಕ್ಕಿಲ್ಲ.

ಕಳೆದ ಏಪ್ರಿಲ್ ವರ್ಷಗಳಿಂದ ನಾವು ಮಾಡುತ್ತಿರುವ ಭಾಗಗಳಿಗಳ ಲೆಕ್ಕ ಇದಲು ಸಾಧ್ಯವೆ? ಎಷ್ಟೆಂದು ಸರಿ ಗಳನ್ನು ತಿರುಗಿಸಿ. ಅಧ್ಯಕ್ಷ ಹರಿಸಿ ನಿಸರ್ಗವಿಯನ್ನು ಅಹಾಕ್ಕೆ ತಂದಿತ್ತಿದ್ದೇವೆ. ಸಮುದ್ರಗಳಲ್ಲೇ ಒಣಗಿತ್ತಿ-ದ್ದೇವೆ. ಭೂತಾಳಕ್ಕೆ ಪಾತಾಳಗರಡಿ ಪಾಕಿರಂತೆ ತೈಲವನ್ನು ನಿಸರ್ಗವು ಅತಿಲವನ್ನೂ ಖನಿಜಗಳನ್ನೂ ಮೇರೆತ್ತಿ ತೊಡುತ್ತಿದ್ದೇವೆ. 730 ಕೋಟಿ ಜನರು ಬದುಕಲು ಬಯಸಿದ ಅತಿಸಣ್ಣಿ ಪಾಸಿಲಾತಾಗಳ ಮತ್ತೆ ನಿಂದರ ಕಂದಾಗಳಲ್ಲಾ ಕೊಳಕಿನ ಪದಾರ್ಥ ಸಿಮಿಗಿಸ್ತೆ ಬೋಳಾದ ಗದ್ದಲ ದಲ್ಲಿ ಮುಮಿರುತ್ತಿದ್ದೇವೆ. ಭಾರತದ ಸಾಲಲ್ಲಿ ವಿಶ್ಲೆಗೆ ಅಂಬಾರ್ ಮೊಳಗಿದೆ. ಹಿಂದೆ ಮುಂದೆ, ಬೆಟ್ಟೆ, ಕೆಲವಾರ ನಾಳ: ಇಂಬು ಕೊಡಿಸಿ ದೇವರ ಕಾದು, ಅವರಾಚರ ದೇವರ ನಾಲು ತತ್ತಾರಿಸುತ್ತಿದೆ. ನಾಳೆ ನಮ್ಮ ನಾಳೆ ಇದ್ದಿತು.

1924ರಲ್ಲಿ, ಮತ್ತೆ 2009ರಲ್ಲಿ ಬಲ್ಲೆ. ಆಗಸ್ಟ್‌ಲ್ಲಿ ಇದಕ್ಕಿಂತ ಜಾಸ್ತಿ ಮಳೆ ದಿಬ್ಬಿತ್ತು ಎನ್ನುವುದರಿದ್ದಾರೆ. ತಿಂಗಳ ಲೆಕ್ಕಾಚಾರದಲ್ಲಿ ಇದ್ದಿತು. ಆದರೆ ಮಾರದ ಲೆಕ್ಕಾಚಾರ ದಲ್ಲಿ ಇಷ್ಟೊಂದು ದೊಟ್ಟ ಸುರಿದಿದ್ದು? ಮೇಘಸ್ಫೋಟ ಯಾಖಾಗುತ್ತದೆ ಎಂದರೆ ಲಿಂದ ತಾಸ ಜಾಸ್ತಿಯಾಗಿಗ, ದಿಬಾಗಿಲೆ ಮೇಘವನ್ನು ಮೇಲಕ್ಕೆ ಎಷ್ಟತ್ತಿದೆ. ಸಮುದ್ರ ದಿಂದ ಒತ್ತಿರಿ ಬರುವ ಮೋಡಗಳಿಗೆ ಮಳೆ ಸುರಿಸಲು ಆಗುವುದಿಲ್ಲ. ಆವು ಮೇಲಕ್ಕೆ ಇನ್ನೂ ಮೇಲಕ್ಕೆ ಹೋದಂತೆಲ್ಲ ಅಲ್ಲಿ ಇಳ್ಳಿಲ್ಲ ಮೇಘಗಳು ದಟ್ಟಣೆಸಿ ತ್ತವೆ. ಒಮ್ಮೆಗೇ ಜಾಸ್ತಿ ತಂಪಾಗಿ, ಜಾಸ್ತಿ ತೂಕ ತಾಳಲಾರದೆ ಢಮಾರೆಂದು ಭುಮ್ಮೆಸ್ಫೋಟ. ತಳಕಳಚಿ ಸುರಿಯುವ ಹಿಳ್ಳಲ ಮೂತಿಯಿರಾ ಹಾಗೆ. ಪಶ್ಚಿಮಘಟ್ಟಗಳಾ ಗಟ್ಟ ಇದ್ದಂತೆ ನಿಸಿದ್ದೂರ ಆವು ಭಾರತದ ಆತಂಕ ಪುರಾತನ ತಿಲಿಲಿ ತೀಗಳು. ಕಳೆದ ಮುನ್ನೂರು ಕೋಟಿ ವರ್ಷಗಳಿಂದ ತತ್ತಾಯ ಸುವಿರ ಕೆಲಿಮಿಲಿಯರ್ ಮಂದಾವರ್ಗಗಳ ಹೊತ್ತೆ ಹೊಸೆಯುತ್ತ, ಮತ್ತ ಭಾರತವನ್ನು ರತ್ನ ಕತೆ ತಳ್ಳುತ್ತ, ಸಮುದ್ರದ ತೂಳಗಳ್ಲಿ ಒಟ್ಟುತ್ತ ಹಿಮಾಲಯವನ್ನು ಸೃಷ್ಟಿಸುತ್ತ ಇಾಗಿ ಬಂದಿದೆ. ಒಡಲಿನ ದಿಬಾಲು, ಮುಮೆಲಿನ ಗಿಲಾ- ತರಹ ಗಾಯಗಳನ್ನು ಮುಚ್ಚಿಕೊಳ್ಳಲಿಯಾ ಮಣ್ಣಿನ ದಟ್ಟ ಪದರವನ್ನು ಗುದ್ದಲಾಂಬಣಲ್ಲಿ. ಕೊಳ್ಳಲಿದ್ದಿ ಲೆಂಡಿಸಿಕೊಂಡಿದೆ. ಅವು ಸುಲಭಕ್ಕೆ ತೊಳೆದು ಹೋಗದಂತೆ ರಟ್ಟಿ ಗಿಡವನ ಬೆಳಿಸಿಕೊಂಡಿದೆ. ನಾವು ಗರಗಸ, ಪೆಸಿ, ಸಿಮಿಮನ್ನು, ಟ್ರಿಲ್ಲಿಂಗ್ ರಿನ್ನು ಬಳಸಿ, ಸಮುಹೀಲವನ್ನು ಹರಗಿಸಿಸಿದ್ದೆವು. ಕೃಷಿ ವಿಸ್ತರಣೆ, ಗಣಿಗಾರಿಕೆ, ಆಣೆಕಟ್ಟು, ನಗರಂ, ಸೇತುವೆ, ಪವರ್ ಲೈನ್, ಪ್ರವಾಸೋದ್ಯಮ, ವಿಶೇಷಧಾಮ, ಗಣ ವಿಸ್ತರಣೆ. ಅಕ್ರಮ ವಲಸೆ, ರೇಷನ್, ಹೋಮ್‌ಸ್ಟೇ... ಧ್ವಂಸಕಾರ್ಯ ಒಂದೆ ಎರಡೆ? ಗಾಡ್ಗಿಳ್ ಸಮಿತಿ ಹೇಳಿದ್ದು ಇಷ್ಟೇ: ಅಲ್ಲಿನ ಸೂಕ್ಷ್ಮ ಪ್ರಾಂತ್ಯಗಳಲ್ಲಿ ಗೌರವ ಕೊಡಿ. ನಗರಮಾದರಿಯ ಸುಖ ಸವಲತ್ತುಗಳಿಗೆ, ಬಂಡ್ಡಿಗಳ್ ಮಹಡಿಗಳಿಗೆ, ಗ್ರಾಸ್ಟೆಗಳ್ ಗೋಡಗಳಿಗೆ ಮಿತಿ ಹಾಕಿ. ನಗರದ ಕೊಳಕುಗಳನ್ನು ಗ್ರಾಮಕ್ಕೆ ತರಬೇಡಿ. ಹಿಂದಿನವರಂತೆ ನಿಮ್ಮ ಸಹಜ ಬದುಕಿಗೆ ಬೇಕಿದ್ದನ್ನು ಕಲ್ಲು, ಮಣ್ಣು, ಮರ, ಮಳಲನ್ನು ಬಳಸಿ; ಆದರೆ ಅವು ಗಳನ್ನು ದೋಚಿ ನಗರಗಳಿಗೆ ಸಾಗಿಸಲು ದಿಡುವಿಡಿ. ವೇಣಾ ದಿಟ್ಟ ಭೂಬರಿವರ್ತನೆಗೆ ಮಾಡಬೇಡಿ. ನಿಸರ್ಗದ ಸೂಕ್ಷ್ಮ, ನಿಯಮಗಳನ್ನು ಹಿರಿಯರಿಂದ, ಮೂಲನಿವಾಸಿಗಳಿಂದ ಕಲಿಯಿರಿ. ಸರಿಮಾಲಂಗಳನ್ನು ರಕ್ಷಿಸಿ. ಮೀನು ಹಿಡಿಯಲು ಡೈನಮೈಟ್ ಬಳಸಬೇಡಿ. ಆಗಾಗ 'ಮಾನವ ರಲ್ ಫೋಟನ್ ಮಾಡಿ. ಈ ವರದಿಯನ್ನು ನಿಮ್ಮ ಸ್ಥಳೀಯ ಭಾಷೆಗೆ ತರುಮೆ ಮಾಡಿಸಿಕೊಂಡಿಯ ಪಂಚಾಯತ್ ಮಟ್ಟ ದಲ್ಲಿ ಚರ್ಚೆಸಿ ನೀವೇ ನಿಯಮ ಹಾಕಿಕೊಳ್ಳಿ. ಎಳೆಯರಿಗೆ ಪರಿಸರ ಸಂರಕ್ಷಣೆಯ, ಸುಸ್ಥಿರ ಬದುಕಿನ ಪಾಠ ಹೇಳಿ. 'ಇದ್ದೇ ಗಾಡ್ಗಿಳ್' ಸಮಿತಿ ಹೇಳಿದ್ದು ಆದರೆ ಆಗುವು ಬೇರೆ. ವರದಿಯನ್ನು ಓದುವ ಮೊದಲೇ ಆದ ರಲ್ಲಿ ಹಾಗಿದೆ, ಹೀಗಿದೆ, "ನಂಕ ಹಾಕುವಂತಿಲ್ಲ. ಬಾವಿ ಕೊರೆಯುವಂತಿಲ್ಲ. ಸ್ಥಳೀಯ ನಿವಾಸಿಗಳನ್ನು ಶಿಲಾ ಯುಗಕ್ಕೆ ತಳ್ಳುವ ಹುನ್ನಾರ ಇದು' ಎಂದಲ್ಲ ಕೆಲವು ಪಿಪ್ಪಿಪಿಸಿ ಗುತ್ತಿಗೆದಾರರು, ಆಡಳಿತ ಪಕ್ಷದಿಗಳ ಕಚಪ ಪಂಡಿತರು ಟೀಕಿಸಿದರು. ಆ ಹಿನ್ನೆಲೆಯಿಲಿ ಮಾತು ದಿಲ್ಲಿಗೂ ಹೋಗಿ, ಇಡೀ ವರದಿ ಕರದ ಬುಟ್ಟಿಗೆ ಸೇರಿತು. ಬರಲಿಗೆ ಆದರಲ್ಲೇ ದುಬಾರಿ ರೂಪಪ್ಪಿಂದಿರುವ ಕಸ್ತೂರಿ ರಂಗನ್ ವರದಿಯಾಗಿ ಬಂತು. ಅದನ್ನೂ ತಮಾಷೆ ಮಾಡಿದೆ. ಕಾಸರಹಬೆಯಲ್ಲಿ ಚರ್ಚೆಗಾದ 'ಮಾಲ ಸಾಹಿತಿ' ತಿರಸ್ಕರಿಸಲು ರಾಜಾರಂಗೆಗಳು ಪ್ರಜಾತಿಪತ್ಯಾಗಿ ಕೈ ಎತ್ತಿ ದರು. ದೋಣಪಿಕೋರಂಗೆ ಭಯಾಗಿ ಬಲು ಸಿಕ್ಕಿತು (ಅಂದ ಬಯಸಿ 'ಇಂಡಿಯನ್ಸ್‌ಲ್ಲಿ ವಿಕ್ಟರಿ' ಎನ್ನು ತ್ತಾರೆ). ನಿಸರ್ಗವೂ ಲ್ಯಾಂಡ್‌ಸ್ಲೈಡ್ ಮೂಲಕವೇ ತನ್ನ ಕಕ್ಕೆ ಪ್ರಕಟಿಸಿತ ಮಾಡಿದೆ! ಆದರೆ ಮುಂಬಂತರ ಮೇಲೆ ಮುಸಿ ಕೊಳ್ಳುವ ಬದಲು ಅದು ಮತ್ತಾವಾರಂಭಿಸಿದೆ.

ಈಗಲ ಸಂಕಟ ಸಮಾಲೆಯ ಸಂತರ ಇನ್ನಿಲ್ಲ ತೊಂದರೆಗಳು ಬರಲಿದೆ. ಹಳ್ಳ, ಕೆರೆಕೊಳ್ಳಗಳು ಳೆಲ್ಲ ಮಾಯವಾಗಿವೆ. ಬೇಸಗೆಯಲ್ಲಿ ನೀರಿನ ಆಭಾವ. ಮುಂದಿನ ಮಳೆಗಾಲದಲ್ಲಿ ನೀರಿಗೆ ಸ್ಪಾಲಭಾವ. ಅಗಲೂವ ದೇವದೇವಿಗಳಿಂದಲೂ ನಿರಿಸಿ ಪ್ರಮಾಣದೇ ಹರಿದು ಬರುತ್ತಿದೆ. ಆದರೆ ಅವೆಲ್ಲ ತಾತ್ಪಾಲಿಕ. ಮಳೆ ಮುಗಿದ ನಂತರ ಮಣ್ಣೆತ್ತುವವರು, ಮಣ್ಣ ಕುಮ್ಮವರು, ಬಡಗಿಗಳು, ಗಾರೆಯವರು, ಸಲ್ಲಿ ಫಿಟ್ಟರ್‌ಗಳು, ಲೈನ್‌ಮನ್‌ಗಳು, ಬಾವಿ ತೋಡುವವರು -ಇಂಥ ಲಕ್ಷಂತರ ಕುಮಾರಿಸಿಗಳಾ ವೇಕಾಗುತ್ತಾರೆ. ಕಷ್ಟವಿಲ್ಲದ ಈ ಸಮರಕ್ಕೆ ಪ್ರಜ್ಞಗಳಿಲ್ಲದ ಕಾಲಾಳುಗಳು ಬೇಕಿದ್ದಾರೆ. ಎಲ್ಲಿಂದ ಬಂದಾರು ಅವರೆಲ್ಲ? ಸೂಲಿ ಮಾಡಲು ಗಟ್ಟಿರಟ್ಟೆಯ ಯುವಜನರೆಲ್ಲ ನಗರ ಸೇರಿದ್ದಾರೆ. ಒಂದಿರೀ ವರ್ಷ ಕಂಚೀವಾಳಗಳಲ್ಲಿನ್ನ ಮುಚ್ಚಿ ಸಂಕಲ್ಪದ ಸೆರವಿಗೆ ಬರಲ್ಲಿ ಸ್ಪೃಪ್ತಜನ್ಯ ಕರೆಯಲು ಸಾಧ್ಯವೆ? ಏನಿಲ್ಲ, ಸಗಣಿಯಿಂದ ಯಂತ್ರಗಳು ಬರಬೇಕಷ್ಟೆ.

ಅಲ್ಲಿಗೆ ಈ ಕತೆ ಹೊಡಬಲ್ಲೆಗೇ ಮತ್ತೆ ಸೇರುತ್ತದೆ. ಕಾಂಕ್ರೀಟು ಹೆಲಿದ್ದಕ್ಕಿಂತ ದೊಡ್ಡ ಸಂಖ್ಯೆಯಲ್ಲಿ ಬೆಟ್ಟಿ, ಕ್ಷೇಣ, ಡಾಂಬರ್ಡ್, ಫೋಕ್ಸ್‌ಗೆಬ್ಲ್, ಟ್ರಿಲ್ಲಿಂಗ್ ರಿಗ್, ಕಾಂಕ್ರೀಟ್ ಮಿಕ್ಸರ್, ಸ್ಫೂಪರ್ ಯಂತ್ರಗಳ ಸ್ಪೃಸ್ಟಿ ಬರಲಿದೆ. ತೀಸರ್ಸ್, ಡಾಂಬರು, ಸಿಮೆಂಟು, ಮರಳು, ಕಬ್ಬಿಣದ ಕಂಬಿಗಳ ವಿಪ್ಲವಾರಿಯಾಗಿಯೇ ಲಿದ್ದಗೊಂದ ಪ್ರಕೃತಿ ಆದು. ಅಲ್ಲಿ ಮತ್ತೆ ಸಾಗರ ಸಮಾಪ್ತಿಯ ಮಂತ್ರವನ್ನು ಸಚಿಯಲಿದೆ; ಪರಿಸರ ಬರಲಿದೆ. ಆದೇಕಾರ್, ಅಧಿವಕ್ತರಿಯ ಈ ಅಂಧಯುಗದ ಆಳಕೆಗೋಲು?

ಚಿತ್ರ ೮: ಪರಿಸರದ ಬಗ್ಗೆ ನಾಗೇಶ ಹೆಗಡೆ ಅವರ 'ಪ್ರಜಾವಾಣಿ'ಯ 'ವಿಜ್ಞಾನ ವಿಶೇಷ' ಅಂಕಣ ಬರಹ

ಮೂಢನಂಬಿಕೆಗಳನ್ನು ಪ್ರಶ್ನಿಸಿ, ಉತ್ತರ ಕಂಡುಕೊಳ್ಳುವ ಹಂಬಲ. ಉದಾಹರಣೆಗೆ ಕೆಳಗೆ ಕೊಟ್ಟಿರುವ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ೨೦೧೮, ಆಗಸ್ಟ್ ತಿಂಗಳ ೨೩ನೆಯ ತಾರೀಖು ಪ್ರಕಟವಾದ ನಾಗೇಶ ಹೆಗಡೆ ಅವರ ಒಂದು ವೈಜ್ಞಾನಿಕ ಲೇಖನವನ್ನು ಗಮನಿಸಬಹುದು. ಇದನ್ನು ಚಿತ್ರ ೮ರಲ್ಲಿ ನೀಡಲಾಗಿದೆ.

೧೩.೨.೩. (ಇ) ಭಾಷಾ ಬಳಕೆ

ಕೆಳಗೆ ಕೊಟ್ಟಿರುವ ಅಂಕಣದಲ್ಲಿ ನಾಗೇಶ ಹೆಗಡೆಯವರು ಪ್ರಕೃತಿಯ ಬಗ್ಗೆ ಮನುಷ್ಯರ ದುರ್ನಡತೆ ಹೇಗೆಲ್ಲ ನೈಸರ್ಗಿಕ ವಿಕೋಪಗಳಿಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸುತ್ತದೆ. ಮುಖ್ಯವಾಗಿ ಪಶ್ಚಿಮಘಟ್ಟದಲ್ಲಿ ನಡೆದ ಪರಿಸರ ಚಳವಳಿಗಳ ದಶಕದ ಹಿನ್ನೋಟದೊಂದಿಗೆ ೨೦೧೮ರಲ್ಲಿ ಕೊಡಗು ಮತ್ತು ಮಲೆನಾಡು ಭಾಗದಲ್ಲಿ ಸುರಿದ ಭಾರಿ ಪ್ರಮಾಣದ ಮಳೆಗೆ ಜನಜೀವನ ಹೇಗೆಲ್ಲ ತತ್ತರಿಸಿಬಿಟ್ಟಿತು ಎಂಬುದರ ಚಿತ್ರಣ ಇದೆ. ಇಂತಹ ನಿಸರ್ಗದ ವಿಕೋಪವನ್ನು ತಡೆಯಲು ಕಸ್ತೂರಿ ರಂಗನ್ ಅವರ ವರದಿ ಹೇಗೆಲ್ಲ ಮುನ್ನೆಚ್ಚರಿಕೆಯ ಕ್ರಮಗಳನ್ನು ಸೂಚಿಸುತ್ತದೆ ಎಂಬ ಅಂಶಗಳನ್ನು ಕುರಿತು ಈ ಅಂಕಣ ವಿವರವಾಗಿ ಚರ್ಚಿಸುತ್ತದೆ.

ಇನ್ನು ಭಾಷೆಯ ವಿಷಯಕ್ಕೆ ಬಂದರೆ, ಈಗಾಗಲೇ ವೈಜ್ಞಾನಿಕ ಬರಹಗಳಿಗೆ ಹೆಸರು ಮಾಡಿರುವ ನಾಗೇಶ ಹೆಗಡೆಯವರು, ತಾವು ಬರೆಯುವ ಪ್ರತಿ ಬರಹವೂ ಮಕ್ಕಳಿಗಾಗಿಯೇ ಎಂದು ಭಾವಿಸಿ ತಾವು ಬಳಸುವ ಪದ ಸರಳ, ನಿಖರ, ಗೊಂದಲ ಇಲ್ಲದಿರುವಂತೆ ನೋಡಿಕೊಳ್ಳಲು ಎಚ್ಚರವಹಿಸುತ್ತಾರೆ. ಸಾಮಾನ್ಯವಾಗಿ ವಿಜ್ಞಾನ ಎಂದರೆ ಅನೇಕರ ಮೆದಳು ಕೆಲಸ ಮಾಡುವುದನ್ನು ನಿಲ್ಲಿಸಿ ಬಿಡುತ್ತದೆ. ಹೀಗಿರುವಾಗ ವಿಜ್ಞಾನದ ಪರಿಭಾಷೆಯನ್ನು ಯಥಾವತ್ತು ಬಳಸಿ ವೈಜ್ಞಾನಿಕ ಬರಹ ಬರೆದಲ್ಲಿ ವಿಷಯದ ತಳಬುಡ ಅರ್ಥ ಆಗದೆ ಪುಟ ತಿರುವಿಹಾಕಿ ಮುಂದೆ ಹೋಗುವ ಸ್ಥಿತಿ ಬರುತ್ತದೆ. ಸದರಿ ಲೇಖನ ಅಂತಹ ಯಾವುದೇ ಕ್ಲಿಷ್ಟ ಪರಿಭಾಷೆಯನ್ನು ಬಳಸದೆ, ಒಬ್ಬ ಪ್ರೌಢ ಶಾಲಾ ವಿದ್ಯಾರ್ಥಿ ಓದಿ ಅರ್ಥ ಮಾಡಿಕೊಳ್ಳಬಲ್ಲ ಮಟ್ಟದ ಭಾಷಾಪ್ರಯೋಗ ಇಲ್ಲಿದೆ. ಬಳಸಿರುವ ಅಂಕಿ ಅಂಶಗಳನ್ನು ಸಹ ಸರಳವಾಗಿ ಸಾಮಾನ್ಯ ಓದುಗನಿಗೆ ಅರ್ಥವಾಗುವ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಹಾಗಾಗಿ ಇದೊಂದು ಮಾದರಿಯ ವೈಜ್ಞಾನಿಕ ಬರಹವಾಗಿ ಪರಿಗಣಿಸಬೇಕಾಗಿದೆ.

ಅಭ್ಯಾಸ

ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ.

೧. ವೈಜ್ಞಾನಿಕ ಬರಹದಲ್ಲಿ _____ ಸಮೇತ ಸಾದರ ಪಡಿಸುವ ಅಗತ್ಯತೆ ಇರುತ್ತದೆ.

೨. ಮಾದರಿ ವೈಜ್ಞಾನಿಕ ಬರಹದಲ್ಲಿ ಇರಬೇಕಾದ ಮುಖ್ಯವಾದ ಅಂಶಗಳು_____ _____ ಕಂಡುಕೊಳ್ಳುವ ಹಂಬಲ.

೩. ನಾಗೇಶ ಹೆಗಡೆಯವರು ಕನ್ನಡದ ಪ್ರಮುಖ _____ ಬರಹಗಾರರು.

೪. ಮೇಘಸ್ಫೋಟ ಅಂದರೇನು? ಅದು ಹೇಗೆ ಸಂಭವಿಸುತ್ತದೆ?

೫. ಕಸ್ತೂರಿ ರಂಗನ್ ಅವರ ವರದಿಯನ್ನು ಕುರಿತು ಸಂಕ್ಷಿಪ್ತವಾಗಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.

೧೩.೪. ಸಾರಾಂಶ

ದೈನಂದಿನ ಕೆಲಸಗಳ ಸಲುವಾಗಿ, ಯೋಗಕ್ಷೇಮ ತಿಳಿಯುವ ಕಾರಣದಿಂದಾಗಿ, ಶುಭಾಶಯ ಕೋರುವ ಉದ್ದೇಶದಿಂದ, ಅಗತ್ಯ ಕಛೇರಿ ಕೆಲಸಕ್ಕಾಗಿ, ತುರ್ತು ಮಾಹಿತಿ ರವಾನೆಗಾಗಿ, ಸುದ್ದಿ ತಲುಪಿಸಲು ಬರವಣಿಗೆಯ ಮೂಲಕ ಕಾಗದ ಅಥವಾ ಪತ್ರ ಬರೆಯುವುದನ್ನು ಪತ್ರಲೇಖನ ಎನ್ನುತ್ತೇವೆ. ಭಾರತ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಾಗ ನಮ್ಮ ದೇಶದಲ್ಲಿಯೂ ಸುದ್ದಿ ರವಾನೆ ಸೇವೆ ಶುರುವಾಯಿತು. ಹಾಗಾಗಿ 'ಹಂಸ ಸೇವೆ'ಯ ಪದದಿಂದ 'ಅಂಚೆ ಸೇವೆ' ಬಳಕೆಗೆ ಬಂದಿತು. ಈ ಇಲಾಖೆಯ ನೌಕರರು ದೂರದ ಊರುಗಳಿಂದ ಜನರು ಬರೆದ ಪತ್ರಗಳನ್ನು ಹಾಗೂ ತುರ್ತು ಸಂದೇಶಗಳನ್ನು ಉದ್ದೇಶಿತ ಜಾಗಗಳಿಗೆ ಮತ್ತು ವ್ಯಕ್ತಿಗಳಿಗೆ ತಲುಪಿಸುವ ಕೆಲಸವನ್ನು ಮಾಡುತ್ತಾರೆ. ಒಮ್ಮೊಮ್ಮೆ ಅನಕ್ಷರಸ್ಥರಿಗೆ ಬರೆದ ಪತ್ರಗಳನ್ನು ಅಂಚೆ ಇಲಾಖೆಯ ವಿತರಕರು ಓದಿ ತಿಳಿಸುವುದನ್ನು ಸಹ ನೋಡಿದ್ದೇವೆ. ಪ್ರತಿ ಬರವಣಿಗೆಗೆ ತನ್ನದೇ ಆದ ಬರೆಯುವ ಕ್ರಮ, ಶೈಲಿ ಮತ್ತು ವಿಧಾನಗಳು ಇವೆ. ಪತ್ರ ಬರೆಯುವ ಮತ್ತು ಓದುವ ವ್ಯಕ್ತಿಗೆ ಆ ಭಾಷೆಯ ಅಕ್ಷರ ಜ್ಞಾನ

ಇರಲೇಬೇಕು. ಇಂದು ನಾವು ಬರೆಯುವ ಎಸ್.ಎಂ.ಎಸ್. ಅಂದರೆ 'ಶಾರ್ಟ್ ಮೆಸೇಜ್ ಸರ್ವಿಸ್' ಅಂದರೆ ಲಘು ಸಂದೇಶ ಬರವಣಿಗೆಯಿಂದ ಅನೇಕ ಸಲ ಅಪಾರ್ಥಗಳು ಆಗುವ ಸಾಧ್ಯತೆ ಇರುತ್ತದೆ. ಹಾಗಾಗಿ ಬರೆದ ಸಂದೇಶದ ಬಗ್ಗೆ ಸ್ಪಷ್ಟತೆ ಇರಬೇಕು. ಇಲ್ಲವಾದಲ್ಲಿ ಪತ್ರ ಬರೆದ ಉದ್ದೇಶ ಪೂರ್ತಿ ಆಗುವುದಿಲ್ಲ. ವೈಯಕ್ತಿಕ ಪತ್ರಗಳು, ವಾಣಿಜ್ಯ ಪತ್ರಗಳು, ದೂರು ಮತ್ತು ಉತ್ತರದ ಪತ್ರಗಳು, ಉದ್ಯೋಗ ಪತ್ರಗಳು, ಶ್ರದ್ಧಾಂಜಲಿ ಪತ್ರಗಳು, ಸಂಪಾದಕರಿಗೆ ಪತ್ರಗಳು, ಆಹ್ವಾನ ಪತ್ರಗಳು ಹೀಗೆ ಹಲವು ಪ್ರಕಾರಗಳನ್ನು ಪತ್ರ ಲೇಖನದಲ್ಲಿ ನಾವು ನೋಡಬಹುದು. ವಿಚಾರಪೂರ್ಣವಾದ ಮಾತು ಮನುಷ್ಯರನ್ನು ಆಲೋಚನೆಗೆ ಹಚ್ಚುತ್ತದೆ. ತರ್ಕಬದ್ಧವಾಗಿ ಆಲೋಚಿಸಿ ಪಡೆಯುವ ನಿರ್ಧಾರ ಅಂತಿಮ ಸತ್ಯದತ್ತ ಸಾಗುತ್ತದೆ. ಇಲ್ಲಿ ಭೌತಿಕತೆಯನ್ನು ಅಂದರೆ ಕಣ್ಣಿಗೆ ಕಾಣುವ ಸತ್ಯವನ್ನು ಆಧರಿಸಿ ವಾದದ ಸರಣಿ ಹೇಗಿರಬೇಕೆಂಬುದನ್ನು ವೈಚಾರಿಕ ಬರಹದಲ್ಲಿ ವಿವರಿಸಲಾಗಿದೆ. ಕೊನೆಯಲ್ಲಿ ವೈಜ್ಞಾನಿಕ ಬರಹ ಅಂದರೇನು, ಹೇಗೆ ಅದು ನಿರ್ದಿಷ್ಟವಾದ ಕಾರ್ಯ–ಕಾರಣ ಸಂಬಂಧಗಳನ್ನು ವಿಶ್ಲೇಷಿಸುತ್ತದೆ ಹಾಗೂ ಹೇಗೆ ಸಂಶೋಧಕನೊಬ್ಬ ತನ್ನ ಸಹ–ಸಂಶೋಧನಾರ್ಥಿಗಳಿಗೆ ಅಥವಾ ಜನಸಾಮಾನ್ಯರಲ್ಲಿ ಮನೆಮಾಡಿರುವ ಗೊಂದಲವನ್ನು ಪರಿಹರಿಸುವ ನಿಟ್ಟಿನಲ್ಲಿ ಲೇಖನವನ್ನು ತಯಾರಿಸುತ್ತಾನೆ ಎಂಬುದನ್ನು ನಿದರ್ಶನಗಳೊಂದಿಗೆ ಚರ್ಚಿಸಲಾಗಿದೆ.

ಅಭ್ಯಾಸಗಳಿಗೆ ಉತ್ತರಗಳು

ಅಭ್ಯಾಸ ೧೩.೨.೧. ಭಾಗ (ಅ)

೧. ಅ) ಪತ್ರಲೇಖನ

ಆ) ಹಂಸ

ಇ) ನುಡಿ ಮತ್ತು ಬರಹ

ಈ) ಹರ್ಮನ್ ಮೊಗ್ಲಿಂಗ್

ಅಭ್ಯಾಸ ೧೩.೨.೧ ಭಾಗ (ಆ)

೪. ಬಿಟ್ಟ ಸ್ಥಳಗಳಿಗೆ ಸರಿಯಾದ ಪದಗಳು

ಅ) ವೈಯಕ್ತಿಕ ಪತ್ರ

ಆ) ಚಿರಂಜೀವಿ

ಇ) ಉದ್ಯೋಗ ಪ್ರಕಟಣೆ ಸಂಸ್ಥೆಯ ಅಧಿಕಾರಿಯ ಹುದ್ದೆಯ ಹೆಸರು

ಈ) ೧೦೦ರಿಂದ ೧೫೦ ಪದಗಳ ಮಿತಿ

ಅಭ್ಯಾಸ ೧೩.೨.೩

೧. ವೈಜ್ಞಾನಿಕ ಬರಹದಲ್ಲಿ ಸಾಕ್ಷಿ ಸಮೇತ ಸಾದರ ಪಡಿಸುವ ಅಗತ್ಯತೆ ಇರುತ್ತದೆ.

೨. ಮಾದರಿ ವೈಜ್ಞಾನಿಕ ಬರಹದಲ್ಲಿ ಇರಬೇಕಾದ ಮುಖ್ಯವಾದ ಅಂಶಗಳು ಮೂಢನಂಬಿಕೆಗಳನ್ನು ಪ್ರಶ್ನಿಸಿ, ಉತ್ತರ ಕಂಡುಕೊಳ್ಳುವ ಹಂಬಲ.

೩. ನಾಗೇಶ ಹೆಗಡೆಯವರು ಕನ್ನಡದ ಪ್ರಮುಖ ವಿಜ್ಞಾನ ಬರಹಗಾರರು.

ಪಠ್ಯವನ್ನು ಸಿದ್ಧಪಡಿಸಿದವರು: **ಡಾ. ರಮೇಶ ಅರೋಲಿ**